ಭಾನುವಾರ, ಏಪ್ರಿಲ್ 23, 2023 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಖಾರ್ಟೂಮ್‌ನಿಂದ ಉಂಬಡಕ್ಕೆ ಕಾಲ್ನಡಿಗೆಯಲ್ಲಿ 6 ಕಿ.ಮೀ ಕ್ರಮಿಸಿದರು

ಸುರಕ್ಷಿತ ಸ್ಥಳಕ್ಕೆ ಹಕ್ಕಿಪಿಕ್ಕಿ ಜನ

• ಎಚ್‌.ಎಸ್‌.ಸಚ್ಚಿತ್

ಹುಣಸೂರು (ಮೈಸೂರು ಜಿಲ್ಲೆ): ಸುಡಾನ್‌ನಲ್ಲಿ ಸಂಘರ್ಷ ಪೀಡಿತ ಖಾರ್ಟೂಮ್ ನಗರದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದ ಪಕ್ಷಿರಾಜಪುರದ ಏಳು ಮಂದಿ ಆರು ಕಿ.ಮೀ. ದೂರದ ಉಂಬಡ ಎನ್ನುವ ಸ್ಥಳಕ್ಕೆ ಕಾಲ್ನಡಿಗೆಯಲ್ಲಿ ಸಾಗಿ ಹೋಟೆಲ್‌ವೊಂದರಲ್ಲಿ ನೆಲೆ ಕಂಡುಕೊಂಡಿದ್ದಾರೆ.

ಕಳೆದ ಒಂದು ವಾರದಿಂದ ಬಾಂಬ್ ಹಾಗೂ ಗುಂಡಿನ ಸುರಿಮಳೆಯ ಸದ್ದು ನಾಲ್ಕು ಗೋಡೆಗಳ ಮಧ್ಯೆ ಸಿಲುಕಿದ್ದ ಹಕ್ಕಿಪಿಕ್ಕಿ ಜನರಲ್ಲಿ ಜೀವಭಯ ಉಂಟು ಮಾಡಿತ್ತು. ಸಂಘರ್ಷ ವಿರಾಮದ ಸಮಯದಲ್ಲಿ ಅವರು ನಡೆದುಕೊಂಡು ಹೋಗಿದ್ದಾರೆ.

‘ತಿಂಗಳ ಹಿಂದೆ, ಮಕ್ಕಳಾದ ಕ್ರಾಂತ್ ಕುಮಾರ್, ಶಕ್ತಿಕುಮಾರ್, ಸೊಸೆಯರಾದ ಗೀತಾ, ವೈಶಾಲಿ ಮತ್ತು ಅಳಿಯ ಶರತ್ ಅವರು ಆಯುರ್ವೇದ ಎಣ್ಣೆ ಮಾರಾಟ ಮತ್ತು ಮಸಾಜ್ ಮಾಡಿ ಹಣ ಸಂಪಾದನೆಗೆ ಸುಡಾನ್‌ಗೆ ತೆರಳಿದ್ದರು. ಅಲ್ಲಿನ ಖಾರ್ಟೂಮ್ ನಗರದ ಮನೆಯೊಂದರಲ್ಲಿ ಉಳಿದಿದ್ದರು. ಏಕಾಏಕಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವೆ ಸಂಘರ್ಷ ಆರಂಭವಾಗಿ ಎಲ್ಲವೂ ನಿರ್ನಾಮವಾಗಿದೆ. ಈ ಬಗ್ಗೆ ನಿತ್ಯ ವಾಟ್ಸ್‌ಆ್ಯಪ್ ವಿಡಿಯೊ ಕರೆ ಮೂಲಕ ನೋಡುತ್ತಿದ್ದೇವೆ. ಆಹಾರ, ನೀರಿನ ಸಮಸ್ಯೆ ಅನುಭವಿಸಿದ್ದಾರೆ’ ಎಂದು ಪಕ್ಷಿರಾಜಪುರದ ಕಾಶಿನಾಥ್ ತಿಳಿಸಿದರು.

36 ಗಂಟೆಗಳಲ್ಲಿ 5 ಸಾವಿರ ಕಿ.ಮೀ ಮೋದಿ ಪ್ರವಾಸ!

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರದಿಂದ ಮಂಗಳವಾರದ ನಡುವೆ ಕೇವಲ 36 ಗಂಟೆಗಳಲ್ಲಿ ಏಳು ನಗರಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಆ ಮೂಲಕ 5,300 ಕ್ಕೂ ಅಧಿಕ ಕಿ.ಮೀ. ದೂರ ಪ್ರವಾಸ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಅವರು ದೆಹಲಿಯಿಂದ ಹೊರಟು ಮಧ್ಯಪ್ರದೇಶಕ್ಕೆ ಭೇಟಿ ನೀಡಿ ನಂತರ ಕೇರಳಕ್ಕೆ ತೆರಳುವರು. ನಂತರ, ಕೇಂದ್ರಾಡಳಿತ ಪ್ರದೇಶಗಳಾದ ದಾದ್ರಾ ಮತ್ತು ನಗರಹವೇಲಿ, ದಮನ್ ಮತ್ತು ದಿವುಗೆ ಭೇಟಿ ನೀಡಿ ಮಂಗಳವಾರ ನವದೆಹಲಿಗೆ ವಾಪಸಾಗುವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖಜುರಾಹೊದಲ್ಲಿ ನಡೆಯುವ ರಾಷ್ಟ್ರೀಯ ಪಂಚಾಯತ್‌ರಾಜ್ ದಿನಾಚರಣೆ ಕಾರ್ಯಕ್ರಮವೂ ಸೇರಿ, ಈ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳಲ್ಲಿ ಅವರು ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ.

ಸಿ.ಎಂ ಪದವಿ: ಅಜಿತ್ ಪವಾರ್ ಮತ್ತೊಮ್ಮೆ ಆಸೆ

ಮುಂಬೈ: ಎನ್‌ಸಿಪಿಯ ಪ್ರಭಾವಿ ನಾಯಕ ಅಜಿತ್ ಪವಾರ್ ಅವರು ಮುಖ್ಯಮಂತ್ರಿ ಪದವಿಗೇರಬೇಕು ಎಂಬ ತಮ್ಮ ಮಹತ್ವಾಕಾಂಕ್ಷೆಯನ್ನು ಮತ್ತೊಮ್ಮೆ ಹೊರ ಹಾಕಿರುವುದು ಮಹಾರಾಷ್ಟ್ರ ರಾಜಕಾರಣದಲ್ಲಿ ಸಂಚಲನ ಮೂಡಿಸಿದೆ. ಕಳೆದ ಕೆಲ ದಿನಗಳ ಬೆಳವಣಿಗೆಗಳು ಅಜಿತ್ ಬಿಜೆಪಿಗೆ ಹತ್ತಿರವಾಗುತ್ತಿದ್ದಾರೆ ಎಂಬ ವದಂತಿಗಳಿವೆ. ಈ ನಡುವೆ, ಪುಣೆಯಲ್ಲಿ ಶುಕ್ರವಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, ಮುಖ್ಯಮಂತ್ರಿಯಾಗಬೇಕು ಎಂಬ ಇಚ್ಛೆಯನ್ನು ಸೂಚ್ಯವಾಗಿ ಹೊರಹಾಕಿದ್ದರು. ಹಾಗಾಗಿ, ಅವರ ಮಾತುಗಳು ಮತ್ತೊಮ್ಮೆ ಈ ಕುರಿತ ಚರ್ಚೆಯನ್ನು ಮುನ್ನೆಲೆಗೆ ತಂದಿವೆ.

ಈ ವರ್ಷ 10 ಲಕ್ಷ ಭಾರತೀಯರಿಗೆ ಅಮೆರಿಕ ವೀಸಾ

ವಾಷಿಂಗ್ಟನ್ (ಪಿಟಿಐ): ಪ್ರಸಕ್ತ ವರ್ಷ ಭಾರತೀಯರಿಗೆ 10 ಲಕ್ಷಕ್ಕೂ ಹೆಚ್ಚು ವೀಸಾ ವಿತರಿಸಲಾಗುತ್ತಿದೆ ಎಂದು ಅಮೆರಿಕದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ಭಾರತೀಯರಿಗೆ ನೀಡುವ ವಿದ್ಯಾರ್ಥಿ ವೀಸಾ ವಿತರಣೆ ಪ್ರಕ್ರಿಯೆಯನ್ನು ಶಾಲೆಯ ಆರಂಭಕ್ಕೂ ಮೊದಲು ಪೂರ್ಣಗೊಳಿಸಲು ಬೈಡನ್ ಸರ್ಕಾರ ಬದ್ಧವಾಗಿದೆ. ಎಚ್–1ಬಿ ಮತ್ತು ಎಲ್ ವೀಸಾ ಸೇರಿದಂತೆ ಉದ್ಯೋಗಿಗಳಿಗೆ ನೀಡುವ ವೀಸಾವನ್ನೂ ಆದ್ಯತೆಯ ಮೇಲೆ ವಿತರಿಸಲಾಗುವುದು ಎಂದಿದೆ. ತಾಂತ್ರಿಕ ಪರಿಣತಿ ಬಯಸುವ ವಿಶೇಷ ಉದ್ಯೋಗಗಳಿಗೆ ವಿದೇಶಿಯರನ್ನು ನೇಮಿಸಿಕೊಳ್ಳಲು ಅಮೆರಿಕದ ಕಂಪನಿಗಳಿಗೆ ವಲಸೆ ರಹಿತ ವೀಸಾ ಎಚ್ -1ಬಿ ಅಡಿ ಅವಕಾಶವಿದೆ. ಎಲ್ -1 ಇತರ ರೀತಿಯ ಉದ್ಯೋಗ ವೀಸಾ ಆಗಿದ್ದು, ಅಮೆರಿಕದಲ್ಲಿ ನೌಕರಿ ಬಯಸುವ ವೃತ್ತಿಪರರಿಗೆ ಇದರಲ್ಲಿ ಅವಕಾಶವಿದೆ.

‘ಬಾಡಿಗೆದಾರನಿಗೆ ಗುಂಡು ಹಾರಿಸಿದ ಅಂಗಡಿ ಮಾಲೀಕ’

ವಿರಾಜಪೇಟೆ (ಕೊಡಗು ಜಿಲ್ಲೆ): ಒಂದು ತಿಂಗಳ ಬಾಡಿಗೆ ಕೊಟ್ಟಿಲ್ಲ ಎಂಬ ಕಾರಣಕ್ಕೆ ಅಂಗಡಿ ಮಾಲೀಕ ಹಾಗೂ ನಿವೃತ್ತ ಎಸ್‌.ಪಿ. ಚೆಣ್ಣಪ್ಪ ಅವರ ಪುತ್ರ ನೆಲ್ಲಮಕ್ಕಡ ರಂಜನ್ ಚೆಣ್ಣಪ್ಪ (52) ಎಂಬಾತ ಬಾಡಿಗೆದಾರ ಕೆ. ಬೋಪಣ್ಣ (44) ಅವರ ಮೇಲೆ ಗುಂಡು ಹಾರಿಸಿದ್ದು, ಕೂದಲೆಳೆಯ ಅಂತರದಲ್ಲಿ ಬೋಪಣ್ಣ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ರಂಜನ್ ಚೆಣ್ಣಪ್ಪ ಮಳಿಗೆಯನ್ನು ಬೋಪಣ್ಣ ಬಾಡಿಗೆಗೆ ಪಡೆದಿದ್ದರು. ಬಾಡಿಗೆ ನೀಡಿಲ್ಲ ಎಂದು ಗಲಾಟೆ ಆರಂಭಿಸಿ ಗುಂಡು ಹಾರಿಸಿದ್ದಾರೆ. ಬೋಪಣ್ಣ ತಪ್ಪಿಸಿಕೊಂಡಿದ್ದಾರೆ. ಗುಂಡುಗಳು ಅಂಗಡಿಯ ರೋಲಿಂಗ್ ಶೆಟರ್‌ಗೆ ತಗುಲಿವೆ. ಆರೋಪಿಯನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ವಿವಿಧೆಡೆ ಬೇರೆ ಬೇರೆ ದಿನ ಗೋಚರಿಸುವ ಖಗೋಳ ವಿದ್ಯಮಾನ

ಶೂನ್ಯ ನೆರಳಿನ ಕೌತುಕ...

ಪ್ರಜಾವಾಣಿ ವಾರ್ತೆ

ಉಡುಪಿ: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಶೂನ್ಯ ನೆರಳಿನ ವಿದ್ಯಮಾನಗಳನ್ನು ಏ. 24ರಿಂದ ಮೇ 11ರವರೆಗೆ ಕಣ್ತುಂಬಿಕೊಳ್ಳಬಹುದು ಎಂದು ಪೂರ್ಣಪ್ರಜ್ಞ ಹವ್ಯಾಸಿ ಖಗೋಳ ವೀಕ್ಷಕರ ಸಂಘ ತಿಳಿಸಿದೆ.

ಮಂಗಳೂರಿನ ವಾಸಿಗಳು ಏ. 24ರಂದು ಮಧ್ಯಾಹ್ನ 12.28ಕ್ಕೆ ಹಾಗೂ ಉಡುಪಿಯಲ್ಲಿರುವವರು ಏ. 25ರಂದು ಮಧ್ಯಾಹ್ನ 12.29ಕ್ಕೆ ಶೂನ್ಯ ನೆರಳಿನ ಕೌತುಕ ವೀಕ್ಷಿಸಬಹುದು.

23ರಂದು ಮಂಡ್ಯ, ಪುತ್ತೂರು, 24ರಂದು ಹಾಸನ, ಬೆಂಗಳೂರು, 25ರಂದು ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, 26ರಂದು ಕುಂದಾಪುರ, ತೀರ್ಥಹಳ್ಳಿ, ಗೌರಿಬಿದನೂರು, 27ರಂದು ಭಟ್ಕಳ, ಶಿವಮೊಗ್ಗ, ಚನ್ನಗಿರಿ, 28ರಂದು ಹೊನ್ನಾವರ, ಕುಮಟಾ, ಶಿಕಾರಿಪುರ, ಚಿತ್ರದುರ್ಗ, 29ರಂದು ಗೋಕರ್ಣ, ಶಿರಸಿ, ರಾಣೆಬೆನ್ನೂರು, ದಾವಣಗೆರೆ, 30ರಂದು ಕಾರವಾರ, ಹಾವೇರಿಯಲ್ಲಿ ಶೂನ್ಯ ನೆರಳು ವಿದ್ಯಮಾನ ಘಟಿಸಲಿದೆ.

ಮೇ 1ರಂದು ಹುಬ್ಬಳ್ಳಿ, ಹೊಸಪೇಟೆ, ಬಳ್ಳಾರಿ, 2ರಂದು ಧಾರವಾಡ, ಗದಗ, 3ರಂದು ಬೆಳಗಾವಿ, ಸಿಂಧನೂರು, 4ರಂದು ಗೋಕಾಕ, ಬಾಗಲಕೋಟೆ, ರಾಯಚೂರು, 6ರಂದು ಯಾದಗಿರಿ, 7ರಂದು ವಿಜಯಪುರ, 9ರಂದು ಕಲಬುರಗಿ, 10ರಂದು ಹುಮನಾಬಾದ್, 11ರಂದು ಬೀದರ್‌ನಲ್ಲಿ ವೀಕ್ಷಿಸಬಹುದು.

ಈ ಸ್ಥಳಗಳಲ್ಲಿ ಪೂರ್ವಕ್ಕೆ ಇರುವ ಭಾಗಗಳಲ್ಲಿ ಮಧ್ಯಾಹ್ನ 12.15ರಿಂದ ಮತ್ತು ರಾಜ್ಯದ ಪಶ್ಚಿಮ ಭಾಗಗಳಲ್ಲಿ ಇರುವ ಪ್ರದೇಶಗಳಲ್ಲಿ ಮಧ್ಯಾಹ್ನ 12.35ರ ನಡುವೆ ಒಂದು ನಿಮಿಷದಲ್ಲಿ ಘಟಿಸಲಿದೆ.



ಶೂನ್ಯ ನೆರಳಿನ ಕೌತುಕ

ಶೂನ್ಯ ನೆರಳನ್ನು ಗಮನಿಸಲು ಸಿಲಿಂಡರ್, ಕ್ಯೂಬ್ ಅಥವಾ ಶಂಕುವಿನಂತೆ ಮೇಲಿನಿಂದ ಕೆಳಗೆ ಸಮಾನವಾಗಿರುವ ವಸ್ತುಗಳನ್ನು ಬಳಸಬೇಕು. ಮನುಷ್ಯನ ದೇಹದ ಮೇಲ್ಭಾಗ ಕೆಳಭಾಗಕ್ಕಿಂತ ವಿಶಾಲವಾಗಿರುವುದರಿಂದ ಸ್ವಲ್ಪ ಪ್ರಮಾಣದಲ್ಲಿ ನೆರಳು ಉಂಟಾಗಲಿದ್ದು, ಶೂನ್ಯ ನೆರಳಿನ ದಿನ ಅತ್ಯಲ್ಪ ಪ್ರಮಾಣದಲ್ಲಿ ನೆರಳು ಕಾಣುತ್ತದೆ.

ಶೂನ್ಯ ನೆರಳಿನ ಕೌತುಕ: ಸೂರ್ಯನು ಆಕಾಶದಲ್ಲಿ ಉತ್ತರ ದಿಕ್ಕಿನತ್ತ ಚಲಿಸುವಾಗ ನೀವು ಇರುವ ಸ್ಥಳಕ್ಕೆ ಅವಲಂಬಿತವಾಗಿ ಸೂರ್ಯನು ನೆತ್ತಿಯ ನೇರದಲ್ಲಿ ಹಾದು ಹೋಗುತ್ತಾನೆ. ಸೂರ್ಯನು ಆಕಾಶದಲ್ಲಿ ಮೇಲೇರುತ್ತಿದ್ದಂತೆ ನೆರಳಿನ ಉದ್ದ ಕಡಿಮೆಯಾಗುತ್ತದೆ. ಸೂರ್ಯನ ನೆರಳು ನಮ್ಮ ತಲೆಯ ಮೇಲೆ ನಿಖರವಾಗಿ ಇರುವಾಗ ನಮ್ಮ ನೆರಳು ನೇರವಾಗಿ ನಮ್ಮ ಕೆಳಗೆ ಬರುತ್ತದೆ. ನಾವು ನಮ್ಮ ನೆರಳಿನ ಮೇಲೆಯೇ ನಿಂತಿರುವುದರಿಂದ ನೆರಳು ನಿಮಗೆ ಗೋಚರಿಸುವುದಿಲ್ಲ. ಈ ವಿದ್ಯಮಾನವನ್ನು 'ಶೂನ್ಯ ನೆರಳು' ಎಂದು ಕರೆಯಲಾಗುತ್ತದೆ.

ಮುಖ್ಯಾಂಶಗಳು

- ಏ. 24ರಿಂದ ಮೇ 11ರವರೆಗೆ ರಾಜ್ಯದ ವಿವಿದೆಡೆ ಈ ವಿದ್ಯಮಾನ ಇರಲಿದೆ
- ಏಪ್ರಿಲ್‌ನಲ್ಲಿ ಶೂನ್ಯ ನೆರಳಿನ ದಿನಗಳು ಹೆಚ್ಚು
- ಶೂನ್ಯ ನೆರಳಿನ ದಿನ ಅತ್ಯಲ್ಪ ಪ್ರಮಾಣದಲ್ಲಿ ನೆರಳು ಕಾಣುತ್ತದೆ

ಭೂಮಿಯು 23.5 ಡಿಗ್ರಿ ಕೋನದಲ್ಲಿ ಬಾಗಿರುವುದರಿಂದ ಭೂಮಿಯು ಸೂರ್ಯನ ಸುತ್ತ ಚಲಿಸುವಾಗ, ಸೂರ್ಯನು ಉತ್ತರದಿಂದ ದಕ್ಷಿಣಕ್ಕೆ ಚಲಿಸುವಂತೆ ಕಾಣುತ್ತದೆ. ಕರ್ಕಾಟಕ ಸಂಕ್ರಾಂತಿ ವೃತ್ತ ಹಾಗೂ ಮಕರ ಸಂಕ್ರಾಂತಿ ವೃತ್ತದ ನಡುವೆ ವಾಸಿಸುವವರಿಗೆ ವರ್ಷದ ಎರಡು ದಿನಗಳಲ್ಲಿ ಸೂರ್ಯನು ಉತ್ತುಂಗದಲ್ಲಿ ಕಾಣಿಸಿಕೊಳ್ಳುತ್ತಾನೆ. ಈ ಎರಡು ದಿನಗಳು ಪ್ರತಿವರ್ಷ ಏಪ್ರಿಲ್ ಅಥವಾ ಮೇ ಮತ್ತು ಆಗಸ್ಟ್‌ನಲ್ಲಿ ಸಂಭವಿಸುತ್ತವೆ.

ಆಗಸ್ಟ್ ಮಳೆಗಾಲವಾಗಿದೆ. ಬೇಸಿಗೆ ಕಾಲವಾದ ಏಪ್ರಿಲ್‌ನಲ್ಲಿ ಶೂನ್ಯ ನೆರಳಿನ ದಿನಗಳನ್ನು ಕಣ್ತುಂಬಿಕೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತವೆ. ಯಾವುದೇ ಉಪಕರಣಗಳನ್ನು ಬಳಸದೆ ಗಮನಿಸಬಹುದಾದ ಸುಲಭವಾದ ಖಗೋಳ ವಿದ್ಯಮಾನಗಳಲ್ಲಿ ಶೂನ್ಯ ನೆರಳು ಒಂದು ಎಂಬುದು ವಿಶೇಷ.

ಜಮೀನಿನಲ್ಲಿ ಸಿಎಚ್ ಪುಡಿ ವಶ: ಬಂಧನ

ಪ್ರಜಾವಾಣಿ ವಾರ್ತೆ

ರಾಯಚೂರು: ತಾಲ್ಲೂಕಿನ ಕಡಗಂದೊಡ್ಡಿ ಗ್ರಾಮದಲ್ಲಿ ಶನಿವಾರ ಕಾರ್ಯಾಚರಣೆ ನಡೆಸಿದ ಜಿಲ್ಲಾ ಅಬಕಾರಿ ಪೊಲೀಸರು ಜಮೀನಿನಲ್ಲಿ ಹೂತಿಟ್ಟಿದ್ದ ₹ 70 ಲಕ್ಷ ಮೌಲ್ಯದ 850 ಕೆಜಿ ಸಿಎಚ್ ಪುಡಿ (ಮತ್ತೇರಿಸುವ ಅಂಶ) ವಶಕ್ಕೆ ಪಡೆದು, ನರಸರಾಜ ಎಂಬ ಆರೋಪಿಯನ್ನು ಬಂಧಿಸಿದ್ದಾರೆ.

'ಹೆಂಡ ತಯಾರಿಕೆಗೆ ಬಳಸಲಾಗುವ ಸಿಎಚ್ ಪುಡಿಯು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಸೇಂದಿ ನಿಷೇಧದ ಬಳಿಕ ರಾಯಚೂರು ತಾಲ್ಲೂಕಿನಲ್ಲಿ ಕಾನೂನುಬಾಹಿರವಾಗಿ ಸಿಎಚ್ ಪುಡಿ ಬಳಕೆಯಾಗುತ್ತಿದೆ. ಇದೇ ಮೊದಲ ಬಾರಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಈ ಪುಡಿ ಸಿಕ್ಕಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೇಗಿದೆ ಉಡುಗೆ?
ಅಕ್ಷಯ ತೃತೀಯಾ ಪ್ರಯುಕ್ತ ಶನಿವಾರ ಮಹಾರಾಷ್ಟ್ರದ ಕರಾಡ್‌ನಲ್ಲಿ ಸಾಂಪ್ರದಾಯಿಕ ಉಡುಗೆ ತೊಟ್ಟು ಬೈಕ್ ಏರಿ ಬಂದ ನಾರಿ






INSPIRED TO INSPIRE
SRS RESIDENTIAL PU COLLEGE
CHITRADURGA & CHALLAKERE
II PU RESULTS 2023
ಕೋಟೆ ನಾಡಿನ ದ್ವಿತೀಯ ಪಿಯು ಫಲಿತಾಂಶದಲ್ಲಿ ಹೊಸ ಇತಿಹಾಸ
ದಾಖಲೆಯ 316 ಡಿಸ್ಟಿಂಕ್ಷನ್‌ಗಳು
1 DISTRICT Topper Science
Jayanth H. S. 589
State 8th Rank
JEE Mains 99.06%
OASIS - OLYMPIAD - AIR 10
100/100 63 Students
90 % & above 177
Scores above 500 - 365
Pruthwi K.C. 589
1 DISTRICT Topper Commerce
State 9th Rank
SRS Hostel Students Unique Achievement
100 Distinctions out of 107 students
Phanindra Kumar 587
Hema A. 586
Madhusudhan K M 585
Honey A Jain 584
Nithin V 583
Harshitha S.N. 583
Marulasiddangowda N. 582
Disha D S. 582
Sumadhva Krishna H.M. 582
Mahalakshmi V 582
Pradeep D 582
SUSHMA A. 580
RIDDHI JAIN. 579
ALIYA ANJUM M. 579
VIDYA K V. 578
SUHANI M. 578
SANJANA K N. 578
SRUSTI D.S. 578
SANNIDHI H.E. 577
KANCHAN K.U. 577
DHANUSH S 576
LIKHITH M L 576
CHINMAY M GOWDA 575
PRATHIKSHA R JAIN 575
TRIVENI N 574
JEETHESHA M 573
PRANATHI D 573
TASLIM BANU 573
CHAVVI M JAIN 572
KAVANA P M 570
SUFIYA ANJUM 570
SHAMBHAVI MANJUNATH 569
TWINKLE DEVANGAJ 569
LUBNA ANJUM G B 569
RIDHAN R JAIN 569
ANANYA N 568
KOWSHIK K V 567
SNEHA 567
HONEY JAIN 567
SINCHANA J P 567
YASHAS D 566
RAKSHITHA P R 566
NIHARIKA D L 565
DHANUSHREE D 565
JHANSI T 565
P GOVARDHAN 565
CHANDANA H N 564
RASHMI T POOJAR 564
ZAIBA SUZAIN 564
SPARSHA YADAV R 564
SHREYA REDDY N B 563
SINCHANA K M 563
THIPPESWAMY B M 563
VARSHITHA R 563
CHINMAYI M K 562
ARPITHA S RAO 562
MUSKAN C A 562
VAMSHI KRISHNAA T 562
VARSHITHA M J 562
CHIRANTHAN B S RAJ 562
SIDDHI JAIN 562
AMRUTHA U 562
H ACHYUTH 562
DISHA K KUMAR 561
MANJUNATHA T M 561
LAVANYA T 560
RAMALAKSHMI K 560
SINCHANA B T 560
CHIRANJEEVI M CHETHAN 560
PAVITHRA G O 559
RACHANA D N 559
RAKSHITA ASHOK BALLI 559
AKASH K R 559
MANYA JAIN 559
GOWRIKA SHIVAMANJARI 559
BINDU P 559
PRITHI M 559
NAYANA M R 558
SWABHIMAN Y R 558
PRIYANKA H R 558
GOURAV M L 558
VYSHNAVI H A 558
RADHIKA D R 558
ANUSHA M N 558
CHANDANA P S 557
DHANYASHREE H 557
SYED JUNAID 557
NESARA R 556
AYUSH T 556
SRUSHTI KOTI G T 556
BHAVANA M V 556
MEGHANA S 556
SAYAM R JAIN 556
VANDANA L Y 555
HARSHITHA L 555
ANKITHA R 556
SAFA BANU HR 555
TEJASHWINI P 555
SAI NIKHIL K G 554
PRACHI B JAIN 544
VARSHINI D 554
ANUSHREE UMESH SHETTY 554
RINKU KAWAR 554
YASHAVANTH T 553
SRUJANA C A 553
VAISHNAVI C S 553
KEERTHANA V 553
R AASMITA 553
CHAVI L JAIN 553
CHAVI VADERA 553
LOKAMANYA P C 553
VARSHINI K R 552
LOKESHA A 552
KUSHAL KUMAR H N 552
RAYAN KHAN G K 552
NIREEKSHA V 551
CHINMAYI K P 551
NEHA N RAKSHITHA 551
THIPPA REDDY K S 551
SANNIBHA K N 550
YASHASWI J H 550
RAKSHITHA JAIN S 550
SUHAIB S Z 550
PRANATHI D K 550
PRACHI KOTHARI 550
RAVITEJA G A 550
POOJA D. 549
VISHNUKUMAR P 549
RAHUL D 549
BHAVANASI NEHA 549
GNANESHWARI P M 548
POOJA C D 548
DHRUTHI R 548
MUSKAN A 548
VANSHIKA D JAIN 548
AISHWRYA B S 548
SAKSHI G N 547
VIKRAMADITHYA S 547
DHARMA PRAKASH 547
RANJITH KRISHNA P 547
ARCHANA M 547
RUCHITHA K P 547
SINDHU G 546
KAVANA R P 546
DISHA V O 546
AMAN S M 546
SUKRUTH H V 546
MANYA U 545
KIRANA K M 545
NANDINI M S 545
BHOOMI J 545
SHAHWANA KULSUM NOORAIN 545
VARSHITHA S 545
SNEHA S 544
SYED AQEEB AHAMAD 543
NIKHIL G 543
GAGANA S 543
VEDA S 543
KAVYA G N 543
NITHISH REDDY G B 542
NAKUL B JAIN 542
ALANGI VIJAYALAKSHMI 542
NEHA S D 542
RAJINI R 542
SPOORTHI V KOTE 542
SUHA FATHIMA M J 541
KRUTHIKA K H 541
MOHAMAD MUTHAWAKAL G 541
CHINMAY R A 540
VANSHIKA D JAIN 540
SHREYA RAMESH 540
RANJITHA REDDY P 540
BHUVAN M 540
SWAYAM CHOPRA 540
TEJASWINI T 540
90 + % ONLY
Subject wise 100/100
Kannada - 10
Hindi - 02
Sanskrit - 06
Physics - 08
Chemistry - 01
Mathematics - 06
Biology - 07
Computer Science - 07
Economics - 01
Business Studies - 08
Accountancy - 06
Statistics - 01
College Overall Result 98.28%
SRYESS ✓
ಉತ್ತಮ ಶಿಕ್ಷಣದತ್ತ ದಿಟ್ಟ ಹೆಜ್ಜೆ
We lead the way you aspire to go...
CHITRADURGA : SRS BLUE GEMS MONTESSORI,
SRS HERITAGE (CBSE, ICSE & State) School (Res) Cell : 9900000833
SRS PU (Science & Commerce) College, Cell : 9901852435, 7353761333, 9900000811
SRS FIRST GRADE COLLEGE (BBM, BCA, B.Com) Cell : 9900000822. SRS B.Ed College, Cell : 99000000844.
CHALLAKERE : SRS BLUE GEMS MONTESSORI, SRS HERITAGE (CBSE & STATE)
SRS PU (Science & Commerce) College : 8150032222, 8150042222
Sri. B.A. Lingareddy
Chairman.
Contact No : 9900000811 | 9901852435 | 7353761333
Website : srspucollege.in
e-mail : srspuc@gmail.com

ಭಾನುವಾರ, ಏಪ್ರಿಲ್ 23, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 112 | ಪುಟ 24
www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಇಂದು ಭಾರತವೇ ಜಗತ್ತಿನ ಅತ್ಯಂತ ಯುವ ದೇಶ. ಇತರೆಲ್ಲ ದೇಶಗಳಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿದ್ದರೆ, ನಮ್ಮಲ್ಲಿ ಇನ್ನಿಪ್ಪತ್ತು ವರ್ಷ ಆ ಆತಂಕವಿಲ್ಲ.

‘ಸಿದ್ದರಾಮಯ್ಯ ಮುಗಿಸಲು ಹುನ್ನಾರ’ 6
ಡುಪ್ಲೆಸಿ–ಸಂಜು ಸ್ಯಾಮ್ಸನ್ ಮುಖಾಮುಖಿ ಇಂದು
ಬೆಂಗಳೂರಿಗೆ ‘ರಾಯಲ್ಸ್’ ಸವಾಲು 14

ಬಸವ ಜಯಂತಿ ಶುಭಾಶಯಗಳು

ಏರುತ್ತಿರುವ ತಾಪಮಾನದಿಂದ ಜನರು ತತ್ತರ; ಜೀವನ ದುಸ್ತರ

ರಣಬಿಸಿಲು; ಬದುಕು ಕಂಗಾಲು

• ರಾಹುಲ ಬೆಳಗಲಿ

ಒಳನೋಟ
ತಾಪಮಾನದ ತಾಪತ್ರಯ
ಪ್ರತಿಕ್ರಿಯಿಸಿ: 9606038256
feedback@prajavani.co.in

ಕಲಬುರಗಿ: ‘ಬೇಸಿಗೆ ರಜೆಯೆಂದರೆ, ಮಕ್ಕಳು ಮೈದಾನದಲ್ಲಿ ದಿನಪೂರ್ತಿ ಆಟವಾಡುತ್ತ ಸಂಭ್ರಮಿಸಬೇಕು. ಆದರೆ, ಈ ವರ್ಷದ ರಣಬಿಸಿಲು ಇದಕ್ಕೆ ಸಂಪೂರ್ಣ ತಡೆಯೊಡ್ಡಿದೆ. ಮಕ್ಕಳು ಆಟ ಆಡುವುದಿರಲಿ, ಹಿರಿಯರು ಕೂಡ ಸಣ್ಣಪುಟ್ಟ ಕೆಲಸಗಳಿಗೆ ಹೊರ ಹೋಗಲು ಹಿಂಜರಿಯುತ್ತಿದ್ದಾರೆ. ಸುಡು ಬಿಸಿಲಿಗೆ ಚರ್ಮ ಸುಡುತ್ತೆ, ಇಲ್ಲವೇ ಆಯಾಸಗೊಂಡು ರಸ್ತೆಯಲ್ಲೇ ಕುಸಿದು ಬೀಳುವ ಭಯ ಅವರಲ್ಲಿದೆ’.

ಹೀಗೇಳಿದ್ದು ಕಲಬುರಗಿಯ ಹಿರಿಯರಾದ ಸಿದ್ರಾಮಪ್ಪ ಸಜ್ಜನ. ಬೆಂಗಳೂರಿನಿಂದ ಬೇಸಿಗೆ ರಜೆಯಲ್ಲಿ ಮನೆಗೆ ಬಂದಿದ್ದ ಮೊಮ್ಮಗ ರಘು ಸಜ್ಜನ ಬಿಸಿಲ ಝಳಕ್ಕೆ ನಿತ್ರಾಣಗೊಂಡು ಹಾಸಿಗೆ ಹಿಡಿದಿರುವುದು ಅವರ ಚಿಂತೆಗೆ ಕಾರಣ. ಅವರಷ್ಟೇ ಅಲ್ಲ, ರಾಜ್ಯದ ಬಹುತೇಕ ಜಿಲ್ಲೆಗಳ ಜನರು ಈ ವರ್ಷ ಬೇಸಿಗೆಯ ದಿನಗಳ ಬದಲಾದ ಸ್ವರೂಪದ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಬಿಸಿಲಿನ ಪ್ರಕೋಪ ಮನುಷ್ಯರಿಗೆ ಅಲ್ಲದೇ, ಪ್ರಾಣಿ ಮತ್ತು ಪಕ್ಷಿಗಳಿಗೂ ತಟ್ಟಿದೆ. ಮನೆಯಿಂದ ಹೊರಹೋದರೆ ಅಸಹನೀಯ ಶಾಖ, ಮನೆಯಲ್ಲೇ ಉಳಿದರೆ ಇಡೀ ಮೈ ನೀರಾಗಿಸುವ ಸೆಖೆ. ಒಟ್ಟಿನಲ್ಲಿ ಸಹಜ ಜೀವನಶೈಲಿ ಮೇಲೆ ಆಗಿರುವ ಆಘಾತ ಸಾಮಾನ್ಯವಾದುದ್ದಲ್ಲ.

ಡಾ.ಶಂಕರ್ ಅವರು ಹೇಳುವ ಪ್ರಕಾರ, ಬೆಳಿಗ್ಗೆ 11 ರಿಂದ ಮಧ್ಯಾಹ್ನ 4ರವರೆಗೆ ಉಷ್ಣಾಂಶ ಹೆಚ್ಚಿರುತ್ತದೆ. ಈ ಅವಧಿಯಲ್ಲಿ ನಿರಂತರವಾಗಿ ಬಿಸಿಲಲ್ಲಿ ಓಡಾಡಿದರೆ, ಚರ್ಮ ರೋಗದ ಜೊತೆ ಮೈಮೇಲೆ ಗುಳ್ಳೆಗಳು ಕಾಣಿಸಿಕೊಳ್ಳುತ್ತವೆ. ನಿರ್ಜಲೀಕರಣ, ಆಯಾಸ ಅಧಿಕಗೊಂಡು ದೇಹದಲ್ಲಿ ನಿಶ್ಶಕ್ತಿ ಉಂಟಾಗುತ್ತದೆ. ಆಹಾರ ಸೇವಿಸಲು ಆಗುವುದಿಲ್ಲ. ಸೇವಿಸಿದರೂ ಅಜೀರ್ಣ ಆಗುತ್ತದೆ. ಸೂರ್ಯನ ಹೊಡೆತಕ್ಕೆ (ಸನ್ ಸ್ಟ್ರೋಕ್) ಪ್ರಜ್ಞೆ ತಪ್ಪಿ ಬಿದ್ದು, ಪ್ರಾಣಕ್ಕೂ ಅಪಾಯವಾಗುವ ಸಾಧ್ಯತೆಯಿದೆ.

ಭಾರತೀಯ ಹವಾಮಾನ ಇಲಾಖೆಯು ಕಳೆದ ಫೆಬ್ರುವರಿಯಲ್ಲಿ ದೇಶದಲ್ಲಿ 120 ವರ್ಷಗಳಲ್ಲೇ ಗರಿಷ್ಠ ತಾಪಮಾನ 29.54 ಡಿಗ್ರಿ ಸೆಲ್ಸಿಯಸ್ ದಾಖಲಾದ ಬಗ್ಗೆ ಮಾಹಿತಿ ನೀಡಿತ್ತು. ಈಗ ರಾಜ್ಯದ ಬಹುತೇಕ ಕಡೆ ತಾಪಮಾನವು 30 ರಿಂದ 41 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದು, ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿದೆ. ಕಿಂಚಿತ್ತೂ ಕರುಣೆ ತೋರದ ಈ ಕೆಂಡದ ದಿನಗಳು ಹೀಗೆ ಮುಂದುವರಿದರೆ, ಬಿಸಿಲಿನಿಂದ ತತ್ತರಿಸಿ ಅನಾರೋಗ್ಯಕ್ಕೀಡಾದ ಜನರ ಸಾಲಿಗೆ ಇನ್ನಷ್ಟು ಮಂದಿ ಸೇರಿಕೊಳ್ಳುತ್ತಾರೆ.

ಅತಿಯಾದ ತಾಪಮಾನದ ಏಟಿಗೆ ಮಹಾರಾಷ್ಟ್ರದಲ್ಲಿ 13ಕ್ಕೂ ಹೆಚ್ಚು ಮಂದಿ ಸಾವನ್ನಪ್ಪಿದ್ದು, ಪಶ್ಚಿಮ ಬಂಗಾಳ, ಬಿಹಾರ, ಸಿಕ್ಕಿಂ, ಒಡಿಶಾ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಜನರು ಬಿಸಿಗಾಳಿಗೆ ತತ್ತರಿಸಿ ಅಸ್ವಸ್ಥಗೊಂಡಿದ್ದಾರೆ. ಬಿಸಿ ಗಾಳಿಯ ವಾತಾವರಣ ದೀರ್ಘ ಅವಧಿಯವರೆಗೆ ಇರುವ ಸಾಧ್ಯತೆಯಿದೆ ಎಂದು ಹವಾ ಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಕಲಬುರಗಿ ಜಿಲ್ಲೆ ಅಫಜಲಪುರ ತಾಲ್ಲೂಕಿನ ಬಿದನೂರ ಗ್ರಾಮದಲ್ಲಿ ನೀರಿನ ಸಮಸ್ಯೆ ತೀವ್ರವಾಗಿದ್ದು, ಗ್ರಾಮಸ್ಥರು ಬಾವಿಯ ನೀರಿಗೆ ಮೊರೆ ಹೋಗಿರುವುದು.
ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಏಪ್ರಿಲ್ ಅಂತ್ಯದೊಳಗೆ ಮಳೆ ಆಗದಿದ್ದರೆ ನೀರಿನ ‘ರೇಶನಿಂಗ್’ ಮಾಡಬೇಕಾಗಬಹುದು. ನೀರನ್ನು ಮಿತವಾಗಿ ಬಳಸಬೇಕು. ಅಭಾವ ತಡೆಯಲು ಎಚ್ಚರ ವಹಿಸಬೇಕು
ಜಯಾನಂದ ಅಂಚನ್, ಮೇಯರ್, ಮಂಗಳೂರು ಮಹಾನಗರ ಪಾಲಿಕೆ

ಬೇಸಿಗೆ ವೇಳೆ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಾಗುವ ಸಮಸ್ಯೆ ಮುಂಡಗೋಡ, ಹಳಿಯಾಳದಲ್ಲಿದೆ. ಇದಕ್ಕಾಗಿ ಪರೀಕ್ಷೆ ನಡೆಸುತ್ತಿದ್ದೇವೆ
ಡಾ.ಅನ್ನಪೂರ್ಣ ವಸ್ತ್ರದ್
ಜಿಲ್ಲಾ ಆರೋಗ್ಯಾಧಿಕಾರಿ, ಉತ್ತರ ಕನ್ನಡ

4ನೇ ಪುಟ ನೋಡಿ

ಮತ ಆಮಿಷಕ್ಕೆ ಡಿಜಿಟಲ್ ಪಾವತಿ

ಚುನಾವಣಾ ಆಯೋಗಕ್ಕೆ ಸವಾಲಾದ ರಾಜಕೀಯ ಪಕ್ಷಗಳ ಹೊಸ ತಂತ್ರ

• ಪವನ್‌ಕುಮಾರ್ ಎಚ್.

ಹುಬ್ಬಳ್ಳಿ: ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸಬೇಕು ಎಂಬುದು ಚುನಾವಣಾ ಆಯೋಗದ ಆಶಯ. ಆದರೆ, ಡಿಜಿಟಲ್ ಪಾವತಿ ಮೂಲಕ ಮತದಾರರಿಗೆ ಆಮಿಷ ಒಡ್ಡುತ್ತಿರುವುದನ್ನು ತಡೆಯುವುದು ಆಯೋಗಕ್ಕೆ ಸವಾಲಾಗಿ ಪರಿಣಮಿಸಿದೆ.

ಪ್ರಸ್ತುತ ಚುನಾವಣೆಯಲ್ಲಿ ಶೇ 10ರಿಂದ ಶೇ 15ರಷ್ಟು ಹಣವನ್ನು ಡಿಜಿಟಲ್ ಪಾವತಿ ಮೂಲಕ ವರ್ಗಾವಣೆ ಮಾಡಲಾಗಿದೆ. ಮತದಾರರಿಗೆ ದೊಡ್ಡ ಪ್ರಮಾಣದಲ್ಲಿ ಹಣ ಈಗಾಗಲೇ ಪಾವತಿಯಾಗಿದೆ ಎನ್ನುತ್ತವೆ ಗುಪ್ತಚರ ಇಲಾಖೆಯ ಮೂಲಗಳು.

ದಿನಸಿ ಅಂಗಡಿಗಳು, ಪೆಟ್ರೋಲ್ ಬಂಕ್‌ಗಳು ಮತ್ತು ಗುತ್ತಿಗೆದಾರರು ಸೇರಿದಂತೆ ದಿನನಿತ್ಯ ವಹಿವಾಟು ನಡೆಸುವವರನ್ನು ರಾಜಕೀಯ ಪಕ್ಷಗಳು ಇದಕ್ಕಾಗಿ ಬಳಸಿಕೊಂಡಿವೆ. ಗೂಗಲ್ ಪೇ, ಫೋನ್‌ಪೇ, ಭೀಮ್ ಆ್ಯಪ್‌ಗಳನ್ನು ಬಳಸಲಾಗುತ್ತಿದೆ.

ಪ್ರತಿದಿನ ದೊಡ್ಡ ಪ್ರಮಾಣದಲ್ಲಿ ಆನ್‌ಲೈನ್ ಪೇಮೆಂಟ್ ಆಗುತ್ತಿದ್ದು, ಇದರ ಮೂಲವನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯ. ಇದಕ್ಕೆ ತಂತ್ರಜ್ಞಾನದ ಅವಶ್ಯಕತೆಯೂ ಇದೆ
ಮನೋಜ್ ಕುಮಾರ್ ಮೀನಾ
ರಾಜ್ಯ ಮುಖ್ಯ ಚುನಾವಣಾಧಿಕಾರಿ

‘ಬ್ಯಾಂಕ್‌ಗಳು ಮತ್ತು ಆನ್‌ಲೈನ್ ಪೇಮೆಂಟ್ ಆಪರೇಟರ್‌ಗಳು ಆಯೋಗಕ್ಕೆ ಸಮರ್ಪಕ ಮಾಹಿತಿ ನೀಡಿದರೆ ಮಾತ್ರ ಇದನ್ನು ನಿಯಂತ್ರಿಸಲು ಸಾಧ್ಯ. ಅನುಮಾನಾಸ್ಪದ ರೀತಿಯಲ್ಲಿ ಹಣ ವರ್ಗಾವಣೆ ಆಗಿದ್ದರೆ ಮಾಹಿತಿ ನೀಡುವಂತೆ ಕೋರಲಾಗಿದೆ’ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ‘ಪ್ರಜಾವಾಣಿ’ಗೆ ಹೇಳಿದರು.

‘ಹಲವು ಪಕ್ಷಗಳು ಆನ್‌ಲೈನ್ ಪಾವತಿ ಮೂಲಕ ಮತದಾರರನ್ನು ಸೆಳೆಯಲು ಪ್ರಯತ್ನಿಸುತ್ತಿವೆ. ಇದನ್ನು ಪತ್ತೆ ಹಚ್ಚುವುದು ಕಷ್ಟಸಾಧ್ಯ. ಕಪ್ಪು ಹಣವನ್ನು ಅಧಿಕೃತ ಹಣವಾಗಿ ಮಾಡಿಕೊಳ್ಳಲು ಇದು ಸರಿಯಾದ ಸಮಯವಾಗಿದೆ’ ಎಂದು ರಾಜಕೀಯ ವಿಶ್ಲೇಷಕ ಸಂದೀಪ್ ಶಾಸ್ತ್ರಿ ಅಭಿಪ್ರಾಯಪಟ್ಟರು.

ಹೆಚ್ಚುವರಿ ಮುಖ್ಯ ಚುನಾವಣಾಧಿಕಾರಿ ವೆಂಕಟೇಶಕುಮಾರ್ ಆರ್., ‘ಕಳೆದ 15 ದಿನಗಳ ಹಿಂದೆ ಚುನಾವಣಾ ಆಯೋಗದ ಅಧಿಕಾರಿಗಳು ರಾಷ್ಟ್ರೀಯ ಪಾವತಿ ನಿಗಮದೊಂದಿಗೆ (ಎನ್‌ಪಿಸಿಐ) ಸಭೆ ನಡೆಸಿದ್ದಾರೆ. ಡಿಜಿಟಲ್ ಪೇಮೆಂಟ್ ಮೇಲೆ ನಿಗಾ ಇಡುವಂತೆ ನಿಗಮವನ್ನು ಕೋರಲಾಗಿದೆ’ ಎಂದರು.

‘ಮಾರ್ಚ್ ಮತ್ತು ಏಪ್ರಿಲ್‌ನಲ್ಲಿ ದೊಡ್ಡ ಮಟ್ಟದಲ್ಲಿ ಹಣ ವರ್ಗಾವಣೆ ಆಗಿದ್ದರೆ ಅವುಗಳ ಬಗ್ಗೆ ಮಾಹಿತಿ ನೀಡುವಂತೆ ಕೋರಲಾಗಿದೆ. ನಿಯಮ ಉಲ್ಲಂಘಿಸಿದ್ದು ಕಂಡುಬಂದರೆ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು. ಈವರೆಗೆ ಅಂತಹ ಪ್ರಕರಣಗಳು ಕಂಡುಬಂದಿಲ್ಲ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

ಬಂಗಲೆ ಖಾಲಿ ಮಾಡಿದ ರಾಹುಲ್

ಪ್ರಜಾವಾಣಿ ವಾರ್ತೆ



ದೆಹಲಿಯ ತುಘಲಕ್ ರಸ್ತೆಯಲ್ಲಿನ ಸರ್ಕಾರಿ ಬಂಗಲೆಯನ್ನು ಶನಿವಾರ ಖಾಲಿ ಮಾಡಿದ ರಾಹುಲ್ ಗಾಂಧಿ ಅವರು ತಂಗಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೊಂದಿಗೆ ಹೊರಗೆ ಹೆಜ್ಜೆ ಹಾಕಿದರು —ಪಿಟಿಐ ಚಿತ್ರ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತುಘಲಕ್ ರಸ್ತೆಯ ಸರ್ಕಾರಿ ಬಂಗಲೆಯನ್ನು ಶನಿವಾರ ಖಾಲಿ ಮಾಡಿದ್ದಾರೆ. ‘ಮೋದಿ ಉಪನಾಮ’ ಕುರಿತ ಹೇಳಿಕೆಗೆ ಸಂಬಂಧಿಸಿದ ಮಾನನಷ್ಟ ಪ್ರಕರಣದಲ್ಲಿ ಸೂರತ್‌ನ ನ್ಯಾಯಾಲಯ ರಾಹುಲ್ ಗಾಂಧಿ ಅವರಿಗೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿದೆ. ಹೀಗಾಗಿ ಅವರು ಸಂಸದ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಈ ಕಾರಣದಿಂದ ತುಘಲಕ್ ರಸ್ತೆಯಲ್ಲಿರುವ ಸರ್ಕಾರಿ ಬಂಗಲೆಯನ್ನು ಅವರು ಖಾಲಿ ಮಾಡಿದರು.

ಸಂಸದ ಸ್ಥಾನದಿಂದ ಅನರ್ಹಗೊಳಿಸಿದ್ದ ಲೋಕಸಭಾ ಕಾರ್ಯಾಲಯವು, ಸರ್ಕಾರಿ ಬಂಗಲೆಯನ್ನು ಇದೇ 22ರ ಒಳಗಾಗಿ ಖಾಲಿ ಮಾಡುವಂತೆ ಸೂಚಿಸಿತ್ತು. ಅದರಂತೆ, ಕಳೆದ 19 ವರ್ಷಗಳಿಂದ ನೆಲೆಸಿದ್ದ ಮನೆಯನ್ನು ರಾಹುಲ್ ತೆರವು ಮಾಡಿದರು.

ಕೇಂದ್ರ ಲೋಕೋಪಯೋಗಿ ಇಲಾಖೆ (ಸಿಪಿಡಬ್ಲ್ಯುಡಿ) ಅಧಿಕಾರಿಗಳಿಗೆ ಬಂಗಲೆಯ ಬೀಗದ ಕೈಗಳನ್ನು ರಾಹುಲ್ ಗಾಂಧಿ ಹಸ್ತಾಂತರಿಸಿದರು. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ತಂಗಿ ಪ್ರಿಯಾಂಕಾ ಗಾಂಧಿ ವಾದ್ರಾ ಈ ಸಂದರ್ಭದಲ್ಲಿ ಇದ್ದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸತ್ಯ ಹೇಳಿದ್ದಕ್ಕಾಗಿ ನಾನು ಬೆಲೆ ತೆತ್ತಿದ್ದೇನೆ. ಆದರೆ, ಸತ್ಯ ನುಡಿಯುವುದಕ್ಕಾಗಿ ಯಾವುದೇ ಬೆಲೆ ತೆರಲು ನಾನು ಸಿದ್ಧ. ನನ್ನ ತಾಯಿ (ಸೋನಿಯಾ ಗಾಂಧಿ) ಅವರೊಂದಿಗೆ ಕೆಲ ದಿನಗಳ ಕಾಲ ಇರುತ್ತೇನೆ’ ಎಂದು ರಾಹುಲ್ ಹೇಳಿದ್ದಾರೆ.

8ನೇ ಪುಟ ನೋಡಿ

ಲಂಚ ಪಡೆದ ಆರೋಪ: ಎಸ್‌ಐ ವಶಕ್ಕೆ

ಪ್ರಜಾವಾಣಿ ವಾರ್ತೆ



ಶಿವನಗೌಡ



ಲಿಂಗರಾಜ ನಾಯ್ಕ

ದಾವಣಗೆರೆ: ಮಹಿಳೆ ನಾಪತ್ತೆಯಾಗಿದ್ದ ಪ್ರಕರಣ ಮುಚ್ಚಿ ಹಾಕಿ ಪ್ರಿಯಕರನ ಜೊತೆಗೆ ಆಕೆಯನ್ನು ಕಳುಹಿಸಿಕೊಡಲು ‘ಫೋನ್ ಪೇ’ ಮೂಲಕ ₹ 50000 ಲಂಚ ಪಡೆದಿದ್ದ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶಿವನಗೌಡ ಮತ್ತು ಕಾನ್‌ಸ್ಟೆಬಲ್ ಲಿಂಗರಾಜ ನಾಯ್ಕ ಶನಿವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

8ನೇ ಪುಟ ನೋಡಿ

ಮಲಿಕ್‌ರನ್ನು ಬಂಧಿಸಿಲ್ಲ: ಪೊಲೀಸ್

ನವದೆಹಲಿ (ಪಿಟಿಐ): ‘ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರನ್ನು ಬಂಧಿಸಿಲ್ಲ. ನೈರುತ್ಯ ದೆಹಲಿಯ ಆರ್.ಕೆ.ಪುರಂನಲ್ಲಿರುವ ಠಾಣೆಗೆ ಅವರಾಗಿಯೇ ಬಂದಿದ್ದರು’ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಈ ನಡುವೆ, ‘ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರನ್ನು ಬಂಧಿಸಲಾಗಿದೆ ಎಂಬ ಸುಳ್ಳು ಸುದ್ದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಬ್ಬಿಸಲಾಗುತ್ತಿದೆ’ ಎಂದು ದೆಹಲಿ ಪೊಲೀಸರು ಟ್ವೀಟ್ ಮಾಡಿದ್ದಾರೆ.

‘ಆರ್.ಕೆ.ಪುರಂನಲ್ಲಿರುವ ಉದ್ಯಾನದಲ್ಲಿ ಸಭೆಯೊಂದನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ಮಲಿಕ್ ಅವರು ಪಾಲ್ಗೊಳ್ಳಬೇಕಿತ್ತು. ಇದು ಸಭೆ ನಡೆಸುವ ಸ್ಥಳವಲ್ಲ ಹಾಗೂ ಸಭೆ ನಡೆಸುವುದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿಯನ್ನೂ ಪಡೆದಿಲ್ಲ ಎಂದು ಮಲಿಕ್ ಅವರಿಗೆ ತಿಳಿಸಿದೆವು. ಆಗ, ಅವರು ತಮ್ಮ ಬೆಂಬಲಿಗರ ಸಮೇತ ಜಾಗದಿಂದ ತೆರಳಿದರಲ್ಲದೇ, ತಾವಾಗಿಯೇ ಠಾಣೆಗೆ ಬಂದರು’ ಎಂದು ಪೊಲೀಸರು ಹೇಳಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿ ನಡೆದಿದೆ ಎನ್ನಲಾದ ವಿಮಾ ಹಗರಣಕ್ಕೆ ಸಂಬಂಧಿಸಿ ಕೆಲ ಸ್ಪಷ್ಟನೆಗಳನ್ನು ಬಯಸಿದ್ದ ಸಿಬಿಐ, ತನ್ನ ಎದುರು ಹಾಜರಾಗುವಂತೆ ಮಲಿಕ್ ಅವರಿಗೆ ಶುಕ್ರವಾರ ಸೂಚಿಸಿತ್ತು.

ಈದ್: ಮುಸ್ಲಿಮರಿಂದ ಮಂತ್ರಾಲಯ ರಾಯರ ದರ್ಶನ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಮುಸ್ಲಿಮರು ಈದ್ ಉಲ್ ಫಿತ್ರ್ ಪ್ರಯುಕ್ತ ಶನಿವಾರ ಸಾಮೂಹಿಕವಾಗಿ ರಾಘವೇಂದ್ರ ಸ್ವಾಮಿ ಮಠಕ್ಕೆ ಭೇಟಿ ನೀಡಿ, ರಾಯರ ದರ್ಶನ ಪಡೆದರು. ಅವರಿಗೆ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಮಂತ್ರಾಕ್ಷತೆ ಮತ್ತು ಪರಿಮಳ ಪ್ರಸಾದ ವಿತರಿಸಿದರು.

‘ಸಂವಿಧಾನದಲ್ಲಿ ನಂಬಿಕೆ ಇಟ್ಟುಕೊಂಡು ನಿಮ್ಮ ಧರ್ಮ ಪಾಲನೆ ಮಾಡುವುದರ ಜೊತೆಗೆ ಎಲ್ಲರೊಂದಿಗೆ ಒಂದಾಗಿ ಬದುಕಿ. ಇದರಿಂದ ಎಲ್ಲರಿಗೂ ಒಳ್ಳೆಯದಾಗುತ್ತದೆ’ ಎಂದು ಶ್ರೀಗಳು ಸಂದೇಶ ನೀಡಿದರು.



ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠಕ್ಕೆ ಶನಿವಾರ ಈದ್ ಉಲ್ ಫಿತ್ರ್ ಪ್ರಯುಕ್ತ ಭೇಟಿ ನೀಡಿದ ಮುಸ್ಲಿಮರಿಗೆ ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಅನುಗ್ರಹ ಸಂದೇಶ ನೀಡಿದರು



ಚಿನಕುರಳಿ
ಪ್ರಕಾಶ್ ಶೆಟ್ಟಿ



ಚಿತ್ರಾವಳಿ



ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಶಿವಮಣಿ ಅವರು ಡ್ರಮ್ ಹಾಗೂ ಯು. ರಾಜೇಶ್ ಅವರು ಮಂಡೋಲಿನ್ ವಾದನದ ಮೂಲಕ ಶನಿವಾರ ರಂಜಿಸಿದರು



ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ(ಬಿಐಸಿ) ಪ್ರಭಾ ಖೈತಾನ್ ಪ್ರತಿಷ್ಠಾನ ಆಯೋಜಿಸಿದ್ದ 'ಆಖರ್ ದಕ್ಷಿಣ್' ದಕ್ಷಿಣ ಭಾರತೀಯ ಭಾಷೆಗಳ ಹಬ್ಬದಲ್ಲಿ ಸಾಹಿತಿಗಳಾದ ಚಂದ್ರಶೇಖರ ಕಂಬಾರ ಮತ್ತು ದಾಮೋದರ್ ಮೌಜೋ ಕುಶಲೋಪರಿ ನಡೆಸಿದರು. ಸಾಹಿತಿಗಳಾದ ವಿವೇಕ ಶಾನಭಾಗ, ಪೆರುಮಾಳ್ ಮುರುಗನ್ ಇದ್ದರು –ಪ್ರಜಾವಾಣಿ ಚಿತ್ರಗಳು

'ಡೆಲ್ಲಿ ಕ್ಯಾಪಿಟಲ್ಸ್': ಕ್ರಿಕೆಟ್ ಆಟವಾಡಲು ಕಳ್ಳತನ ಮಾಡಿದ್ದ ಚಾಲಕ, ಕೊರಿಯರ್ ಬಾಯ್

12 ಬ್ಯಾಟ್ ಕಳವು: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರರ ಬ್ಯಾಟ್ ಹಾಗೂ ಇತರೆ ಸಾಮಗ್ರಿಗಳ ಕಳ್ಳತನ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಟಾಟಾ ಏಂತ್ರಾ ಸರಕು ಸಾಗಣೆ ವಾಹನದ ಚಾಲಕ ಚೆಲುವರಾಜ್ (30) ಹಾಗೂ ಕೊರಿಯರ್ ಬಾಯ್ ಸುಧಾಂಶು ನಾಯಕ್ (30) ಬಂಧಿತರು. ಇವರಿಬ್ಬರಿಂದ 12 ಬ್ಯಾಟ್, 18 ಬಾಲ್, 4 ಜೊತೆ ಕೈಗವಸು, 2 ಹೆಲ್ಮೆಟ್, 3 ಜೊತೆ ಲೆಗ್ ಪ್ಯಾಡ್ ಸೇರಿದಂತೆ ಹಲವು ಕ್ರಿಕೆಟ್ ಸಾಮಗ್ರಿಗಳನ್ನು ಜಪ್ತಿ ಮಾಡಲಾಗಿದೆ. ಇವುಗಳ ಮೌಲ್ಯ ₹ 16 ಲಕ್ಷ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 15ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ನಡುವೆ ಐಪಿಎಲ್ ಟಿ-20 ಪಂದ್ಯ ನಡೆದಿತ್ತು. ಪಂದ್ಯ ಮುಗಿದ ಬಳಿಕ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರರು, ದೆಹಲಿಗೆ ಹೋಗಿ ಅಲ್ಲಿಯ ಹೋಟೆಲ್‌ನಲ್ಲಿ ತಂಗಿದ್ದರು. ತಮ್ಮ ಬ್ಯಾಗ್‌ಗಳನ್ನು ತೆರೆದು ನೋಡಿದಾಗ, ಬ್ಯಾಗ್ ಹಾಗೂ ಇತರೆ ಸಾಮಗ್ರಿಗಳು ಕಳ್ಳತನವಾಗಿದ್ದು ಗಮನಕ್ಕೆ ಬಂದಿತ್ತು.'

'ತಂಡದ ನಾಯಕ ಡೇವಿಡ್ ವಾರ್ನರ್, ಫಿಲ್ ಸಾಲ್ಟ್, ಮಿಚೆಲ್ ಮಾರ್ಷ್ ಹಾಗೂ ಇತರರ ಬ್ಯಾಟ್‌ಗಳು ಕಳ್ಳತನವಾಗಿದ್ದವು. ಬೆಂಗಳೂರಿನಿಂದ ದೆಹಲಿಗೆ ಬರುವ ಮಾರ್ಗಮಧ್ಯೆ ಕಳ್ಳತನ ನಡೆದಿರುವ ಅನುಮಾನ ವ್ಯಕ್ತಪಡಿಸಿದ್ದ ಆಟಗಾರರು, ಕೊರಿಯರ್ ಕಂಪನಿಗೆ ದೂರು ನೀಡಿದ್ದರು. ಪರಿಶೀಲನೆ ನಡೆಸಿದ್ದ ಕಂಪನಿ ವ್ಯವಸ್ಥಾಪಕ, ಬ್ಯಾಗ್ ಸಾಗಿಸಿದ್ದ ಚಾಲಕ ಹಾಗೂ ಕೊರಿಯರ್ ಬಾಯ್ ವಿರುದ್ಧ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಕ್ರಿಕೆಟ್ ಆಡಲೆಂದು ಕಳ್ಳತನ: 'ಆರೋಪಿ ಚೆಲುವರಾಜು, ಕುಂಬಳಗೋಡು ಬಳಿಯ ರಾಜೇಶ್ವರಿ ಬಡಾವಣೆ ನಿವಾಸಿ. ಒಡಿಶಾದ ಸುಧಾಂಶು ನಾಯಕ್, ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದು ಸಂಪಂಗಿರಾಮನಗರದಲ್ಲಿ ವಾಸವಿದ್ದ. ಇಬ್ಬರಿಗೂ ಕ್ರಿಕೆಟ್ ಅಚ್ಚುಮೆಚ್ಚು. ಆಗಾಗ ಸ್ನೇಹಿತರ ಜೊತೆ ಕ್ರಿಕೆಟ್ ಆಡುತ್ತಿದ್ದರು. ಏಪ್ರಿಲ್ 15ರಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರರ 25 ಬ್ಯಾಗ್‌ಗಳನ್ನು ಕ್ರೀಡಾಂಗಣದಿಂದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಾಗಿಸಲು ಚೆಲುವರಾಜುಗೆ ತಿಳಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಟಾಟಾ ಏಂತ್ರಾ ವಾಹನದಲ್ಲಿ ಬ್ಯಾಗ್ ತುಂಬಿಕೊಂಡಿದ್ದ ಚೆಲುವರಾಜು, ಸುಧಾಂಶು ನಾಯಕ್ ಜೊತೆ ವಿಮಾನ ನಿಲ್ದಾಣದತ್ತ ಹೊರಟಿದ್ದ. ಮಾರ್ಗಮಧ್ಯೆ ವಾಹನ ನಿಲ್ಲಿಸಿದ್ದ ಆರೋಪಿಗಳು, ಬ್ಯಾಗ್ ತೆರೆದು ನೋಡಿದ್ದರು. ಮೊದಲಿಗೆ ಬ್ಯಾಟ್ ತೆಗೆದುಕೊಂಡಿದ್ದ ಸುಧಾಂಶು, 'ಬ್ಯಾಟ್ ಚೆನ್ನಾಗಿದೆ. ನನಗೆ ಕ್ರಿಕೆಟ್ ಆಡಲು ಬೇಕು. ನಾನೇ ಇಟ್ಟುಕೊಳ್ಳುತ್ತೇನೆ' ಎಂದಿದ್ದ. ನಂತರ, ಇಬ್ಬರೂ ಉಳಿದ ಬ್ಯಾಗ್‌ಗಳನ್ನು ತೆರೆದಿದ್ದರು.'

'11 ಬ್ಯಾಟ್ ಹೊರಗೆ ತೆಗೆದಿದ್ದ ಚೆಲುವರಾಜು, 'ನನಗೂ ಕ್ರಿಕೆಟ್ ಎಂದರೆ ಇಷ್ಟ. ಈ ಎಲ್ಲ ಬ್ಯಾಟ್‌ಗಳು ನನಗೆ ಬೇಕು. ಇದರಲ್ಲಿ ಕೆಲ ಬ್ಯಾಟ್‌ಗಳನ್ನು ಸ್ನೇಹಿತರಿಗೂ ಕೊಡುತ್ತೇನೆ' ಎಂದಿದ್ದ. ನಂತರ, ಬ್ಯಾಗ್‌ನಲ್ಲಿದ್ದ ಇತರೆ ಸಾಮಗ್ರಿಗಳನ್ನೂ ಆರೋಪಿಗಳು ಹೊರಗೆ ತೆಗೆದಿಟ್ಟುಕೊಂಡಿದ್ದರು. ಬಳಿಕ, ಎಲ್ಲ ಬ್ಯಾಗ್‌ಗಳನ್ನು ವಿಮಾನ ನಿಲ್ದಾಣಕ್ಕೆ ತಲುಪಿಸಿದ್ದರು. ದೆಹಲಿಯಲ್ಲಿ ಆಟಗಾರರು ಬ್ಯಾಗ್ ತೆರೆದು ನೋಡಿದಾಗ, ಬ್ಯಾಟ್ ಹಾಗೂ ಇತರೆ ಸಾಮಗ್ರಿಗಳು ಇಲ್ಲದಿರುವುದು ಗೊತ್ತಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಚೆಲುವರಾಜುನನ್ನು ವಶಕ್ಕೆ ಪಡೆದಾಗ, ಕುಂಬಳಗೋಡು ಬಳಿಯ ರಾಜೇಶ್ವರಿ ಬಡಾವಣೆಯಲ್ಲಿರುವ ಮನೆಯಲ್ಲಿ ಬ್ಯಾಟ್ ಇರಿಸಿರುವುದಾಗಿ ಹೇಳಿದ್ದ. ಮನೆಗೆ ಹೋಗಿ ಪರಿಶೀಲಿಸಿದಾಗ ಬ್ಯಾಗ್ ಹಾಗೂ ಉಳಿದೆಲ್ಲ ಸಾಮಗ್ರಿಗಳು ಪತ್ತೆಯಾದವು' ಎಂದು ಹೇಳಿದರು.



ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ಬ್ಯಾಟ್‌ಗಳು ಹಾಗೂ ಇತರೆ ಕ್ರಿಕೆಟ್ ಸಾಮಗ್ರಿಗಳು

ನಕಲಿ ಟಿಕೆಟ್: ಕ್ರೀಡಾಂಗಣದ 'ಸ್ವಯಂಸೇವಕ' ಸೆರೆ

ಬೆಂಗಳೂರು: ಐಪಿಎಲ್ ಟಿ– 20 ಕ್ರಿಕೆಟ್ ಪಂದ್ಯಗಳ ವೀಕ್ಷಣೆಗೆ ನಕಲಿ ಟಿಕೆಟ್ ಸೃಷ್ಟಿಸಿ ಮಾರುತ್ತಿದ್ದ ಚಿನ್ನಸ್ವಾಮಿ ಕ್ರೀಡಾಂಗಣದ ಸ್ವಯಂಸೇವಕ ಸೇರಿ ಇಬ್ಬರನ್ನು ಕಬ್ಬನ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ.

'ಸ್ವಯಂಸೇವಕ ದರ್ಶನ್ (26) ಹಾಗೂ ಸುಲ್ತಾನ್‌ಖಾನ್ (27) ಬಂಧಿತರು. ಇವರಿಬ್ಬರು ಹಲವು ಪಂದ್ಯಗಳ ನಕಲಿ ಟಿಕೆಟ್ ಸೃಷ್ಟಿಸಿ ಮಾರಿದ್ದ ಬಗ್ಗೆ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ಕ್ರೀಡಾಂಗಣದ ನಿರ್ವಹಣೆ ಹಾಗೂ ಇತರೆ ಕೆಲಸಕ್ಕೆ ಸ್ವಯಂಸೇವಕರನ್ನು ನೇಮಕ ಮಾಡಿಕೊಳ್ಳಲಾಗುತ್ತದೆ. ಅಂಥ ಸ್ವಯಂಸೇವಕರಿಗೆ ಪ್ರತ್ಯೇಕ ಗುರುತಿನ ಚೀಟಿ ನೀಡಲಾಗುತ್ತದೆ. ಚೀಟಿಯಲ್ಲಿರುವ ಬಾರ್‌ಕೋಡ್‌ನ್ನು ಕ್ರೀಡಾಂಗಣದ ಪ್ರವೇಶ ದ್ವಾರದಲ್ಲಿ ಸ್ಕ್ಯಾನ್ ಮಾಡಿ ಒಳಗೆ ಹೋಗಲು ಮುಕ್ತ ಅವಕಾಶವಿದೆ.'

'ದರ್ಶನ್, ಸ್ವಯಂಸೇವಕನಾಗಿ ನೇಮಕಗೊಂಡಿದ್ದ. ಈತನಿಗೆ ಗುರುತಿನ ಚೀಟಿ ನೀಡಲಾಗಿತ್ತು. ಅದೇ ಚೀಟಿಯಲ್ಲಿದ್ದ ಬಾರ್‌ಕೋಡ್ ಬಳಸಿಕೊಂಡು ಆರೋಪಿ ಸುಲ್ತಾನ್‌ಖಾನ್ ಹಾಗೂ ಇತರರು, ನಕಲಿ ಟಿಕೆಟ್ ಸೃಷ್ಟಿಸಿದ್ದರು. ಎಲ್ಲ ಟಿಕೆಟ್ ಮೇಲೆ ದರ್ಶನ್ ಹೆಸರಿನ ಬಾರ್‌ಕೋಡ್ ಇತ್ತು' ಎಂದು ಮೂಲಗಳು ತಿಳಿಸಿವೆ.

'ಪ್ರತಿ ಪಂದ್ಯದ ವೇಳೆ ಕ್ರೀಡಾಂಗಣದ ಹೊರಗೆ ನಿಲ್ಲುತ್ತಿದ್ದ ಆರೋಪಿಗಳು, ₹ 10 ಸಾವಿರದಿಂದ ₹ 15 ಸಾವಿರಕ್ಕೆ ಟಿಕೆಟ್ ಮಾರುತ್ತಿದ್ದರು. ಅಂಥ ಟಿಕೆಟ್ ಖರೀದಿಸುತ್ತಿದ್ದ ಜನ, ಕ್ರೀಡಾಂಗಣದ ಪ್ರವೇಶದ್ವಾರದಲ್ಲಿ ಸ್ಕ್ಯಾನ್ ಪ್ರಕ್ರಿಯೆ ಪೂರ್ಣಗೊಳಿಸಿ 'ಸ್ವಯಂಸೇವಕ' ಹೆಸರಿನಲ್ಲಿ ಒಳಗೆ ಹೋಗುತ್ತಿದ್ದರು' ಎಂದು ಮೂಲಗಳು ಹೇಳಿವೆ.

ಹಲವು ಬಾರಿ ಸ್ಕ್ಯಾನ್‌ನಿಂದ ಅನುಮಾನ: 'ಏಪ್ರಿಲ್ 17ರಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವೆ ಪಂದ್ಯ ನಡೆದಿತ್ತು. ಕ್ರೀಡಾಂಗಣದ ಗೇಟ್ ನಂಬರ್ 6ರಲ್ಲಿ ಒಂದೇ ಬಾರ್‌ಕೋಡ್ ಹಲವು ಬಾರಿ ಸ್ಕ್ಯಾನ್ ಆಗಿತ್ತು. ಇದನ್ನು ಗಮನಿಸಿದ್ದ ಟಿಕೆಟ್ ನಿರ್ವಹಣೆ ಸಿಬ್ಬಂದಿ, ಪರಿಶೀಲನೆ ನಡೆಸಿದ್ದರು' ಎಂದು ಮೂಲಗಳು ಮಾಹಿತಿ ನೀಡಿವೆ.

'ದರ್ಶನ್‌ಗೆ ಸೇರಿದ್ದ ಬಾರ್‌ಕೋಡ್ ಎಂಬುದು ಗೊತ್ತಾಗುತ್ತಿದ್ದಂತೆ, ಆತನನ್ನು ವಿಚಾರಣೆ ನಡೆಸಲಾಗಿತ್ತು. ಸುಲ್ತಾನ್ ಖಾನ್ ಹಾಗೂ ಇತರರ ಜೊತೆ ಸೇರಿ ನಕಲಿ ಟಿಕೆಟ್ ಸೃಷ್ಟಿಸಿದ್ದ ಮಾಹಿತಿ ಹೊರಬಿದ್ದಿತ್ತು. ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಿಸಿದಾಗ, ಸ್ವಯಂಸೇವಕನ ಅಸಲಿ ಬಾರ್‌ಕೋಡ್ ಬಳಸಿ ನಕಲಿ ಟಿಕೆಟ್ ಸೃಷ್ಟಿಸಿ ಮಾರುತ್ತಿದ್ದ ಸಂಗತಿ ಪತ್ತೆಯಾಯಿತು' ಎಂದು ತಿಳಿಸಿವೆ.

ಲಾರಿ ಡಿಕ್ಕಿ: ಕಾರು, ಬೈಕ್ ಜಖಂ

ಬೆಂಗಳೂರು: ಇಳಿಜಾರಿನಲ್ಲಿ ನಿಲ್ಲಿಸಿದ್ದ ಲಾರಿಯೊಂದು ಏಕಾಏಕಿ ಮುಂದಕ್ಕೆ ಚಲಿಸಿ ಕಾರು ಹಾಗೂ ಬೈಕ್‌ಗಳಿಗೆ ಡಿಕ್ಕಿ ಹೊಡೆದಿದ್ದು, ಈ ಸಂಬಂಧ ಕಾಮಾಕ್ಷಿಪಾಳ್ಯ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

'ಸರಕು ಸಾಗಿಸುತ್ತಿದ್ದ ಲಾರಿಯನ್ನು ರಸ್ತೆಬದಿಯಲ್ಲಿ ನಿಲ್ಲಿಸಲಾಗಿತ್ತು. ಅದರ ಚಾಲಕ ಹ್ಯಾಂಡ್ ಬ್ರೇಕ್ ಹಾಕಿರಲಿಲ್ಲ. ಇಳಿಜಾರು ಇದ್ದಿದ್ದರಿಂದ ಲಾರಿ ಮುಂದಕ್ಕೆ ವೇಗವಾಗಿ ಚಲಿಸಿತು. ರಸ್ತೆ ಅಕ್ಕ-ಪಕ್ಕದಲ್ಲಿ ನಿಂತಿದ್ದ ವಾಹನಗಳಿಗೆ ಡಿಕ್ಕಿ ಹೊಡೆದು ಉರುಳಿಬಿದ್ದಿತ್ತು' ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

'ಅಪಘಾತದಿಂದಾಗಿ ಎರಡು ಕಾರುಗಳು, ನಾಲ್ಕು ಬೈಕ್ ಹಾಗೂ ಸರಕು ವಾಹನ ಜಖಂಗೊಂಡಿವೆ' ಎಂದರು.

ಅಸೆಂಟ್ ಪಿಯು ಕಾಲೇಜು ವಿದ್ಯಾರ್ಥಿಗಳ ಸಾಧನೆ

ಪೀಣ್ಯ ದಾಸರಹಳ್ಳಿ: ಹೆಸರಘಟ್ಟ ಮುಖ್ಯ ರಸ್ತೆಯ ಅಸೆಂಟ್ ಪಿಯು ಕಾಲೇಜಿಗೆ ಉತ್ತಮ ಫಲಿತಾಂಶ ದೊರೆತಿದೆ.

ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿನಿ ಹರ್ಷಿತ ಎ 600 ಕ್ಕೆ 586(ಶೇ 97.66) ಅಂಕ, ಹಿತೈಶ್ರೀ ಎಲ್ 600ಕ್ಕೆ 581(ಶೇ.96.83) ಅಂಕ, ಅರುಣ್ ಕುಮಾರ್ ಎನ್ 600 ಕ್ಕೆ 576(ಶೇ.96), ತೇಜಸ್ವಿನಿ ಎಂ 600 ಕ್ಕೆ 572 (ಶೇ.95.33), ಕವನ ಆರ್ 600ಕ್ಕೆ 571 (ಶೇ.95.17), ವಿವೇಕ್ ಜಿ.ಎಲ್ 600ಕ್ಕೆ 570(ಶೇ.95), ಆರ್ಯನ್ ನಗೋರಿ 600ಕ್ಕೆ 570 (ಶೇ.95) ಅಂಕ ಪಡೆದಿದ್ದಾರೆ.

'ಕಾಲೇಜಿಗೆ ಈ ಬಾರಿ ಶೇಕಡ 98 ಫಲಿತಾಂಶ ಬಂದಿದೆ. ಪ್ರಥಮ ಶ್ರೇಣಿಯಲ್ಲಿ 116, ಅತ್ಯುನ್ನತ ಶ್ರೇಣಿಯಲ್ಲಿ 63 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ'ಎಂದು ಪ್ರಾಂಶುಪಾಲ ಬಿ.ಎಂ. ವೆಂಕಟೇಶ್ ತಿಳಿಸಿದರು.



ಹರ್ಷಿತ ಎ. | ಹಿತೈಶ್ರೀ ಎಲ್ | ಕವನ ಆರ್ | ತೇಜಸ್ವಿನಿ ಎಂ. | ಅರುಣ್ ಕುಮಾರ್ ಎನ್ | ಆರ್ಯನ್ ನಗೋರಿ | ವಿವೇಕ್ ಜಿ.ಎಲ್

ಸಿಲಿಕಾನ್ ಸಿಟಿ ಕಾಲೇಜಿಗೆ ಉತ್ತಮ ಫಲಿತಾಂಶ: ಸಿಲಿಕಾನ್ ಸಿಟಿ ಕಾಲೇಜಿನ ಮೆಹೇಕ್.ಎ 576 ಅಂಕ (ಶೇ 96) ಗಳಿಸಿ ತೇರ್ಗಡೆಯಾಗಿದ್ದಾರೆ. ಕಂಪ್ಯೂಟರ್ ವಿಜ್ಞಾನ ಮತ್ತು ಗಣಿತದಲ್ಲಿ 99 ಅಂಕ ಪಡೆದಿದ್ದಾರೆ. ವಿದ್ಯಾರ್ಥಿನಿಗೆ ಸಿಲಿಕಾನ್ ಸಿಟಿ ಸಮೂಹ ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರ್ ಅಡಳಿತ ಮಂಡಳಿ ಅಭಿನಂದಿಸಿದೆ.



ಮೆಹೇಕ್.ಎ

ಅನಾಥ ಮಕ್ಕಳ ಹೆಸರಿನಲ್ಲಿ ದೇಣಿಗೆ ಸಂಗ್ರಹಿಸಿ ವಂಚನೆ

ಬೆಂಗಳೂರು: ಅನಾಥ ಮಕ್ಕಳಿಗೆ ವಸತಿಸಹಿತ ಉಚಿತ ಶಿಕ್ಷಣ ನೀಡುತ್ತಿರುವುದಾಗಿ ಹೇಳಿ ಜನರಿಂದ ದೇಣಿಗೆ ಪಡೆದು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಎನ್.ಬಿ. ಅಜಯ್ ಹಾಗೂ ಎನ್. ವೆಂಕಟಚಲಪತಿ ಬಂಧಿತರು. ಇಬ್ಬರಿಂದ 13 ಮೊಬೈಲ್, ಲ್ಯಾಪ್‌ಟಾಪ್, ಮಕ್ಕಳ ಫೋಟೊಗಳು ಹಾಗೂ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಬೊಮ್ಮನಹಳ್ಳಿ ಬಳಿಯ ರೂಪೇನ್ ಅಗ್ರಹಾರದ ಎನ್‌ಜಿಆರ್ ಬಡಾವಣೆಯಲ್ಲಿರುವ ಅಕ್ಯೂಮೆನ್‌ಟ್ರಿಕ್ಸ್ ಕಂಪನಿ ಕಚೇರಿ ಮೇಲೆ ಇತ್ತೀಚೆಗೆ ದಾಳಿ ಮಾಡಲಾಗಿದೆ. ಕಚೇರಿಯ ಉಸ್ತುವಾರಿಗಳಾದ ಅಜಯ್ ಹಾಗೂ ವೆಂಕಟಚಲಪತಿಯನ್ನು ಬಂಧಿಸಲಾಗಿದೆ' ಎಂದರು.

ಹಲವು ಸಂಸ್ಥೆ ಹೆಸರು ಬಳಕೆ: 'ಆದರಣೆ, ಚೈಲ್ಡ್ ಲೈಫ್ ಫೌಂಡೇಶನ್, ಕೇರ್ ಆ್ಯಂಡ್ ಲವ್, ಆಶಾ ಕುಟೀರ ಫೌಂಡೇಶನ್ ಹಾಗೂ ಡಬ್ಲ್ಯುಇ4 ಸೇವಾ ಸಂಸ್ಥೆಗಳ ಹೆಸರು ಬಳಸಿಕೊಂಡು ಆರೋಪಿಗಳು ದೇಣಿಗೆ ಸಂಗ್ರಹಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಲಾಗಿದೆ. ಶಿಕ್ಷಣ, ಊಟ, ವಸತಿ, ಆರೋಗ್ಯ ಹಾಗೂ ಇತರೆ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ನಮ್ಮ ಕೆಲಸಕ್ಕೆ ದೇಣಿಗೆ ಅಗತ್ಯವಿದ್ದು, ಸಹಾಯ ಮಾಡಿ' ಎಂದು ಆರೋಪಿಗಳು ಜಾಹೀರಾತು ನೀಡುತ್ತಿದ್ದರು. ಇದಕ್ಕಾಗಿ ಕೆಲ ಮಕ್ಕಳ ಫೋಟೊಗಳನ್ನು ಬಳಸಿಕೊಳ್ಳುತ್ತಿದ್ದರು. ಆರೋಪಿಗಳ ಮಾತು ನಂಬಿ ಹಲವರು ದೇಣಿಗೆ ನೀಡುತ್ತಿದ್ದರು. ಅದೇ ಹಣವನ್ನು ಆರೋಪಿಗಳು ಸ್ವಂತಕ್ಕೆ ಬಳಸಿಕೊಳ್ಳುತ್ತಿದ್ದರು' ಎಂದು ತಿಳಿಸಿದರು.

'ಆರೋಪಿಗಳ ಕೃತ್ಯದ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳಿಗೆ ಮಾಹಿತಿ ಬಂದಿತ್ತು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಮತ್ತಷ್ಟು ಆರೋಪಿಗಳು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತನಿಗೆ ಚೂರಿ ಇರಿತ

ಭಾಲ್ಕಿ (ಬೀದರ್ ಜಿಲ್ಲೆ): ಪಟ್ಟಣದಲ್ಲಿ ಶನಿವಾರ ಗಣೇಶ ಶಾಲಿವಾನ ಯರಬಾಗೆ (23) ಎಂಬ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಮೂವರು ಯುವಕರು ಚಾಕುವಿನಿಂದ ಇರಿದಿದ್ದು, ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಹೈದರಾಬಾದ್‌ಗೆ ಕಳುಹಿಸಲಾಗಿದೆ.

'ಮಾವಿನಹಳ್ಳಿ ಗ್ರಾಮದ ಗಣೇಶ ಮೇಲೆ ಔರಾದ್‌ನ ರಾಬಿನ್ ಸೂರ್ಯಕಾಂತ, ಭಾಲ್ಕಿಯ ಸಂಗಮೇಶ ಸ್ವಾಮಿ ಮತ್ತು ಖಟಕ್ ಚಿಂಚೋಳಿಯ ಸಂಗಮೇಶ ಚನಶೆಟ್ಟಿ ಹಲ್ಲೆ ನಡೆಸಿದ್ದಾರೆ.

ನಗರದಲ್ಲಿ ಇಂದು

ಶ್ರೀರಾಮನವಮಿ ಸಂಗೀತೋತ್ಸವ: ವಿಷ್ಣು ಶಾಸ್ತ್ರಿ ಎಚ್.ಕೆ ಮತ್ತು ತಂಡ, ಸಂಗೀತ ಕಛೇರಿ: ವಿಶಾಖ ಹರಿ, ಬಿ. ಅನಂತಕೃಷ್ಣನ್, ವಿಜಯ್ ನಟೇಶನ್, ಸುಕನ್ಯಾ ರಾಂಗೋಪಾಲ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ವೈಶಾಲಿ ಶ್ರೀನಿವಾಸ್, ಹಾರ್ಮೋನಿಯಂ: ಮಧುಸೂದನ್, ಮೃದಂಗ: ಡಿ. ವಿಕಾಸ್ ನಾರೆಗಲ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು: ಸಿಂಧು ಸುಚೇತನ್, ಎಚ್.ಎಂ. ಸ್ಮಿತಾ, ಮೃದಂಗ: ಬಿ.ಎಸ್. ಪ್ರಶಾಂತ್, ಘಟ: ಬಿ.ಎಸ್. ರಘುನಂದನ್, ಮೋರ್ಸಿಂಗ್: ಎಸ್.ವಿ. ಬಾಲಕೃಷ್ಣ, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 6.30

'ದಕ್ಷ' 10ನೇ ವಾರ್ಷಿಕ ಸಮ್ಮೇಳನ: ಮುಖ್ಯ ಅತಿಥಿ: ಕೆ. ವಂಶಿಧರ್ ಬಾಬು, ವಿಶೇಷ ಅತಿಥಿ: ವಿ.ವಿ. ಕೃಷ್ಣ ರೆಡ್ಡಿ, ಗೌರವ ಅತಿಥಿ: ವಸಂತ್ ಕುಮಾರ್ ಶೆಟ್ಟಿ, ಅಧ್ಯಕ್ಷತೆ: ಬಿ.ಎಸ್. ರಾಜಶೇಖರಯ್ಯ, ಆಯೋಜನೆ: ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ 317ಎಫ್, ಸ್ಥಳ: ನಿಮ್ಹಾನ್ಸ್ ಸಮ್ಮೇಳನ ಸಭಾಂಗಣ, ಹೊಸೂರು ರಸ್ತೆ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ: ಅಧ್ಯಕ್ಷತೆ: ಸದಾನಂದ, ಮುಖ್ಯ ಅತಿಥಿ: ಪಿ.ಸಿ. ಮಹೇಶ್, ಉಪಸ್ಥಿತಿ: ಮಂಜುಳಾ ವೇಣುಗೋಪಾಲ್, ಆಯೋಜನೆ: ಸಹಮತ, ಸ್ಥಳ: ನಂ.323, ಹೇಮ ಸದನ, 7ನೇ ಮುಖ್ಯ ರಸ್ತೆಯ ಅಡ್ಡ ರಸ್ತೆ, ಸಿಕ್ಯುಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ನಿರ್ಮಲಾ ಸೀತಾರಾಮನ್ ಜತೆಗೆ ಸಂವಾದ: ಆಯೋಜನೆ: ಥಿಂಕರ್ಸ್ ಫೋರಮ್, ಸ್ಥಳ: ಆರ್.ವಿ. ಡೆಂಟಲ್ ಕಾಲೇಜು, ಜೆ.ಪಿ.ನಗರ, ಬೆಳಿಗ್ಗೆ 10

ಬಸವ ಜಯಂತಿ–23: ಉದ್ಘಾಟನೆ: ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಗೌರವ ಸಮರ್ಪಣೆ: ವಿಶ್ವಾರಾಧ್ಯ, ಆಯೋಜನೆ: ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಕನ್ನಲ್ಲಿ ವೀರಶೈವ ನಿತ್ಯಾನ್ನದಾಸೋಹ ಸೇವಾ ಸಮಿತಿ, ಸ್ಥಳ: ಕನ್ನಲ್ಲಿ ಬಸವೇಶ್ವರ ಪುತ್ಥಳಿ ಬಳಿ, ಕನ್ನಲ್ಲಿ ಗ್ರಾಮ, ಮಾಗಡಿ ರಸ್ತೆ, ಬೆಳಿಗ್ಗೆ 10.30

37ನೇ ಪುನರ್ಮಿಲನ ಹಬ್ಬ: ಸನ್ಮಾನ: ಎಂ.ಕೆ. ಶ್ರೀಧರ್, ಮುಖ್ಯ ಅತಿಥಿ: ಜಿ.ವಿ. ವಿಶ್ವನಾಥ್, ಆಯೋಜನೆ: ವಿಜಯ ಕಾಲೇಜು ನಿವೃತ್ತ ಅಧ್ಯಾಪಕರ ಬಳಗ, ಸ್ಥಳ: ಪ್ರಾಣಿಶಾಸ್ತ್ರ ಪ್ರಯೋಗಾಲಯ, ವಿಜಯ ಕಾಲೇಜು, ಬೆಳಿಗ್ಗೆ 10.30


ಅಜಕ್ಕಳ ಗಿರೀಶ ಭಟ್ ಅವರ 'ಬಹುವಚನಕ್ಕೊಂದೇ ತತ್ವ' ಪುಸ್ತಕ ಬಿಡುಗಡೆ: ಎಸ್.ಆರ್. ರಾಮಸ್ವಾಮಿ, ಪುಸ್ತಕದ ಬಗ್ಗೆ ಮಾತನಾಡುವವರು: ಆರ್. ಗಣೇಶ್, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಡಿವಿಜಿ ಸಭಾಂಗಣ, ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಎಂ.ಆರ್. ನಾಗರಾಜರಾವ್ ಅವರ ಅಭಿನಂದನಾ ಕೃತಿ 'ನಾಗಾಭಿನಂದನೆ' ಹಾಗೂ ನಾಲ್ಕು ಕೃತಿಗಳು ಬಿಡುಗಡೆ: ಸತೀಶ್ ಕುಮಾರ್ ಹೊಸಮನಿ, ಕಾರ್ಯಕ್ರಮ ಉದ್ಘಾಟನೆ: ಆರ್. ಶೇಷಶಾಸ್ತ್ರಿ, ಅಧ್ಯಕ್ಷತೆ: ಕಾ.ನಾ. ಶ್ರೀನಿವಾಸ್, ಪುಸ್ತಕ ಪರಿಚಯ: ಎಂ.ಜಿ. ದೇಶಪಾಂಡೆ, ಪ್ರೊ.ಕೆ.ಎಸ್. ರಾಮಮೂರ್ತಿ, ಪ್ರೊ.ಸಿ.ಜಿ. ನಾಗರಾಜು, ಎಲ್.ಪಿ. ಕುಮಾರ್, ಆಯೋಜನೆ: ಸಿರಿಗನ್ನಡ ವೇದಿಕೆ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

'ಮಾತೆಂದರೆ ಏನು ಗೂಗಲ್' ಕವನ ಸಂಕಲನ ಹಾಗೂ 'ಸ್ವರ್ಗದೊಂದಿಗೆ ಅನುಸಂಧಾನ' ಚಾರ್‌ಧಾಮ ಪ್ರವಾಸ ಕಥನ ಬಿಡುಗಡೆ: ಎಸ್. ಷಡಕ್ಷರಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎಂ.ಎಸ್. ಆಶಾದೇವಿ, ಉಪಸ್ಥಿತಿ: ನೂತನ ದೋಶೆಟ್ಟಿ, ಶ್ಯಾಮಸುಂದರ ಕದಂ, ಸುಶಾಂತ್, ಸ್ಥಳ: ಸರ್ವಮಂಗಳ, # 80, 10ನೇ ಎ ಕ್ರಾಸ್, ಭುವನೇಶ್ವರಿ ನಗರ, ಹೆಬ್ಬಾಳ, ಬೆಳಿಗ್ಗೆ 11

'ನನ್ನ ಜೀವನದಲ್ಲಿ ಪುಸ್ತಕಗಳ ಪಾತ್ರ' ಸಂವಾದ: ಟಿ.ಆರ್. ಅನಂತರಾಮ್, ವನಮಾಲಾ ವಿಶ್ವನಾಥ್, ಅಮರೇಶ ನುಗಡೋಣಿ, ಕೇಶವ ಮಳಗಿ, ನಿರ್ವಹಣೆ: ಬಸವರಾಜ ಕಲ್ಗುಡಿ, ಆಯೋಜನೆ ಹಾಗೂ ಸ್ಥಳ: ಸಾಹಿತ್ಯ ಅಕಾಡೆಮಿ, ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 11

ಬಸವ ಜಯಂತ್ಯುತ್ಸವ: ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ರಮೇಶ್ ಹಲಗಲಿ, ಗುರುವಂದನೆ: ಶಿವರುದ್ರ ಸ್ವಾಮೀಜಿ, ಕಾಯಕರತ್ನ ಪ್ರಶಸ್ತಿ: ಜಯಂತ ಹಂಬರವಾಡಿ, ಬಸವ ವಿಭೂಷಣ ಪ್ರಶಸ್ತಿ: ವೀರಣ್ಣ ರಾಜೂರ, ದಾಮೋದರ ಮೌಜೋ, ಮೊಹಮ್ಮದ್ ಝುಮಾನ್ ಅಜುರ್ದಾ, ಬಸವ ಭೂಷಣ ಪ್ರಶಸ್ತಿ: ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ, ಅಧ್ಯಕ್ಷತೆ: ಅರವಿಂದ ಜತ್ತಿ, ಆಯೋಜನೆ ಹಾಗೂ ಸ್ಥಳ: ಬಸವ ಸಮಿತಿ ಅನುಭವ ಮಂಟಪ, ಬಸವೇಶ್ವರ ರಸ್ತೆ, ಬೆಳಿಗ್ಗೆ 10



ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ತಿಂಗಳ ಉಪನ್ಯಾಸ: ದಿವಂಗತ ಎ.ವಿ.ಶಂಕರ ರಾವ್ ಅವರ ಜನ್ಮ ಶತಮಾನೋತ್ಸವ ಅಂಗವಾಗಿ ಶತಸ್ಮೃತಿ ಉಪನ್ಯಾಸ, 'ಹೀಗಿದ್ದರು ನಮ್ಮ ತಂದೆ': ಡಾ. ಅರವಿಂದ್, ಸಂಧ್ಯಾ, 'ವೃತ್ತಿ ಜೀವನದ ಕ್ಷಣಗಳು': ರಾಮಪ್ರಸಾದ್, ಆಯೋಜನೆ: ಸಂವಾದ ಟ್ರಸ್ಟ್, ಸ್ಥಳ: ಪ್ರೊ.ಜಿವಿ ಜನ್ಮಶತಾಬ್ದಿ ಸಭಾಂಗಣ, ಜಯರಾಮಸೇವಾ ಮಂಡಳಿ, ಜಯನಗರ, ಬೆಳಿಗ್ಗೆ 11

'ವಿ.ಕೃ. ಗೋಕಾಕರ ಜೀವನ ಮತ್ತು ಆದರ್ಶ' ವಿಶೇಷ ಉಪನ್ಯಾಸ: ಅನಿಲ್ ಗೋಕಾಕ್, ಸಂಧ್ಯಾ ಹೆಗಡೆ ದೊಡ್ಡಹೊಂಡ, ಅಧ್ಯಕ್ಷತೆ: ದೀಪಾ ಫಡ್ಕೆ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ವಿನಾಯಕ ಗೋಕಾಕ್ ವಾಙ್ಮಯ ಟ್ರಸ್ಟ್, ಸ್ಥಳ: ವಿನಾಯಕ ದೇವಸ್ಥಾನ, ಅಂಚೆ ಕಚೇರಿ ಹತ್ತಿರ, ಆರ್.ಟಿ.ನಗರ, ಸಂಜೆ 4

ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ 'ಚುಕ್ಕಿ', ಡಾ.ಸಿ.ಆರ್. ಚಂದ್ರಶೇಖರ್ ಅವರ 'ಮಾನಸಿಕ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಮಾನಸಿಕ ಆರೋಗ್ಯ ವರ್ಧನೆ' ಕೃತಿ ಬಿಡುಗಡೆ: ಕೆ. ರಾಜಕುಮಾರ್, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಉಪಸ್ಥಿತಿ: ವಿಜಯಲಕ್ಷ್ಮಿ ಸತ್ಯಮೂರ್ತಿ, ಆಯೋಜನೆ: ಋತುಗಾನ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ಸೌರಭ ಫೌಂಡೇಷನ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

'ಸ್ವರಶ್ರೀ ಸಂಭ್ರಮ' ದ್ವಿತೀಯ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ: ದಿನೇಶ ಗುರೂಜಿ, ಕೃಷ್ಣಾ ಹನಗುಂದ, ಶ್ರೀಲಕ್ಷ್ಮೀ ಬಿ. ರಾವ್, ಮುಕುಂದ ಗಂಗೂರ್, ಸಾಂಸ್ಕೃತಿಕ ಕಾರ್ಯಕ್ರಮ: ಗಾಯತ್ರಿ ಹೆಗಡೆ, ಸಂಧ್ಯಾ ಗಿರೀಶ್, ವೀಣಾ ವಿಜಯ ಕೃಷ್ಣದಾಸ, ಶಾರದಾ ಆದಿಶೇಷ, ಪ್ರತಿಭಾ ಹೆಗಡೆ, ಶ್ರೀರಕ್ಷಾ ಶಾನುಭೋಗ, ಶ್ರೀರಶ್ಮಿ ಶಾನುಭೋಗ, ಆಯೋಜನೆ: ಸ್ವರಶ್ರೀ ಸಂಗೀತ ಶಾಲೆ, ಸ್ಥಳ: ನಾದಶ್ರೀ ಆರ್ಟ್ ಸ್ಪೇಸ್, 3ನೇ ಮುಖ್ಯ ರಸ್ತೆ, ಬಿಸಿಎಂಸಿ ಬಡಾವಣೆ, ರಘುವನ ಹಳ್ಳಿ, ಸಂಜೆ 5


'ಲವಕುಶ ಜಾಳಗ' ಯಕ್ಷಗಾನ:ಯಕ್ಷಸಂಸ್ಕಾರ ವೇದಿಕೆ ವಿದ್ಯಾರ್ಥಿಗಳಿಂದ, ನಿರ್ದೇಶನ ಗಣಪತಿ ಹೆಗಡೆ ತೋಟಿಮನೆ, ಸುಬ್ರಾಯ್ ಹೆಬ್ಬಾರ್, ವಿನಾಯಕ ಮಧ್ಯಸ್ಥ, ಆಯೋಜನೆ: ಅಖಿಲ ಹವ್ಯಕ ಮಹಾಸಭಾ, ಸ್ಥಳ: ಹವ್ಯಕ ಭವನ, ಮಲ್ಲೇಶ್ವರ, ಸಂಜೆ 5.30

ನೃತ್ಯ ಪ್ರದರ್ಶನ: ಲತಾ ರಮೇಶ್ ಮತ್ತು ತಂಡ, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, 3ನೇ ಹಂತ, ಜೆ.ಪಿ.ನಗರ, ಸಂಜೆ 6

'ಅಸಂಗತಗಳು' ನಾಟಕ ಪ್ರದರ್ಶನ: ನಿರ್ದೇಶನ: ಬಸವರಾಜ ಎಮ್ಮಿಯವರ, ಸಂಗೀತ: ಸತ್ಯ ರಾಧಾಕೃಷ್ಣ, ಆಯೋಜನೆ: ಕಲಾವಿಲಾಸಿ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಹರಿನಾಮ ಸಂಕೀರ್ತನೆ: ಐಶ್ವರ್ಯ ಮಹೇಶ್ ಮತ್ತು ಸಂಗಡಿಗರು, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರದ 5ನೇ ಬಡಾವಣೆ, ಸಂಜೆ 6.30

ಕಥಕ್ ರಂಗಪ್ರವೇಶ: ಸನಾ ಪಿ. ಚಿಪ್ಪಲಕಟ್ಟಿ, ಗುರು: ಸಿಮ್ರಾನ್ ಗೋಧ್ವಾನಿ,ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 5.30



ಲಂಚ: ಗ್ರಾಮ ಲೆಕ್ಕಾಧಿಕಾರಿಗೆ ಏಳು ವರ್ಷ ಜೈಲು

ಪ್ರಜಾವಾಣಿ ವಾರ್ತೆ

ತುಮಕೂರು: ಲಂಚ ತೆಗೆದುಕೊಳ್ಳುತ್ತಿದ್ದಾಗ ಎಸಿಬಿ ಬಲೆಗೆ ಬಿದ್ದಿದ್ದ ಮಧುಗಿರಿ ತಾಲ್ಲೂಕಿನ ದೊಡ್ಡ ಎಲ್ಲೂರು ವೃತ್ತದ ಗ್ರಾಮ ಲೆಕ್ಕಾಧಿಕಾರಿ ಎನ್.ಚಂದ್ರಶೇಖರ್‌ಗೆ 7ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು 7 ವರ್ಷ ಕಠಿಣ ಶಿಕ್ಷೆ ಮತ್ತು ₹40 ಸಾವಿರ ದಂಡ ವಿಧಿಸಿದೆ.

ಮಧುಗಿರಿ ತಾಲ್ಲೂಕು ಐ.ಡಿ. ಹಳ್ಳಿ ಹೋಬಳಿಯ ಯರಗುಂಟ ಗ್ರಾಮದ ವ್ಯಕ್ತಿಯೊಬ್ಬರಿಗೆ ಖಾತೆ ಬದಲಾವಣೆ ಮಾಡಿಕೊಡಲು ₹20 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ₹10 ಸಾವಿರ ಮುಂಗಡವಾಗಿ ಪಡೆದಿದ್ದರು. 2018ರ ಜುಲೈ 4ರಂದು ₹4,500 ಲಂಚ ತೆಗೆದುಕೊಳ್ಳುವಾಗ ಸಿಕ್ಕಿ ಬಿದ್ದಿದ್ದರು. ತುಮಕೂರು ಎಸಿಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ನ್ಯಾಯಾಧೀಶರಾದ ಟಿ.ಪಿ. ರಾಮಲಿಂಗೇಗೌಡ ಅವರು ಅಪರಾಧಿ ಚಂದ್ರಶೇಖರ್‌ಗೆ ಕಲಂ 7ರ ಅಡಿ 3 ವರ್ಷ ಶಿಕ್ಷೆ, ₹20 ಸಾವಿರ ದಂಡ, ಕಲಂ 13 (1) (ಡಿ) ಅಡಿ 4 ವರ್ಷ ಶಿಕ್ಷೆ ಮತ್ತು ₹20 ಸಾವಿರ ದಂಡ ವಿಧಿಸಿದ್ದಾರೆ. ಲೋಕಾಯುಕ್ತರ ಪರವಾಗಿ ಆರ್.ಪಿ.ಪ್ರಕಾಶ್ ವಾದ ಮಂಡಿಸಿದ್ದರು.

ಈದ್ ಉಲ್ ಫಿತ್ರ್ ಸಂಭ್ರಮ

ಈದ್ಗಾ ಮೈದಾನದಲ್ಲಿ ಮುಸ್ಲಿಮರಿಂದ ಸಾಮೂಹಿಕ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ



ನಗರದ ಮೈಸೂರು ರಸ್ತೆಯ ಈದ್ಗಾ ಮೈದಾನದಲ್ಲಿ ಶನಿವಾರ ಈದ್–ಉಲ್ ಫಿತ್ರ್ ಅಂಗವಾಗಿ ಮಕ್ಕಳು ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ರಂಜು ಪಿ.

ಬೆಂಗಳೂರು: ರಂಜಾನ್ ಉಪವಾಸ ಮುಕ್ತಾಯದ ಬಳಿಕ ಬರುವ ಈದ್ ಉಲ್ ಫಿತ್ರ್ ಅನ್ನು ಮುಸ್ಲಿಮರು ಶನಿವಾರ ಸಂಭ್ರಮದಿಂದ ಆಚರಿಸಿದರು.

ಲೋಕಕಲ್ಯಾಣಕ್ಕೆ ಅಲ್ಲಾಹುವಿನಲ್ಲಿ ಪ್ರಾರ್ಥನೆ ಸಲ್ಲಿಸಿದ ಧರ್ಮ ಗುರುಗಳು, ಹಬ್ಬದ ಸಂದೇಶ ನೀಡಿದರು.

ನಗರದ ಮೈಸೂರು ರಸ್ತೆಯ ಈದ್ಗಾ ಮೈದಾನದಲ್ಲಿ ಬೆಳಿಗ್ಗೆ ಸಾವಿರಾರು ಮುಸ್ಲಿಮರು ಸಾಮೂಹಿಕ ಪ್ರಾರ್ಥನೆಗೆ ಸೇರಿದ್ದರು. ಮೈದಾನವು ಸಂಪೂರ್ಣ ಭರ್ತಿಯಾಗಿ ನೂಕುನುಗ್ಗಲು ಉಂಟಾಯಿತು. ಯುವಕರು ಹರಸಾಹಸ ಮಾಡಿ ಗೋಡೆ ದಾಟಿ ಮೈದಾನಕ್ಕೆ ಬಂದರು.

ಒಂದು ಗಂಟೆಗೂ ಹೆಚ್ಚು ಕಾಲ ಸಾಮೂಹಿಕ ಪ್ರಾರ್ಥನೆ ನಡೆಯಿತು. ಜಗತ್ತಿನ ಶಾಂತಿ ಮತ್ತು ಒಳಿತಿಗಾಗಿ ಧರ್ಮಗುರುಗಳು ಪ್ರಾರ್ಥಿಸಿದರು. ನಂತರ ಕುರಾನ್ ಪಠಣ ನಡೆಯಿತು. ನೂರಾರು ಸಂಖ್ಯೆಯಲ್ಲಿ ಮಕ್ಕಳೂ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು.

ಸಾಮೂಹಿಕ ಪ್ರಾರ್ಥನೆ ಬಳಿಕ ಪರಸ್ಪರ ಅಪ್ಪಿಕೊಂಡು, ಶುಭಾಶಯ ವಿನಿಮಯ ಮಾಡಿಕೊಂಡರು. ನೆರೆಹೊರೆಯವರು, ಬಂಧುಗಳು, ಗೆಳೆಯರಿಗೂ ಶುಭಾಶಯ ಹೇಳಿದರು.

ಪ್ರಾರ್ಥನೆಯ ಸಂದರ್ಭ ವಿವಿಧೆಡೆ ವಾಹನಗಳ ಸಂಚಾರ ಮಾರ್ಗವನ್ನು ಬದಲಿಸಲಾಗಿತ್ತು.

ಮುಸ್ಲಿಮರ ಮನೆಗಳಲ್ಲಿ ಹಬ್ಬದ ಸಡಗರ ಮೇಳೈಸಿತ್ತು. ಈದ್ ಉಲ್ ಫಿತ್ರ್ ಅಂಗವಾಗಿ ಬಿರಿಯಾನಿ, ಕೀರು ಮೊದಲಾದ ವಿಶೇಷ ಖಾದ್ಯಗಳನ್ನು ತಯಾರಿಸಿದ್ದರು. ಎಲ್ಲರೂ ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದರು. ಹಬ್ಬ ಆಚರಣೆಯ ನಿಯಮದಂತೆ ಮನೆಯ ಪ್ರತಿ ಸದಸ್ಯನ ಹೆಸರಿನಲ್ಲಿಯೂ ಬಡವರಿಗೆ ಫಿತ್ರ್ ಝಕಾತ್ ಹೆಸರಿನ ದಾನ ವಿತರಿಸಲಾಯಿತು.

ನಗರದ ಬಂಡೆಪಾಳ್ಯದ ಈದ್ಗಾ ಮೈದಾನದಲ್ಲಿ ಸಾಮೂಹಿಕ ಪ್ರಾರ್ಥನೆ ವೇಳೆ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ. ಸತೀಶ್ ರೆಡ್ಡಿ ಮತಯಾಚನೆ ಮಾಡಿದರು.

ಶಿಕ್ಷಕರ ನೇಮಕಾತಿ ಹಗರಣ: ಸಿಬಿಐ ಶೋಧ

ತೆಹಟ್ಟಾ (ಪಿಟಿಐ): ಪಶ್ಚಿಮ ಬಂಗಾಳದ ಶಾಲಾ ಶಿಕ್ಷಕರ ನೇಮಕಾತಿ ಹಗರಣದ ತನಿಖೆ ನಡೆಸುತ್ತಿರುವ ಸಿಬಿಐ, ಪಶ್ಚಿಮ ಬಂಗಾಳ ಮತ್ತು ಕರ್ನಾಟಕದ ಆರು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಹಿರಿಯ ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ತೆಹಟ್ಟಾ ಶಾಸಕ ತಪಸ್ ಸಹಾ ಮತ್ತು ಅವರ ಸಹಾಯಕನ ಮನೆ ಹಾಗೂ ಕಚೇರಿಯಲ್ಲಿ ಸಿಬಿಐ ಅಧಿಕಾರಿಗಳು ಶುಕ್ರವಾರ ಸುಮಾರು 15 ತಾಸು ಶೋಧ ಕಾರ್ಯಾಚರಣೆ ನಡೆಸಿದ್ದಾರೆ. ಸಹಾ ಅವರ ಮನೆ ಮತ್ತು ಕಚೇರಿಯಿಂದ ಹಲವಾರು ದಾಖಲೆಗಳು ಮತ್ತು ಎರಡು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ಬೆತಾಯ್ ಪ್ರದೇಶದ ಕಾಲೇಜೊಂದಕ್ಕೆ ಸಹಾ ಅವರನ್ನು ಕರೆದೊಕೊಂಡು ಹೋಗಿ ಅಲ್ಲಿ ಕೂಡಾ ಶೋಧ ಕಾರ್ಯ ನಡೆಸಲಾಯಿತು. ಶುಕ್ರವಾರ ಸಂಜೆ ಅವರ ಮನೆಗೆ ಕರೆದುಕೊಂಡು ಬಂದು ಶನಿವಾರ ಬೆಳಿಗ್ಗೆ 6 ಗಂಟೆವರೆಗೂ ವಿಚಾರಣೆಗೆ ಒಳಪಡಿಸಲಾಯಿತು ಎಂದು ಅವರು ಮಾಹಿತಿ ನೀಡಿದರು.

ಈ ಹಗರಣ ಕುರಿತು ತನಿಖೆ ಕೈಗೆತ್ತಿಕೊಳ್ಳುವಂತೆ ಕಲ್ಕತ್ತಾ ಹೈಕೋರ್ಟ್ ಸಿಬಿಐಗೆ ಮಂಗಳವಾರ ಸೂಚಿಸಿತ್ತು.

ಪಶ್ಚಿಮ ಬಂಗಾಳದ ಮಾಜಿ ಸಚಿವ ಪಾರ್ಥ ಚಟರ್ಜಿ ಸೇರಿ ಆಡಳಿತಾರೂಢ ಟಿಎಂಸಿಯ ಹಲವು ನಾಯಕರು ಈ ಹಗರಣದಲ್ಲಿ ಬಂಧನಕ್ಕೊಳಗಾಗಿದ್ದಾರೆ.

ಚಾರ್ ಧಾಮ್ ಯಾತ್ರೆ ಆರಂಭ

ಡೆಹ್ರಾಡೂನ್ (ಪಿಟಿಐ): ಉತ್ತರಕಾಶಿ ಜಿಲ್ಲೆಯಲ್ಲಿರುವ ಗಂಗೋತ್ರಿ ಹಾಗೂ ಯಮುನೋತ್ರಿ ದೇಗುಲಗಳ ಬಾಗಿಲುಗಳನ್ನು ತೆರೆಯುವ ಮೂಲಕ 'ಚಾರ್ ಧಾಮ್' ಯಾತ್ರೆಗೆ ಶನಿವಾರ ಚಾಲನೆ ನೀಡಲಾಯಿತು.

ಗಂಗೋತ್ರಿ ದ್ವಾರವನ್ನು ಮಧ್ಯಾಹ್ನ 12.35ಕ್ಕೆ ತೆರೆದರೆ, ಯಮುನೋತ್ರಿ ದ್ವಾರವನ್ನು ಮಧ್ಯಾಹ್ನ 12.41ಕ್ಕೆ ತೆರೆಯಲಾಯಿತು ಎಂದು ದೇವಸ್ಥಾನ ಸಮಿತಿ ಅಧಿಕಾರಿಗಳು ತಿಳಿಸಿದ್ದಾರೆ.

ದೇಗುಲವನ್ನು ಯಾತ್ರಾರ್ಥಿಗಳಿಗಾಗಿ ಆರು ತಿಂಗಳ ನಂತರ ತೆರೆಯಲಾಗುತ್ತಿದೆ. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಗಂಗೋತ್ರಿಯಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ದೇಗುಲ ದರ್ಶನ ಪಡೆಯಲು ರಾಜ್ಯ ಸರ್ಕಾರ ಎಲ್ಲ ವ್ಯವಸ್ಥೆ ಮಾಡಿದೆ ಎಂದು ತಿಳಿಸಿದರು. ಕೇದಾರನಾಥ ಇದೇ 25ರಂದು ಮತ್ತು ಬದರೀನಾಥ 27ರಂದು ತೆರೆಯಲಿವೆ.



ಕೆ.ಆರ್.ಪುರ ಸಮೀಪದ ವೈಟ್ ಫೀಲ್ಡ್ ನಲ್ಲಿ ದಿ ಗ್ರೀನ್ ಸ್ಕೂಲ್ ಹಾಗೂ ದಿ ಬೆಂಗಳೂರು ಸ್ಕೂಲ್ ವತಿಯಿಂದ ಭೂಮಿ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಜಾಗೃತಿ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಪ್ರಮಾಣಪತ್ರ ವಿತರಿಸಲಾಯಿತು. ಸಂಸ್ಥೆಯ ನಿರ್ದೇಶಕಿ ಉಷಾ ಅಯ್ಯರ್ ಇದ್ದರು

ಮೇವಿಗೆ ಪರದಾಟ!

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನಲ್ಲಿ ಬಿಸಿಲ ಝಳ ಹೆಚ್ಚುತ್ತಿದ್ದು, ಜನ ಬಸವಳಿದಿದ್ದಾರೆ.

ಮಳೆ ಇಲ್ಲದೆ ರೈತರು ಕಂಗಾಲಾಗಿದ್ದಾರೆ. ಮುಖ್ಯವಾಗಿ ಜಾನುವಾರುಗಳ ಮೇವಿನ ಮೇಲೆ ಗಂಭೀರ ಪರಿಣಾಮ ಬೀರಿದೆ. ರಾಗಿ ಬಣವೆಗಳಲ್ಲಿ ಹುಲ್ಲು ಖಾಲಿಯಾಗುತ್ತಿದ್ದು, ಮೇವಿಗಾಗಿ ಪರದಾಡುವಂತಾಗಿದೆ. ಎಲ್ಲಿಯೂ ಮೇವು ಸಿಗುತ್ತಿಲ್ಲ. ದುಬಾರಿ ಬೆಲೆ ನೀಡಿ ಮೇವು ಕೊಂಡುಕೊಳ್ಳುವ ಸ್ಥಿತಿ ನಿರ್ಮಾಣವಾಗಿದೆ. ಕೊಳವೆ ಬಾವಿ ಸೌಲಭ್ಯ ಹೊಂದಿರುವವರು ಹಸಿ ಮೇವು ಬೆಳೆದಿದ್ದಾರೆ.

ಬಿಸಿಲ ತಾಪಕ್ಕೆ ಮಾವಿನ ಹೀಚು, ಹುಣಸೆ ಹೂವು, ತೆಂಗು-ಅಡಿಕೆ ಕಾಯಿಗಳು ಉದುರುತ್ತಿದೆ. ತೋಟಗಾರಿಕಾ ಬೆಳೆಗಳಲ್ಲಿಯೂ ಇಳುವರಿ ಕುಸಿತ ಕಂಡಿದೆ.

ಕ್ರಿಕೆಟ್: ಎಂಎಸ್‌ಆರ್‌ಐಟಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಎಂ.ಎಸ್. ರಾಮಯ್ಯ ತಾಂತ್ರಿಕ ಸಂಸ್ಥೆ (ಎಂಎಸ್‌ಆರ್‌ಐಟಿ) ಕಾಲೇಜು ತಂಡವು ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ಇಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ರಾಮಯ್ಯ ತಾಂತ್ರಿಕ ಸಂಸ್ಥೆಯ (ಆರ್‌ಐಟಿ) ವಜ್ರಮಹೋತ್ಸವ ಹಾಗೂ ಡಾ.ಎಂ.ಎಸ್.ರಾಮಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ ಟೂರ್ನಿ ನಡೆಯುತ್ತಿದೆ.

ಶನಿವಾರ ನಡೆದ ಪಂದ್ಯದಲ್ಲಿ ಎಂಎಸ್‌ಆರ್‌ಐಟಿ 170 ರನ್‌ಗಳಿಂದ ಎನ್‌ಎಚ್‌ಸಿಇ ವಿರುದ್ಧ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಎಂಎಸ್‌ಆರ್‌ಐಟಿ 30 ಓವರ್‌ಗಳಲ್ಲಿ 4 ವಿಕೆಟ್‌ಗೆ 248 ರನ್ ಗಳಿಸಿತು. ಯಶ್ ನೇರ್ಲೆಕರ್ (108) ಶತಕ ಗಳಿಸಿ ಮಿಂಚಿದರು.

ಗುರಿ ಬೆನ್ನತ್ತಿದ ಎನ್‌ಎಚ್‌ಸಿಇ ಸುಮಂತ್ (11ಕ್ಕೆ 5) ದಾಳಿಗೆ ನಲುಗಿತು. 18.5 ಓವರ್‌ಗಳಲ್ಲಿ ಕೇವಲ 78 ರನ್ ಗಳಿಸಿ ಆಲೌಟ್ ಆಯಿತು.

ಮತ್ತೊಂದು ಪಂದ್ಯದಲ್ಲಿ ಜಿಎಟಿ ತಂಡವು 3 ವಿಕೆಟ್‌ಗಳಿಂದ ಬಿಐಟಿ ತಂಡವನ್ನು ಮಣಿಸಿತು. ಮೊದಲು ಬ್ಯಾಟ್ ಮಾಡಿದ ಬಿಐಟಿ 29 ಓವರ್‌ಗಳಲ್ಲಿ 9 ವಿಕೆಟ್‌ಗೆ 174 ರನ್ ಕಲೆಹಾಕಿತು. ಜಿಎಟಿ ತಂಡದವರು 26 ಓವರ್‌ಗಳಲ್ಲಿ ಏಳು ವಿಕೆಟ್ ಕಳೆದುಕೊಂಡು 176 ರನ್ ಗಳಿಸಿದರು.



ನಗರದ ಸೆಂಟ್ರಲ್ ಕಾಲೇಜಿನ ಗ್ರಂಥಾಲಯದ ನವೀಕರಣ ಕಾರ್ಯದಲ್ಲಿ ನೆರವಾದ ಮೌಂಟ್ ಕಾರ್ಮೆಲ್ ಕಾಲೇಜಿನ ಎನ್‌ಎಸ್‌ಎಸ್ 40 ಸ್ವಯಂ ಸೇವಕರಿಗೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಪ್ರಮಾಣ ಪತ್ರಗಳನ್ನು ವಿತರಿಸಿದರು. ಮೌಂಟ್ ಕಾರ್ಮೆಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಅರ್ಪಣಾ, ಡಾ. ಲೇಖಾ ಜಾರ್ಜ್, ಸಂಯೋಜಕರಾದ ಸಜಿತಾ, ಡಾ. ಗೋವಿಂದೇಗೌಡ, ಬಿಸಿಯು ಸಮಾಲೋಚಕ ಎಸ್. ಆರ್. ಆರಾಧ್ಯ ಇದ್ದರು

ನಿಧನ ವಾರ್ತೆ

ಶಿವಣ್ಣ



ಬೆಂಗಳೂರು: ಬನಶಂಕರಿ 2ನೇ ಹಂತದ ಪತ್ರಿಕಾ ವಿತರಕರಾದ 'ಮೈತ್ರಿ ನ್ಯೂಸ್ ಏಜೆನ್ಸಿ'ಯ ಶಿವಣ್ಣ (59) ಅವರು ಶನಿವಾರ ನಿಧನರಾದರು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಶಿವಣ್ಣ ಅವರು 30 ವರ್ಷಗಳಿಂದ ಪತ್ರಿಕಾ ವಿತರಕರಾಗಿ ಕೆಲಸ ಮಾಡುತ್ತಿದ್ದರು.

ಕುಣಿಗಲ್ ತಾಲ್ಲೂಕಿನ ಬೇಗೂರು ಬಳಿಯ ಕುರುಪಾಳಯದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದವರು ತಿಳಿಸಿದ್ದಾರೆ.


‘ಎಡ್ಯುವರ್ಸ್’: ಮಾಹಿತಿ ಆಗರ

ಬೆಂಗಳೂರು: ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿರುವ 13ನೇ ಆವೃತ್ತಿಯ ‘ಎಡ್ಯುವರ್ಸ್: ವಿದ್ಯಾರ್ಥಿಗಳ ದಾರಿದೀಪ’ ಶೈಕ್ಷಣಿಕ ಮೇಳ ವಿದ್ಯಾರ್ಥಿಗಳ ಹಾಗೂ ಪೋಷಕರ ಮೆಚ್ಚುಗೆಗೆ ಪಾತ್ರವಾಯಿತು. ಆಯ್ದ ಕೆಲವು ವಿದ್ಯಾರ್ಥಿಗಳ ಹಾಗೂ ಪೋಷಕರ ಪ್ರತಿಕ್ರಿಯೆಗಳು ಇಲ್ಲಿವೆ.



ಯಾವೆಲ್ಲ ‘ಅಡ್ವಾನ್ಸ್ಡ್ ಕೋರ್ಸ್’ಗಳು ಬಂದಿವೆ ಎನ್ನುವುದನ್ನು ತಿಳಿದುಕೊಳ್ಳಲು ಈ ಶಿಕ್ಷಣ ಮೇಳ ಸಹಕಾರಿಯಾಯಿತು. ವಿಧಿ ವಿಜ್ಞಾನ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು ಅಂದುಕೊಂಡಿದ್ದೇನೆ. ಯಾವ ಕಾಲೇಜುಗಳಲ್ಲಿ ಈ ಕೋರ್ಸ್ ಲಭ್ಯವಿದೆ ಎಂದು ವಿಚಾರಿಸಿದೆ. ಈ ರೀತಿ ಶಿಕ್ಷಣ ಮೇಳದಿಂದ ಗೊಂದಲ ನಿವಾರಣೆಯಾಗಲಿದೆ.

ಶರಣ್ಯ, ನಾರಾಯಣ ಪಿಯು ಕಾಲೇಜು



ಮಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕದೊಂದಿಗೆ ತೇರ್ಗಡೆಯಾಗಿದ್ದಾಳೆ. ಮುಂದಿನ ಶೈಕ್ಷಣಿಕ ಆಯ್ಕೆಗಳ ಬಗ್ಗೆ ಕಾಲೇಜುಗಳಿಗೆ ತೆರಳಿ, ತಿಳಿದುಕೊಳ್ಳುವುದು ಕಷ್ಟ. ಒಂದೇ ಸೂರಿನಡಿ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಉಪಯುಕ್ತ ಮಾಹಿತಿಗಳು ದೊರೆತವು. ಕೋರ್ಸ್‌ಗಳ ಆಯ್ಕೆಗಿದ್ದ ಗೊಂದಲಗಳು ದೂರವಾದವು.

ರಮೇಶ್, ಮಾಲೂರು, ಕೋಲಾರ



ದ್ವಿತೀಯ ಪಿಯು ಪರೀಕ್ಷೆಯಲ್ಲಿ ಪುತ್ರಿ ಶೇ 80ರಷ್ಟು ಅಂಕದೊಂದಿಗೆ ತೇರ್ಗಡೆಯಾಗಿದ್ದಾಳೆ. ಐಎಎಸ್ ಅಧಿಕಾರಿಯಾಗಬೇಕು ಎಂಬ ಕನಸು ಅವಳಿಗಿದೆ. ಒಂದೇ ಕಡೆ ಹಲವು ಕಾಲೇಜುಗಳ ಮಳಿಗೆ ಇರುವುದರಿಂದ ಅಲೆದಾಟ ತಪ್ಪಿದೆ. ಮೇಳವನ್ನು ಉತ್ತಮವಾಗಿ ಆಯೋಜಿಸಲಾಗಿದೆ. ಸಂಪನ್ಮೂಲ ವ್ಯಕ್ತಿಗಳು ನೀಡಿದ ಮಾಹಿತಿಯಿಂದ ಗೊಂದಲಗಳು ಪರಿಹಾರವಾಗಿವೆ.

ಉಮಾ, ಬಾಗಲಗುಂಟೆ




ಉತ್ತಮ ಕೋರ್ಸ್‌ಗಳನ್ನು ಅರಸಿ ಇಲ್ಲಿಗೆ ಬಂದಿದ್ದೇನೆ. ಯಾವ ಕೋರ್ಸ್‌ಗೆ ಎಷ್ಟು ಬೇಡಿಕೆ ಇದೆ, ಏನೆಲ್ಲ ಉದ್ಯೋಗಾವಕಾಶಗಳಿವೆ ಎಂಬುದನ್ನು ತಿಳಿಯಲು ಸಾಧ್ಯವಾಯಿತು. ನನಗೆ ಇಷ್ಟವಾದ ಕೋರ್ಸ್‌ಗಳನ್ನು ಪಟ್ಟಿ ಮಾಡಿಕೊಂಡಿದ್ದೇನೆ. ವಿಶೇಷ ಕೋರ್ಸ್‌ಗಳ ಬಗ್ಗೆ ಸಾಕಷ್ಟು ತಿಳಿದುಕೊಂಡೆ.

ಯಶಸ್, ವಿಜಯನಗರ



ಭಿನ್ನ ಕೋರ್ಸ್‌ಗಳಿಗೆ ಯಾವ ರೀತಿಯ ಶುಲ್ಕಗಳಿವೆ ಎಂಬುದನ್ನು ತಿಳಿಯಲು ಹಾಗೂ ಹೊಸ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆಯಲು ಈ ಮೇಳ ಸಹಾಯಕವಾಯಿತು. ಸಾಕಷ್ಟು ಕಾಲೇಜುಗಳು ಇಲ್ಲಿರುವುದರಿಂದ ಉಪಯುಕ್ತ ಮಾಹಿತಿಗಳು ದೊರೆತವು.

ಗೀತಾ, ಹೆಬ್ಬಾಳ



ಶೈಕ್ಷಣಿಕ ಮೇಳದಿಂದ ಉಪಯುಕ್ತ ಮಾಹಿತಿ ದೊರೆಯಿತು. ಹೊಸ ಕೋರ್ಸ್‌ಗಳ ವಿವರ, ಪ್ರವೇಶ ಶುಲ್ಕ, ಕಾಲೇಜುಗಳಲ್ಲಿನ ಸೌಲಭ್ಯ, ಉದ್ಯೋಗಾವಕಾಶ ಸೇರಿ ಹಲವು ಮಾಹಿತಿ ದೊರೆಯಿತು. ಇದರಿಂದ ಮಕ್ಕಳಿಗೆ ನಾವು ಸೂಕ್ತ ಮಾರ್ಗದರ್ಶನ ಮಾಡಬಹುದು. ಈ ಮೇಳ ಮಕ್ಕಳ ಜತೆಗೆ ಪಾಲಕರಿಗೂ ಉಪಯುಕ್ತವಾಗಿದೆ.

ಶಂಕರಪ್ಪ, ಬನ್ನೇರುಘಟ್ಟ



ಭಿನ್ನ ಕೋರ್ಸ್‌ಗಳಿಗೆ ಯಾವ ರೀತಿಯ ಶುಲ್ಕಗಳಿವೆ ಎಂಬುದು ಈ ಶಿಕ್ಷಣ ಮೇಳದಿಂದ ತಿಳಿಯಿತು. ಹೊಸ ಕೋರ್ಸ್‌ಗಳ ಬಗ್ಗೆಯೂ ಮಾಹಿತಿ ದೊರೆಯಿತು. ಸಾಕಷ್ಟು ಕಾಲೇಜುಗಳು ಇಲ್ಲಿರುವುದರಿಂದ ಉಪಯುಕ್ತ ಮಾಹಿತಿ ಲಭ್ಯವಾಯಿತು. ಉನ್ನತ ಶಿಕ್ಷಣಕ್ಕೆ ಕಂಪ್ಯೂಟರ್ ಸೈನ್ಸ್ ಆಯ್ಕೆ ಮಾಡಿಕೊಳ್ಳಬೇಕು ಅಂದುಕೊಂಡಿದ್ದೇನೆ.

ಹರ್ಷಿತಾ, ಕ್ರೈಸ್ಟ್ ಕಾಲೇಜು



ಬಿ.ಕಾಂ ಆಯ್ಕೆ ಮಾಡಿಕೊಳ್ಳಬೇಕು ಅಂದುಕೊಂಡಿದ್ದೇನೆ. ಕೆಲ ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಅಧಿಕವಿದೆ. ಶಿಷ್ಯ ವೇತನ ಸಿಗುತ್ತದೆ ಎಂಬ ಖಚಿತತೆ ಇರುವುದಿಲ್ಲ. ಈ ಬಗೆಗಿನ ಗೊಂದಲಗಳ ನಿವಾರಣೆಗೆ ಮೇಳ ಸಹಕಾರಿಯಾಯಿತು.

ಅಭಯ್ ಸೂರ್ಯ, ಕತ್ರಿಗುಪ್ಪೆ



ಕಾಲೇಜುಗಳ ಬಗ್ಗೆ ಅಂತರ್ಜಾಲದಲ್ಲಿ ಮಾಹಿತಿ ಸಿಕ್ಕರೂ ನಮ್ಮ ಸಂದೇಹಗಳನ್ನು ದೂರ ಮಾಡಿಕೊಳ್ಳಲು ಸಾಧ್ಯವಾಗದು. ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕೋರ್ಸ್‌ಗಳ ಪ್ರವೇಶ ಶುಲ್ಕ ಸೇರಿದಂತೆ ಹಲವು ವಿಷಯಗಳ ಬಗ್ಗೆ ವಿಚಾರಿಸಿ, ಮಾಹಿತಿ ಪಡೆದುಕೊಂಡೆವು.

ಇಂಚರಾ, ಬನ್ನೇರುಘಟ್ಟ



ಎಂಜಿನಿಯರಿಂಗ್ ಕೋರ್ಸ್‌ಗಳು ಹಾಗೂ ಕಾಲೇಜಿನ ಚಿತ್ರಣ ದೊರೆತಿದೆ. ಪ್ರವೇಶ ಶುಲ್ಕ ಲಕ್ಷಾಂತರ ರೂಪಾಯಿ ಇರುವುದರಿಂದ ಮಧ್ಯಮ ವರ್ಗದ ಕುಟುಂಬಗಳಿಗೆ ಹಣ ಹೊಂದಿಸುವುದು ಕಷ್ಟವಾಗುತ್ತದೆ. ಈ ರೀತಿ ಕಾರ್ಯಕ್ರಮಗಳು ಮಕ್ಕಳ ಗೊಂದಲ ಬಗೆಹರಿಸಲು ನೆರವಾಗುತ್ತವೆ. ಇಲ್ಲಿಗೆ ಬಂದ ಮೇಲೆ ಸಾಕಷ್ಟು ವಿಷಯಗಳು ಮನದಟ್ಟಾದವು.

ಲಲಿತಾ, ಶ್ರೀರಾಮಪುರ

ಮೇಳಕ್ಕೆ ಇಂದು ತೆರೆ

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಇಲ್ಲಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿರುವ 13ನೇ ಆವೃತ್ತಿಯ ‘ಎಡ್ಯುವರ್ಸ್: ವಿದ್ಯಾರ್ಥಿಗಳ ದಾರಿದೀಪ’ ಶೈಕ್ಷಣಿಕ ಮೇಳಕ್ಕೆ ಭಾನುವಾರ ತೆರೆ ಬೀಳಲಿದೆ. ಬೆಳಿಗ್ಗೆ 9 ಗಂಟೆಯಿಂದ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ. 10.30ಕ್ಕೆ ಸರ್ಕಾರಿ ಪಿಯು ಕಾಲೇಜು ಪ್ರಾಂಶುಪಾಲ ಎ.ಎಸ್. ರವಿ ಅವರು ಸಿಇಟಿ ಬಗ್ಗೆ ಮಾರ್ಗದರ್ಶನ ಮಾಡಲಿದ್ದಾರೆ. 11 ಗಂಟೆಗೆ ಚಲನಚಿತ್ರ ನಿರ್ಮಾಣ, ರಂಗಭೂಮಿ ಕಲೆಗಳು ಮತ್ತು ಭಾರತೀಯ ನಾಗರಿಕ ಸೇವೆಗಳ ಕುರಿತು ಚರ್ಚೆಗಳು ನಡೆಯಲಿದ್ದು, ಸಿನಿಮಾ ನಿರ್ದೇಶಕ ಟಿ.ಎಸ್. ನಾಗಾಭರಣ, ರಂಗಭೂಮಿ ಕಲಾವಿದೆ ಸುಷ್ಮಾ ಹಾಗೂ ಇನ್‌ಸೈಟ್ಸ್ ಐಎಎಸ್ ಅಕಾಡೆಮಿಯ ವಿನಯ್ ಅವರು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 12.15ಕ್ಕೆ ವೈದ್ಯಕೀಯ ಕೋರ್ಸ್‌ಗಳ ಬಗ್ಗೆ ಸಂವಾದಗಳು ಇರಲಿದ್ದು, ಮಣಿಪಾಲ್ ಆಸ್ಪತ್ರೆಯ ಡಾ. ರಾಜನ್ ಶೆಟ್ಟಿ ಹಾಗೂ ಅಕ್ಷರಾ ದಾಮ್ಲೆ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ಅಣಕು ಪರೀಕ್ಷೆ ನಡೆಯಲಿದೆ. ಸಂಜೆ 4 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಲಕ್ಕಿ ಡ್ರಾ ಘೋಷಿಸಲಾಗುತ್ತದೆ.

DH DECCAN HERALD ಪ್ರಜಾವಾಣಿ

ಎಡ್ಯುವರ್ಸ್™
ವಿದ್ಯಾರ್ಥಿಗಳ ದಾರಿದೀಪ

‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ‘ಎಡ್ಯುವರ್ಸ್’ ಉದ್ಘಾಟಿಸಿದ ನಟ ರಮೇಶ್

ಪಿಯು ನಂತರದ ಆಯ್ಕೆ ‘ಭವಿಷ್ಯದ ಬದುಕು’



ನಗರದ ಅರಮನೆ ಮೈದಾನದಲ್ಲಿ ಶನಿವಾರ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿದ್ದ ‘ಎಡ್ಯುವರ್ಸ್’ ಮೇಳವನ್ನು ನಟ ರಮೇಶ್ ಅರವಿಂದ್ ವೀಕ್ಷಿಸಿದರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ನಂತರ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಕೋರ್ಸ್ ಓದಿಗಷ್ಟೇ ಸೀಮಿತವಲ್ಲ, ಅದು ಭವಿಷ್ಯದ ಬದುಕಿನ ದಾರಿಯೂ ಆಗಿರುತ್ತದೆ. ಆ ಆಯ್ಕೆ ವಿದ್ಯಾರ್ಥಿಗಳ ಆಸಕ್ತಿ, ಆಕರ್ಷಣೆಯ ವಿಷಯವಾಗಿರಲಿ ಎಂದು ನಟ ರಮೇಶ್ ಅರವಿಂದ್ ಆಶಿಸಿದರು.

‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಶನಿವಾರ ಸಿಇಟಿ, ನೀಟ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ‘ಎಡ್ಯುವರ್ಸ್: ವಿದ್ಯಾರ್ಥಿಗಳ ದಾರಿದೀಪ’ ಉದ್ಘಾಟಿಸಿ ಅವರು ಮಾತನಾಡಿದರು.

ಸಿಇಟಿ, ನೀಟ್ ಬರೆಯುವ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ಗಳನ್ನು ಹೇಗೆ ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವುದು ಮುಖ್ಯ. ಹಾಡು, ನೃತ್ಯ, ನಟನೆ ಗೊತ್ತಿಲ್ಲದೆ ಸಿನಿಮಾ ಕ್ಷೇತ್ರ ಆಯ್ಕೆ ಮಾಡಿಕೊಂಡರೆ ಯಶಸ್ವಿಯಾಗುವುದು ಕಷ್ಟವಾಗುತ್ತದೆ. ಶಿಕ್ಷಣದ ವಿಷಯದ ಆಯ್ಕೆಯೂ ಹಾಗೆ. ಯಾವ ವಿಷಯ ಆಯ್ಕೆ ಮಾಡಿಕೊಳ್ಳಬೇಕು ಎನ್ನುವುದು ಸ್ವಾಭಾವಿಕ ಸೆಳೆತದ ಮೇಲೆ ನಿರ್ಧರಿಸಬೇಕು. ಅದಕ್ಕೆ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿರುವ ‘ಎಡ್ಯುವರ್ಸ್’ ಸೂಕ್ತ ಮಾರ್ಗದರ್ಶನ ನೀಡುತ್ತಿದೆ ಎಂದು ಶ್ಲಾಘಿಸಿದರು.

ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳುವ ಕೋರ್ಸ್ ಜ್ಞಾನದ ಜತೆಗೆ, ಭವಿಷ್ಯವನ್ನೂ ಭದ್ರಮಾಡಬೇಕು. ಆದಾಯದ ಮೂಲವೂ ಆಗಬೇಕು. ಜೀವನಕ್ಕೆ ಆದಾಯವೂ ಮುಖ್ಯ. ಆಯ್ಕೆ ಮಾಡಿಕೊಂಡ ವೃತ್ತಿಯ ಜತೆಗೆ ನಿವೃತ್ತಿಯವರೆಗೂ ಸಾಗಬೇಕಿದೆ. ಅದಕ್ಕಾಗಿ ಮುಂದೊಂದು ದಿನ ವೃತ್ತಿಯ ಆಯ್ಕೆ ತಪ್ಪು ಎನಿಸದಂತೆ ಪಿಯು ಮುಗಿದಾಗಲೇ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದರು.

‘ನ್ಯೂಸ್‌ಫಸ್ಟ್’ ವಾಹಿನಿ ವ್ಯವಸ್ಥಾಪಕ ನಿರ್ದೇಶಕ ಎಸ್.ರವಿಕುಮಾರ್, ವಿದ್ಯಾರ್ಥಿಗಳು ಭವಿಷ್ಯದ ಜೀವನ ರೂಪಿಸಿಕೊಳ್ಳಲು ‘ಎಡ್ಯುವರ್ಸ್’ ದಾರಿದೀಪವಾಗಿದೆ. ಪಿಯು ಫಲಿತಾಂಶದಲ್ಲಿ ಕಡಿಮೆ ಬಂದಿದೆ ಎಂದು ಬೇಸರ ಮಾಡಿಕೊಳ್ಳದೇ ಸಿಇಟಿಯಲ್ಲಿ ಹೆಚ್ಚು ರ‍್ಯಾಂಕ್ ಪಡೆಯಲು ಗಮನಹರಿಸಬೇಕು ಎಂದು ಸಲಹೆ ನೀಡಿದರು.

‘ಆ್ಯಡ್ 6 ಅಡ್ವರ್ಟೈಸಿಂಗ್’ ವ್ಯವಸ್ಥಾಪಕ ನಿರ್ದೇಶಕಿ ಕೆ.ವಿಜಯಕಲಾ ಸುಧಾಕರ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಎಂ.ಕೃಷ್ಣೇಗೌಡ, ಟಿಪಿಎಂಎಲ್ ಮಾರಾಟ ವಿಭಾಗದ ಮುಖ್ಯಸ್ಥ ಆನಂದ್ ಉಪಸ್ಥಿತರಿದ್ದರು.

‘ಪೆಲೆ’ ಗುರಿ ನಿಮ್ಮದಾಗಲಿ...

ವಿಷಯ ಆಯ್ಕೆ, ಬದುಕು ರೂಪಿಸಿಕೊಳ್ಳುವಲ್ಲಿ ವಿದ್ಯಾರ್ಥಿಗಳಿಗೆ ಫುಟ್‌ಬಾಲ್ ದಂತಕಥೆ ಪೆಲೆ ಮಾದರಿಯಾಗಬೇಕು. ಫುಟ್‌ಬಾಲ್ ಆಡುವಾಗ ಎಲ್ಲರೂ ಬಾಲ್ ಮೇಲೆ ಗಮನಹರಿಸಿದರೆ, ಪೆಲೆ ದೃಷ್ಟಿ ಸದಾ ಗೋಲು ಗಳಿಸುವತ್ತ ನೆಟ್ಟಿರುತ್ತಿತ್ತು. ಹಾಗಾಗಿಯೇ ಅತಿ ಹೆಚ್ಚು ಯಶಸ್ಸು ತಮ್ಮದಾಗಿಸಿಕೊಂಡರು ಎಂದು ನಟ ರಮೇಶ್ ಅರವಿಂದ್ ಉದಾಹರಣೆ ನೀಡಿದರು.

ಓದುಗರ ಪ್ರೀತಿಗೆ ‘ಎಡ್ಯುವರ್ಸ್’ ಕೊಡುಗೆ

‘ಪ್ರಜಾವಾಣಿ’ 75 ವಸಂತ ದಾಟಿದ್ದರೂ 18ರ ಯುವತಿಯ ಕುತೂಹಲ, 35 ವಯಸ್ಸಿನ ಮಹಿಳೆಯ ಅಕ್ಕರೆ, 60ರ ಜೀವನ ಪಕ್ವತೆ ಹೊಂದಿರುವ ಪರಿಪೂರ್ಣ ಮಹಿಳೆಯಂತಿದೆ. 75 ವರ್ಷ ಪ್ರೀತಿ ತೋರಿದ ಓದುಗರಿಗೆ ಏನಾದರೂ ನೀಡಬೇಕು ಎಂಬ ಹಂಬಲವೇ ಈ ‘ಎಡ್ಯುವರ್ಸ್’ ಎಂದು ರಮೇಶ್ ಅರವಿಂದ್ ಬಣ್ಣಿಸಿದರು.



ಮಳಿಗೆಯೊಂದರಲ್ಲಿ ವಿದ್ಯಾರ್ಥಿನಿಯರು ವಿವಿಧ ಕೋರ್ಸ್‌ಗಳ ಬಗ್ಗೆ ಮಾಹಿತಿ ಪಡೆದುಕೊಂಡರು


‘ಸ್ಕೋಪ್ ಕೋರ್ಸ್’ ಬೆನ್ನತ್ತಬೇಡಿ: ಕೃಷ್ಣೇಗೌಡ

‘ಸ್ಕೋಪ್ ಕೋರ್ಸ್’ಗಳ ಬೆನ್ನುಹತ್ತದೆ ಪೋಷಕರು ತಮ್ಮ ಮಕ್ಕಳಿಗೆ ಸಮಾಜಮುಖಿ ವಿಷಯಗಳ ಆಯ್ಕೆಗೆ ಮಾರ್ಗದರ್ಶನ ಮಾಡಬೇಕು ಎಂದು ನಿವೃತ್ತ ಪ್ರಾಧ್ಯಾಪಕ ಎಂ.ಕೃಷ್ಣೇಗೌಡ ಹೇಳಿದರು.

‘ಎಡ್ಯುವರ್ಸ್: ವಿದ್ಯಾರ್ಥಿಗಳ ದಾರಿದೀಪ’ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹೆಚ್ಚಿನ ಪೋಷಕರಿಗೆ ಮಕ್ಕಳು ಚೆನ್ನಾಗಿ ಓದಿ ನಮ್ಮಂತೆ ಹೆಚ್ಚಿನ ಸಂಪಾದನೆ ಮಾಡಬೇಕು. ಮನೆ, ಕಾರು, ಆಸ್ತಿ ಸಂಪಾದಿಸಬೇಕು ಎನ್ನುವುದೇ ಧ್ಯೇಯವಾಗಿರುತ್ತದೆ. ಸಮಾಜದಲ್ಲಿನ ಶ್ರೀಮಂತರೇ ಅವರಿಗೆ ಆದರ್ಶ. ಅದಕ್ಕಾಗಿಯೇ ಅವರು ‘ಸ್ಕೋಪ್ ಕೋರ್ಸ್’ಗಳ ಮೊರೆ ಹೋಗುತ್ತಾರೆ. ಮಗ ಜ್ಞಾನಿ, ಬುದ್ಧಿವಂತನಾಗಲು ಕೋರ್ಸ್ ಆಯ್ಕೆ ಮಾಡಬೇಕು ಎನ್ನುವವರ ಸಂಖ್ಯೆ ಕಡಿಮೆ. ಹೆಚ್ಚಿನ ಅಂಕಗಳ ಮೋಹವೂ ಇದೇ ಕಾರಣಕ್ಕೆ ಹುಟ್ಟಿಕೊಳ್ಳುತ್ತದೆ. ಅದಕ್ಕಾಗಿಯೇ, ಮಕ್ಕಳ ಶಿಕ್ಷಣವನ್ನು ಭವಿಷ್ಯದ ಹೂಡಿಕೆಯಾಗಿ ನೋಡುತ್ತಾರೆ ಎಂದು ವಿಶ್ಲೇಷಿಸಿದರು. ‘ಮಕ್ಕಳು ಕಡಿಮೆ ಅಂಕ ಪಡೆದಾಗ, ಹಿನ್ನಡೆ ಅನುಭವಿಸಿದಾಗ ‘ನಿನ್ನ ಜತೆ ನಾನಿದ್ದೇನೆ. ಹೆದರಬೇಡ’ ಎನ್ನುವವರು, ತಪ್ಪು ಮಾಡಿದಾಗ ನಯವಾಗಿ ತಿದ್ದುವವರು ನಿಜವಾದ ಪೋಷಕರು. ಪೋಷಕರ ನಡವಳಿಕೆಯೇ ಮಕ್ಕಳಿಗೆ ಮಾದರಿ. ಅದಕ್ಕಾಗಿ ಕುಟುಂಬಗಳಲ್ಲಿ ಹೊಂದಾಣಿಕೆ ಇರಬೇಕು. ಮಕ್ಕಳಿಗೆ ಸ್ವಾತಂತ್ರ್ಯ ಕೊಡಬೇಕು. ಅದು ಕಣ್ಗಾವಲಿನಲ್ಲಿರಬೇಕು. ಶಿಸ್ತು ಬೇಕು. ಆದರೆ, ನಾವು ಹೇಳಿದಂತೆಯೇ ಕೇಳಬೇಕು ಎನ್ನುವ ಹಟ ಇರಬಾರದು. ಆಯ್ಕೆಯ ಸ್ವಾತಂತ್ರ್ಯ ನೀಡಬೇಕು. ಹೇರಿಕೆ ಇಲ್ಲದ ಮಾರ್ಗ ದರ್ಶನವಷ್ಟೇ ಮಾಡಬೇಕು’ ಎಂದು ಕಿವಿಮಾತು ಹೇಳಿದರು.

ಕಡಿಮೆ ಅಂಕ, ಅನುತ್ತೀರ್ಣದಿಂದ ನಡೆಯುವ ಆತ್ಮಹತ್ಯೆ ಪ್ರಕರಣಗಳಿಗೆ ಪೋಷಕರ ಜತೆಗೆ ಸಮಾಜವೂ ಹೊಣೆಯಾಗಬೇಕಾಗುತ್ತದೆ. ಸವಾಲುಗಳನ್ನು ಮೆಟ್ಟಿನಿಲ್ಲುವ ಆತ್ಮವಿಶ್ವಾಸ ಮೂಡಿಸದೇ ಹೋದರೆ ಇಂತಹ ಅವಘಡಗಳು ಸಂಭವಿಸುತ್ತವೆ. ಸಣ್ಣ ಸಂತೋಷವನ್ನು ಅತಿಯಾಗಿ ಸಂಭ್ರಮಿಸುವ, ಸಣ್ಣ ದುಃಖಕ್ಕೆ ಸೋಲುವ ಮನಸ್ಸುಗಳೆರಡೂ ಅಪಾಯಕಾರಿ ಎಂದರು.



ಪತ್ರಕರ್ತ ರಾಘವೇಂದ್ರ ಆಚಾರ್ಯ ಇದ್ದರು. ‘ಪ್ರಜಾವಾಣಿ’ ಉಪ ಸಂಪಾದಕಿ ಕೆ.ಬಿ.ಶುಭಾ ಸಂವಾದ ನಡೆಸಿಕೊಟ್ಟರು.

ವಿವಿಧ ಕೋರ್ಸ್‌ಗಳ ಕುರಿತು ಮಾಹಿತಿ ಪಡೆದ ಪೋಷಕರು ಮತ್ತು ವಿದ್ಯಾರ್ಥಿಗಳು

ಒಂದೇ ಸೂರಿನಡಿ ಸಮಗ್ರ ಶೈಕ್ಷಣಿಕ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್, ವೈದ್ಯಕೀಯ, ವಾಸ್ತುಶಿಲ್ಪ, ರೋಬೋಟಿಕ್ಸ್, ಪ್ರವಾಸೋದ್ಯಮ, ಎಂಬಿಎ, ಎಂಸಿಎ, ಫ್ಯಾಷನ್ ಡಿಸೈನ್, ಕಾನೂನು... ಹೀಗೆ ವಿವಿಧ ಕೋರ್ಸ್‌ಗಳ ಬಗ್ಗೆ ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ‘ಎಡ್ಯುವರ್ಸ್’ ಶೈಕ್ಷಣಿಕ ಮೇಳವು ಮಾಹಿತಿ ಒದಗಿಸಿತು.

ಇಲ್ಲಿನ ತ್ರಿಪುರವಾಸಿನಿ, ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿರುವ 13ನೇ ಆವೃತ್ತಿಯ ಮೇಳಕ್ಕೆ ಶನಿವಾರ ಚಾಲನೆ ದೊರೆಯಿತು. ಮೇಳದಲ್ಲಿ 50ಕ್ಕೂ ಅಧಿಕ ಶಿಕ್ಷಣ ಸಂಸ್ಥೆಗಳ ಮಳಿಗೆಗಳಿವೆ. 16 ವಿಶ್ವವಿದ್ಯಾಲಯಗಳು ಹಾಗೂ 34 ಕಾಲೇಜುಗಳು ಪಾಲ್ಗೊಂಡಿವೆ. ಕಾಲೇಜುಗಳಲ್ಲಿನ ಸೌಲಭ್ಯ, ನೂತನ ಕೋರ್ಸ್‌ಗಳು, ಪ್ರವೇಶ ಶುಲ್ಕ, ಉದ್ಯೋಗಾವಕಾಶ ಸೇರಿ ಹಲವು ಮಾಹಿತಿಗಳನ್ನು ವಿದ್ಯಾರ್ಥಿಗಳು ಹಾಗೂ ಪಾಲಕರು ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳಿಂದ ಪಡೆದುಕೊಂಡರು.

ಬೆಳಿಗ್ಗೆ ನೋಂದಣಿ ಪ್ರಕ್ರಿಯೆಯೊಂದಿಗೆ ಮೇಳ ಆರಂಭವಾಯಿತು. ಉದ್ಘಾಟನೆ ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳು ಹಾಗೂ ಪೋಷಕರು ಎಂ.ಎಸ್. ರಾಮಯ್ಯ, ಪಿಇಎಸ್, ಆರ್.ವಿ ಸೇರಿ ವಿವಿಧ ಶಿಕ್ಷಣ ಸಂಸ್ಥೆಗಳು ತೆರೆದಿದ್ದ ಮಳಿಗೆಗಳತ್ತ ಹೆಜ್ಜೆ ಹಾಕಿದರು. ಅವರ ನಿರೀಕ್ಷೆಗಳನ್ನು ತಣಿಸಲೆಂದೇ ಕಾಯ್ದಿದ್ದ ಮಳಿಗೆಯ ಪ್ರತಿನಿಧಿಗಳು, ತಮ್ಮ ಕಾಲೇಜುಗಳಲ್ಲಿ ನೀಡುವ ಸೌಲಭ್ಯಗಳು, ಶೈಕ್ಷಣಿಕ ಗುಣಮಟ್ಟ, ಬೋಧಕರ ಬದ್ಧತೆ, ಕ್ಯಾಂಪಸ್‌ನ ವೈಶಿಷ್ಟ್ಯ, ಕ್ಯಾಂಪಸ್ ಸಂದರ್ಶನ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಿಳಿಸಿದರು.

ಕುತೂಹಲ ತಣಿಸಿದ ಮೇಳ: ಮೇಳದಲ್ಲಿ ವಿದ್ಯಾರ್ಥಿಗಳು ಮತ್ತು ಅವರ ಪೋಷಕರು ಕಾಲೇಜುಗಳ ಬಗ್ಗೆ ವಿಚಾರಿಸಿ, ಶುಲ್ಕ ವಿವರ ತಿಳಿದುಕೊಳ್ಳುವ ಕುತೂಹಲವನ್ನು ತೋರಿದರು. ಕೋರ್ಸ್ ಮುಗಿದ ನಂತರ ಕ್ಯಾಂಪಸ್ ಸಂದರ್ಶನದಲ್ಲಿ ಉದ್ಯೋಗ ದೊರೆತರೆ ವೇತನ ಎಷ್ಟು ಸಿಗಬಹುದೆಂಬ ಲೆಕ್ಕಾಚಾರವೂ ಅವರ ಮಾತುಗಳಲ್ಲಿತ್ತು.

ಮೇಳದಲ್ಲಿ ಭಾಗವಹಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚಿನವು ಎಂಜಿನಿಯರಿಂಗ್ ಕಾಲೇಜುಗಳೇ ಆಗಿದ್ದವು. ಕಡಿಮೆ ಬಡ್ಡಿದರದಲ್ಲಿ ಸಿಗುವ ಸಾಲ ಸೌಲಭ್ಯಗಳ ಬಗ್ಗೆ ಬ್ಯಾಂಕ್‌ಗಳ ಪ್ರತಿನಿಧಿಗಳು ಮಾಹಿತಿ ನೀಡಿದರು. ಪ್ರದರ್ಶನ ಅಂಗಣದೊಳಗೆ ಹಲವಾರು ವಿದ್ಯಾಸಂಸ್ಥೆಗಳು, ವಿಶ್ವವಿದ್ಯಾಲಯಗಳು ಟಿ.ವಿ ಪರದೆ, ಕೈಪಿಡಿ, ಮಾಹಿತಿ ಪತ್ರ ನೀಡುವ ಮೂಲಕ ವಿದ್ಯಾರ್ಥಿಗಳನ್ನು ಸೆಳೆದರು.

‘ಯಾವ ಕೋರ್ಸ್ ಹಾಗೂ ಯಾವ ಕಾಲೇಜ ಅನ್ನು ಆಯ್ಕೆ ಮಾಡಿಕೊಳ್ಳುವುದು ಒಳಿತು ಎಂಬ ನಿರ್ಧಾರಕ್ಕೆ ಬರಲು ಈ ಶಿಕ್ಷಣ ಮೇಳ ನೆರವಾಯಿತು’ ಎಂದು ಹಲವು ವಿದ್ಯಾರ್ಥಿಗಳು ಹಾಗೂ ಪಾಲಕರು ಮೆಚ್ಚುಗೆ ವ್ಯಕ್ತಪಡಿಸಿದರು.



‘ಎಡ್ಯುವರ್ಸ್’ ಶಿಕ್ಷಣ ಮೇಳದಲ್ಲಿ ಪಾಲ್ಗೊಂಡವರು ಮಳಿಗೆಗಳಲ್ಲಿ ಕೋರ್ಸ್‌ಗಳು ಹಾಗೂ ಕಾಲೇಜುಗಳ ಬಗ್ಗೆ ವಿಚಾರಿಸಿದರು. –ಪ್ರಜಾವಾಣಿ ಚಿತ್ರಗಳು



ಸಿಇಟಿ, ಕಾಮೆಡ್–ಕೆ, ವಿವಿಧ ಕಾಲೇಜುಗಳು, ಕೋರ್ಸ್‌ಗಳ ಬಗ್ಗೆ ತಿಳಿದುಕೊಳ್ಳಲು ‘ಎಡ್ಯುವರ್ಸ್’ ಉತ್ತಮ ವೇದಿಕೆ. ವಿದ್ಯಾರ್ಥಿಗಳಿಗೆ ಅಗತ್ಯ ಮಾರ್ಗದರ್ಶನ, ಸಲಹೆಗಳನ್ನು ಈ ವೇದಿಕೆ ಒದಗಿಸುತ್ತಿದೆ.

ಡಾ.ಪಿ.ಶ್ಯಾಮರಾಜು,
ರೇವಾ ವಿಶ್ವವಿದ್ಯಾಲಯದ ಕುಲಪತಿ

ದಿನವಿಡೀ ಅಚ್ಚರಿ ಉಡುಗೊರೆ

ನೋಂದಾಯಿತರಿಗೆ ದಿನವಿಡೀ ಅಚ್ಚರಿ ಉಡುಗೊರೆ ಪಡೆಯುವ ಅವಕಾಶ ನೀಡಲಾಗಿತ್ತು. ನೀಟ್ ಅಣಕು ಪರೀಕ್ಷೆ ನಡೆಸಲಾಯಿತು. ಭಾನುವಾರ ಸಿಇಟಿ ಅಣುಕು ಪರೀಕ್ಷೆ ನಡೆಸಲಾಗುತ್ತದೆ. ಟಾಪರ್ಸ್‌ಗಳಿಗೆ ಒಟ್ಟು ₹ 2 ಲಕ್ಷ ನಗದು ಗೆಲ್ಲುವ ಅವಕಾಶವಿದೆ. ಅಣಕು ‘ನೀಟ್’ ಮತ್ತು ‘ಸಿಇಟಿ’ನಲ್ಲಿ ಮೊದಲ ಸ್ಥಾನ ಪಡೆದವರಿಗೆ ತಲಾ ₹25 ಸಾವಿರ, ಎರಡನೇ ಸ್ಥಾನ ಪಡೆದವರಿಗೆ ತಲಾ ₹15 ಸಾವಿರ, ಮೂರನೇ ಸ್ಥಾನ ಪಡೆದವರಿಗೆ ತಲಾ ₹10 ಸಾವಿರ ಬಹುಮಾನ ನೀಡಲಾಗುತ್ತದೆ. ಜತೆಗೆ, ಅಧಿಕ ಅಂಕಗಳಿಸಿದ 25 ವಿದ್ಯಾರ್ಥಿಗಳಿಗೆ ತಲಾ ₹2 ಸಾವಿರ ನೀಡಲಾಗುತ್ತದೆ.

ಅಂಚೆ ನೌಕರರ ಮಕ್ಕಳ ಶಿಬಿರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ನೌಕರರ ಮಕ್ಕಳಿಗಾಗಿ ಹಮ್ಮಿಕೊಂಡಿರುವ ಬೇಸಿಗೆ ರಂಗಶಿಬಿರವನ್ನು ರಂಗ ನಿರ್ದೇಶಕ ಮೈಕೊ ಶಿವಶಂಕರ್ ಅವರು ಚಂಡೆ ಬಾರಿಸುವ ಮೂಲಕ ಶನಿವಾರ ಉದ್ಘಾಟಿಸಿದರು.

ದಿವಂಗತ ಸಂಚಾರಿ ವಿಜಯ್ ನೆನಪಿನಲ್ಲಿ ರಂಗ ಚಂದಿರ ಟ್ರಸ್ಟ್ ವತಿಯಿಂದ ಕಾವಲ್‌ಬೈರಸಂದ್ರದಲ್ಲಿ ಈ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಮೈಕೊ ಶಿವಶಂಕರ್, ‘ಸಾಮಾಜಿಕ ಬದ್ಧತೆಗೆ ಮುಗ್ಧತೆ ಬೇಕು. ಇದನ್ನು ರಂಗಭೂಮಿ ಕಲಿಸುತ್ತದೆ. ಮಗುವಿನಲ್ಲಿರುವ ಮುಗ್ಧತೆಯನ್ನು ಕಾಪಾಡಲು ರಂಗಶಿಬಿರ ನೆರವಾಗಲಿದೆ. ಪ್ರತಿಯೊಂದನ್ನು ಸಮಾಜಕ್ಕೆ ತಿಳಿಸುವ ಹಾಗೂ ಸಮಾಜದಿಂದ ಬರುವ ಎಲ್ಲ ಅಭಿಪ್ರಾಯಗಳನ್ನು ಸ್ವೀಕರಿಸುವ ಮನೋಭಾವ ಕಲಾವಿದರಲ್ಲಿ ಇರಬೇಕು’ ಎಂದರು.

ಸವಿಗಾನ ಮಂಜು, ಆರ್.ಕೆ. ಹೆಗಡೆ, ಶೋಭಾ ಶ್ರೀನಿವಾಸ್, ಮಾಗಡಿ ಗಿರೀಶ್, ಶ್ರೀಧರ್ ಗೌಡ, ಜಿಪಿಓ ಚಂದ್ರು ಹಾಜರಿದ್ದರು.



ನಗರದ ಕಾವಲ್‌ಬೈರಸಂದ್ರದಲ್ಲಿ ಅಂಚೆ ನೌಕರರ ಮಕ್ಕಳಿಗಾಗಿ ಹಮ್ಮಿಕೊಂಡಿರುವ ಬೇಸಿಗೆ ರಂಗ ಶಿಬಿರವನ್ನು ರಂಗ ನಿರ್ದೇಶಕ ಮೈಕೊ ಶಿವಶಂಕರ್ ಅವರು ಚಂಡೆ ಬಾರಿಸುವ ಮೂಲಕ ಶನಿವಾರ ಉದ್ಘಾಟಿಸಿದರು

ಸುಡಾನ್: ಕನ್ನಡಿಗರ ರಕ್ಷಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಡಾನ್ ದೇಶದಲ್ಲಿ ಸಿಲುಕಿದ ಕನ್ನಡಿಗರ ರಕ್ಷಣೆಗೆ ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ ವಿದೇಶಾಂಗ ಇಲಾಖೆ ಮುಂದಾಗಬೇಕು. ಇದಕ್ಕೆ ಸುಡಾನ್‌ನಲ್ಲಿ ಇರುವ ಭಾರತೀಯ ರಾಯಭಾರ ಕಚೇರಿ ಸಹಾಯವನ್ನು ಪಡೆದುಕೊಂಡು, ಕನ್ನಡಿಗರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಆಗ್ರಹಿಸಿದ್ದಾರೆ.

‘ರಾಜ್ಯದ 31 ಮಂದಿ ಸುಡಾನ್‌ನಲ್ಲಿ ಸಿಲುಕಿರುವ ಮಾಹಿತಿಯಿದೆ. ಅಲ್ಲಿಗೆ ತೆರಳಿರುವ ಕನ್ನಡಿಗರೆಲ್ಲರೂ ರಾಜ್ಯದ ಹಕ್ಕಿ ಪಿಕ್ಕಿ ಜನಾಂಗದವರಾಗಿದ್ದಾರೆ. ಈ ಸಮುದಾಯದ ಜನರು ಆಯುರ್ವೇದ ಔಷಧ, ಗಿಡಮೂಲಿಕೆ ಹಾಗೂ ನಾಟಿ ಔಷಧ ಮಾರಾಟಕ್ಕಾಗಿ ಪ್ರತಿ ವರ್ಷ ಆಫ್ರಿಕಾದ ಹಲವು ದೇಶಗಳಿಗೆ ಭೇಟಿ ನೀಡುತ್ತಾರೆ. ಕೆಲವು ತಿಂಗಳ ಕಾಲ ಅಲ್ಲಿಯೇ ಇದ್ದು ತಮ್ಮ ವ್ಯಾಪಾರವನ್ನು ಮಾಡುತ್ತಾರೆ. ಈ ಪರಿಪಾಠವನ್ನು ಈ ಜನರು ಹಲವು ದಶಕಗಳಿಂದ ನಡೆಸಿಕೊಂಡು ಬಂದಿದ್ದಾರೆ. ಈ ಬಾರಿ ಕೂಡಾ ಆಫ್ರಿಕಾದ ಹಲವು ದೇಶಗಳಿಗೆ ಹಕ್ಕಿ ಪಿಕ್ಕಿ ಜನರು ಹೋಗಿದ್ದು, ಸುಡಾನ್‌ಗೆ ತೆರಳಿದ್ದ 31 ಜನರು ಸದ್ಯ ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ಹೇಳಿದ್ದಾರೆ.

‘ಯಾವುದೇ ಮುನ್ಸೂಚನೆ ಇಲ್ಲದೇ ದಿಢೀರ್ ಆರಂಭವಾದ ಸಂಘರ್ಷದಿಂದಾಗಿ ದಿಕ್ಕು ತೋಚದಂತಾಗಿರುವ ಕನ್ನಡಿಗರನ್ನು ಆದಷ್ಟು ಬೇಗ ತವರಿಗೆ ವಾಪಸ್ ಕರೆಸಿಕೊಳ್ಳಬೇಕು. ಕಳೆದ ಮೂರ್ನಾಲ್ಕು ದಿನಗಳಿಂದ ಅವರಿಗೆ ಅನ್ನ ಆಹಾರ ಸಿಗುತ್ತಿಲ್ಲ. ನಿರಂತರವಾಗಿ ಗುಂಡಿನ ದಾಳಿ, ಕ್ಷಿಪಣಿ ದಾಳಿ, ಬಾಂಬ್ ದಾಳಿಯ ಸದ್ದಿಗೆ ಅವರು ಹೆದರಿದ್ದಾರೆ. ತಾವು ನೆಲೆಸಿದ್ದ ಮನೆಯ ಅಕ್ಕಪಕ್ಕದ ನಿವಾಸಿಗಳ ಬಳಿ ಕಾಡಿ ಬೇಡಿ ಆಹಾರ, ನೀರು ಪಡೆದಿರುವುದಾಗಿ ಹಕ್ಕಿ ಪಿಕ್ಕಿ ಜನರು ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಭಾರತೀಯ ರಾಯಭಾರ ಕಚೇರಿ ತುರ್ತು ಕ್ರಮ ಕೈಗೊಂಡು, ಕನ್ನಡಿಗರ ರಕ್ಷಣೆ ಮಾಡಬೇಕು’ ಎಂದು ಆಗ್ರಹಿಸಿದ್ದಾರೆ.



ವರ್ಚುವಲ್ ಕ್ಲಿನಿಕ್ ಕಮಾಂಡ್ ಸೆಂಟರ್‌ಗೆ ಭೇಟಿ ನೀಡಿದ್ದ ಕುನಾಲ್‌ಕುಮಾರ್ ಮಾಹಿತಿ ಪಡೆದುಕೊಂಡರು

ವರ್ಚುವಲ್ ಕಮಾಂಡ್ ಸೆಂಟರ್: ಮೆಚ್ಚುಗೆ

ಬೆಂಗಳೂರು: ಸದಾಶಿವನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಸ್ಥಾಪಿಸಿರುವ ವರ್ಚುವಲ್ ಕ್ಲಿನಿಕ್ ಕಮಾಂಡ್ ಸೆಂಟರ್‌ಗೆ ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕ ಕುನಾಲ್‌ಕುಮಾರ್ ಭೇಟಿ ನೀಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕೇಂದ್ರ ಸ್ಮಾರ್ಟ್ ಸಿಟಿ ಯೋಜನಾ ವಿಭಾಗದ ನಿರ್ದೇಶಕರೂ ಆಗಿರುವ ಅವರು, ಕಮಾಂಡ್ ಸೆಂಟರ್ ಮೂಲಕ 27 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿದ್ದ ಕೆಲ ರೋಗಿಗಳ ತಪಾಸಣೆ ನಡೆಸಿದರು. ‘ಇದು ನಿಜಕ್ಕೂ ಸ್ಮಾರ್ಟ್ ಸಿಟಿ ಪರಿಕಲ್ಪನೆಗೆ ತಕ್ಕ ಯೋಜನೆ. ಇಂತಹ ಉಪಕ್ರಮ ಬೇರೆಲ್ಲೂ ಇಲ್ಲ’ ಎಂದರು.

ರಾಜ್ಯದ ಸ್ಮಾರ್ಟ್‌ಸಿಟಿ ಯೋಜನಾ ನಿರ್ದೇಶಕ ಶ್ರೀನಿವಾಸ್ ಇದ್ದರು.

ಲಕ್ಕಸಂದ್ರ: ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭರವಸೆ

'25 ಸಾವಿರ ಪೌರಕಾರ್ಮಿಕರ ಕಾಯಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಎಲ್ಲ 25 ಸಾವಿರ ಪೌರ ಕಾರ್ಮಿಕರನ್ನು ಕಾಯಂಗೊಳಿಸಲಾಗುವುದು' ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಭರವಸೆ ನೀಡಿದರು.

ಲಕ್ಕಸಂದ್ರದಲ್ಲಿ ಶನಿವಾರ ಪೌರ ಕಾರ್ಮಿಕರ ಜೊತೆ ಸಂವಾದ ನಡೆಸಿದ ಅವರು, 'ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸುವ ಕೈಗಳು ಇನ್ನೂ ಸಂಕಷ್ಟದಲ್ಲಿವೆ. ಹೀಗಾಗಿ ಪೌರಕಾರ್ಮಿಕರನ್ನು ಬದುಕು ಸುಧಾರಿಸಲು ಅಗತ್ಯವಾದ ಕಾರ್ಯಸೂಚಿಯನ್ನು ಪಕ್ಷ ಅಳವಡಿಸಿಕೊಳ್ಳಲಿದೆ' ಎಂದರು.

'ಪೌರ ಕಾರ್ಮಿಕರು ಮತ್ತು ಕಸ ಸಂಗ್ರಹಿಸುವವರಿಗೆ ಅಪಾಯಕಾರಿ ಸಂದರ್ಭದ ವೇತನ ನೀಡಲಾಗುವುದು. ಅಲ್ಲದೆ, ಪ್ರತಿಯೊಬ್ಬ ನೌಕರನಿಗೆ ₹ 10 ಲಕ್ಷ ವಿಮೆ ಮಾಡಲಾಗುವುದು. ವಸತಿ ಸೌಲಭ್ಯ ಕಲ್ಪಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಐಪಿಡಿ ಸಾಲಪ್ಪ ಸ್ಮಾರಕ ಭವನ ನಿರ್ಮಿಸಲು ಪಕ್ಷ ಬದ್ಧವಾಗಿದೆ' ಎಂದರು.

'2013ರಿಂದ 2018ರವರೆಗೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಪೌರ ಕಾರ್ಮಿಕರ ಕನಿಷ್ಠ ವೇತನವನ್ನು ₹ 6 ಸಾವಿರದಿಂದ ₹ 21 ಸಾವಿರವರೆಗೆ ಹೆಚ್ಚಿಸಿದೆ. ಪೌರ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರು ಎಲ್ಲ ಮಾಹಿತಿಯನ್ನು ಪಡೆದುಕೊಂಡಿದ್ದು, ಈ ವರ್ಗದ ಸಮಗ್ರ ಅಭಿವೃದ್ಧಿಗಾಗಿ ಯೋಜನೆಗಳನ್ನು ರೂಪಿಸಲು ಸಲಹೆ ನೀಡಿದ್ದಾರೆ. ಹೀಗಾಗಿ, ಮುಂಬರುವ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ನಡೆಸುವ ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಕೆಲವು ಬೇಡಿಕೆಗಳನ್ನು ಈಡೇರಿಸುವ ತೀರ್ಮಾನ ತೆಗೆದುಕೊಳ್ಳುತ್ತೇವೆ' ಎಂದೂ ಅವರು ಆಶ್ವಾಸನೆ ನೀಡಿದರು.

ಬಿಟಿಎಂ ಲೇಔಟ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮಲಿಂಗಾರೆಡ್ಡಿ, ಪೌರ ಕಾರ್ಮಿಕ ಸಂಘಟನೆಗಳ ನಾಯಕರಾದ ನಾರಾಯಣ, ಅಶೋಕ, ಸ್ಥಳೀಯ ಕಾಂಗ್ರೆಸ್ ನಾಯಕರು ಇದ್ದರು.



ಪೌರಕಾರ್ಮಿಕರ ಜೊತೆ ಸಂವಾದದಲ್ಲಿ ರಣದೀಪ್ ಸಿಂಗ್ ಸುರ್ಜೇವಾಲಾ, ರಾಮಲಿಂಗಾ ರೆಡ್ಡಿ ಇದ್ದರು.

ಡಿಸಿಪಿ ನಿಂಬರಗಿ ವಿರುದ್ಧ ಕಾಂಗ್ರೆಸ್ ದೂರು

ಬೆಂಗಳೂರು: 'ಬೆಂಗಳೂರು ಪಶ್ಚಿಮ ವಿಭಾಗದ ಉಪ ಪೊಲೀಸ್ ಆಯುಕ್ತ (ಡಿಸಿಪಿ) ಲಕ್ಷ್ಮಣ್ ನಿಂಬರಗಿ ಅವರು ಪಕ್ಷಪಾತವಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರನ್ನು ವರ್ಗಾವಣೆ ಮಾಡಬೇಕು' ಎಂದು ಆಗ್ರಹಿಸಿ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಕೆಪಿಸಿಸಿ ಕಾನೂನು ಮಾನವ ಹಕ್ಕುಗಳ ಮಾಹಿತಿ ಹಕ್ಕು ವಿಭಾಗದ ರಾಜ್ಯ ಕಾರ್ಯದರ್ಶಿ ಸಂಜಯ್ ಯಾದವ್ ದೂರು ನೀಡಿದ್ದಾರೆ.

'ಗೋವಿಂದರಾಜನಗರದ ಸಚಿವರ ಕೃಪಕಟಾಕ್ಷದಿಂದ ಡಿಸಿಪಿ ಅಧಿಕಾರ ನಡೆಸುತ್ತಿದ್ದು, ಹಲವು ವರ್ಷಗಳಿಂದ ಒಂದೇ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ಬಿಜೆಪಿ ಪರ ಕೆಲಸ ಮಾಡುತ್ತಿದ್ದು, ತಮ್ಮ ವ್ಯಾಪ್ತಿಯ ಠಾಣೆಗಳಿಗೆ ತಾವೇ ಭೇಟಿ ನೀಡಿ ಕಾಂಗ್ರೆಸ್ ಕಾರ್ಯಕರ್ತರು ನಡೆಸುವ ಚುನಾವಣಾ ಪ್ರಚಾರಕ್ಕೆ ಅಡ್ಡಿ ಉಂಟು ಮಾಡುತ್ತಿದ್ದಾರೆ' ಎಂದು ದೂರಿನಲ್ಲಿ ಹೇಳಿದ್ದಾರೆ.

'ಕಾಂಗ್ರೆಸ್ ಕಾರ್ಯಕರ್ತರನ್ನು ಠಾಣೆಗೆ ಕರೆಸಿ ರೌಡಿ ಶೀಟರ್ ಪಟ್ಟಿಯಲ್ಲಿ ಹೆಸರು ಸೇರಿಸುವುದಾಗಿ ಬೆದರಿಸುತ್ತಿದ್ದಾರೆ. ತಕ್ಷಣ ಅವರನ್ನು ವರ್ಗಾವಣೆ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ಕ್ರಿಮಿನಲ್ ಮೊಕದ್ದಮೆ ದಾಖಲಿಸಿ'

ಬೆಂಗಳೂರು: 'ಪ್ರಚೋದನಕಾರಿ ಭಾಷಣ ಮಾಡಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಆಗ್ರಹಿಸಿ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಕೆಪಿಸಿಸಿ ವಕ್ತಾರ ರಮೇಶಬಾಬು ದೂರು ನೀಡಿದ್ದಾರೆ.

'ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ್ದ ಶೋಭಾ ಅವರು, ಚುನಾವಣಾ ಆಯೋಗದ ನಿಯಮ ಮತ್ತು ಕಾನೂನಿನ ನೀತಿ ನಿಯಮಗಳನ್ನು ಉಲ್ಲಂಘಿಸಿ ಕಾಂಗ್ರೆಸ್ ಪಕ್ಷದ ಮೇಲೆ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಒಬ್ಬ ಕ್ರಿಮಿನಲ್ ಎಂದು ಹೇಳಿದ್ದಾರೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಕೈಗೆ ರಕ್ತ ಅಂಟಿಕೊಂಡಿದೆ ಎಂದು ಹೇಳುವ ಮೂಲಕ ಕೋಮು ಪ್ರಚೋದನೆಗೆ ಪೂರಕ ಹೇಳಿಕೆ ನೀಡಿದ್ದಾರೆ. ಬಿಜೆಪಿ ಸಂಸದ ಪ್ರತಾಪ್ ಸಿಂಹ ಮತ್ತು ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಕೂಡಾ ಅದೇ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಈ ಬಗ್ಗೆ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಬೇಕು' ಎಂದೂ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸವಾಲಿನ ಚುನಾವಣೆ: ಡಿವಿಎಸ್

ಪ್ರಜಾವಾಣಿ ವಾರ್ತೆ

ಯಲಹಂಕ: 'ರಾಜ್ಯದಲ್ಲಿ ಈ ಬಾರಿ ಸ್ವಂತ ಶಕ್ತಿಯಿಂದ ಬಿಜೆಪಿ ಅಧಿಕಾರ ಪಡೆಯಲು ಕಾರ್ಯತಂತ್ರಗಳನ್ನು ರೂಪಿಸಲಾಗಿದೆ' ಎಂದು ಸಂಸದ ಡಿ.ವಿ. ಸದಾನಂದಗೌಡ ತಿಳಿಸಿದರು.

ಸಹಕಾರನಗರದಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ಕಾರ್ಯಾಲಯ ಉದ್ಘಾಟಿಸಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಶಾಸಕ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಮುಂಚೂಣಿ ನಾಯಕರ ನೇತೃತ್ವದಲ್ಲಿ ಚುನಾವಣೆ ಎದುರಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಕಾರ್ಯತಂತ್ರಗಳನ್ನು ರೂಪಿಸಲಾಗಿದೆ' ಎಂದು ಹೇಳಿದರು.

'ಇದೊಂದು ಸವಾಲಿನ ಚುನಾವಣೆಯಾಗಿದ್ದು, ಈ ಬಾರಿ ನಿಶ್ಚಿತವಾಗಿ ಸ್ಪಷ್ಟ ಬಹುಮತ ಗಳಿಸುವ ಮೂಲಕ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ. ಈ ಲೋಕಸಭಾ ಕ್ಷೇತ್ರವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ 7ರಲ್ಲಿ ಗೆಲುವು ಸಾಧಿಸುವ ವಿಶ್ವಾಸವಿದೆ. ಕಾರ್ಯಕರ್ತರಲ್ಲಿ ಗೆಲುವು ಸಾಧಿಸುತ್ತೇವೆ ಎಂಬ ವಿಶ್ವಾಸವಿರಲಿ. ಆದರೆ, ಅತಿಯಾದ ವಿಶ್ವಾಸವಿಟ್ಟುಕೊಂಡು ಮೈಮರೆಯುವುದು ಬೇಡ' ಎಂದರು.

'ಈ ಹಿಂದಿನ ಚುನಾವಣೆಗಳಲ್ಲಿ ಬಿಜೆಪಿ 113ರವರೆಗೂ ಸ್ಥಾನಗಳನ್ನು ಗಳಿಸಿದರೂ ಸಣ್ಣಪುಟ್ಟ ಕಾರಣಗಳಿಂದ ಕೆಲವೊಂದು ಸ್ಥಾನಗಳನ್ನು ಕಳೆದುಕೊಂಡಿದ್ದರಿಂದ ಪೂರ್ಣಪ್ರಮಾಣದಲ್ಲಿ ಅಧಿಕಾರ ನಡೆಸಲು ಸಾಧ್ಯವಾಗಲಿಲ್ಲ' ಎಂದರು. ಕ್ಷೇತ್ರದಲ್ಲಿ ಕಾರ್ಯಕರ್ತರು ಒಟ್ಟಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಯೋಜನೆ ಯಶಸ್ವಿಯಾಗಿ ಅಭ್ಯರ್ಥಿ ಗೆಲುವು ಸಾಧಿಸಲು ಸಾಧ್ಯವಾಗುತ್ತದೆ. ಬ್ಯಾಟರಾಯನಪುರದಲ್ಲಿ ಈ ಬಾರಿ ಮುಖಂಡರಾದ ಎ.ರವಿ ಮತ್ತು ಮುನೀಂದ್ರಕುಮಾರ್ ನೇತೃತ್ವದಲ್ಲಿ ಚುನಾವಣೆ ನಡೆಯಲಿದ್ದು, ಎಲ್ಲರೂ ಒಟ್ಟಾಗಿ ಕಾರ್ಯನಿರ್ವಹಿಸುವ ಮೂಲಕ ಬಿಜೆಪಿ ಅಭ್ಯರ್ಥಿ ತಮ್ಮೇಶ್ ಗೌಡರ ಗೆಲುವಿಗೆ ಶ್ರಮಿಸಬೇಕು' ಎಂದು ಕರೆ ನೀಡಿದರು.

ಅಭ್ಯರ್ಥಿ ಎಚ್.ಸಿ. ತಮ್ಮೇಶ್‌ಗೌಡ ಮಾತನಾಡಿ, 'ಕ್ಷೇತ್ರದಲ್ಲಿ ಎ.ರವಿ ಮತ್ತು ಮುನೀಂದ್ರಕುಮಾರ್ ಅವರ ಶ್ರಮದಿಂದ ಪಕ್ಷ ಸಂಘಟಿಸಿದ್ದು, ನಾನೂ ಸಹ ಕಳೆದ ಮೂರು ವರ್ಷಗಳಿಂದ ಈ ನಿಟ್ಟಿನಲ್ಲಿ ಕಾರ್ಯನಿರ್ವಹಿಸಿದ್ದೇನೆ. ಮೂವರೂ ಶಾಸಕರ ರೀತಿಯಲ್ಲಿ ಕೆಲಸ ಮಾಡಿದ್ದು, ಈ ಬಾರಿ ಬ್ಯಾಟರಾಯನಪುರದಲ್ಲಿ ಗೆಲುವು ನಿಶ್ಚಿತ. ಬಿಜೆಪಿಯನ್ನು ಅಧಿಕಾರ ಕ್ಕೆ ತರುವುದೊಂದೇ ಏಕೈಕ ಗುರಿಯಾಗಿದೆ' ಎಂದು ತಿಳಿಸಿದರು.



ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಚುನಾವಣಾ ಕಾರ್ಯಾಲಯವನ್ನು ಸಂಸದ ಡಿ.ವಿ. ಸದಾನಂದಗೌಡ ಉದ್ಘಾಟಿಸಿದರು. ಬಿಜೆಪಿ ಅಭ್ಯರ್ಥಿ ಎಚ್.ಸಿ. ತಮ್ಮೇಶ್‌ಗೌಡ, ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷ ಬಿ.ನಾರಾಯಣ್, ಮುಖಂಡರಾದ ದೊಡ್ಡಬಸವರಾಜು, ಪಿ.ಕೆ.ರಾಜಗೋಪಾಲ್, ಕಿರಣ್ ಬಾಬು, ಟಿ.ಪಿ.ಪ್ರಕಾಶ್, ಅಶ್ವಥನಾರಾಯಣಗೌಡ, ಶೋಭಾ, ಸುಮಾ, ಪೂರ್ಣಿಮಾ ಇದ್ದರು

'ಅಧಿಕಾರಕ್ಕೆ ಬಂದರೆ ಮುನಿಯಪ್ಪ ಸಿ.ಎಂ'

ವಿಜಯಪುರ (ದೇವನಹಳ್ಳಿ): ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇವನಹಳ್ಳಿ ಕಾಂಗ್ರೆಸ್ ಅಭ್ಯರ್ಥಿ ಕೆ.ಎಚ್.ಮುನಿಯಪ್ಪ ಮುಖ್ಯಮಂತ್ರಿ, ಇಲ್ಲವೇ ಉಪ ಮುಖ್ಯಮಂತ್ರಿಯಾಗುತ್ತಾರೆ ಎಂದು ಮಾಜಿ ಸಂಸದ ವೀರಪ್ಪ ಮೊಯಿಲಿ ಹೇಳಿದ್ದಾರೆ.

ಮಂಡಿಬೆಲೆ ಗ್ರಾಮದಲ್ಲಿ ಶನಿವಾರ ಮಾತನಾಡಿದ ಅವರು, ಕೆ.ಎಚ್.ಮುನಿಯಪ್ಪ ಮುಖ್ಯಮಂತ್ರಿ ಆಗುವ ಎಲ್ಲ ಅರ್ಹತೆ ಹೊಂದಿದ್ದಾರೆ. ಇಂತಹ ವ್ಯಕ್ತಿ ಈ ಕ್ಷೇತ್ರದ ಅಭ್ಯರ್ಥಿಯಾಗಿದ್ದಾರೆ ಎಂದರು.

ರಾಜ್ಯಕ್ಕೆ ಪದೇ ಪದೇ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಹಾಗೂ ಗೃಹ ಸಚಿವ ಅಮಿತ್ ಶಾ ಬಂದು ಕೈ ಬೀಸಿ ಹೋದರೆ ಜನರು ಮರಳಾಗುವುದಿಲ್ಲ. ಅವರು ಹೋಗಿ ಬಂದಿರುವ ಎಲ್ಲಾ ರಾಜ್ಯಗಳಲ್ಲಿ ಬಿಜೆಪಿ ಸೋತಿದೆ. ಕರ್ನಾಟಕದಲ್ಲಿ ಅವರ ಆಟ ನಡೆಯುವುದಿಲ್ಲ ಎಂದರು.

₹ 7.30 ಕೋಟಿ ಮೌಲ್ಯದ ಸ್ವತ್ತುಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ರಚಿಸಿರುವ ಜಾಗೃತ ದಳಗಳು ಮತ್ತು ತನಿಖಾ ಠಾಣೆಗಳಲ್ಲಿ ಶುಕ್ರವಾರ ಒಂದೇ ದಿನ ₹ 7.30 ಕೋಟಿ ಮೌಲ್ಯದ ನಗದು ಹಾಗೂ ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

₹ 1.81 ಕೋಟಿ ನಗದು, ₹ 37.64 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹ 4.44 ಕೋಟಿ ಮೌಲ್ಯದ 99,426 ಲೀಟರ್ ಮದ್ಯ, ₹ 42.25 ಲಕ್ಷ ಮೌಲ್ಯದ 92 ಕೆ.ಜಿ. ಮಾದಕವಸ್ತು ಮತ್ತು ₹ 21.45 ಲಕ್ಷ ಮೌಲ್ಯದ 27.87 ಕೆ.ಜಿ. ಬೆಳ್ಳಿಯನ್ನು ಶುಕ್ರವಾರ ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದೆ.

ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಈವರೆಗೆ ಒಟ್ಟು ₹ 253.06 ಕೋಟಿ ಮೌಲ್ಯದ ನಗದು ಮತ್ತು ಇತರ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ₹82.05 ಕೋಟಿ ನಗದು, ₹ 56.67 ಕೋಟಿ ಮೌಲ್ಯದ 14.94 ಲಕ್ಷ ಲೀಟರ್ ಮದ್ಯ, ₹ 16.55 ಕೋಟಿ ಮೌಲ್ಯದ 1,176 ಕೆ.ಜಿ. ಮಾದಕವಸ್ತು, ₹ 73.80ಕೋಟಿ ಮೌಲ್ಯದ 145.55 ಕೆ.ಜಿ. ಚಿನ್ನ, ₹ 4.28 ಕೋಟಿ ಮೌಲ್ಯದ 609.76 ಕೆ.ಜಿ. ಬೆಳ್ಳಿ, ₹ 19.69 ಕೋಟಿ ಮೌಲ್ಯದ ಉಚಿತ ಕೊಡುಗೆಗಳು ಇದರಲ್ಲಿ ಸೇರಿವೆ ಎಂದು ಮುಖ್ಯ ಚುನಾವಣಾಧಿಕಾರಿ ತಿಳಿಸಿದ್ದಾರೆ.

ಚುನಾವಣಾ ಅಕ್ರಮದ ಆರೋಪದ ಮೇಲೆ 1,873 ಎಫ್‌ಐಆರ್ ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆಯಡಿ ಒಟ್ಟು 15,477 ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ವಿವರ ನೀಡಿದ್ದಾರೆ.

ಹೋಮ ಕೈಂಕರ್ಯ: ಡಿಕೆಶಿ ದಂಪತಿ ಭಾಗಿ

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ಶೃಂಗೇರಿಯ ಶಾರದಾಂಬೆ ಸನ್ನಿಧಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪತ್ನಿ ಉಷಾ, ಪುತ್ರಿ ಆಭರಣ, ಪುತ್ರ ಆಕಾಶ್ ಶನಿವಾರ ಪೂಜೆ ಸಲ್ಲಿಸಿದರು.

ಚಂಡಿಕಾ ಹೋಮ, ನವಚಂಡಿ ಪಾರಾಯಣ, ನವಗ್ರಹ ಪ್ರಾರ್ಥನೆ ಮತ್ತು ಗುರುವಂದನೆ ಸಂಕಲ್ಪವನ್ನು ದಂಪತಿ ಮಾಡಿದರು.

ಶಾರದಾ ಪೀಠದ ವಿಧುಶೇಖರ ಭಾರತೀ ಸ್ವಾಮೀಜಿ ಅವರ ಆಶೀರ್ವಾದ ಪಡೆದರು.

'ಲೋಕ ಕಲ್ಯಾಣಾರ್ಥ, ನಾಡಿನಲ್ಲಿ ಮಳೆ, ಬೆಳೆ ಚೆನ್ನಾಗಿ ಆಗಲಿ ಎಂದು ಪೂಜೆ, ಹೋಮ ನೆರವೇರಿಸಿದ್ದೇವೆ' ಎಂದು ಶಿವಕುಮಾರ್ ಹೇಳಿದರು.

'ಖಾಸಗಿ ಉದ್ಯೋಗಕ್ಕೂ ಸರ್ಕಾರದ ಮಧ್ಯಸ್ಥಿಕೆ' (ಉಜಿರೆ, ದಕ್ಷಿಣ ಕನ್ನಡ): 'ಖಾಸಗಿ ಸಂಸ್ಥೆಗಳ ನೇಮಕಾತಿಯಲ್ಲೂ ಸರ್ಕಾರ ಮಧ್ಯಸ್ಥಿಕೆ ವಹಿಸಬೇಕು ಎಂಬ ಸಲಹೆಯನ್ನು ಯುವಕರೊಬ್ಬರು ನೀಡಿದ್ದಾರೆ. ಪಕ್ಷದ ಪ್ರಣಾಳಿಕೆಯಲ್ಲಿ ಈ ಕುರಿತ ಭರವಸೆ ನೀಡಲಿದ್ದೇವೆ. ಯುವಕರ ಉದ್ಧಾರ, ಹಸಿವು ಮುಕ್ತ ಕರ್ನಾಟಕ ಬಗ್ಗೆ ಪಕ್ಷ ಚಿಂತನೆ ನಡೆಸುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಜೆಪಿಯ ಮೂವರು ನಾಯಕರು ತಮ್ಮ ವಿರುದ್ಧ ಮಾನಹಾನಿಕರ ಸುದ್ದಿ ಪ್ರಕಟಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ' ಎಂದು ಹೇಳಿದರು.



ಚಿಕ್ಕಮಗಳೂರು ಜಿಲ್ಲೆ ಶೃಂಗೇರಿಯ ಶಾರದಾಂಬೆ ಸನ್ನಿಧಿಯಲ್ಲಿ ಶನಿವಾರ ಡಿ.ಕೆ.ಶಿವಕುಮಾರ್ ಮತ್ತು ಅವರ ಪತ್ನಿ ಉಷಾ ಅವರು ಹೋಮ ಸಂಕಲ್ಪ ನೆರವೇರಿಸಿದರು

ವಿಜಯಪುರಕ್ಕೆ ರಾಹುಲ್ ಭೇಟಿ ಇಂದು

ಪ್ರಜಾವಾಣಿ ವಾರ್ತೆ

ವಿಜಯಪುರ: ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಭಾನುವಾರ ಬಾಗಲಕೋಟೆ, ವಿಜಯಪುರಕ್ಕೆ ಭೇಟಿ ನೀಡಲಿದ್ದಾರೆ. ಬೆಳಿಗ್ಗೆ 10.50ಕ್ಕೆ ವಿಶೇಷ ವಿಮಾನದಲ್ಲಿ ಹುಬ್ಬಳ್ಳಿಗೆ ಬರಲಿರುವ ರಾಹುಲ್, ಹೆಲಿಕಾಪ್ಟರ್ ಮೂಲಕ ಕೂಡಲಸಂಗಮಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 11.50ಕ್ಕೆ ಕೂಡಲಸಂಗಮಕ್ಕೆ ಭೇಟಿ ನೀಡಿ, ಸಂಗಮನಾಥ ಮತ್ತು ಐಕ್ಯ ಮಂಟಪ ದರ್ಶನ ಪಡೆದು, ನಂತರ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಸವ ಮಂಟಪದಲ್ಲಿ ನಡೆಯುವ ಕಾರ್ಯಕ್ರಮ ದಲ್ಲಿ ಗದುಗಿನ ತೋಂಟದಾರ್ಯ ಮಠದ ತೋಂಟದಾರ್ಯ ಸಿದ್ಧರಾಮ ಸ್ವಾಮೀಜಿ, ಇಳಕಲ್ ಚಿತ್ತರಗಿ ಸಂಸ್ಥಾನಮಠದ ಗುರುಮಹಾಂತ ಸ್ವಾಮೀಜಿ, ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ, ಬಾಲ್ಕಿಯ ಬಸವಲಿಂಗ ಪಟ್ಟದ್ದೇವರು, ಜ್ಞಾನಯೋಗಾಶ್ರಮದ ಬಸವಲಿಂಗ ಸ್ವಾಮೀಜಿ ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಸ್ವಾಮೀಜಿಗಳು ಉಪಸ್ಥಿತರಿರಲಿದ್ದಾರೆ' ಎಂದರು.

ವಿಜಯಪುರದಲ್ಲಿ ರೋಡ್ ಶೋ: ಸಂಜೆ 5 ರಿಂದ 6.30ರ ವರೆಗೆ ವಿಜಯಪುರ ನಗರದಲ್ಲಿ ರೋಡ್ ಶೋ ನಡೆಸಲಿದ್ದಾರೆ. ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ' ಎಂದು ಅವರು ಹೇಳಿದರು.

ನಡ್ಡಾ ಕ್ಷಮೆಯಾಚನೆಗೆ ಲೇಖಕರ ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದ ಅಭಿವೃದ್ಧಿಯು ನಿರಂತರವಾಗಿ ಹರಿಯಲು ನಿಮಗೆ ಮೋದಿ ಅವರ ಆಶೀರ್ವಾದ ಬೇಕು' ಎಂದು ಹೇಳಿಕೆ ನೀಡಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಜನರ ಕ್ಷಮೆಯಾಚಿಸಬೇಕು ಎಂದು ಕನ್ನಡದ ಲೇಖಕರು ಆಗ್ರಹಿಸಿದ್ದಾರೆ.

'ಬಿಜೆಪಿಗೆ ಮತ ಹಾಕದಿದ್ದರೆ ಕರ್ನಾಟಕ ಅಭಿವೃದ್ಧಿ ಹೊಂದುವುದಿಲ್ಲ' ಎಂಬ ಬೆದರಿಕೆಯನ್ನು ಮತದಾರರಿಗೆ ಹಾಕುವುದರ ಜೊತೆಗೆ ಪಕ್ಷ ರಾಜಕಾರಣದಿಂದ ಹೊರಗೆ ಇರಬೇಕಾಗಿರುವ ಪ್ರಧಾನಿ ಹುದ್ದೆಯ ಘನತೆಯನ್ನು ಸಂಕುಚಿತಗೊಳಿಸಿದ್ದಾರೆ. ನಡ್ಡಾ ಅವರ ಮಾತುಗಳು ಪ್ರಜಾಪ್ರಭುತ್ವ ಹಾಗೂ ಸಂವಿಧಾನದ ಮೇಲಿನ ದಾಳಿ ಎಂದು ದೂರಿದ್ದಾರೆ.

'ಈಗ ಕೇಂದ್ರದಲ್ಲಿರುವ ಎನ್‌ಡಿಎ ಸರ್ಕಾರವು ರಾಜ್ಯ ಸರ್ಕಾರದ ಹಕ್ಕುಗಳನ್ನು ಹಂತ ಹಂತವಾಗಿ ಮೊಟಕುಗೊಳಿಸುತ್ತಲೇ ಇದೆ. ಇದಕ್ಕೆ ಪೂರಕವಾಗಿಯೇ ನಡ್ಡಾ ಅವರ ಮಾತುಗಳು ಬಂದಿವೆ. ಇದು ಅಂತಿಮವಾಗಿ ಭಾರತದ ಬಹುತ್ವವನ್ನು ನಾಶಪಡಿಸುತ್ತದೆ' ಎಂದು ಲೇಖಕರಾದ ಪ್ರೊ. ಕೆ.ಎಂ. ಮರುಳಸಿದ್ದಪ್ಪ, ಡಾ. ವಿಜಯಾ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಪ್ರೊ. ಕಾಶೀನಾಥ ಅಂಬಲಗಿ, ದಿನೇಶ್ ಅಮೀನ್ ಮಟ್ಟು, ಗಿರಿಧರ ಕಾರ್ಕಳ, ಪುರುಷೋತ್ತಮ ಬಿಳಿಮಲೆ, ಶ್ರೀನಿವಾಸ ಕಾರ್ಕಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮತದಾನ ಹಕ್ಕು ಚಲಾಯಿಸಲು ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನ ದಿನ ಹತ್ತಿರವಾಗುತ್ತಿದ್ದಂತೆ ಬಿಬಿಎಂಪಿ ಅಧಿಕಾರಿಗಳು ಜನರ ಬಳಿ ತೆರಳಿ ಜಾಗೃತಿ ಮೂಡಿಸುತ್ತಿದ್ದು, ಗೋವಿಂದ ರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಶನಿವಾರ ವಿಶೇಷ ಸಭೆ ನಡೆಸಿದರು.

ಸತ್ವಾ ಹಾಗೂ ರಹೇಜ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳ ಜೊತೆ ಅಧಿಕಾರಿಗಳು ಸಭೆ ನಡೆಸಿ ಮತದಾನ ಜಾಗೃತಿ ಮೂಡಿಸಿದರು. ಪಟ್ಟೇಗಾರಪಾಳ್ಯದಲ್ಲಿರುವ ಸೆಂಟ್ ಪಾಲ್ಸ್ ಬಿ.ಎಡ್ ಕಾಲೇಜು ವಿದ್ಯಾರ್ಥಿಗಳ ಜೊತೆ ಸಂವಾದ ನಡೆಸಿದರು.

ಆಯುಕ್ತ ಡಾ. ಆರ್.ಎಲ್.ದೀಪಕ್, 'ಮತದಾನ ಅಮೂಲ್ಯವಾದದ್ದು. ಉತ್ತಮ ಜನಪ್ರತಿನಿಧಿ ಆಯ್ಕೆಗಾಗಿ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಯುವ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ, ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸಬೇಕು' ಎಂದರು.

ಜಂಟಿ ಆಯುಕ್ತ ಲೋಕನಾಥ್, 'ಮತದಾನಕ್ಕೆ ಅಗತ್ಯವಿರುವ ಎಲ್ಲ ವ್ಯವಸ್ಥೆಯನ್ನು ಚುನಾವಣಾ ಆಯೋಗ ಮಾಡಿದೆ. ಪ್ರತಿಯೊಂದು ಮತಗಟ್ಟೆಯಲ್ಲೂ ಭದ್ರತೆ ಇರಲಿದೆ. ಜನರು ಧೈರ್ಯವಾಗಿ ಮತಗಟ್ಟೆಗಳಿಗೆ ಬಂದು ಮತದಾನ ಮಾಡಬೇಕು' ಎಂದರು.

'80 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, ಅಂಗವಿಕಲರಿಗೆ ಈ ಬಾರಿ ಮನೆಯಿಂದ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯವನ್ನು ಅರ್ಹರು ಸದುಪಯೋಗಪಡಿಸಿಕೊಳ್ಳಬೇಕು' ಎಂದರು. ಆರೋಗ್ಯ ಅಧಿಕಾರಿ ಮನೋರಂಜನ್ ಹೆಗಡೆ, ಆರೋಗ್ಯ ವೈದ್ಯಾಧಿಕಾರಿ ರಾಜೇಂದ್ರ, ನೋಡಲ್ ಅಧಿಕಾರಿ ಉಮೇಶ್ ಇದ್ದರು.



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಅಪಾರ್ಟ್‌ಮೆಂಟ್ ಸಮುಚ್ಚಯ ನಿವಾಸಿಗಳ ಜೊತೆ ಶನಿವಾರ ಸಭೆ ನಡೆಸಿದ ಬಿಬಿಎಂಪಿ ಅಧಿಕಾರಿಗಳು ಮತದಾನ ಜಾಗೃತಿ ಫಲಕಗಳನ್ನು ಪ್ರದರ್ಶಿಸಿದರು

ಪಾಲಿಕೆ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಚಾಲನೆ

ಮತದಾನ ಜಾಗೃತಿ: ಲಾಲ್‌ಬಾಗ್‌ನಲ್ಲಿ ಜಾಥಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆ ಅಂಗವಾಗಿ ಲಾಲ್‌ಬಾಗ್ ಪೂರ್ವ ದ್ವಾರದ ಬಳಿ ಶನಿವಾರ ಬಿಬಿಎಂಪಿಯಿಂದ ಕಾಲ್ನಡಿಗೆ ಜಾಥಾ ನಡೆಸಲಾಯಿತು.

ಪಾಲಿಕೆ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, 'ಮತದಾನದ ಪ್ರಮಾಣ ಹೆಚ್ಚಿಸುವ ಉದ್ದೇಶದಿಂದ ಜಾಗೃತಿ ಅಭಿಯಾನ ಮಾಡಲಾಗುತ್ತಿದೆ. ಮತದಾನ ಹಕ್ಕನ್ನು ನಾಗರಿಕರು ಚಲಾಯಿಸಬೇಕು' ಎಂದು ಸಲಹೆ ನೀಡಿದರು.

ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಬೇಕು. ದಕ್ಷಿಣ ವಲಯದ ವಿಜಯ ಕಾಲೇಜಿನಲ್ಲಿ ಸುಮಾರು 500 ಯುವ ಮತದಾರರಿದ್ದು, ಕಾಲೇಜಿಗೆ ತೆರಳಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು. ಇನ್ನೂ ಮೇ 10 ರವರೆಗೂ ಎಲ್ಲಾ ಕಾಲೇಜು, ಪ್ರಮುಖ ಸ್ಥಳಗಳಿಗೆ ಭೇಟಿ ನೀಡಿ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು ಎಂದು ತಿಳಿಸಿದರು.

ಲಾಲ್‌ಬಾಗ್ ಪೂರ್ವ ದ್ವಾರದಿಂದ (ಡಬಲ್ ರೋಡ್) ಆರಂಭವಾದ ಜಾಥಾ, ಉದ್ಯಾನದೊಳಗೆ ಸಾಗಿ ಪಶ್ಚಿಮದ್ವಾರದವರೆಗೆ ಸಾಗಿತು. ಉದ್ಯಾನದಲ್ಲಿ ನಾಗರಿಕರಿಗೆ ವಾಯು ವಿಹಾರಿಗಳಿಗೆ ಮತದಾನದ ಪ್ರತಿಜ್ಞಾವಿಧಿ ಬೋಧಿಸಿಲಾಯಿತು.

ಬೀದಿ ನಾಟಕ: ಹಾಸ್ಯ ನಟ ರಮಾನಂದ ಅವರ 'ಗೆಜ್ಜೆ-ಹೆಜ್ಜೆ' ರಂಗತಂಡದಿಂದ ಬೀದಿ ನಾಟಕದ ಮೂಲಕ ಮತದಾನ ಜಾಗೃತಿ ಮೂಡಿಸಲಾಯಿತು. ವಲಯ ಜಂಟಿ ಆಯುಕ್ತ ಜಗದೀಶ್ ಕೆ. ನಾಯಕ್, ಸ್ವೀಪ್ ನೋಡಲ್ ಅಧಿಕಾರಿ ಸಿದ್ದೇಶ್ವರ್, ಉಪ ಆಯುಕ್ತೆ ಲಕ್ಷ್ಮೀ ದೇವಿ, ಕಂದಾಯ ಅಧಿಕಾರಿ, ಎನ್‌ಸಿಸಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಬಿಬಿಎಂಪಿಯಿಂದ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಮತದಾನ ಜಾಗೃತಿಯಲ್ಲಿ ಕಲಾ ತಂಡದ ಸದಸ್ಯರು ನಾಟಕ ಪ್ರದರ್ಶಿಸಿದರು

ಮಣಿಪಾಲ್ ಆಸ್ಪತ್ರೆಗೆ ಎಚ್‌ಡಿಕೆ ದಾಖಲು

ರಾಮನಗರ: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಜ್ವರದಿಂದ ಬಳಲುತ್ತಿದ್ದು, ಚಿಕಿತ್ಸೆಗಾಗಿ ಶನಿವಾರ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಿರಂತರ ಪ್ರವಾಸ ಹಾಗೂ ಕಾರ್ಯಕ್ರಮಗಳ ಒತ್ತಡದಿಂದ ಕುಮಾರಸ್ವಾಮಿ ಬಳಲಿದ್ದು, ವೈದ್ಯರ ಸಲಹೆ ಮೇರೆಗೆ ಆಸ್ಪತ್ರೆಗೆ ಸೇರಿದ್ದಾರೆ. ಒಂದಿಷ್ಟು ವಿಶ್ರಾಂತಿಯ ಬಳಿಕಮತ್ತೆ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಳ್ಳುವುದಾಗಿ ಅವರು ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಬಿಜೆಪಿ ದೇಶದಲ್ಲಿ ಕಲಹ ಸೃಷ್ಟಿಸುತ್ತಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ಕಲಹ ಸೃಷ್ಟಿಸುತ್ತಿರುವ ಬಿಜೆಪಿಯು ಸಾಮಾಜಿಕ ಸಾಮರಸ್ಯ ನಾಶ ಮಾಡುತ್ತಿದೆ' ಎಂದು ಮಾಜಿ ಸಚಿವ ಬಿ. ಸೋಮಶೇಖರ್ ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರದ ಒಳಗಿರುವವರೇ ಸಂವಿಧಾನವನ್ನು ದುರ್ಬಲಗೊಳಿಸುವ ಅಪಾಯವಿದೆ ಎಂದು ಡಾ.ಬಿ.ಆರ್. ಅಂಬೇಡ್ಕರ್ ಹೇಳಿದ್ದರು. ಆ ರೀತಿಯಲ್ಲೇ ಬಿಜೆಪಿ ನಡೆದುಕೊಳ್ಳುತ್ತಿದೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವಕ್ಕೆ ಧಕ್ಕೆ ಬಂದಿದೆ. ಮೀಸಲಾತಿಯನ್ನು ಅಂತ್ಯಗೊಳಿಸುವ ಪ್ರಯತ್ನ ನಡೆಯುತ್ತಿದೆ' ಎಂದರು.

ದೇಶದಲ್ಲಿ ಹಿಂದೆಂದೂ ಕಂಡರಿಯದ ಭ್ರಷ್ಟಾಚಾರ ನಡೆಯುತ್ತಿದೆ. ಇಂತಹ ಸರ್ಕಾರಕ್ಕೆ ನೈತಿಕ ಬೆಂಬಲ ನೀಡಬಾರದು ಎಂಬ ಕಾರಣಕ್ಕಾಗಿ ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಎಚ್ಚರಿಕೆಯಿಂದ ಇರಬೇಕು. ಬಿಜೆಪಿಯ ಷಡ್ಯಂತ್ರಕ್ಕೆ ಬಲಿಯಾಗಬಾರದು ಎಂದು ಹೇಳಿದರು.

ಕೆಪಿಸಿಸಿ ವಕ್ತಾರ ರಮೇಶ್ ಬಾಬು ಮಾತನಾಡಿ, 'ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಪ್ರತಾಪ್ ಸಿಂಹ, ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಪ್ರಚೋದನಕಾರಿಯಾಗಿ ಹೇಳಿಕೆ ನೀಡುತ್ತಿದ್ದಾರೆ. ರಾಜಕೀಯ ಲಾಭಕ್ಕಾಗಿ ದ್ವೇಷ ಬಿತ್ತುತ್ತಿರುವ ಅವರ ವಿರುದ್ಧ ಕೇಂದ್ರ ಚುನಾವಣಾ ಆಯೋಗ ಮೊಕದ್ದಮೆ ದಾಖಲಿಸಬೇಕು' ಎಂದು ಆಗ್ರಹಿಸಿದರು.

ಚಿತ್ರಾವಳಿ



ಬಂಡೆಪಾಳ್ಯದ ಈದ್ಗಾ ಮೈದಾನದಲ್ಲಿ ಈದ್ ಉಲ್ ಫಿತ್ರ್ ಅಂಗವಾಗಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಬೊಮ್ಮನಹಳ್ಳಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸತೀಶ್‌ರೆಡ್ಡಿ ಭಾಗವಹಿಸಿದ್ದರು



ಗೋವಿಂದರಾಜನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಉಮೇಶ್ ಶೆಟ್ಟಿ ಅವರು ಮೂಡಲಪಾಳ್ಯ ಮುಖ್ಯ ರಸ್ತೆಯಲ್ಲಿ ಮತಯಾಚನೆ ಮಾಡಿದರು. ಮಂಡಲ ಅಧ್ಯಕ್ಷ ವಿಶ್ವನಾಥ್‌ಗೌಡ ಇದ್ದರು



ರಾಜರಾಜೇಶ್ವರಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಚ್.ಕುಸುಮಾ ಅವರು ಉಲ್ಲಾಳದಲ್ಲಿ ಶನಿವಾರ ಮತಯಾಚನೆ ಮಾಡಿದರು



ಜಯನಗರದ ಕಾರ್ಪೊರೇಷನ್ ಕಾಲೊನಿಯಲ್ಲಿ ಬಿಜೆಪಿ ಅಭ್ಯರ್ಥಿ ಸಿ.ಕೆ. ರಾಮಮೂರ್ತಿ ಪ್ರಚಾರ ನಡೆಸಿದರು —ಪ್ರಜಾವಾಣಿ ಚಿತ್ರಗಳು

ರಣಬಿಸಿಲು; ಬದುಕು ಕಂಗಾಲು

ಒಂದನೇ ಪುಟದಿಂದ

ಕೆಲ ಕಡೆ ಶಾಲೆಗಳಿಗೆ ರಜೆ ನೀಡಲಾಗಿದ್ದರೆ, ಇನ್ನೂ ಕೆಲ ಕಡೆ ಸಮಯ ಬದಲಿಸಲು ಆಯಾ ರಾಜ್ಯ ಸರ್ಕಾರಗಳು ಚಿಂತನೆ ನಡೆಸಿವೆ.

ಬಿಸಿಲಿನ ಪ್ರಮಾಣ ಈ ವರ್ಷ ಹೀಗೆ ಜಾಸ್ತಿಯಾಗಲು ಕಾರಣವೇನು ಎಂದು ಹುಡುಕಿ ಹೊರಟರೆ, 'ಮಾನವನ ದುರಾಸೆ ಮತ್ತು ಪ್ರಕೃತಿಯ ಮೇಲೆ ನಿರಂತರ ದಾಳಿಯೇ ಕಾರಣ' ಎಂಬ ಉತ್ತರ ಸಿಗುತ್ತದೆ.

'ಮಲೆನಾಡು ಪ್ರದೇಶದಲ್ಲಿ ಅರಣ್ಯ ಸಂಪತ್ತಿನ ವಿನಾಶದಿಂದ ತುಂಬಾ ಸಮಸ್ಯೆಯಾಗಿದೆ. ವಾಣಿಜ್ಯ ಉದ್ದೇಶಕ್ಕೆ ಭೂಪರಿವರ್ತನೆ ಎಗ್ಗಿಲ್ಲದೇ ನಡೆದಿದೆ. ಪಶ್ಚಿಮಘಟ್ಟಗಳನ್ನು ಉಳಿಸುವ ಬದಲು ಬೆಟ್ಟಗಳನ್ನು ಕೊರೆದು ಹೆದ್ದಾರಿ ನಿರ್ಮಾಣ, ರೈಲ್ವೆ ಯೋಜನೆ ಅನುಷ್ಠಾನ ತರಲಾಗುತ್ತಿದೆ. ಕೊಡಗಿನಲ್ಲಿ ಜನರಿಗೆ ಬೇಕಿಲ್ಲದ 7 ಹೆದ್ದಾರಿಗಳ ನಿರ್ಮಾಣಕ್ಕೆ ಅನುಮತಿ ಸಿಕ್ಕಿದೆ. ಎರಡು ಹೊಸ ರೈಲ್ವೆ ಯೋಜನೆಗಳಿಗೆ ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ. ಇದು ಕೂಡ ತಾಪಮಾನ ಹೆಚ್ಚಳಕ್ಕೆ ಕಾರಣವಾಗಿದೆ' ಎಂದು ಕೂರ್ಗ್‌ವೈಲ್ಡ್ ಲೈಫ್ ಸೊಸೈಟಿಯ ಕಾರ್ಯಕಾರಿ ಸಮಿತಿ ಸದಸ್ಯ ಚೆಪ್ಪುಡೀರ ಮುತ್ತಣ್ಣ ಬೇಸರಿಸುತ್ತಾರೆ.

ಮಲೆನಾಡು ಪ್ರದೇಶದಲ್ಲಿ ಕಾಡು ಅಪಾಯದ ಸ್ಥಿತಿ ಎದುರಿಸಿದರೆ, ಹಳೆಯ ಮೈಸೂರು ಭಾಗದ ಸುತ್ತಮುತ್ತ ವ್ಯಾಪಕವಾಗಿ ಕಲ್ಲು ಗಣಿಗಾರಿಕೆ ನಡೆದಿದೆ. ರಾಮನಗರ ಜಿಲ್ಲೆಯ ಮಾಗಡಿ–ಬೆಂಗಳೂರಿನ ಗಡಿಯುದ್ದಕ್ಕೂ ಗಣಿಗಾರಿಕೆಯಿಂದ ಬೆಟ್ಟಗಳ ಸಾಲು ಕರಗಿವೆ. ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಪ್ರದೇಶದಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ತುಮಕೂರು ಜಿಲ್ಲೆಯಲ್ಲಿ ಕಲ್ಲು ಗಣಿಗಾರಿಕೆ ಮಿತಿ ಮೀರಿದ್ದು, ಕಂಡಲೆಲ್ಲಾ ಬಂಡೆಗಳನ್ನು ಸೀಳಲಾಗುತ್ತಿದೆ. ತುಮಕೂರು ಜಿಲ್ಲೆಯಲ್ಲಿ ಅಧಿಕೃತವಾಗಿ 300ಕ್ಕೂ ಹೆಚ್ಚು ಪ್ರದೇಶಗಳಲ್ಲಿ ಮಾತ್ರ ಗಣಿಗಾರಿಕೆಗೆ ಅವಕಾಶವಿದೆ. ಆದರೆ, ಇದರ ಐದಾರು ಪಟ್ಟು ವಿವಿಧೆಡೆ ಅಕ್ರಮವಾಗಿ ಗಣಿಗಾರಿಕೆ ಮುಂದುವರೆದಿದೆ. ಇದರಿಂದ ತಂಪಾದ ವಾತಾವರಣ ಮರೆಯಾಗಿತ್ತಿದೆ. ಬಯಲು ಸೀಮೆಯ ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಗಿರಿಧಾಮದ ಸುತ್ತಮುತ್ತ ಹೆಚ್ಚಿದ ಗಣಿಗಾರಿಕೆಯಿಂದ ಹಸಿರು ವಲಯ ಪ್ರದೇಶಕ್ಕೆ ಧಕ್ಕೆಯಾಗಿದೆ. ನಂದಿ ಬೆಟ್ಟವು ಪಾಪಾಗ್ನಿ, ಪೆನ್ನಾರ್, ಪಾಲಾರ್, ಕುಮದ್ವತಿ ಮತ್ತು ಅರ್ಕಾವತಿ ನದಿಗಳ ಉಗಮ ಸ್ಥಾನವಾಗಿತ್ತು. ಈಗ ಜೀವ ಜಲ ಬತ್ತಿದೆ.

'ಮೊದಲೆಲ್ಲ ಹಸಿರು ಗಿಡಮರಗಳ ಹೊದಿಕೆಯಿಂದ ಬೆಟ್ಟ ಗುಡ್ಡಗಳಲ್ಲಿನ ಬಂಡೆಗಲ್ಲುಗಳು ಹೆಚ್ಚು ಕಾಣುತ್ತಿರಲಿಲ್ಲ. ಆದರೆ, ಮರಗಳನ್ನು ಯಥೇಚ್ಛ ಕಡಿಯುತ್ತಿರುವ ಕಾರಣ ಬಂಡೆಗಲ್ಲುಗಳು ಬಿಸಿಲಿನಿಂದ ಬಿಸಿಯಾಗುತ್ತಿವೆ. ಅವು ಹೊರಸೂಸುವ ಶಾಖದಿಂದ 1ರಿಂದ 2 ಡಿಗ್ರಿ ಸೆಲ್ಸಿಯಸ್ ತಾಪಮಾನ ಹೆಚ್ಚುತ್ತಿದೆ' ಎಂದು ಎಂದು ಕೋಲಾರದ ಪರಿಸರ ಬಳಗದ ಸಂಸ್ಥಾಪಕ ಸದಸ್ಯ ಪರಶುರಾಮೇಗೌಡ ಹೇಳುತ್ತಾರೆ.


'ತುಂಗಾ ಪಾನ, ಗಂಗಾ ಸ್ನಾನ' ನಾಣ್ಣುಡಿ ಶಿವಮೊಗ್ಗ ನಗರದ ಮಟ್ಟಿಗೆ ಸುಳ್ಳಾಗಿದೆ. ತುಂಗೆ ಜೀವದಾಯಿನಿ ಆಗಿ ಉಳಿದಿಲ್ಲ. ಬಿಸಿಲಿನ ಬೇಗೆ ಈಗ 40 ಡಿಗ್ರಿ ಆಸುಪಾಸಿನಲ್ಲಿದೆ. ನಗರದ ಸೂಳೆಬೈಲು ಸೇರಿ ವಿವಿಧೆಡೆ ಕುಡಿಯುವ ನೀರಿನ ಸಮಸ್ಯೆ ತಾರಕಕ್ಕೇರಿದೆ. ನೀರಿಗಾಗಿ ಜನರು ಬೀದಿಗಿಳಿದು ಹೋರಾಟ ಮುಂದುವರೆಸಿದ್ದಾರೆ. ತೀರ್ಥಹಳ್ಳಿಯಲ್ಲಿ ತುಂಗಾನದಿ ಒಡಲು ಬರಿದಾಗಿದೆ.

ಕಾಳಿ, ಶರಾವತಿ, ಅಘನಾಶಿನಿಯಂತಹ ಪ್ರಮುಖ ನದಿಗಳು ಹರಿಯುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಪರದಾಟ ಹೆಚ್ಚಾಗಿದೆ. ಅಂಕೋಲಾ, ಕಾರವಾರ ತಾಲ್ಲೂಕಲ್ಲದೇ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಸಂಕಷ್ಟ ತಲೆದೋರಿದೆ. ಮಲೆನಾಡಿಗೆ ಹೊಂದಿಕೊಂಡಿರುವ ಬೆಳಗಾವಿ ಜಿಲ್ಲೆಯ ಮಲಪ್ರಭೆ ಮಡಿಲಲ್ಲಿರುವ ಸವದತ್ತಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಪುರಸಭೆಯಿಂದ ವಾರಕ್ಕೊಮ್ಮೆ ಮಾತ್ರ ನೀರು ಪೂರೈಸಲಾಗುತ್ತಿದೆ.



ಕೊಪ್ಪಳ ತಾಲ್ಲೂಕಿನ ಹಂದ್ರಾಳ ಗ್ರಾಮದ ಜನ ಕುಡಿಯಲು ಕೆರೆಯಂಗಳದ ರಾಡಿ ನೀರನ್ನೇ ಆಶ್ರಯಿಸಿದ್ದಾರೆ –ಪ್ರಜಾವಾಣಿ ಚಿತ್ರ/ಭರತ್ ಕಂದಕೂರು

ರಾಜ್ಯದ ಪ್ರಮುಖ ಜಲಾಶಯ–ನೀರಿನ ಲಭ್ಯತೆ (ಟಿಎಂಸಿ ಅಡಿಗಳಲ್ಲಿ)



ಶೇ 21.8 ರಷ್ಟು ಜಲಮೂಲಗಳಷ್ಟೇ ಬಳಕೆ

ಕೇಂದ್ರ ಜಲ ಶಕ್ತಿ ಸಚಿವಾಲಯ, ಜಲ ಸಂಪನ್ಮೂಲಗಳ ಇಲಾಖೆಯ ಜಲಮೂಲಗಳ 2022-23ನೇ ಸಾಲಿನ ಗಣತಿ ಪ್ರಕಾರ, ರಾಜ್ಯದಲ್ಲಿ 26,994 (26,274 ನೈಸರ್ಗಿಕ ಮತ್ತು 720 ಮಾನವ ನಿರ್ಮಿತ) ಜಲಮೂಲಗಳಿವೆ. ಅವುಗಳಲ್ಲಿ ಶೇ 97.1 (26,205) ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಉಳಿದ ಶೇ 2.9 (789) ನಗರ ಪ್ರದೇಶಗಳಲ್ಲಿವೆ. ವಿಶೇಷವೆಂದರೆ 26 ಸಾವಿರದಷ್ಟು ಜಲಮೂಲಗಳಲ್ಲಿ ಶೇ 21.8ರಷ್ಟು (5,874) ಜಲಮೂಲಗಳು ಮಾತ್ರ ಬಳಕೆಯಲ್ಲಿವೆ. ಉಳಿದ ಶೇ 78.2 (21,120) ಜಲಮೂಲಗಳು ಒಣಗಿವೆ. ಬಳಕೆಯಲ್ಲಿರುವ ಜಲಮೂಲಗಳ ಪೈಕಿ ಹೆಚ್ಚಿನ ಪ್ರಮಾಣದ ಜಲಮೂಲಗಳನ್ನು ನೀರಾವರಿಗೆ ಬಳಸಲಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ನದಿಗಳೆಲ್ಲವೂ ಬತ್ತುತ್ತಿವೆ. ಕಾವೇರಿ ಹುಟ್ಟುವ ಭಾಗಮಂಡಲದಲ್ಲೇ ನದಿಯಲ್ಲಿ ಮೊಣಕಾಲುದ್ದ ನೀರಿದ್ದರೆ, ಲಕ್ಷ್ಮಣತೀರ್ಥ ನದಿ ಬತ್ತಿದೆ. ಹಾರಂಗಿ ಜಲಾಶಯದಲ್ಲಿ ನೀರು ಕ್ಷೀಣಿಸಿದೆ. ಇತ್ತ ಮಡಿಕೇರಿ ನಗರಕ್ಕೆ ನೀರು ಸರಬರಾಜು ಮಾಡುವ ಕೂಟುಹೊಳೆ ಹಾಗೂ ಪಂಪಿನಕೆರೆಯ ನೈಸರ್ಗಿಕ ಜಲಮೂಲಗಳೆಲ್ಲವೂ ಸಂಪೂರ್ಣ ಬತ್ತಿದ್ದು, ಮಡಿಕೇರಿ ನಗರಸಭೆ ವತಿಯಿಂದ ಎರಡು ದಿನಕ್ಕೊಮ್ಮೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ.

ಮೈಸೂರು ನಗರಕ್ಕೆ ಇನ್ನೆರಡು ತಿಂಗಳು ನೀರಿನ ಕೊರತೆಯಾಗದು. ಆದರೆ, ಕಬಿನಿ ಜಲಾಶಯದ ನೀರಿನ ಸಂಗ್ರಹ ಕಳೆದ ವರ್ಷಕ್ಕಿಂತ ಈ ಅವಧಿಗೆ 3.84 ಟಿಎಂಸಿ ಅಡಿ ಕಡಿಮೆ ಇದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ 6 ಗ್ರಾಮಗಳಲ್ಲಿ ಕುಡಿಯುವ ನೀರಿನ ಕೊರತೆ ಇದ್ದು ಟ್ಯಾಂಕರ್ ನೀರು ಪೂರೈಸಲಾಗುತ್ತಿದೆ. ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು ತಾಲ್ಲೂಕುಗಳಲ್ಲಿ ಕೆರೆಗಳಲ್ಲಿ ನೀರು ಕಡಿಮೆಯಾಗಿದೆ.

ದಶಕದ ಬಳಿಕ ಇದೇ ಮೊದಲ ಸಲ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರ ಸ್ವರೂಪ ಪಡೆಯುವ ಭೀತಿ ಎದುರಾಗಿದೆ. ಉಡುಪಿ ನಗರಸಭೆ ವ್ಯಾಪ್ತಿಯ 35 ವಾರ್ಡ್‌ಗಳಿಗೆ ಬಜೆ ಜಲಾಶಯದಿಂದ ನೀರು ಪೂರೈಸಲಾಗುತ್ತಿದೆ. ಆದರೆ, ದಿನದಿಂದ ದಿನಕ್ಕೆ ನೀರಿನ ಪ್ರಮಾಣ ಕುಸಿಯುತ್ತಿರುವ ಕಾರಣ ಮೇ ತಿಂಗಳ ಮೊದಲ ವಾರದವರೆಗೆ ಮಾತ್ರ ನೀರು ಸಿಗುವ ಸಾಧ್ಯತೆಯಿದೆ.

ಉತ್ತರ ಕನ್ನಡ ಜಿಲ್ಲೆಯ ಅಂತರ್ಜಲ ಮಟ್ಟದ ಪ್ರಮಾಣ ಸದ್ಯಕ್ಕೆ ಸರಾಸರಿ 8.75 ಮೀಟರ್ ಆಳವಿದೆ. ಆದರೆ ಜಿಲ್ಲೆಯ 24 ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ತಲೆದೋರಿದೆ. ಇನ್ನು 110 ಗ್ರಾಮಗಳಲ್ಲಿ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆ ಬಗ್ಗೆ ಜಿಲ್ಲಾಡಳಿತ ಪಟ್ಟಿ ಮಾಡಿದೆ.

ಧಾರವಾಡ ತಾಲ್ಲೂಕಿಗೆ ನೀರು ಪೂರೈಸುವ ಸವದತ್ತಿ ರೇಣುಕಾಸಾಗರ ಹಾಗೂ ಕಲಘಟಗಿ ನೀರಸಾಗರದ ಪರಿಸ್ಥಿತಿ ಶೋಚನೀಯವಾಗಿದೆ. ಎರಡೂ ಕಡೆ ನೀರಿನ ಮಟ್ಟ ಕುಸಿದಿದ್ದು, ಕುಂದಗೋಳ, ನವಲಗುಂದ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆ ಉಂಟಾಗಿದೆ.

ಹುಬ್ಬಳ್ಳಿ–ಧಾರವಾಡ ಅವಳಿ ನಗರದಲ್ಲಿ ಐದು ದಿನಗಳ ಬದಲು 10ರಿಂದ 12 ದಿನಗಳಿಗೆ ಒಮ್ಮೆ ನೀರು ಪೂರೈಸಲಾಗುತ್ತಿದೆ. 'ನೀರಿನ ಸಮಸ್ಯೆ ನಿವಾರಣೆಗೆ ವಿಶೇಷ ತಂಡಗಳನ್ನು ರಚಿಸಿ, ಪ್ರತಿ ದಿನ ನೀರು ಪೂರೈಕೆಗೆ ಯೋಜನೆ ರೂಪಿಸಲಾಗಿದೆ ಎಂದು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ಅಧಿಕಾರಿಗಳು ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ಆದರೆ, ಅದು ಕಾರ್ಯರೂಪಕ್ಕೆ ಬಂದಿಲ್ಲ' ಎಂದು ಸಾರ್ವಜನಿಕರು ಆರೋಪಿಸುತ್ತಾರೆ.

ಬೆಳಗಾವಿ, ಧಾರವಾಡ, ಗದಗ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರ ಜೀವನಾಡಿಯಾದ ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಜಲಾಶಯದಲ್ಲಿ ನೀರಿನ ಮಟ್ಟ ಕುಸಿದಿದೆ. ಕಲಬುರಗಿ ಜಿಲ್ಲೆಯಲ್ಲಿ ಎರಡು ವರ್ಷ ಉತ್ತಮ ಮಳೆ ಆಗಿರುವುದರಿಂದ ಈ ಭಾಗದಲ್ಲಿನ ಭೀಮಾ, ಬೆಣ್ಣೆತೊರ, ಗಂಡೋರಿ ನಾಲಾ, ನಾಗರಾಳ, ಅಮರ್ಜಾ ಜಲಾಶಯಗಳಲ್ಲಿ ನೀರಿನ ಮಟ್ಟ ಉತ್ತಮ ಸ್ಥಿತಿಯಲ್ಲಿದೆ. ಆದರೆ, ಯಾದಗಿರಿ ಜಿಲ್ಲೆಯ ಕೆಲ ಗ್ರಾಮಗಳಲ್ಲಿ ಸಮಸ್ಯೆ ಇದೆ. ಚಿಕ್ಕಬಳ್ಳಾಪುರ, ದಾವಣಗೆರೆ, ಚಿತ್ರದುರ್ಗ, ಹಾವೇರಿ, ಗದಗ ಜಿಲ್ಲೆಗಳಲ್ಲಿ ನೀರಿನ ಸಮಸ್ಯೆ ಅಷ್ಟಾಗಿ ತಲೆದೋರಿಲ್ಲ.

ಒಂದೆಡೆ ಕುಡಿಯುವ ನೀರಿನ ಸಮಸ್ಯೆ ಹೀಗಿದ್ದರೆ, ಮತ್ತೊಂದೆಡೆ ಶುದ್ಧ ಕುಡಿಯುವ ನೀರು ಸಿಗುವುದು ದುಸ್ತರವಾಗಿದೆ. ನಗರ ಪ್ರದೇಶದಲ್ಲಿ ಆರ್ಥಿಕವಾಗಿ ಸ್ಥಿತಿವಂತರು ಕ್ಯಾನ್ ನೀರು ಇಲ್ಲವೇ ಕೊಳವೆಬಾವಿಗಳನ್ನು ಅವಲಂಬಿಸಿದ್ದಾರೆ. ಆದರೆ, ಗ್ರಾಮೀಣ ಪ್ರದೇಶದಲ್ಲಿ ಜನರು ನದಿ, ಕೆರೆ, ಕುಂಟೆಯ ನೀರಿಗೆ ಮೊರೆ ಹೋಗುತ್ತಾರೆ. ಕಲುಷಿತ ನೀರು ಕುಡಿದು ಜನರು ಅಸ್ವಸ್ಥಗೊಳ್ಳುವ ಪ್ರಕರಣಗಳು ಆಗಾಗ್ಗೆ ಘಟಿಸುತ್ತಲೇ ಇರುತ್ತವೆ. ಯಾದಗಿರಿ ಜಿಲ್ಲೆಯ ಗುರುಮಠಕಲ್ ತಾಲ್ಲೂಕಿನ ಅನಪುರದಲ್ಲಿ ಕಲುಷಿತ ನೀರು ಕುಡಿದು ಇಬ್ಬರು ಮಹಿಳೆಯರು ಸಾವನ್ನಪ್ಪಿ, 30ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿದ್ದರು ಎನ್ನುವುದನ್ನು ಸ್ಮರಿಸಬಹುದು.

'ರಾಜ್ಯದ ವಿವಿಧೆಡೆ ನೀರಿನ ಸಮಸ್ಯೆ ತಲೆದೋರುವ ಸಾಧ್ಯತೆಯಿರುವ ಹಿನ್ನೆಲೆಯಲ್ಲಿ ಚುನಾವಣೆ ಘೋಷಣೆ ಮುನ್ನವೇ ಆಯಾ ಜಿಲ್ಲೆಗಳಿಗೆ ಸರ್ಕಾರದಿಂದ ₹ 1 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯ ಪರಿಸ್ಥಿತಿ ಅವಲೋಕಿಸಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ನೀರಿನ ಸಮಸ್ಯೆ ನಿವಾರಣೆಗೆ ಹಣವನ್ನು ಸದ್ಬಳಕೆ ಮಾಡಿಕೊಳ್ಳಬಹುದು' ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳುತ್ತಾರೆ.

ಜನರ ಆರೋಗ್ಯದ ಮೇಲೆಯಷ್ಟೇ ಅಲ್ಲ, ಜಾನುವಾರುಗಳ ಆರೋಗ್ಯದ ಮೇಲೆಯೂ ಬಿಸಿಲು ಭಾರಿ ಪರಿಣಾಮ ಉಂಟು ಮಾಡಿದೆ. ಕೃಷಿ ಚಟುವಟಿಕೆಗೂ ಅಡ್ಡಿಯಾಗಿದೆ. ಸಕಾಲಕ್ಕೆ ಮಳೆಯಾಗದಿದ್ದರೆ, ಪರಿಸ್ಥಿತಿ ಇನ್ನೂ ಮೀರುವ ಆತಂಕ ಕಾಡುತ್ತಿದೆ. ಅತಿಯಾದ ಬಿಸಿಲು ಇರುವ ಕಾರಣ ರೈತರು ಕೃಷಿ ಜಮೀನಿನತ್ತ ಹೋಗುತ್ತಿಲ್ಲ. ಬೆಳಗಿನ 5 ರಿಂದ 9 ಗಂಟೆಯೊಳಗೆ ಕೃಷಿ ಕೆಲಸ ಮುಗಿಸಿಕೊಂಡು ಜಾನುವಾರುಗಳ ಸಮೇತ ಮನೆಗಳಿಗೆ ಮರಳುತ್ತಾರೆ. ಅಗತ್ಯವೆನ್ನಿಸಿದರೆ, ಸಂಜೆ 5 ರಿಂದ 7ರ ಅವಧಿಯಲ್ಲಿ ಒಂದು ಸುತ್ತು ಜಮೀನಿಗೆ ಹೋಗುತ್ತಾರೆ. ಬಿಸಿಲಿನಿಂದ ಜಾನುವಾರುಗಳು ಅನಾರೋಗ್ಯಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಿದ್ದು, ಅವುಗಳನ್ನು ಆರೋಗ್ಯಯುತವಾಗಿ ಕಾಯ್ದಿಡುವುದೇ ರೈತರಿಗೆ ಸವಾಲಾಗಿದೆ.

ಅಡಿಕೆ ಕೃಷಿಗೆ ಹೆಚ್ಚು ವಾಲಿಕೊಂಡಿರುವ ಚಿತ್ರದುರ್ಗ ಜಿಲ್ಲೆಯ ರೈತರಿಗೆ ಪ್ರಸಕ್ತ ಬೇಸಿಗೆ ಹೊಸ ಸಂಕಷ್ಟ ತಂದೊಡ್ಡಿದೆ. 37 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ತಾಪಮಾನ ಇರುವುದರಿಂದ ಅಡಿಕೆಯ ಇಂಗಾರದ ಹರಳು ಉದುರತೊಡಗಿವೆ. ಅಡಿಕೆ ಕಾಯಿ ಒಣಗುತ್ತಿದೆ. ಅಡಿಕೆ ಇಳುವರಿ ಕುಸಿಯುತ್ತಿದೆ. ನೀರಿನ ಕೊರತೆಯಿಂದ ತೋಟ ನಿರ್ವಹಣೆ ಕಷ್ಟವಾಗುತ್ತಿದೆ.

'2022ರಲ್ಲಿ ಮಾರ್ಚ್, ಏಪ್ರಿಲ್ ತಿಂಗಳಲ್ಲೇ ಮಳೆಯಾಗಿತ್ತು. ಹೀಗಾಗಿ ಉಷ್ಣಾಂಶ 37 ಡಿಗ್ರಿ ಸೆಲ್ಸಿಯಸ್ ದಾಟಿರಲಿಲ್ಲ. ಮಳೆ ಸುರಿದು ಹಲವು ತಿಂಗಳು ಕಳೆದಿವೆ. ಉಷ್ಣಾಂಶ ಈಗಾಗಲೇ 39 ಡಿಗ್ರಿ ಸೆಲ್ಸಿಯಸ್ ಮುಟ್ಟಿದೆ. ಮಳೆ ಬಿದ್ದರಷ್ಟೇ ಉಷ್ಣಾಂಶ ಕಡಿಮೆಯಾಗಬಹುದು' ಎನ್ನುತ್ತಾರೆ ದಾವಣಗೆರೆ ಜಿಲ್ಲಾ ವಿಪತ್ತು ನಿರ್ವಹಣಾಧಿಕಾರಿ ಜಯಣ್ಣ.

ಬೇಸಿಗೆಯಲ್ಲಿ ಹಸಿ ಮೇವು ಕಮರಿದ್ದು ಒಣ ಮೇವು ಮಾತ್ರ ಜಾನುವಾರುಗಳಿಗೆ ಆಸರೆಯಾಗಿದೆ. ಆದರೂ, ಮೇವು ಬ್ಯಾಂಕ್, ಗೋಶಾಲೆ ತೆರೆಯುವ ಅನಿವಾರ್ಯತೆ ಸೃಷ್ಟಿಯಾಗಿಲ್ಲ ಎನ್ನುವುದು ಅಧಿಕಾರಿಗಳ ಅಭಿಪ್ರಾಯ. ಆದರೆ ಈ ಕಾರ್ಯ ಆರಂಭಿಸಬೇಕಾದ ಕಂದಾಯ ಇಲಾಖೆಯ ಅಧಿಕಾರಿಗಳು ಚುನಾವಣಾ ಕಾರ್ಯದಲ್ಲಿ ಮಗ್ನರಾಗಿ, ಮೇವು ಬ್ಯಾಂಕ್ ಆರಂಭಿಸಲು ತಯಾರಿಕೆಯನ್ನೇ ಮಾಡಿಲ್ಲ. ಮುಂದಿನ ದಿನಗಳಲ್ಲಿ ಮೇವು ಕೊರತೆ ಎದುರಾದರೆ ಯುದ್ಧಕಾಲದಲ್ಲಿ ಶಸ್ತ್ರಭ್ಯಾಸ ಮಾಡಬೇಕಾಗುತ್ತದೆ.

'ಸದ್ಯಕ್ಕೆ ಒಣಮೇವಿನಿಂದ ಪರಿಸ್ಥಿತಿ ನಿಭಾಯಿಸ ಬಹುದು. ಆದರೆ, ಇದೇ ಪರಿಸ್ಥಿತಿ ಮುಂದುವರಿದರೆ, ಮೇವಿನ ಸಮಸ್ಯೆ ತಲೆದೋರಬಹುದು. ಇದೆಲ್ಲವನ್ನೂ ಅವಲೋಕಿಸಿ, ಸರ್ಕಾರವು ಮುಂದಿನ ದಿನಗಳಲ್ಲಿ ಗೋಶಾಲೆ ತೆರೆಯಲು ಅಥವಾ ಮೇವಿನ ಬ್ಯಾಂಕ್ ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳುತ್ತದೆ' ಎಂದು ಕಲಬುರಗಿ ಜಿಲ್ಲೆಯ ಮುಖ್ಯ ಪಶುವೈದ್ಯಾಧಿಕಾರಿ (ಆಡಳಿತ) ಡಾ. ಯಲ್ಲಪ್ಪ ಇಂಗಳೆ ಹೇಳುತ್ತಾರೆ.

'ಅತಿಯಾದ ತಾಪಮಾನದಿಂದ ಜಾನುವಾರುಗಳಲ್ಲಿ ಹಾಲು ಕೊಡುವ ಪ್ರಮಾಣ ಕಡಿಮೆಯಾಗುತ್ತದೆ. ಗರ್ಭಪಾತ ಸಂಭವಿಸುವ ಸಾಧ್ಯತೆ ಇರುತ್ತದೆ. ನಿರ್ಜಲೀಕರಣ, ದೈಹಿಕ ಒತ್ತಡ ಸಮಸ್ಯೆಯಿಂದ ಆರೋಗ್ಯದಲ್ಲಿ ಏರುಪೇರಾಗಬಹುದು. ಆರೋಗ್ಯ ರಕ್ಷಣೆಗೆ ಸಂಬಂಧಿಸಿದಂತೆ ಪಶುವೈದ್ಯರ ಸಲಹೆ, ಸೂಚನೆ ಪಾಲಿಸಬೇಕು' ಎನ್ನುತ್ತಾರೆ ಅವರು.

ಕರಾವಳಿಯ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು ಮುಖ್ಯವಾಗಿ ಧಾರ್ಮಿಕ ಪ್ರವಾಸೋದ್ಯಮಕ್ಕೆ ಪ್ರಸಿದ್ಧ. ಏರುತ್ತಿರುವ ತಾಪಮಾನದ ಕಾರಣ ಜನರು ಹೈರಾಣಾಗುತ್ತಿದ್ದಾರೆ. ಧಗೆಯನ್ನು ಸಹಿಸಿಕೊಂಡೆ ಅವರು ಬರುತ್ತಿದ್ದಾರೆ. ಕರಾವಳಿ ಭಾಗದ ಬಹುತೇಕ ಎಲ್ಲಾ ದೇವಸ್ಥಾನಗಳಲ್ಲಿ ಊಟೋಪಚಾರ, ನೀರು–ನೆರಳಿನ ಸೌಲಭ್ಯಗಳಿರುವ ಕಾರಣದಿಂದ ಪ್ರವಾಸಿಗರಿಗೆ ಅಷ್ಟು ಸಮಸ್ಯೆ ಇಲ್ಲ ಎನ್ನಬಹುದು. ಆದರೂ ಬಿಸಿಲು ಪ್ರವಾಸಿಗರನ್ನು ಹೈರಾಣು ಮಾಡಿದೆ.

ಉಡುಪಿ ಹಾಗೂ ದಕ್ಷಿಣ ಕನ್ನಡದ ಜಿಲ್ಲೆಯ ಕೆಲವು ಬೀಚ್‌ಗಳಲ್ಲಿ ಬಿಸಿಲಿನಿಂದ ರಕ್ಷಣೆಗೆ ಅಲ್ಲಲ್ಲಿ ಕೊಡೆಯ ಆಕಾರದಲ್ಲಿ ಗುಡಿಸಲುಗಳನ್ನು ನಿರ್ಮಿಸಲಾಗಿದೆ. ಕೆಲ ಕಡೆ ಕುಡಿಯುವ ಶುಚಿಯಾದ ನೀರಿನ ವ್ಯವಸ್ಥೆ ಇಲ್ಲದಿರುವುದು ಪ್ರವಾಸಿಗರನ್ನು ಕಾಡುತ್ತಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ತಾಪಮಾನ 37 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದ್ದು, ಅಲ್ಲಿನ ಪ್ರವಾಸೋದ್ಯಮದ ಮೇಲೆ ಪರಿಣಾಮ ಉಂಟು ಮಾಡಿದೆ. ವಾರಾಂತ್ಯದಲ್ಲಿ ತಣ್ಣನೆಯ ಹವಾಮಾನವನ್ನು ಅರಸಿಕೊಂಡು ಜಿಲ್ಲೆಗೆ ಬರುತ್ತಿದ್ದವರ ಸಂಖ್ಯೆ ಈಗ ಇಳಿಕೆಯಾಗಿದೆ.

ಬಳ್ಳಾರಿ, ಹೊಸಪೇಟೆ, ಕಲಬುರಗಿ, ವಿಜಯಪುರ, ಶಿವಮೊಗ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಕಡಿಮೆಯಾಗಿದೆ. ಹಂಪಿ, ತುಂಗಭದ್ರಾ ಜಲಾಶಯ, ಅಟಲ್ ಬಿಹಾರಿ ವಾಜಪೇಯಿ ಜೈವಿಕ ಉದ್ಯಾನ, ದರೋಜಿ ಕರಡಿಧಾಮ ಮುಂತಾದ ಕಡೆ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿದೆ.

ಹಸಿರೀಕರಣಕ್ಕೆ ಪೂರಕವಾಗಿ ಅರಣ್ಯ ಇಲಾಖೆಯು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯೋಜನೆಗಳನ್ನು ಜಾರಿಗೊಳಿಸಿದರೂ ಬಿಸಿಲಿನ ತಾಪವನ್ನು ಕಡಿಮೆ ಮಾಡಲು ಸಾಧ್ಯವಾಗುತ್ತಿಲ್ಲ.

'ಒಂದು ಎಕರೆ ಅರಣ್ಯಕ್ಕೆ ಸಾವಿರ ಎಕರೆ ಸಸಿ ನೆಡುವಿಕೆ ಸಮ ಆಗುವುದಿಲ್ಲ. ಹೊಸದಾಗಿ ಗಿಡಗಳನ್ನು ನೆಡುವುದರ ಜತೆಗೆ ಇರುವ ಅರಣ್ಯದ ಒಂದಿಂಚೂ ಪ್ರದೇಶವೂ ನಾಶವಾಗದ ಹಾಗೆ ಜತನದಿಂದ ಕಾಯ್ದುಕೊಳ್ಳಬೇಕು. ಆಗ ಮಾತ್ರ ಪರಿಸರ ಉಳಿಯತ್ತದೆ' ಎಂದು ಕೊಡಗು ವೃತ್ತ ಹಾಗೂ ಅರಣ್ಯ ಕಾರ್ಯಪಡೆಯ ಡಿಸಿಎಫ್ ಪೂವಯ್ಯ ಹೇಳುತ್ತಾರೆ.

ಅಭಿವೃದ್ಧಿಯ ನೆಪದಲ್ಲಿ ಪ್ರತಿ ವರ್ಷವೂ ಅರಣ್ಯ ನಾಶವಾಗುತ್ತಿದೆ. ಇದು ತಪ್ಪಬೇಕು. ಆಗ ಮಾತ್ರ ಕಾಲಕಾಲಕ್ಕೆ ಮಳೆ ಸುರಿಯುತ್ತದೆ ಎನ್ನುವುದು ಪರಿಸರವಾದಿಗಳ ಅಭಿಪ್ರಾಯ.

(ಪೂರಕ ಮಾಹಿತಿ: ಬ್ಯೂರೋಗಳಿಂದ)

'ಮಕ್ಕಳು, ವೃದ್ಧರ ಬಗ್ಗೆ ಕಾಳಜಿಯಿರಲಿ'



ಅತಿಯಾದ ತಾಪಮಾನವು ಮೇ ತಿಂಗಳ ಅಂತ್ಯದವರೆಗೆ ಇರುವ ಕಾರಣ ಜನರು ಹೆಚ್ಚು ಎಚ್ಚರದಿಂದ ಇರಬೇಕು. ಆಗಾಗ್ಗೆ ನೀರು ಕುಡಿಯುತ್ತಿರಬೇಕು. ಜೊತೆಗೆ ಮಜ್ಜಿಗೆ, ಮೊಸರನ್ನು ಹೆಚ್ಚು ಸೇವಿಸಬೇಕು. ಮಧ್ಯಾಹ್ನ 11ರಿಂದ ಸಂಜೆ 4 ರವರೆಗೆ ಹೊರಗೆ ಹೋಗುವುದು ಕಡಿಮೆ ಮಾಡಬೇಕು. ಅನಿವಾರ್ಯವಾದರೆ, ತಲೆಗೆ ಟೋಪಿ ಧರಿಸಿ, ಮುಖಕ್ಕೆ ಮಾಸ್ಕ್ ಹಾಕಿಕೊಳ್ಳಬೇಕು. ಬಿಗಿ ಅಥವಾ ಸಿಂಥೆಟಿಕ್ ಬದಲು ಸಡಿಲ, ತೆಳು ಬಣ್ಣದ ಹತ್ತಿಯ ಬಟ್ಟೆಗಳನ್ನು ಧರಿಸುವುದು ಸೂಕ್ತ. ದೇಹವು ನಿರ್ಜಲೀಕರಣ ಆಗದಂತೆ ತಡೆಯಬೇಕು. ಮಕ್ಕಳು ಮತ್ತು ವೃದ್ಧರತ್ತ ವಿಶೇಷ ಕಾಳಜಿ ವಹಿಸಬೇಕು. ಅವರು ವಿನಾಕಾರಣ ಬಿಸಿಲಿನಲ್ಲಿ ಹೋಗುವುದು ತಡೆಯಬೇಕು.

ಡಾ. ಅಂಬಾರಾಯ ರುದ್ರವಾಡಿ,
ಜಿಲ್ಲಾ ಶಸ್ತ್ರಚಿಕಿತ್ಸಕ, ಜಿಮ್ಸ್, ಕಲಬುರಗಿ

'ಉದ್ಯೋಗ ಸ್ಥಳದಲ್ಲಿ ನೀರಿನ ಸೌಲಭ್ಯ ಕಲ್ಪಿಸಿ'

ಕೃಷಿ ಕೂಲಿ ಕಾರ್ಮಿಕರು, ಕಟ್ಟಡ ಕಾರ್ಮಿಕರು ಬಿಸಿಲಿನಲ್ಲಿ ಕೆಲಸ ಮಾಡುವಾಗ ಎಚ್ಚರವಹಿಸಬೇಕು ಎಂದು ವೈದ್ಯರು ಹೇಳುತ್ತಾರೆ. ಆದರೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಾರ್ಮಿಕರು ಕೆಲಸ ಮಾಡುವ ಸ್ಥಳದಲ್ಲಿ ಅಧಿಕಾರಿಗಳು ನೀರಿನ ಸೌಲಭ್ಯ ಕಲ್ಪಿಸುವುದಿಲ್ಲ. ನೆರಳಿನ ವ್ಯವಸ್ಥೆ ಕೂಡ ಮಾಡುವುದಿಲ್ಲ. ಕಾರ್ಮಿಕರು ಬೆಳಿಗ್ಗೆ 6ಕ್ಕೆ ಉದ್ಯೋಗಕ್ಕೆ ಹೊರಟರೆ, ಮಧ್ಯಾಹ್ನ 4ರವರೆಗೆ ಬಿಸಿಲಲ್ಲೇ ಕೆಲಸ ಮಾಡಬೇಕಾದ ಸ್ಥಿತಿಯಿದೆ. ಕೂಲಿ ಕಾರ್ಮಿಕರ ಹಿತದೃಷ್ಟಿಯಿಂದ ಬೇಸಿಗೆ ಅವಧಿಯಲ್ಲಿ ಕೆಲಸಗಳನ್ನು ಅದಷ್ಟು ಮಧ್ಯಾಹ್ನ 12ರೊಳಗೆ ಮುಗಿಯುವಂತೆ ನೋಡಿಕೊಳ್ಳಲು ಕೋರಿದ್ದೇವೆ. ಬರೀ ಕೆಲಸಗಳಾದರೆ ಸಾಲದು, ಕಾರ್ಮಿಕರ ಆರೋಗ್ಯಸ್ಥಿತಿಯನ್ನು ಅಧಿಕಾರಿಗಳು ಗಮನಿಸಬೇಕು.

ಶರಣಬಸಪ್ಪ ಮಮಶೆಟ್ಟಿ,
ಅಧ್ಯಕ್ಷ, ಕರ್ನಾಟಕ ಪ್ರಾಂತ ರೈತ ಸಂಘ, ಕಲಬುರಗಿ

ರಾಜ್ಯದ ಪ್ರಮುಖ ನಗರಗಳ ತಾಪಮಾನ ಪ್ರಮಾಣ (2023) ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

ನಗರ	ಮಾರ್ಚ್ 5	ಮಾರ್ಚ್ 12	ಮಾರ್ಚ್ 19	ಮಾರ್ಚ್ 26	ಏಪ್ರಿಲ್ 2	ಏಪ್ರಿಲ್ 9	ಏಪ್ರಿಲ್ 16, ಏಪ್ರಿಲ್ 22
ಬೆಂಗಳೂರು	32	32	33	31	35	34	36-35.2
ಕಲಬುರಗಿ	38	37	33	38	39	36	40-39.8
ಮಂಗಳೂರು	37	37	35	35	33	35	35-34.8
ಹುಬ್ಬಳ್ಳಿ-ಧಾರವಾಡ	36	36	33	36	36	37	38-36.6
ಚಿತ್ರದುರ್ಗ	35	35	33	36	36	35	36-35.5
ಬೆಳಗಾವಿ	37	38	32	34	34	34	36-35
ಕಾರವಾರ	36	35	32	33	33	36	34-35.8

'ಅತಿ ನೇರಳೆ ಕಿರಣ ಅಪಾಯಕಾರಿ'



ಕಳೆದ ನಾಲ್ಕು ವರ್ಷಕ್ಕೆ ಹೋಲಿಸಿದರೆ ಈ ಬಾರಿ ಬಿಸಿಲು ತೀವ್ರವಾಗಿದೆ. ಲಾ ನಿನಾ (ಸಾಗರ ಮತ್ತು ವಾತಾವರಣದ ವಿದ್ಯಮಾನ) ಪರಿಸ್ಥಿತಿ ಕೊನೆಗೊಂಡು. ಜೂನ್ ವೇಳೆಗೆ ಎಲ್ ನಿನೊ (ಸಾಗರದಲ್ಲಿ ಉಷ್ಣಾಂಶ ಅಧಿಕಗೊಳ್ಳುವುದು) ವಿದ್ಯಮಾನ ಮರುಕಳಿಸುವ ಸಾಧ್ಯತೆಯಿದೆ. ಇದಕ್ಕೆ ಪೂರಕ ವಾತಾವರಣ ಈಗಲೇ ಸೃಷ್ಟಿಯಗಿದ್ದು, ವಾತಾವರಣದಲ್ಲಿ ಬಿಸಿ ಗಾಳಿ ಬೀಸುತ್ತಿದೆ. ಸೂರ್ಯನ ಅತಿನೇರಳೆ ಕಿರಣಗಳಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.

ಡಾ. ಜಿ.ಎಸ್.ಶ್ರೀನಿವಾಸ ರೆಡ್ಡಿ, ಹವಾಮಾನ ತಜ್ಞ

ಗುಂಡಣ್ಣ



25 ವರ್ಷಗಳ ಹಿಂದೆ
ಗುರುವಾರ, 23-4-1998

● ಕೃಷ್ಣಾ ಮೇಲ್ದಂಡೆ: ಮುಳುಗಡೆ ಭೂಮಿಗೆ ಪರಿಹಾರ ಹೆಚ್ಚಳ

ಬೆಂಗಳೂರು, ಏ. 22– ವಿರೋಧ ಪಕ್ಷಗಳ ಒತ್ತಡಕ್ಕೆ ಮಣಿದ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾಗುವ ಎರಡು ಬೆಳೆ ಬೆಳೆಯುವ ತರಿ ಭೂಮಿಗೆ ಎಕರೆಯೊಂದಕ್ಕೆ 1.14 ಲಕ್ಷ ರೂಪಾಯಿ ಪರಿಹಾರ ನೀಡಲು ಸರ್ಕಾರ ಒಪ್ಪಿಕೊಂಡಿತು.

ಈ ವಿಷಯವನ್ನು ಕಾನೂನು ಸಚಿವ ಎಂ.ಸಿ. ನಾಣಯ್ಯ ಅವರು ಇಂದು ವಿಧಾನಪರಿಷತ್ತಿನಲ್ಲಿ ಪ್ರಕಟಿಸಿದರು. ಈ ಮೊದಲು ಒಂದು ಲಕ್ಷ ರೂಪಾಯಿ ಪರಿಹಾರ ನೀಡಲು ಸರ್ಕಾರ ನಿರ್ಧರಿಸಿತ್ತು. ಆದರೆ ರೈತರು, ಸಂಸತ್ ಸದಸ್ಯರು, ಶಾಸಕರು ಹಾಗೂ ಸ್ವಾಮಿಗಳು ಪರಿಹಾರ ಧನವನ್ನು ಎಕರೆಗೆ ರೂ 14 ಸಾವಿರದಷ್ಟು ಹೆಚ್ಚಿಸಲು ಒತ್ತಾಯಿಸಿ ಬಾಗಲಕೋಟೆಯಲ್ಲಿ ಉಪವಾಸ ಸತ್ಯಾಗ್ರಹ ಹೂಡಿರುವ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

50 ವರ್ಷಗಳ ಹಿಂದೆ
ಸೋಮವಾರ, 23-4-1973

● ನಾಸಿಕ್ ಬಳಿ ಆಹಾರ ದಂಗೆ; ಗೋಲಿಬಾರ್: ಐದು ಮಂದಿ ಸಾವು

ನಾಸಿಕ್, ಏ. 22– ನಾಸಿಕ್ ಜಿಲ್ಲೆಯ ಸಿನ್ನರ್‌ನಲ್ಲಿ ಸಾಕಷ್ಟು ಆಹಾರ ಧಾನ್ಯ ಒದಗಿಸುವಂತೆ ಒತ್ತಾಯಪಡಿಸಿ ತಹಶೀಲ್ದಾರರ ಕಚೇರಿ ಮತ್ತಿತರ ಸ್ಥಳಗಳ ಮೇಲೆ ದಾಳಿ ಎಸಗಿದ ಉದ್ರಿಕ್ತ ಜನರನ್ನು ಚದುರಿಸಲು ಇಂದು ಪೊಲೀಸರು ಗುಂಡು ಹಾರಿಸಿದಾಗ ಐವರು ಸತ್ತು, ಹತ್ತೊಂಬತ್ತು ಮಂದಿಗೆ ಗಾಯವಾಯಿತು.

ಗುಂಡು ಹಾರಿಸುವುದಕ್ಕೆ ಮುಂಚೆ ಪೊಲೀಸರು ಅಶ್ರುವಾಯು ಷೆಲ್‌ಗಳನ್ನು ಹಾರಿಸಿದರು.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ
ಭಾನುವಾರ ಏಪ್ರಿಲ್ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ತೃತೀಯಾ ಗಂ. 07-48, ನಕ್ಷತ್ರ: ರೋಹಿಣಿ ಗಂ. 24-27, ಯೋಗ: ಸೌಭಾಗ್ಯ ಗಂ. 08-21, ಕರಣ: ಗರಜೆ ಗಂ. 07-48, ಮೇಷ ಮಾಸದ 09 ನೇ ದಿನ, ಮಳೆನಕ್ಷತ್ರ: ಅಶ್ವಿನಿ 3
ರಾಹುಕಾಲ : ಸಾಯಂಕಾಲ 04-30 – 06-00,
ಸೂರ್ಯೋದಯ : 06-17 ಸೂರ್ಯಾಸ್ತ : 06-41, ಮುಸ್ಲಿಂ ದಿನಾಂಕ : 02 ಶವ್ವಾಲ್, ದಿನ ವಿಶೇಷ : ಅಕ್ಷಯಾ ತೃತೀಯಾ, ವಾರ್ಷಿತಾಪ ಸಮಾಪನ (ಜೈನ್) ಬಾಬು ಕುಯಿರ್ ಸಿಂಗ್‌ರವರ ಜನ್ಮದಿನ (ಬಿಹಾರ), ಅದೃಷ್ಟ ಸಂಖ್ಯೆ : 12, 5

ಮೇಷ: ನಿಮ್ಮ ತೀಕ್ಷ್ಣವಾದ ಮಾತು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ. ಸ್ನೇಹಪರ ಸ್ವಭಾವ, ಪರೋಪಕಾರ ಅಥವಾ ಕೊನೇಯ ಪಕ್ಷದಲ್ಲಿ ನಿರ್ಲಿಪ್ತತೆಯಿಂದಾಗಿ ವೈಯಕ್ತಿಕ ಸ್ಥಾನ ಮಾನಗಳು ಲಭಿಸುವುದು.

ವೃಷಭ: ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವ ಸಾಧ್ಯತೆ. ಕಷ್ಟಪಟ್ಟು ದುಡಿದ ಹಣ ಕೈಯಲ್ಲಿ ನಿಲ್ಲುವುದು. ಹಣಕಾಸಿನ ವಿಚಾರದಲ್ಲಿ ನೀವು ಇನ್ನೊಂದು ಮೆಟ್ಟಿಲು ಹತ್ತುವಂತೆ ಆಗಲಿದೆ.

ಮಿಥುನ: ನಿಮ್ಮ ಸಂಗಾತಿಯೊಂದಿಗೆ ಇದ್ದ ದೀರ್ಘಕಾಲದ ಸಮಸ್ಯೆಗಳನ್ನು ಸಮಾಧಾನದಿಂದ ಮಾತನಾಡಿ ಪರಿಹರಿಸಿಕೊಳ್ಳುವಿರಿ. ಕಾಲು ನೋವು ನಿವಾರಿಸಿಕೊಳ್ಳಲು ವ್ಯಾಯಾಮ, ತೈಲ ಲೇಪನದಂತಹ ಪರಿಹಾರ ತಿಳಿದುಕೊಳ್ಳುವಿರಿ.

ಕರ್ಕಾಟಕ: ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಉತ್ತಮ ಅವಕಾಶ ಸಿಗಲಿವೆ. ಅದೇರೀತಿ ಗ್ರಾಹಕರಿಂದ ದೂರುಗಳನ್ನು ಕೇಳುವ ಸಂಭವವೂ ಇದೆ. ದೂರ ಸಂಚಾರದಲ್ಲಿ ಕಾರ್ಯಾನುಕೂಲ ತೋರಿಬಂದು ಮಾನಸಿಕ ನೆಮ್ಮದಿ ತರಲಿದೆ.

ಸಿಂಹ: ಒಂದು ಪ್ರಮುಖ ಕೆಲಸದ ಮುಂದಾಳತ್ವ ವಹಿಸಿ ಯಶಸ್ವಿಯಾಗಿ ಪೂರ್ಣಗೊಳಿಸುವಲ್ಲಿ ಜಯಶಾಲಿಯಾಗುವಿರಿ. ಮನಸ್ಸಿಗೆ ಅಸಮಾಧಾನ ಆಗುವಂತಹ ಹಲವು ಘಟನೆಗಳು ಈ ದಿನ ನಡೆಯಲಿವೆ.

ಕನ್ಯಾ: ಮರಗೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ ಸಹ, ಸೋಮಾರಿತನ ಅಡ್ಡಿ ಉಂಟುಮಾಡುವುದು. ದನ ಕರುಗಳ ಅಥವಾ ಮನೆಯಲ್ಲಿ ಸಾಕಿರುವ ಪ್ರಾಣಿಗಳ ಆರೋಗ್ಯ ತಪಾಸಣೆ ಮಾಡಿಸಿ.

ತುಲಾ: ಮಾಧ್ಯಮ ಸಂಸ್ಥೆಗಳವರಿಗೆ ಉತ್ತಮ ದಿನವಾಗಿ ಪರಿಣಮಿಸಲಿದೆ. ಮನೆ ಜಾಗದ ಪಾಲುದಾರಿಕೆ ವಿಷಯದಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗುವ ಪರಿಸ್ಥಿತಿ ಬರುವುದು. ಇತರರನ್ನು ತಿರಸ್ಕಾರದಿಂದ ನೋಡದಿರಿ.

ವೃಶ್ಚಿಕ: ಕುಟುಂಬದವರೊಂದಿಗೆ ಉತ್ತಮ ಸಮಯ ಕಳೆಯುವ ಅವಕಾಶ ಇದ್ದರೂ ಅನಿವಾರ್ಯ ಕಾರಣಗಳಿಂದಾಗಿ ತಪ್ಪಿಸಿಕೊಳ್ಳಬೇಕಾಗಬಹುದು. ಬಹಳ ದಿನದ ನಂತರದ ಮೊಮ್ಮಕ್ಕಳ ಭೇಟಿಯು ಸಂತಸವನ್ನು ತರುತ್ತದೆ.

ಧನು: ಜೀವನದಲ್ಲಿ ಪರಿಸ್ಥಿತಿಗನುಗುಣವಾಗಿ ಹೆಜ್ಜೆಹಾಕುವ, ಹೊಂದಿಕೊಳ್ಳುವ ಅನಿವಾರ್ಯತೆ ಕಂಡುಬರುತ್ತದೆ. ಮೇಲಧಿಕಾರಿಯ ಅಪರೂಪದ ಮೃದು ವರ್ತನೆಯಿಂದ ಕೆಲಸ ಕಾರ್ಯಗಳಲ್ಲಿ ತೃಪ್ತಿಯುಂಟಾಗುವುದು.

ಮಕರ: ನಿಮ್ಮ ಸಹವರ್ತಿಗಳು ಕೆಲವು ಸನ್ನಿವೇಶದಲ್ಲಿ ನಿಮ್ಮ ಪರವಾಗಿರುವಂತೆ ತೋರಿದರೂ ನಂಬಿಕೆಗೆ ಅರ್ಹರಾಗಿ ಇರುವುದಿಲ್ಲ. ಅಬಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಇಲ್ಲದಿರುವುದರಿಂದ ಸಂಗಡಿಗರ ಜೊತೆ ಕಾಲ ಕಳೆಯುವಿರಿ.


ಕುಂಭ: ಮುಕ್ತ ಮಾತುಕತೆಯಿಂದ ವ್ಯವಹಾರ ನೀವು ಅಂದುಕೊಂಡ ರೀತಿಯಲ್ಲಿ ನಡೆಯುತ್ತದೆ. ವಿವಾಹ, ಗೃಹ ನಿರ್ಮಾಣ ಮತ್ತು ಸ್ವತ್ತು ಸಂಪಾದನೆಯಂಥ ಕಾರ್ಯಗಳ ಸಂಭವ. ಪತಿಯ ಆರೋಗ್ಯದ ಮೇಲೆ ಗಮನವಿರಲಿ.

ಮೀನ: ಮನರಂಜನೆಗಾಗಿ, ಕ್ಷಣಿಕ ಸುಖದ ಅನುಭವಕ್ಕಾಗಿ ದುಂದುವೆಚ್ಚ ಮಾಡಿ ಮುಂದಿನ ದಿನಗಳಲ್ಲಿ ಕೊರಗದಿರಿ. ಸಹೋದರರಲ್ಲಿರುವ ವೈಷಮ್ಯ ಅನುಭವಕ್ಕೆ ಬರಲಿದೆ. ಗೋ ಉತ್ಪನ್ನಗಳ ಮಾರಾಟದಿಂದ ಲಾಭ.

ಪದಬಂಧ 5297
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸೈರಣೆ ಅಥವಾ ತಾಳ್ಮೆ (4)
3.ನಡುವೆ ಪತ್ರ ಬಂದದ್ದಕ್ಕೇ ಈ ತೊಂದರೆ! (4)
5.ಮಾಂಸ ಮಾರಿ ಜೀವಿಸುವವನು (3)
7.ಜನುಮದಲ್ಲಿರುವ ಶೇಖರಣೆ ಗೊತ್ತಾಯಿತೇ? (2)
9.ನಾರಿಕೇಳದ ಹತ್ತಿರವಿರಿಸಿದ ಕೊಳವೆ (2)
10.ನೂಲು ತೆಗೆಯುವ ಸಾಧನ (3)
11.ಆಕಾರದ ವಿವರಗಳನ್ನೊಳಗೊಂಡ ಸ್ವರೂಪ (2)
12.ಖನಿಜ ಸಿಕ್ಕಿರುವುದು ಸುಳ್ಳಲ್ಲ! (2)
14.ಮನದಿಂದ ಮಾಡಿಕೊಂಡಿರುವ ಅರಿಕೆ (3)
16.ಬರ ಬಂದಾಗ ಕುಡಿದ ಪಾನಕ (4)
17.ಹೆದರಿಕೆಯನ್ನುಂಟು ಮಾಡುವುದು (4)

ಮೇಲಿಂದ ಕೆಳಕ್ಕೆ
1.ಸ್ವಭಾವ ಸಿದ್ಧವಾದುದು (3)
2.ನಡೆದ ಅಥವಾ ಕಲ್ಪಿತ ಸಂಗತಿಯಿಲ್ಲಿ ಉಲ್ಟಾ ಕಾಣುತ್ತಿದೆ (2)
3.ತಾಯಿತ ಧರಿಸಿರುವ ಮಾತೆ (2)
4.ಯಮನ ಹತ್ತಿರವಿರುವ ಜೋಡಿ (3)
6.ಎಲ್ಲರೂ ಒಟ್ಟಾಗಿ ಮಾಡಿರುವ ಊಟ (7)
8.ಹಿರಿದಾದ ಆಸೆಯಿದು (5)
9.ನಾಯಕನೊಡನಿರುವ ವೇಶ್ಯೆ (5)
11.ಯಯಾತಿಯ ತಂದೆ (3)
13.ವಠಾರದ ಜನರ ಹೊಟ್ಟೆ! (3)
14.ಅಮಲು ಹೀಗೆ ಬಂದಿದೆ(2)
15.ಸಂಸಾರ ಬಂಧನಕ್ಕೆ ಒಳಗಾದವ ತಿರುಗಿದ್ದಾನೆ (2)



5296ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಳ್ಳಕ 3.ಪಗಾರ
5.ಕರೆ 6.ಟಗರು
7.ನೆಪ 9.ಸೆಹ
11.ಕವಚ 13.ತೆನೆ
14.ಪರಾತ 15.ಸಿಡಿಲು

ಮೇಲಿಂದ ಕೆಳಕ್ಕೆ:
1.ಅಕ್ಕರೆ 2.ಕರಟ
3.ಪನ್ನೀರು 4.ರವಾನೆ
5.ಕತ್ತಿವರಸೆ
8.ಪರ್ಯಾಲೋಚನೆ
10.ಹಡಪ 11.ಕದಿತ
12.ಚಪ್ರಾಸಿ 13.ತೆವಲು

ಸುಡೊಕು 5683

				5		2		8
5		4	1		8		3	
		3		7			5	4
	6			3		1		2
2		5			7			
	3			8		5		6
		8			6		2	3
3		2	7	4			6	5
	5			2		4		1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5682 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಬಯಲುಸೀಮೆ: ರಾಜಧಾನಿ ತುಂಬಾ ಹತ್ತಿರ ಅಭಿವೃದ್ಧಿ ಬಹಳ ದೂರ • ಇನ್ನೂ ಹರಿಯದ ಹನಿ ನೀರು

ರಾಜಕೀಯ ದಾಳವಾದ ನೀರಾವರಿ!

• ಕೆ. ಓಂಕಾರ ಮೂರ್ತಿ\ ಆರ್. ಜೀತೇಂದ್ರ ಡಿ.ಎಂ. ಕುರ್ಕೆ ಪ್ರಶಾಂತ್



ಕೋಲಾರದಲ್ಲಿ ಕೆ.ಸಿ.ವ್ಯಾಲಿ ನೀರು (ಸಂಗ್ರಹ ಚಿತ್ರ)

ರಾಜಧಾನಿ ಬೆಂಗಳೂರಿನ ಸೆರಗಿನಲ್ಲಿರುವ ಬಯಲು ಸೀಮೆ ಪ್ರದೇಶಗಳಾದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳು ರಾಜಕೀಯವಾಗಿ ಬಲಾಢ್ಯವಾಗಿದ್ದರೂ ಅಭಿವೃದ್ಧಿ ವಿಷಯದಲ್ಲಿ ಮಾತ್ರ ಇನ್ನೂ ತಾಲ್ಲೂಕು ಕೇಂದ್ರಗಳ ಹಂತದಲ್ಲಿಯೇ ಉಳಿದಿವೆ!

ಪ್ರತಿ ಚುನಾವಣೆ ಸಂದರ್ಭದಲ್ಲಿಯೂ ಬಯಲು ಸೀಮೆಯಲ್ಲಿ ಶಾಶ್ವತ ನೀರಾವರಿಯ ಕೂಗು ಜೋರಾಗಿ, ನಂತರ ತಣ್ಣಗಾಗುತ್ತದೆ. ಎಲ್ಲ ರಾಜಕೀಯ ಪಕ್ಷಗಳೂ ಪೈಪೋಟಿಗೆ ಬಿದ್ದವರಂತೆ ಶಾಶ್ವತ ನೀರಾವರಿ ಯೋಜನೆ ವಿಷಯಗಳನ್ನೇ ಪ್ರಮುಖ ಚುನಾವಣಾ ದಾಳವನ್ನಾಗಿ ಬಳಸಿಕೊಳ್ಳುತ್ತವೆ.

ಬಹು ನಿರೀಕ್ಷಿತ ಎತ್ತಿನಹೊಳೆ ನೀರಾವರಿ ಯೋಜನೆಯಿಂದ ಇಲ್ಲಿಯವರೆಗೆ ಒಂದು ಹನಿ ನೀರೂ ಹರಿದಿಲ್ಲ. ಈ ಚುನಾವಣೆಯಲ್ಲೂ ಎತ್ತಿನಹೊಳೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ಪ್ರಮುಖ ಚುನಾವಣಾ ವಿಷಯವನ್ನಾಗಿ ಪ್ರಸ್ತಾಪಿಸುವ ಸಾಧ್ಯತೆ ಇದೆ.

ಬೆಂಗಳೂರಿನ ಕೊಳಚೆ ನೀರನ್ನು ಸಂಸ್ಕರಿಸಿ ಕೆ.ಸಿ.ವ್ಯಾಲಿ (ಕೋರಮಂಗಲ– ಛಲ್ಲಘಟ್ಟ ವ್ಯಾಲಿ) ಮತ್ತು ಎಚ್.ಎನ್.ವ್ಯಾಲಿ (ಹೆಬ್ಬಾಳ– ನಾಗವಾರ ವ್ಯಾಲಿ) ನೀರಾವರಿ ಯೋಜನೆಯ ಹೆಸರಿನಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಕೆರೆಗಳಿಗೆ ಹರಿಸಲಾಗುತ್ತಿದೆ. 2018ರಲ್ಲಿ ವಿಧಾನಸಭಾ ಚುನಾವಣೆ ದೃಷ್ಟಿಯಲ್ಲಿ ಇಟ್ಟುಕೊಂಡು ಅಂದಿನ ಕಾಂಗ್ರೆಸ್ ಸರ್ಕಾರ ತರಾತುರಿಯಲ್ಲಿ ಕೊಳಚೆ ನೀರು ಸಂಸ್ಕರಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ನಿಯಮ ಉಲ್ಲಂಘಿಸಿ ಎರಡು ಹಂತದಲ್ಲಿ ನೀರು ಸಂಸ್ಕರಿಸಿ ಕೆರೆಗಳಿಗೆ ಹರಿಸಿತು.

ಈ ನಾಲ್ಕೂವರೆ ವರ್ಷಗಳಿಂದ ಅರೆ ಸಂಸ್ಕರಿತ ಕೊಳಚೆ ನೀರು ಈ ಜಿಲ್ಲೆಗಳ ಕೆರೆಗಳಿಗೆ ಹರಿಯುತ್ತಲೇ ಇದೆ. ಇದು ಅಂತರ್ಜಲ ಸೇರಿ ಆ ನೀರೂ ವಿಷವಾಗುತ್ತಿದೆ. ಮೂರು ಹಂತದಲ್ಲಿ ಕೊಳಚೆ ನೀರು ಶುದ್ಧೀಕರಿಸಿ ಕೆರೆಗಳಿಗೆ ಹರಿಸುವಂತೆ ಹೋರಾಟಗಾರರು ನ್ಯಾಯಾಲಯ ಮೆಟ್ಟಿಲು ಹತ್ತಿದರು. ಧರಣಿ, ಹೋರಾಟ ನಡೆಸಿದರು. ಅದರ ಪರಿಣಾಮ ಕಳೆದ ಬಜೆಟ್‌ನಲ್ಲಿ ಸರ್ಕಾರ ಮೂರು ಹಂತದಲ್ಲಿ ನೀರು ಸಂಸ್ಕರಿಸಲು ತೀರ್ಮಾನಿಸಿದೆ. ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ.

ಎಚ್.ಎನ್.ವ್ಯಾಲಿ, ಕೆ.ಸಿ. ವ್ಯಾಲಿ ಮತ್ತು ಎತ್ತಿನಹೊಳೆ ನೀರಾವರಿ ಯೋಜನೆಯ ಕ್ರೆಡಿಟ್‌ಗಾಗಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಪೈಪೋಟಿ ನಡೆಸುತ್ತಿವೆ. ಅಧಿಕಾರಕ್ಕೆ ಬಂದರೆ ಈ ಕೊಳಚೆ ನೀರನ್ನು ಜಿಲ್ಲೆಗಳಿಗೆ ಹರಿಸದೆ, ನದಿ ಮೂಲದಿಂದ ನೀರಾವರಿ ವ್ಯವಸ್ಥೆ ಕಲ್ಪಿಸುವುದಾಗಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಘೋಷಿಸಿದ್ದಾರೆ.

2019 ಮತ್ತು 2020ರ ನಡುವೆ ಅಂತರ್ಜಲದಲ್ಲಿ ಯುರೇನಿಯಂ ಕುರಿತು ನಡೆದ ಅಧ್ಯಯನವು ಬಯಲುಸೀಮೆಯ ನೀರು ಕುಡಿಯಲು ಯೋಗ್ಯವಲ್ಲ ಎಂದು ಹೇಳಿದೆ. ಈ ಮೂರು ಜಿಲ್ಲೆಗಳಲ್ಲಿ ಅಧ್ಯಯನಕ್ಕೆ ಒಳಪಟ್ಟ ಬಹಳಷ್ಟು ಗ್ರಾಮಗಳಲ್ಲಿ ಇದಕ್ಕೆ ಮೀರಿದ ಮತ್ತು ಅಪಾಯಕಾರಿ ಮಟ್ಟದಲ್ಲಿ ಯುರೇನಿಯಂ ಪ್ರಮಾಣ ಕಂಡು ಬಂದಿದೆ. ಬಯಲು ಸೀಮೆಯ ಜಿಲ್ಲೆಗಳ ಅಂತರ್ಜಲ ಕಲುಷಿತ ಮಾತ್ರವಲ್ಲ, ವಿಷವಾಗುತ್ತಿದೆ. ವಿಪರ್ಯಾಸವೆಂದರೆ ಚುನಾವಣೆ ಸಮಯದಲ್ಲೂ ಯಾವ ಪಕ್ಷವೂ ಈ ಬಗ್ಗೆ ಚಕಾರ ಎತ್ತುತ್ತಿಲ್ಲ. ಈ ಭಾಗದ ರಾಜಕಾರಣಿಗಳು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿದಂತೆ ಕಂಡುಬಂದಿಲ್ಲ.

ರಾಜ್ಯ ರಾಜಧಾನಿ ಮತ್ತು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಹತ್ತಿರವಿದ್ದರೂ ಕೈಗಾರಿಕೀಕರಣ ಬಹುದೂರವಿದೆ. ತರಕಾರಿ, ಹಣ್ಣು ಮತ್ತು ಹೂ ಬೇಸಾಯ ಪ್ರಧಾನವಾಗಿರುವ ಈ ಮೂರು ಜಿಲ್ಲೆಗಳಲ್ಲಿ ಕೃಷಿ ಸಂಬಂಧಿತ ಕೈಗಾರಿಕೆಗಳ ಸ್ಥಾಪನೆ ಸಹ ಆಗಿಲ್ಲ.

ಉದ್ಯೋಗಕ್ಕಾಗಿ ಬಾಗೇಪಲ್ಲಿಯಂತಹ ಗಡಿ ತಾಲ್ಲೂಕಿನ ಜನರು ಮಹಾರಾಷ್ಟ್ರಕ್ಕೆ ವಲಸೆ ಹೋಗುತ್ತಾರೆ. ನೆರೆಯ ಆಂಧ್ರಪ್ರದೇಶದ ಅನಂತಪುರದಲ್ಲಿ ಕೊರಿಯಾ ಮೂಲದ ಕಿಯಾ ವಾಹನ ತಯಾರಿಕಾ ಘಟಕ ಬೃಹತ್ ಪ್ರಮಾಣದಲ್ಲಿ ತಲೆ ಎತ್ತಿದೆ. ಕೃಷ್ಣಾ ನದಿ ನೀರು ಬಾಗೇಪಲ್ಲಿ ಗಡಿಯವರೆಗೂ ಹರಿಯುತ್ತಿದೆ. ಆದರೆ ಈ ನೀರು ಚಿಕ್ಕಬಳ್ಳಾಪುರ ಜಿಲ್ಲೆಯ ಪಾಲಿಗಿಲ್ಲ.

ಜಾತಿ, ಧರ್ಮ ರಾಜಕಾರಣ: ಸಿದ್ದರಾಮಯ್ಯ ಸ್ಪರ್ಧೆ ಮಾಡುತ್ತಾರೆ ಎಂಬ ಕಾರಣಕ್ಕೆ ಕೋಲಾರ ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿತ್ತು. ರಾಹುಲ್ ಗಾಂಧಿ ಅವರು ನೀಡಿದ 'ಮೋದಿ ಉಪನಾಮ' ಹೇಳಿಕೆ ವಿಚಾರಕ್ಕೆ ರಾಷ್ಟ್ರದ ಗಮನ ಸೆಳೆದಿದ್ದ ಕೋಲಾರ ಜಿಲ್ಲೆ ಅಭಿವೃದ್ಧಿ ವಿಚಾರದಲ್ಲಿ ಮಾತ್ರ ಬಹಳ ಹಿಂದುಳಿದಿದೆ.

ಇದು ಬೆಂಗಳೂರಿನಿಂದ 60 ಕಿ.ಮೀ ದೂರದಲ್ಲಿದೆ. ಇಲ್ಲಿನ ಚಿನ್ನದ ಗಣಿ ಹೊಳಪು ಕಳೆದುಕೊಂಡು ಎಷ್ಟೋ ವರ್ಷಗಳಾಗಿವೆ. ಚುನಾವಣೆ ಬಂದಾಗ ಅಭಿವೃದ್ಧಿ ವಿಚಾರ ತೆರೆಗೆ ಸರಿದು ಜಾತಿ, ಧರ್ಮದ ವಿಚಾರಗಳು ಮಹತ್ವ ಪಡೆದುಕೊಳ್ಳುತ್ತವೆ.

ದೇಶ, ವಿದೇಶಗಳಿಗೆ ರಫ್ತಾಗುವ ಮಾವು, ಟೊಮೊಟೊ ಜಿಲ್ಲೆಯ ಜೀವಾಳ. ದಶಕಗಳು ಉರುಳಿದರೂ ಈ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಶೇಖರಣೆಗೆ ಶಿಥಿಲೀಕರಣ ಘಟಕ ಹಾಗೂ ಸಂಸ್ಕರಣಾ ಘಟಕ ಇಲ್ಲ. ಬೆಲೆ ಸಿಗದೆ ರೈತರು ಇಂದಿಗೂ ಟೊಮೊಟೊ ರಸ್ತೆಗೆ ಚೆಲ್ಲುವ, ಚರಂಡಿಗಳಿಗೆ ಸುರಿಯುವ ಸ್ಥಿತಿ ಇದೆ.



30 ವರ್ಷಗಳಿಂದ ಈ ಸಮಸ್ಯೆ ಜೀವಂತವಾಗಿದೆ. ಕೋಲಾರ ಜಿಲ್ಲೆಯಿಂದ ಘಟಾನುಘಟಿ ರಾಜಕೀಯ ನಾಯಕರು ಆಯ್ಕೆಯಾಗಿ ವಿಧಾನ ಸೌಧ ಪ್ರವೇಶಿಸಿದರೂ ಇಲ್ಲಿಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಕ್ಕಿಲ್ಲ. ರಾಜಕೀಯವಾಗಿ ಬಲಾಢ್ಯವಾಗಿರುವ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜು ಬೇಕು ಎಂಬ ದಶಕಗಳ ಕೂಗು ಇದುವರೆಗೂ ಈಡೇರಿಲ್ಲ.

'ಪ್ರತಿ ಚುನಾವಣೆಯಲ್ಲಿ ಜಾತಿ, ಧರ್ಮ ವಿಚಾರ ತರುವವರು ಮೂರ್ಖರು. ನೀರಾವರಿ, ಕೃಷಿ, ಕುಡಿಯುವ ನೀರು, ಅಭಿವೃದ್ಧಿ ವಿಚಾರ ಚರ್ಚಿಸುವವರು ಪ್ರಜ್ಞಾವಂತರು' ಎಂದು ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷ ಆರ್. ಆಂಜನೇಯ ರೆಡ್ಡಿ ಹೇಳುತ್ತಾರೆ.

ಒಕ್ಕಲಿಗ ಅಸ್ತ್ರ, ಪ್ರತಿಮೆ ರಾಜಕಾರಣ: ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಸೇರಿದಂತೆ ಹಳೆ ಮೈಸೂರು ಭಾಗದಲ್ಲಿ ಬಿಜೆಪಿ ಹಿಂದುತ್ವದ ಜೊತೆಗೆ ಒಕ್ಕಲಿಗ ಅಸ್ತ್ರವನ್ನೂ ಪ್ರಯೋಗಿಸುತ್ತಿದೆ.

ರಾಮನಗರದ ರಾಮದೇವರ ಬೆಟ್ಟದಲ್ಲಿ ಅಯೋಧ್ಯೆ ಮಾದರಿಯಲ್ಲಿ ರಾಮಮಂದಿರ ನಿರ್ಮಾಣ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಣೆ ಮಾಡಿದೆ. ಅದರ ಜೊತೆಗೆ ಈ ಭಾಗದಲ್ಲಿ ಬಹುಸಂಖ್ಯಾತ ಒಕ್ಕಲಿಗ ಸಮುದಾಯವನ್ನು ಓಲೈಸಲು ಕೆಂಪೇಗೌಡರ ಹೆಸರನ್ನೂ ಬಳಕೆ ಮಾಡಿಕೊಂಡಿದೆ. ಚುನಾವಣೆ ಪೂರ್ವದಲ್ಲಿ ದೇವನಹಳ್ಳಿ ಬಳಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೆಂಪೇಗೌಡರ ಬೃಹತ್ ಪ್ರತಿಮೆ ಸ್ಥಾಪಿಸಿದೆ. ಅದರ ಅಂಗವಾಗಿ ನಾಡಿನಾದ್ಯಂತ ಕೆಂಪೇಗೌಡ ರಥ ಸಂಚಾರದ ಮೂಲಕ ಪವಿತ್ರ ಮೃತ್ತಿಕೆ ಸಂಗ್ರಹಿಸಿತು. ವಿಧಾನ ಸೌಧದಲ್ಲೂ ಕೆಂಪೇಗೌಡರ ಪುತ್ಥಳಿ ಸ್ಥಾಪನೆಯ ಹಿಂದೆ ಇದೇ ಉದ್ದೇಶ ಇರುವುದು ಸ್ಪಷ್ಟ.

ರಾಮನಗರ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿಯೂ ಬಿಜೆಪಿ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿದೆ. ಅದರಲ್ಲೂ ಕನಕಪುರದಲ್ಲಿ ಡಿ.ಕೆ. ಶಿವಕುಮಾರ್ ವಿರುದ್ಧ ಮತ್ತೊಬ್ಬ ಒಕ್ಕಲಿಗ ನಾಯಕ ಆರ್. ಅಶೋಕ ಅವರನ್ನೇ ಕಣಕ್ಕೆ ಇಳಿಸಿರುವ ಹಿಂದೆಯೂ ಈ ಲೆಕ್ಕಾಚಾರ ಅಡಗಿದೆ.

(ಪೂರಕ ಮಾಹಿತಿ: ಕೆ.ಜೆ. ಮರಿಯಪ್ಪ)

'ಸ್ಮಾರ್ಟ್ ಸಿಟಿ' ಸುತ್ತ ರಾಜಕಾರಣ

ತುಮಕೂರು ನಗರದಲ್ಲಿ 'ಸ್ಮಾರ್ಟ್ ಸಿಟಿ' ಯೋಜನೆ ಅಸಮರ್ಪಕ ಜಾರಿ, ಕಳಪೆ ಕಾಮಗಾರಿ, ಕಮಿಷನ್ ಆರೋಪಗಳನ್ನು ಕಾಂಗ್ರೆಸ್ ಜನರ ಬಳಿ ಕೊಂಡೊಯ್ಯುತ್ತಿದೆ. ಸ್ಮಾರ್ಟ್ ಸಿಟಿ ಯೋಜನೆ ಅವ್ಯವಸ್ಥೆ ಬಗ್ಗೆ ಜನರಲ್ಲಿ ಹೆಪ್ಪುಗಟ್ಟಿರುವ ಆಕ್ರೋಶವನ್ನು ಕಾಂಗ್ರೆಸ್, ಜೆಡಿಎಸ್ ಬಳಸಿಕೊಳ್ಳುತ್ತಿವೆ.

ಕ್ವಿಂಟಲ್ ಕೊಬ್ಬರಿ ಬೆಲೆ ₹20 ಸಾವಿರದಿಂದ ₹8 ಸಾವಿರಕ್ಕೆ ಕುಸಿದಿದೆ. ಬೆಂಬಲ ಬೆಲೆ, ಪ್ರೋತ್ಸಾಹ ಧನ ಕೊಡಿಸುವ ರಾಜಕಾರಣಿಗಳ ಭರವಸೆ ಈಡೇರಿಲ್ಲ. ಹೇಮಾವತಿ ನಾಲೆಗಳ ಆಧುನೀಕರಣ ಮಾಡದ ಕಾರಣ ಪೂರ್ಣ ಪ್ರಮಾಣದಲ್ಲಿ ಹೇಮಾವತಿ ನೀರು ಬಳಕೆ ಸಾಧ್ಯವಾಗುತ್ತಿಲ್ಲ.

ಎತ್ತಿನಹೊಳೆ ನೀರಾವರಿ ಯೋಜನೆ ಕುಂಟುತ್ತಾ ಸಾಗಿದೆ. ಇದರಿಂದ ತಿಪಟೂರು, ಗುಬ್ಬಿ, ಕೊರಟಗೆರೆ, ಮಧುಗಿರಿ ತಾಲ್ಲೂಕಿನ ಕೆರೆ ತುಂಬಿಸಿ ಕುಡಿಯುವ ನೀರು ಒದಗಿಸುವುದು ವಿಳಂಬವಾಗುತ್ತಿದೆ. ಹಣದ ಕೊರತೆಯಿಂದ ಭದ್ರಾ ಮೇಲ್ದಂಡೆ ಯೋಜನೆಗೆ ಕಾಮಗಾರಿ ಕುಂಟುತ್ತಾ ಸಾಗಿದೆ. ಪಾವಗಡ, ಶಿರಾ, ಮಧುಗಿರಿ ಭಾಗದಲ್ಲಿ ಹೆಚ್ಚಾಗಿ ಬೆಳೆಯುವ ಶೇಂಗಾ ಬೆಳೆಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಸ್ಥಳೀಯವಾಗಿ ಗಾರ್ಮೆಂಟ್ಸ್ ಮತ್ತು ಇತರ ಕೈಗಾರಿಕೆ ಆರಂಭಿಸಿದರೆ ಸ್ಥಳೀಯವಾಗಿ ಉದ್ಯೋಗ ಲಭ್ಯವಾಗಲಿದೆ. ಚುನಾವಣೆ ಸಮಯದಲ್ಲಿ ರಾಜಕೀಯ ಪಕ್ಷಗಳು ಈ ಬಗ್ಗೆ ಭರವಸೆ ನೀಡಿದರೂ, ಕಾರ್ಯರೂಪಕ್ಕೆ ಬರುವುದಿಲ್ಲ.

ಶಾಶ್ವತ ನೀರಾವರಿ, ಶುದ್ಧ ನೀರು ಪ್ರಣಾಳಿಕೆ ಸೇರಲಿ

ಕೋಲಾರ ಕೃಷಿ ಪ್ರಧಾನ ಜಿಲ್ಲೆ. ಆದರೆ, ನೀರಾವರಿ ಯೋಜನೆಗಳೇ ಇಲ್ಲ. ಕೆರೆ ಕೋಡಿ ಮುಚ್ಚಿದ್ದು, ರೈತರು ಕೊಳವೆ ಬಾವಿ ಅವಲಂಬಿಸಿದ್ದಾರೆ. ಕೆರೆ ಕುಂಟೆ, ರಾಜಕಾಲುವೆ, ಕಾಲುವೆ ಮರುಸ್ಥಾಪನೆ ಮಾಡಿದರೆ ಮಾತ್ರ ಕೃಷಿ ಉಳಿಯಲಿದೆ. ಕುಡಿಯುವ ನೀರಿನಲ್ಲಿ ಯುರೇನಿಯಂ, ಆರ್ಸೆನಿಕ್ ಅಂಶ ಇರುವುದನ್ನು ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಸಂಶೋಧನೆ ಹೇಳಿದೆ. ಹೀಗಾಗಿ, ಸುರಕ್ಷಿತ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಿದೆ, ಶಾಶ್ವತ ನೀರಾವರಿ ಯೋಜನೆ ಕಲ್ಪಿಸಬೇಕಿದೆ. ಕೆ.ಸಿ.ವ್ಯಾಲಿ ನೀರಿನ ಮೂರನೇ ಹಂತದ ಸಂಸ್ಕರಣೆ ನಡೆಯಬೇಕು. ಪ್ರತಿ ಬಜೆಟ್‌ನಲ್ಲೂ ಹಣ ಹೆಚ್ಚಿಸಿಕೊಳ್ಳುತ್ತಿರುವ ಎತ್ತಿನ ಹೊಳೆ ಯೋಜನೆ ಬಗ್ಗೆ ಸಮಗ್ರ ತನಿಖೆ ನಡೆಯಬೇಕು.


ಆರ್.ಆಂಜನೇಯ ರೆಡ್ಡಿ,
ಅಧ್ಯಕ್ಷ, ಶಾಶ್ವತ ನೀರಾವರಿ ಹೋರಾಟ ಸಮಿತಿ

ಮಾತಿನೇಟು



ವರುಣಕ್ಕೆ ವಿ.ಸೋಮಣ್ಣ ಅವರನ್ನು ಕರೆತಂದದ್ದು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್. ಅವರಿಗೆ ನಾನು ಸೋಲಬೇಕೆಂಬ ಆಸೆ. ಇದಕ್ಕಾಗಿ ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ದ್ವೇಷದ ರಾಜಕಾರಣವನ್ನು ಜನರು ಒಪ್ಪುವುದಿಲ್ಲ. ಸಂತೋಷ್ ಪಕ್ಕಾ ಆರ್‌ಎಸ್‌ಎಸ್‌ನವರು. ನಾನು ಕೋಲಾರದಲ್ಲಿ ಸ್ಪರ್ಧಿಸುತ್ತೇನೆ ಎಂದಾಗ ಅಲ್ಲಿಗೂ ಬಂದಿದ್ದರು. ಈಗ ವರುಣದಲ್ಲಿ ನನ್ನ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ಅವರಾಗಲಿ, ಸಂಸದ ಪ್ರತಾಪ ಸಿಂಹ ಆಗಲಿ ಕ್ಷೇತ್ರದ ಮತದಾರರಲ್ಲ. ಸಂತೋಷ್ ಸೇರಿದಂತೆ ಯಾರು ಏನೇ ತಂತ್ರ-ಕುತಂತ್ರದ ಕೆಲಸ ಮಾಡಿದರೂ ಏನೂ ನಡೆಯುವುದಿಲ್ಲ.

ಸಿದ್ದರಾಮಯ್ಯ, ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೋಲುವ ಭಯದಿಂದ ರಾಷ್ಟ್ರ ಮಟ್ಟದ ನಾಯಕರನ್ನು, ಸಿನಿಮಾ ನಟನನ್ನು ಕರೆಸಿಕೊಂಡು ಪ್ರಚಾರಕ್ಕೆ ಇಳಿದಿದ್ದಾರೆ. ಮೀಸಲಾತಿಯ ಸುಳ್ಳು ನಾಟಕದಿಂದ ತೊಂದರೆ ಆಗಬಹುದೆಂದು ಅವರಿಗೆ ಇಂತಹ ಭೀತಿ ಉಂಟಾಗಿರಬೇಕು. ಸುಳ್ಳು ಹೇಳುವುದಕ್ಕಿಂತ ನಿಜ ಹೇಳಿ ಸುಮ್ಮನೆ ಮನೆಗೆ ತೆರಳಿ ಮುಖ್ಯಮಂತ್ರಿ ಅವರೇ...


ಶರಣಬಸಪ್ಪಗೌಡ ದರ್ಶನಾಪುರ, ಶಾಸಕ,ಶಹಾಪುರ ಕಾಂಗ್ರೆಸ್ ಅಭ್ಯರ್ಥಿ

ಅಣಿ ಮುತ್ತು

ಶಿವಮೊಗ್ಗದಲ್ಲಿ ನನ್ನನ್ನು ಪ್ರೀತಿಸುವ ಮುಸ್ಲಿಂ ಸಮುದಾಯ ಇದೆ. ನಾನು ಚುನಾವಣಾ ರಾಜಕೀಯದಿಂದ ನಿವೃತ್ತಿ ಹೊಂದಿದಾಗ ಅನೇಕ ಮುಸ್ಲಿಂ ಹೆಣ್ಣುಮಕ್ಕಳು ಮನೆಗೆ ಬಂದು ಅಕ್ಕ-ತಂಗಿಯರ ಪ್ರೀತಿ ತೋರಿಸಿ ಕಣ್ಣೀರು ಹಾಕಿದ್ದಾರೆ. ಇವರನ್ನೆಲ್ಲ ನಾನು ಕೆಟ್ಟ ಮುಸ್ಲಿಮರು ಎಂದು ಹೇಳಲಾಗುತ್ತದೆಯೇ?



ಕೆ.ಎಸ್.ಈಶ್ವರಪ್ಪ, ಶಾಸಕ



ಸೆಲೆಬ್ರಿಟಿ ಮಾತು


ಮತದಾನವೂ ದೇಶಪ್ರೇಮ

ಬಸವರಾಜ ಮಹಾಮನಿ,
ಹಾಸ್ಯ ಕಲಾವಿದ

ದೇಶದ ಗಡಿ ಕಾಯುವ ಸೈನಿಕನ ಕೆಲಸದಂತೆಯೇ ಮತದಾನ ಮಾಡುವುದು ಕೂಡ ದೇಶಪ್ರೇಮದಂತೆ. ಮತದಾನ ಎಂಬ ಮಹತ್ವದ ಹಕ್ಕನ್ನು ತಪ್ಪದೇ ಚಲಾಯಿಸಬೇಕು. ಮತದಾನ ದಿನದಂದು ರಜೆ ಸಿಕ್ಕಿತೆಂದು ವಿದ್ಯಾವಂತರು ಮತ್ತು ಪ್ರಜ್ಞಾವಂತರು ಪ್ರವಾಸಕ್ಕೆ ತೆರಳಬಾರದು. ಮತದಾನ ದಿನವನ್ನು ಹಬ್ಬದ ದಿನವನ್ನಾಗಿ ಆಚರಿಸಬೇಕು. ಮತ ಚಲಾಯಿಸದಿದ್ದರೆ, ಉತ್ತಮ ನಾಯಕನನ್ನು ಆಯ್ಕೆ ಮಾಡುವ ಅವಕಾಶ ಕಳೆದುಕೊಂಡಂತೆ ಆಗುತ್ತದೆ. ಯಾವುದೇ ಆಸೆ, ಆಮಿಷಕ್ಕೆ ಒಳಗಾಗದೇ ಸೂಕ್ತ ಜನಪ್ರತಿನಿಧಿಯನ್ನು ಆಯ್ಕೆ ಮಾಡಬೇಕು.

ಕ್ಯಾಸಿನೊ ಆಡ್ಸಿ ಪುಣ್ಯ ಕಟ್ಕೊ ಅಣ್ಣ!

• ಎಂ.ಎನ್.ಯೋಗೇಶ್



ಚಹಾದಂಗಡಿ ಚುನಾವಣಾ ಪುರಾಣ

ದೊಡ್ಡರಸಿನಕೆರೆ ಚಿಕ್ಕೇಗೌಡ್ರಿಗೆ ವತ್ತಾರೆ ವತ್ತಾರೇನೇ ಒಂದು ಡೌಟು. ಹಾಸ್ಗೆಯಿಂದ ಮೇಲೆದ್ದವ್ರೇ ಕಣ್ಣುಜ್ಕೊಂಡ್ ತಮ್ಮಣ್ಣನ ಟೀ ಅಂಗ್ಡಿ ಮುಂದೆ ಕುಂತವ್ರೆ. ಆಗತಾನೆ ಮೂಡ್ಕೊಂಡ್ ಬರ್ತಾಯಿದ್ದ ಸೂರ್ಯನ ಕಡೆ ದೃಷ್ಟಿ ನೆಟ್ಕಂಡ್ ಯೋಚ್ನೆ ಮಾಡ್ತಾ ಕೂತ್ಬುಟ್ಟವ್ರೆ. ತಮ್ಮಣ್ಣ ಟೀ ಘಮ್ಲು ಮೂಗಿಗೆ ಬಡಿತಾ ಇದ್ದಂಗೆ ರಾಮೇಗೌಡ್ರೂ ಅಲ್ಲಿಗೆ ಬಂದ್ರು.

ಚಿಕ್ಕೇಗೌಡ್ರೂನ ನೋಡಿ 'ಏನ್ಲಾ ಬಡ್ಡತ್ತದೆ, ಹಿಂಗ್ ಕೂತ್ಕಬುಟ್ಟೆ, ಸೂರ್ಯ ಉಟ್ಟಾದ್ ನೋಡೆ ಇಲ್ವಾ' ಅಂದ್ರು. 'ರಾಮೇಗೌಡ, ನಮ್ಮ ಹೈಕ್ಳು ಉಗಾದಿ ಬಂದ್ರೆ ಇಸ್ಪೀಟ್ ಆಡ್ತವೆ, ಮದ್ದೂರ್ ಹೈಕ್ಳು ಅದೆಂಥದೋ ಕ್ರಿಕಿಟ್ ಬೆಟ್ಟಿಂಗ್ ಆಡ್ತಾವಂತೆ. ಈಗ ಅದೆಂಥದೋ ಬಂದೈತಂತೆ, ಕ್ಯಾಸಿನೊ ಅಂತ, ಹೊಸ ಆಟ. ಕ್ಯಾಸಿನೊ ಆಡೋದ್ ಹೆಂಗ್ಲಾ ರಾಮೇಗೌಡ' ಅಂತ ಚಿಕ್ಕೇಗೌಡ್ರು ಕೇಳಿದ್ರು.

ಅದ್ಕೆ ರಾಮೇಗೌಡ್ರು 'ನೋಡ್ಲ ಅಣ್ತಮ್ಮಾ ಎಲೆಕ್ಸನ್ ಬಂದಾಗ ಆಟ, ಉಡ್ಗಾಟ ಎಲ್ಲಾ ಬತ್ತಾವೆ. ನಮ್ಮ ಮಂಡ್ಯದಾಗ ಅಂಬ್ರೀಸಣ್ಣ ಇದ್ದಾಗ ಕುದ್ರೆ ಬಾಲದ ಆಟದ ಮಾತ್ ಜೋರಾಗ್ ನಡೀತಾ ಇತ್ತು. ಈಗ ಮದ್ದೂರ್‌ಗೆ ಉದಯಣ್ಣ ಬಂದವ್ನೆ, ಅವನು ಬಂದ್ಮೇಲೆ ಕ್ಯಾಸಿನೊ ಆಟ ಬಂದೈತೆ. ಎಲೆಕ್ಸನ್ ಟೈಮಲ್ಲಿ ಆಟಯೆಲ್ಲಾ ಕಾಮನ್ನು ಬುಡ್ಲಾ' ಅಂದ್ರು.

ಚಿಕ್ಕೇಗೌಡ್ರಿಗೆ ಕೋಪ, 'ಕತೆ ವಡಿಬೇಡ ರಾಮೇಗೌಡ, ಕ್ಯಾಸಿನೊ ಆಡೋದ್ ಹೆಂಗೆ ಹೇಳ್ಲಾ ಅಂದ್ರೆ... ಉದಯಣ್ಣ ಕ್ಯಾಸಿನೊ ಆಡ್ಸಿ ಆಡ್ಸಿ ಕುಮಾರಣ್ಣನ ಸಮ್ಮಿಸ್ರ ಸರ್ಕಾರನೇ ಬೀಳ್ಸಿಂದ್ನಂತೆ. ಕುಮಾರಣ್ಣ ವಿಧಾನ್‌ಸಭೇಲೇ ಹೇಳ್ಲಿಲ್ವಾ? ಕ್ಯಾಸಿನೊ ಆಡೋದ್ ಹೆಂಗೆ ಅನ್ನದೋ ಗೊತ್ತಾಯ್ತಯಿಲ್ವಲ್ಲಾ' ಅಂತ ತಲೆ ಕೆರ್ಕಂಡ್ರು.

ಅಲ್ಲೇ ಇದ್ದ ಆಟೊ ಡ್ರೈವರ್ ನಾಗೇಶಪ್ಪನಿಗೆ ಕೋಪ ಬಂತು. 'ಕ್ಯಾಸಿನೊ ಗ್ಯಾಸಿನೊ ನಿಮ್ಗ್ ಯಾಕಿರ್ಲಾ, ಅದು ಸ್ರೀಮಂತರು ಆಡೋ ಆಟ. ಲಕ್ಸ ಲಕ್ಸ ಕೋಟಿ ಕೋಟಿ ದುಡ್ಡು ಬಿಚ್ಬೇಕು, ಇಸ್ಪೀಟ್‌ಗಿಂತ ದೊಡ್ಡಾಟ. ಗೋವಾ, ಬಾಂಬೆನಲ್ಲಿ ಆಡ್ತಾರಂತೆ. ನಾವೆಲ್ಲಾ ಅದನ್ನ ಆಡಕಾಯ್ತದಾ' ಅಂತ ಗದರಿದ್ರು.

ಅಷ್ಟೊತ್ಗೆ ತಮ್ಮಣ್ಣನ ಟೀ ಅಂಗ್ಡಿ ಮುಂದೆ ಹತ್ತಾರು ಜನ ಸೇರಿದ್ರು. ಎಲ್ರೂ ಸೇರಿ ಒಂದ್ ತೀರ್ಮಾನ ತಗಂಡ್ರು. ಅದೇನಂದ್ರೆ; ಉದಯಣ್ಣ ಮತ್ತೆ ಊರಿಗ್ ಬಂದ್ರೆ ಅವರನ್ನು ಕೇಳ್ಬೇಕು, ದೊಡ್ಡರಸಿನಕೆರೆ, ಚಿಕ್ಕರಸಿನಕೆರೆಲೂ ಒಂದ್ಕಿತಾ ಕ್ಯಾಸಿನೊ ಆಡ್ಸಿ ಪುಣ್ಯ ಕಟ್ಕೊ ಅಂತ.

ಪ್ರಜಾ ಪತ್ರ

ಮತ ಚಲಾಯಿಸಿ ಹಕ್ಕು ಕಾಪಾಡಿಕೊಳ್ಳಿ



ಈಗೀಗ ರಾಜಕೀಯವೆಂದರೆ ರೇಜಿಗೆ ಹುಟ್ಟಿಸುವಷ್ಟರ ಮಟ್ಟಿಗೆ ಬದಲಾವಣೆಗಳಾಗುತ್ತಿವೆ. ಪಕ್ಷದ ಧೋರಣೆಗಳನ್ನು ಗಾಳಿಗೆ ತೂರಿ ಎಲ್ಲಿ ಅವಕಾಶ ಸಿಗುತ್ತೋ ಅಲ್ಲಿಗೆ ಅಭ್ಯರ್ಥಿಗಳು, ಆಕಾಂಕ್ಷಿಗಳು ಹಾರುತ್ತಲೇ ಇದ್ದಾರೆ. ಇಂಥ ಸಮಯದಲ್ಲಿ ನಮ್ಮ ಜವಾಬ್ದಾರಿಗಳು ಇನ್ನೂ ಹೆಚ್ಚಾಗುತ್ತವೆ. ಸಮಾಜಕ್ಕೆ ಒಳ್ಳೆಯದನ್ನು ಬಯಸುವ, ಸಮಾಜದ ಸ್ವಾಸ್ಥ್ಯ ಬಯಸುವ ಅಭ್ಯರ್ಥಿಗಳಿಗೆ ನಾವು ಮತ ಹಾಕಬೇಕಿದೆ. ನಮ್ಮ ಮತವನ್ನು ಯಾರಿಗೂ ಮಾರಿಕೊಳ್ಳದೇ ಮತದ ಪವಿತ್ರತೆಯನ್ನು ಎತ್ತಿಹಿಡಿಯೋಣ.

ನಿರ್ಮಲಾ ಶಿವನಗುತ್ತಿ, ಕೊಟ್ಟೂರು, ವಿಜಯನಗರ ಜಿಲ್ಲೆ

ಅಭಿವೃದ್ಧಿಯ ಬದ್ಧತೆ ಇರಲಿ



ನಾವು ಸ್ವಾತಂತ್ರ ಪಡೆದು 75 ವರ್ಷ ಆದರೂ ಇಂದಿಗೂ ಕೆಲವು ಶಾಲೆಗಳಲ್ಲಿ ಮೂಲ ಸೌಕರ್ಯಗಳಿಲ್ಲದೆ ಇರುವುದು ಸೋಜಿಗ. ಎಲ್ಲ ಮಕ್ಕಳಿಗೂ ಉತ್ತಮವಾದ ಗುಣಮಟ್ಟದ ಶಿಕ್ಷಣ ನೀಡುವುದು ಆದ್ಯ ಕರ್ತವ್ಯವಾಗಬೇಕು. ಗೆದ್ದ ಜನಪ್ರತಿನಿಧಿ ಒಬ್ಬರು ಸ್ವಾಮೀಜಿಯೊಬ್ಬರ ಆಶೀರ್ವಾದ ಪಡೆಯಲು ಹೋದಾಗ, ಸ್ವಾಮೀಜಿಗಳು ಅವರಿಗೆ ಮೆರಿಬೇಡ, ಮುರಿಬೇಡ, ಮರಿಬೇಡ ಎಂದು ಹೇಳಿದರು. ಆಗ ಶಾಸಕರು ಈ ಮಾತಿನ ಅರ್ಥ ಕೇಳಿದಾಗ, ಚುನಾವಣೆಯಲ್ಲಿ ಗೆದ್ದಿರುವನೆಂದು ಮೆರೆಯಬೇಡ. ಜನರ ಮನಸ್ಸುಗಳನ್ನು ಮುರಿಬೇಡ. ನಿನಗೆ ಮತದಾನ ಮಾಡಿದವರನ್ನು ಮರೆಯದೆ ಎಲ್ಲರನ್ನೂ ಒಗ್ಗೂಡಿಸಿಕೊಂಡು ಅಭಿವೃದ್ಧಿ ಕಾರ್ಯ ಮಾಡುವುದು ಮರೆಯಬೇಡ ಎಂದು ಹೇಳಿದರು. ಈ ಮಾತುಗಳನ್ನು ನಮ್ಮ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು ಆದರ್ಶವಾಗಿಟ್ಟುಕೊಂಡು ರಾಜ್ಯದ ಅಭಿವೃದ್ಧಿಗೆ ಬದ್ಧತೆ ತೋರಬೇಕು.

ಬಿ. ಚಂದ್ರಶೇಖರ, ತೆಕ್ಕಲಕೋಟೆ, ಬಳ್ಳಾರಿ

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಹರಟೆ ಕಟ್ಟೆಯ ಮಲ್ಲರಿಗೆ ಭರವಸೆಗಳೇ ಚರ್ಚೆಯ ವಸ್ತು

ಎದುರಾಳಿಗಿಂತ ಬಿರುಬಿಸಿಲೇ ಸವಾಲು

• ಪ್ರಮೋದ

ಕೊಪ್ಪಳ: ಉಮೇದುವಾರಿಕೆ ಮುಕ್ತಾಯಗೊಂಡು ಸಭೆ, ಸಮಾವೇಶ ಆಯೋಜನೆಗೆ ಸಿದ್ಧತೆ ನಡೆಯುತ್ತಿರುವಂತೆಯೇ ರಾಜಕೀಯ ಪಕ್ಷಗಳ ಪ್ರಚಾರ ನಿಧಾನವಾಗಿ ರಂಗೇರುತ್ತಿದೆ. ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಬಿಸಿಲು ಅಭ್ಯರ್ಥಿಗಳಿಗೆ ಎದುರಾಳಿಗಿಂತ ದೊಡ್ಡ ಸವಾಲಾಗಿದೆ.

ನಿತ್ಯ 39ರಿಂದ 40 ಡಿಗ್ರಿ ಸೆಲ್ಸಿಯಸ್ ಬಿರುಬಿಸಿಲು ಇರುವುದರಿಂದ ಕೊಪ್ಪಳ ಸುತ್ತಮುತ್ತಲಿನ ಕವಲೂರು, ಹಂದ್ರಾಳ, ಘಟ್ಟಿರೆಡ್ಡಿಹಾಳ, ಗುಡಗೇರಿ ಸೇರಿ ಹಲವು ಗ್ರಾಮೀಣ ಪ್ರದೇಶಗಳಲ್ಲಿ ಜನ ಹೊಲದ ಕೆಲಸಕ್ಕೂ ಹೋಗುವುದು ಕಡಿಮೆ ಮಾಡಿದ್ದಾರೆ. ಬಿಸಿಲು ಹೆಚ್ಚಾಗುವ ಮೊದಲೇ ಊಟ ಮಾಡಿ, ಊರಿನ ತಂಪಾದ ಮರದ ನೆರಳಿನಲ್ಲಿ 'ರಾಜಕಾರಣ'ದ ಹರಟೆ ಹೊಡೆಯುತ್ತಾರೆ.

ಕಾಂಗ್ರೆಸ್, ಬಿಜೆಪಿ, ಜೆಡಿಎಸ್, ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಸೇರಿ ವಿವಿಧ ಪಕ್ಷಗಳ ಅಭ್ಯರ್ಥಿಗಳು ಗ್ರಾಮಗಳಿಗೆ ಪ್ರಚಾರಕ್ಕೆ ತೆರಳಿದಾಗ, ಎಲ್ಲರನ್ನೂ ಪ್ರೀತಿಯಿಂದ ಸ್ವಾಗತಿಸುತ್ತಾರೆ. ಆಯಾ ಪಕ್ಷಗಳ ನಾಯಕರು ನೀಡುವ ಭರವಸೆಗಳನ್ನು ಆಲಿಸಿ, ಕೈ ಮುಗಿದು ವಾಪಸ್ ಕಳುಹಿಸುತ್ತಾರೆ. ಎಲ್ಲರನ್ನೂ ಗೌರವಿಸುತ್ತಾರೆ. ಎಲ್ಲರಿಗೂ 'ನಿಮಗೇ ಮತ ಹಾಕುತ್ತೇವೆ' ಎನ್ನುತ್ತಾರೆ.

ಹೀಗಾಗಿ ಗ್ರಾಮೀಣ ಭಾಗದ 'ಹರಟೆ ಕಟ್ಟೆಯ ಮಲ್ಲರಿಗೆ' ಅಭ್ಯರ್ಥಿಗಳ ಭರವಸೆಯ ಮಾತುಗಳು ಹಳ್ಳಿಯಿಂದ ದಿಲ್ಲಿ ರಾಜಕಾರಣದವರೆಗಿನ ಚರ್ಚೆಗೆ ವಸ್ತುಗಳಾಗುತ್ತವೆ. ಈಚೆಗೆ ನಾಮಪತ್ರ ಸಲ್ಲಿಸುವಾಗಲೂ ಬಹುತೇಕ ಎಲ್ಲ ಪಕ್ಷಗಳ ಕಾರ್ಯಕರ್ತರು ಮತ್ತ ತಮ್ಮ ಬೆಂಬಲಿಗರಿಗೆ ಬಿಸಿಲಿನಿಂದ ರಕ್ಷಣೆ ಮಾಡಿಕೊಳ್ಳಲು ಟೋಪಿ, ಕೊಡೆ ವ್ಯವಸ್ಥೆ ಮಾಡಿದ್ದವು. ಬಿಸಿಲಿನ ತಾಪದಿಂದ ತಪ್ಪಿಸಿಕೊಳ್ಳಲು ಅಭ್ಯರ್ಥಿಗಳು ಬೆಳಗಿನ ಜಾವವೇ ಗ್ರಾಮಗಳಿಗೆ ತೆರಳಿ, ವಾರ್ಡ್‌ವಾರು ಸಭೆ ನಡೆಸುತ್ತಾರೆ. ಸಂಜೆ ಯಿಂದ ತಡರಾತ್ರಿಯವರೆಗೆ ಮತ್ತೆ ಚುನಾವಣಾ ಪ್ರಚಾರ ನಡೆಯುತ್ತದೆ.

'ಚುನಾವಣೆ ಚಟುವಟಿಕೆಗೂ ಮುನ್ನ ರಾತ್ರಿ 9 ರಿಂದ 10ರ ವೇಳೆಗೆ ಗ್ರಾಮಸ್ಥರು ಮಲಗಿರುತ್ತಿದ್ದರು. ಆದರೆ, ಈಗ ರಾತ್ರಿಯವರೆಗೆ ಪ್ರಚಾರ ಮುಂದುವರೆಯುತ್ತದೆ' ಎಂದು ಕೊಪ್ಪಳ ತಾಲ್ಲೂಕಿನ ಚಿಲಕಮುಖಿಯ ಕಿರಣ್ ಕುಮಾರ್ ಶೆಡ್ಡೆ ಹೇಳುತ್ತಾರೆ.



ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಬಿಸಿಲಿನಿಂದ ರಕ್ಷಣೆ ಪಡೆಯಲು ಕೊಪ್ಪಳದಲ್ಲಿ ಛತ್ರಿಯ ಮೊರೆ ಹೋದ ಜೆಡಿಎಸ್ ಕಾರ್ಯಕರ್ತ

ಕ್ಷೇತ್ರದ ಕೂಗು

• **ಕ್ಷೇತ್ರ: ಆಳಂದ**
• **ಶಾಸಕ: ಸುಭಾಷ ಆರ್.ಗುತ್ತೇದಾರ** (ಬಿಜೆಪಿ)



▸ ಬೆಣ್ಣೆತೊರಾ ಜಲಾಶಯದಿಂದ 80 ಗ್ರಾಮಗಳಿಗೆ ನೀರು ಹರಿಸುವ ಯೋಜನೆ ಇನ್ನೂ ಈಡೇರಿಲ್ಲ. ಆಳಂದ ಪಟ್ಟಣದ ರಸ್ತೆ ವಿಸ್ತರಣೆ ಕಾರ್ಯ ನನೆಗುದಿಗೆ ಬಿದ್ದಿದ್ದು, ಅನುದಾನ ಸದ್ಬಳಕೆ ಆಗಿಲ್ಲ. ಅಮರ್ಜಾ ಅಣೆಕಟ್ಟೆಯಿಂದ ಜಮೀನುಗಳಿಗೆ ನೀರು ಹರಿಯುತ್ತಿಲ್ಲ. ಆಳಂದದಲ್ಲಿ ಇರುವ ಗುಲಬರ್ಗಾ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರಕ್ಕಿಲ್ಲ ಸ್ವಂತ ಕಟ್ಟಡ.

• **ಕ್ಷೇತ್ರ: ಅಫಜಲಪುರ**
• **ಶಾಸಕ: ಎಂ.ವೈ.ಪಾಟೀಲ** (ಕಾಂಗ್ರೆಸ್)




▸ ಅಫಜಲಪುರ ತಾಲ್ಲೂಕಿನ 9 ಕೆರೆಗಳಿಗೆ ಮತ್ತು ಆಳಂದ ತಾಲ್ಲೂಕಿನ ಅಮರ್ಜಾ ಬ್ಯಾರೇಜಿಗೆ ನೀರು ತುಂಬುವ ₹ 318 ಕೋಟಿ ವೆಚ್ಚದ ಯೋಜನೆಗೆ 2018ರಲ್ಲಿ ಅಡಿಗಲ್ಲು ಹಾಕಲಾಯಿತು. ಆದರೆ ಎರಡು ವರ್ಷಗಳಲ್ಲಿ ಮುಗಿಯಬೇಕಿದ್ದ ಯೋಜನೆ ಇನ್ನೂ ಮುಗಿದಿಲ್ಲ. ಸೊನ್ನ ಗ್ರಾಮದ ಬಳಿ ಭೀಮಾ ನದಿಗೆ 1992ರಲ್ಲಿ ಆಗಿನ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರು ಅಡಿಗಲ್ಲು ಹಾಕಿದ್ದರು. ಈವರೆಗೆ ಸಾವಿರ ಕೋಟಿ ಖರ್ಚಾಗಿದೆ. ಆದರೆ, ಜಮೀನುಗಳಿಗೆ ನೀರು ಹರಿದಿಲ್ಲ.

• **ಕ್ಷೇತ್ರ: ಜೇವರ್ಗಿ**
• **ಶಾಸಕ: ಡಾ. ಅಜಯ್ ಸಿಂಗ್** (ಕಾಂಗ್ರೆಸ್)



▸ ಅನುದಾನ ಕೊರತೆಯಿಂದ ಮಲ್ಲಾಬಾದ ಏತ ನೀರಾವರಿ ಯೋಜನೆ ಕಾಮಗಾರಿ ಸ್ಥಗಿತಗೊಂಡಿತ್ತು. ಎರಡು ತಿಂಗಳ ಹಿಂದೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ₹ 300 ಕೋಟಿ ಅನುದಾನ ಬಿಡುಗಡೆಗೊಳಿಸಿದರೂ ಪ್ರಗತಿ ಕಂಡಿಲ್ಲ. ಎಪಿಎಂಸಿ ಆವರಣದಲ್ಲಿ 6 ವರ್ಷಗಳಿಂದ ನಿರ್ಮಿಸಲಾಗುತ್ತಿರುವ ಶಾಪಿಂಗ್ ಮಾಲ್ ಇನ್ನೂ ಪೂರ್ಣವಾಗಿಲ್ಲ. ಈ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ಕನ್ನಡಪರ ಸಂಘಟನೆಯವರು ಹೋರಾಟ ನಡೆಸಿದರೂ ಪ್ರಯೋಜನ ಆಗಿಲ್ಲ.

• **ಕ್ಷೇತ್ರ: ಚಿಂಚೋಳಿ**
• **ಶಾಸಕ: ಡಾ. ಅವಿನಾಶ ಜಾಧವ** (ಬಿಜೆಪಿ)



▸ ಚಿಂಚೋಳಿಯಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಮಂಜೂರು ಮಾಡಬೇಕು ಎಂಬ ಕೂಗು ಇನ್ನೂ ಈಡೇರಿಲ್ಲ. ₹ 204 ಕೋಟಿ ವೆಚ್ಚದ ಐನಾಪುರ ಏತ ನೀರಾವರಿ ಯೋಜನೆ ಮಂಜೂರಾಗಿ ಟೆಂಡರ್ ಪ್ರಕ್ರಿಯೆ ನಡೆದರೂ ಕಾಮಗಾರಿ ಪ್ರಾರಂಭವಾಗಿಲ್ಲ. ಬೆಡಸೂರು ಮತ್ತು ಇತರ 95 ಗ್ರಾಮಗಳ ಜನರಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮಂಜೂರಾಗಿದೆ. ಆದರೆ ಕಾಮಗಾರಿ ಪ್ರಾರಂಭವಾಗಿಲ್ಲ.

• **ಕ್ಷೇತ್ರ: ಸೇಡಂ**
• **ಶಾಸಕ: ರಾಜಕುಮಾರ ಪಾಟೀಲ ತೇಲ್ಕೂರ** (ಬಿಜೆಪಿ)




▸ ಕಾಗಿಣಾ ಏತನೀರಾವರಿ ಬೇಡಿಕೆ ಈಡೇರಿಲ್ಲ. ಸ್ಥಳೀಯ ಸಿಮೆಂಟ್ ಕಂಪನಿಯಲ್ಲಿ ಸ್ಥಳೀಯ ಯುವಜನರಿಗೆ ಉದ್ಯೋಗದ ಭರವಸೆ ಈಡೇರಿಲ್ಲ. ಸುಸಜ್ಜಿತ ಗ್ರಂಥಾಲಯ ಕಟ್ಟಡ ಮಂಜೂರಾದರೂ ಕಾರ್ಯ ಆರಂಭವಾಗಿಲ್ಲ. ಸೇಡಂ ಮಧ್ಯಭಾಗದಿಂದ ಹಾದು ಹೋಗಿರುವ ವಾಸವದತ್ತಾ ಸಿಮೆಂಟ್ ಕಂಪನಿಯ ರೈಲು ಹಳಿ ಸ್ಥಳಾಂತರಗೊಂಡಿಲ್ಲ. ಕಾಗಿಣಾ ನದಿ ಸೇತುವೆ ಪೂರ್ಣಗೊಂಡಿಲ್ಲ.

• **ಕ್ಷೇತ್ರ: ಕಲಬುರಗಿ ಗ್ರಾಮೀಣ**
• **ಶಾಸಕ: ಬಸವರಾಜ ಮತ್ತಿಮೂಡ** (ಬಿಜೆಪಿ)



▸ ಕಮಲಾಪುರದಲ್ಲಿ ತಾಲ್ಲೂಕು ಆಸ್ಪತ್ರೆ ನಿರ್ಮಿಸುವ ಭರವಸೆ ಕಾರ್ಯರೂಪಕ್ಕೆ ಬಂದಿಲ್ಲ. ತಾಲ್ಲೂಕಿನಲ್ಲಿ ಗಂಡೋರಿ ನಾಲಾ, ಬೆಣ್ಣೆತೊರಾ ಯೋಜನೆಯಲ್ಲಿ ಹತ್ತಾರು ಗ್ರಾಮ, ಸಾವಿರಾರು ಎಕರೆ ಫಲವತ್ತಾದ ಜಮೀನು ಮುಳುಗಡೆಯಾಗಿದೆ. ಯೋಜನೆ ಪೂರ್ಣಗೊಂಡು 25 ವರ್ಷ ಕಳೆದರೂ ಯಾರ ಜಮೀನಿಗೂ ಇದುವರೆಗೆ ಹನಿ ನೀರು ಹರಿದಿಲ್ಲ.

• **ಕ್ಷೇತ್ರ: ಚಿತ್ತಾಪುರ**
• **ಶಾಸಕ: ಪ್ರಿಯಾಂಕ್ ಖರ್ಗೆ** (ಕಾಂಗ್ರೆಸ್)



▸ ಚಿತ್ತಾಪುರ ತಾಲ್ಲೂಕಿನ ಸನ್ನತಿ ಹತ್ತಿರ ಭೀಮಾ ನದಿಯಿಂದ ನೀರು ಬಳಸುವ ಏತ ನೀರಾವರಿ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ಚಾಮನೂರು– ನರಿಬೋಳ ನಡುವೆ ಭೀಮಾ ನದಿಗೆ ಸೇತುವೆ ನಿರ್ಮಾಣ ಕಾಮಗಾರಿ ಅಪೂರ್ಣ ಸ್ಥಿತಿಯಲ್ಲಿ ಸ್ಥಗಿತಗೊಂಡಿದೆ. ಬೆಣ್ಣೆತೊರಾ ನೀರಾವರಿ ಯೋಜನೆ ಪೂರ್ಣಗೊಳ್ಳದೆ ರೈತರ ನೀರಾವರಿ ಕನಸು ನನಸಾಗಿಲ್ಲ. ರೈಲು ಮಾರ್ಗ ನಿರ್ಮಾಣಕ್ಕಾಗಿ ರೈತರ ಭೂಮಿ ಸ್ವಾಧೀನ ಮಾಡಿಕೊಂಡರೂ ಸೂಕ್ತ ಪರಿಹಾರ ಸಿಕ್ಕಿಲ್ಲ.

• **ಕ್ಷೇತ್ರ: ಕಲಬುರಗಿ ದಕ್ಷಿಣ**
• **ಶಾಸಕ: ದತ್ತಾತ್ರೇಯ ಪಾಟೀಲ ರೇವೂರ** (ಬಿಜೆಪಿ)



▸ ಶುದ್ಧ ಕುಡಿಯುವ ನೀರಿನ ಪೂರೈಕೆ ಸಾಧ್ಯವಾಗಿಲ್ಲ. ನಿರಂತರ ನೀರು ಕುಡಿಯುವ ಯೋಜನೆಯ ಅನುಷ್ಠಾನದ ಕಾಮಗಾರಿ ವಿಳಂಬವಾಗಿದ್ದು, ಜನರಿಗೆ ಸಕಾಲಕ್ಕೆ ನೀರು ಸಿಗುತ್ತಿಲ್ಲ. ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕೊರತೆ ತೀವ್ರವಾಗಿ ಬಾಧಿಸುತ್ತಿದೆ. ಕೆಕೆಆರ್‌ಡಿಬಿ ನಿಧಿಯಿಂದ ಪೂರ್ಣಗೊಳ್ಳಬೇಕಿದ್ದ ಅಂತರ ರಾಷ್ಟ್ರೀಯ ಕ್ರೀಡಾ ಸಂಕೀರ್ಣ ನಿರ್ಮಾಣ ಇನ್ನೂ ಭರವಸೆಯಾಗಿಯೇ ಉಳಿದಿದೆ.

• **ಕ್ಷೇತ್ರ: ಕಲಬುರಗಿ ಉತ್ತರ**
• **ಶಾಸಕಿ: ಖನೀಜ್ ಫಾತಿಮಾ** (ಕಾಂಗ್ರೆಸ್)



▸ ಕಲಬುರಗಿ ಉತ್ತರ ಕ್ಷೇತ್ರವು ಹಳೆಯ ಕಲಬುರಗಿಯಾಗಿದ್ದು ರಸ್ತೆ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಜಾಲದ ವಿಸ್ತರಣೆ ಆಗಿಲ್ಲ. ಸೂಪರ್ ಮಾರ್ಕೆಟ್‌ನಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಸರಿಯಾಗಿಲ್ಲ. ಕಸ ವಿಲೇವಾರಿಯೂ ಸೂಕ್ತವಾಗಿ ಆಗುತ್ತಿಲ್ಲ. ಖಾಜಾ ಬಂದಾ ನವಾಜ್ ಹಾಗೂ ಹಫ್ತ್ ಗುಂಬಜ್ ಸುತ್ತಲಿನ ಜಾಗವನ್ನು ಪ್ರವಾಸೋದ್ಯಮ ದೃಷ್ಟಿಯಿಂದ ಅಭಿವೃದ್ಧಿಪಡಿಸುವ ಕೆಲಸ ಆಗಿಲ್ಲ.

‘ಸಿದ್ದರಾಮಯ್ಯ ಮುಗಿಸಲು ಹುನ್ನಾರ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಕಳೆದ ಬಾರಿ ಚಾಮುಂಡೇಶ್ವರಿಯಲ್ಲಿ ಮುಗಿಸಿದ್ದರು. ಈಗ ವರುಣದಲ್ಲಿ ಮುಗಿಸಲು ಹೇಗೆ ಹುನ್ನಾರ ಮಾಡಿದ್ದಾರೆ ಎಂಬುದು ಜಗತ್ತಿಗೇ ಗೊತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿದಂತೆ ಎಲ್ಲರೂ ಯಡಿಯೂರಪ್ಪ ಅವರನ್ನು ಮುಗಿಸುತ್ತಾರೆ’ ಎಂಬ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿಕೆ ಕುರಿತು ಮಾಧ್ಯಮ ಪ್ರತಿನಿಧಿಗಳಿಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ‘ಸಿದ್ದರಾಮಯ್ಯ ಅವರನ್ನು ಹೇಗೆ ಮುಗಿಸಿದ್ದಾರೆ ಗೊತ್ತಿಲ್ವಾ? ಈ ರೀತಿಯ ಮಾತುಗಳಿಗೆ ಉತ್ತರ ಕೊಡುವ ಅಗತ್ಯವಿಲ್ಲ’ ಎಂದರು.

ಶಿವಕುಮಾರ್ ಅವರಿಗೆ ಈಗ ಮಾತನಾಡಲು ಯಾವುದೇ ವಿಚಾರ ಇಲ್ಲ. ಹೀಗಾಗಿ ನಾಮಪತ್ರ ತಿರಸ್ಕರಿಸಲು ಪ್ರಭಾವ ಬೀರಿದ್ದರು ಎಂದು ಸುಳ್ಳು ಹೇಳುತ್ತಿದ್ದಾರೆ. ಶುಕ್ರವಾರವೇ ಎಲ್ಲ ಪ್ರಕ್ರಿಯೆ ಮುಗಿದಿದೆ. ಯಾರ ನಾಮಪತ್ರವೂ ತಿರಸ್ಕೃತವಾಗಿಲ್ಲ. ಅವರ ಆರೋಪ ಸುಳ್ಳು ಎನ್ನುವುದಕ್ಕೆ ಇದೇ ಸಾಕ್ಷಿ ಎಂದು ಹೇಳಿದರು.

ಲಿಂಗಾಯತರು ಗಟ್ಟಿಯಾಗಿದ್ದಾರೆ: ‘ಕಾಂಗ್ರೆಸ್ ಗುಂಡಿಯಲ್ಲಿ ನೀರೇ ಇಲ್ಲ. ಮೊದಲು ಅದನ್ನು ನೋಡಿಕೊಳ್ಳಲಿ. 2013ರಲ್ಲಿ ಲಿಂಗಾಯತರು ವಿಭಜನೆಯಾಗಿರಲಿಲ್ಲ. ಹೊಸ ರಾಜಕೀಯ ಪಕ್ಷ ಅಸ್ತಿತ್ವಕ್ಕೆ ಬಂದಿತ್ತು. ಲಿಂಗಾಯತರು ಜಾಗೃತರಾಗಿದ್ದಾರೆ. ಶಿವಕುಮಾರ್ ಅವರ ಹೇಳಿಕೆಗಳಿಂದ ಮತ್ತಷ್ಟು ಗಟ್ಟಿಯಾಗಿದ್ದಾರೆ’ ಎಂದರು.

ನಾಮಪತ್ರ ತಿರಸ್ಕರಿಸಲು ಸಿ.ಎಂ ಕಚೇರಿ ಷಡ್ಯಂತ್ರ: ಡಿಕೆಶಿ

ಬೆಂಗಳೂರು: ‘ಕಾಂಗ್ರೆಸ್ ಅಭ್ಯರ್ಥಿಗಳ ನಾಮಪತ್ರ ತಿರಸ್ಕರಿಸಲು ಬಿಜೆಪಿ ಮತ್ತು ಮುಖ್ಯಮಂತ್ರಿ ಕಚೇರಿಯಿಂದ ಷಡ್ಯಂತ್ರ ನಡೆದಿತ್ತು’ ಎಂದು ಗಂಭೀರ ಆರೋಪ ಮಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಮುಖ್ಯಮಂತ್ರಿ ಕಚೇರಿಯ ದೂರವಾಣಿ ಕರೆ ಪಟ್ಟಿಯನ್ನು ತೆಗೆದುಕೊಂಡು ಚುನಾವಣಾ ಆಯೋಗ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ನನ್ನ ನಾಮಪತ್ರವನ್ನೇ ತಿರಸ್ಕರಿಸಲು ಬಿಜೆಪಿ ತಂಡ ಪ್ರಯತ್ನಿಸಿತ್ತು. ಚುನಾವಣಾ ಆಯೋಗ ಈ ಅಧಿಕಾರ ದುರುಪಯೋಗವನ್ನು ಗಮನಿಸಬೇಕು’ ಎಂದರು.

‘ಸವದತ್ತಿ ಯಲ್ಲಮ್ಮ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯ ನಾಮಪತ್ರದಲ್ಲಿ ದೋಷ ಇದ್ದರೂ ಅದನ್ನು ತಿದ್ದಲು ಮುಖ್ಯಮಂತ್ರಿ ಕಚೇರಿಯಿಂದ ಚುನಾವಣಾಧಿಕಾರಿಗಳಿಗೆ ಕರೆ ಮಾಡಿ ಒತ್ತಡ ಹೇರಲಾಗಿತ್ತು’ ಎಂದೂ ದೂರಿದರು.

‘ನಿಮ್ಮ ಅರ್ಜಿ ತಿರಸ್ಕರಿಸಲು ಯಾರು ಒತ್ತಡ ಹಾಕಿದ್ದರು’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ನನ್ನ ಅರ್ಜಿಯನ್ನು ಎಷ್ಟು ಮಂದಿ ಡೌನ್ಲೋಡ್ ಮಾಡಿ ಅರ್ಜಿ ತಿರಸ್ಕರಿಸುವಂತೆ ಮಾಡಬೇಕೆಂದು ದೊಡ್ಡ ಕಾನೂನು ತಜ್ಞರ ತಂಡವನ್ನೇ ಬಿಜೆಪಿ ನಿಯೋಜಿಸಿತ್ತು’ ಎಂದು ಹೇಳಿದರು.

‘ಹಣ ಪಡೆದು ಕಾಂಗ್ರೆಸ್ ಟಿಕೆಟ್ ಹಂಚಲಾಗಿದೆ’ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆರೋಪಕ್ಕೆ, ‘ಶೋಭಕ್ಕಾ, ನಾನು ಶೇ 40 ಕಮಿಷನ್ ಪಡೆದಿಲ್ಲ. ನಿಮ್ಮ ಕಮಿಷನ್‌ಗೆ ನಿಮ್ಮ ಪಕ್ಷದ ನಾಯಕರಾದ ಓಲೇಕಾರ್, ಯತ್ನಾಳ್, ಗೂಳಿಹಟ್ಟಿ ಶೇಖರ್, ಈಶ್ವರಪ್ಪ, ಮಾಡಾಳ್ ವಿರೂಪಾಕ್ಷಪ್ಪ ಅವರೇ ಸಾಕ್ಷಿ. ನಾವು ನಮ್ಮ ಪಕ್ಷದ ಕಟ್ಟಡಕ್ಕೆ ದೇಣಿಗೆ ಸಂಗ್ರಹಿಸಿದ್ದೇವೆ’ ಎಂದರು.

ಶೆಟ್ಟರ್ ಅವರನ್ನು ಮಣಿಸಲು ಆರೆಸ್ಸೆಸ್‌ನವರು ನಿಗಾ ಇಟ್ಟಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಅವರು ಜಗದೀಶ ಶೆಟ್ಟರ್ ವಿರುದ್ಧ ಏನಾದರೂ ಷಡ್ಯಂತ್ರ ಮಾಡಲಿ. ಶೆಟ್ಟರ್ ಹಿರಿಯ ನಾಯಕರು, ನಮ್ಮ ಪಕ್ಷದ ತಾರಾ ಪ್ರಚಾರಕರು’ ಎಂದರು.

ಒಗ್ಗಟ್ಟಿನ ‘ಫೋಟೊ ಶೂಟ್’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಸಭೆ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂದು ಪಣ ತೊಟ್ಟಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಕಾರ್ಯಕ್ರಮವೊಂದರಲ್ಲಿ ಜೋಡೆತ್ತಿನಂತೆ ನಿಂತು ‘ಫೋಟೊ ಶೂಟ್’ಗೆ ಪೋಸ್ ಕೊಟ್ಟಿದ್ದಾರೆ!

ಈ ಫೋಟೊ ಶೂಟ್ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್, ‘ವಿರೋಧಿಗಳು ಅದೆಷ್ಟೇ ಅಪಪ್ರಚಾರ ಮಾಡಬಹುದು. ಆದರೆ ಕಾಂಗ್ರೆಸ್ ಪಕ್ಷಕ್ಕೆ ಐಕ್ಯತೆ, ಏಕತೆ, ಒಗ್ಗಟ್ಟೇ ಶಕ್ತಿ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಶಕ್ತಿಯೇ ವಿರೋಧಿಗಳ ನಿದ್ದೆಗೆಡಿಸಿದೆ. ಮುಂದೆ ಶಾಶ್ವತವಾಗಿ ನಿದ್ದೆಗೆಡಿಸಲಿದೆ. ಜನನಾಯಕ + ಸಂಘಟನಾ ಚತುರ = ಅಭೂತಪೂರ್ವ ಯಶಸ್ಸು’ ಎಂದು ಬಣ್ಣಿಸಿದೆ.

ಚುನಾವಣೆಗೆ ಸಿದ್ಧತೆ, ಯಾತ್ರೆ, ಪ್ರಚಾರ, ಮುಂದಿನ ಮುಖ್ಯಮಂತ್ರಿ, ಟಿಕೆಟ್ ಘೋಷಣೆ,.. ಹೀಗೆ ಹಲವು ವಿಷಯಗಳಲ್ಲಿ ಈ ಇಬ್ಬರ ನಡುವಿನ ‘ಬಣ ರಾಜಕೀಯ’ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿತ್ತು. ಒಟ್ಟು 224 ವಿಧಾನಸಭಾ ಕ್ಷೇತ್ರಗಳ ಪೈಕಿ ಅರ್ಧಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಇಬ್ಬರ ಪರ ಬೆಂಬಲಿಗರು ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದರು. ಆದರೆ, ಸಿದ್ದರಾಮಯ್ಯ– ಡಿ.ಕೆ. ಶಿವಕುಮಾರ್ ಜೋಡಿಯಾಗಿ ಫೋಟೊಕ್ಕೆ ಪೋಸ್ ನೀಡಿರುವುದು ಹೊಸ ಚರ್ಚೆಗೆ ದಾರಿ ಮಾಡಿದೆ. ಈ ಫೋಟೊಗಳು ಕಾಂಗ್ರೆಸ್ ನಾಯಕರ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುತ್ತಿವೆ.



ಸಿದ್ದರಾಮಯ್ಯ– ಡಿ.ಕೆ. ಶಿವಕುಮಾರ್

ಬಿಜೆಪಿ ಪ್ರಮುಖರಿಗೆ ‘ಆಪರೇಷನ್ ಹಸ್ತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಪ್ರಚಾರ ಬಿರುಸುಗೊಳ್ಳುತ್ತಿರುವ ಮಧ್ಯೆಯೇ, ‘ಆಪರೇಷನ್ ಹಸ್ತ’ ಮುಂದುವರಿಸಿರುವ ಕಾಂಗ್ರೆಸ್ ನಾಯಕರು, ಮೂರು ಪ್ರತ್ಯೇಕ ಪಕ್ಷ ಸೇರ್ಪಡೆ ಕಾರ್ಯಕ್ರಮಗಳಲ್ಲಿ ಚಿತ್ತಾಪುರದ ಮಾಜಿ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ, ಆ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಅರವಿಂದ ಚವ್ಹಾಣ, ಹೊಸಪೇಟೆಯ ವಿಜಯನಗರ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಸಹೋದರಿ ರಾಣಿ ಸಂಯುಕ್ತಾ ಅವರನ್ನು ತಮ್ಮತ್ತ ಸೆಳೆದುಕೊಂಡರು.

ಚಿತ್ತಾಪುರದಿಂದ ರೌಡಿಶೀಟರ್ ಮಣಿಕಂಠ ರಾಠೋಡ ಅವರಿಗೆ ಟಿಕೆಟ್ ನೀಡಿದ್ದಕ್ಕೆ ಬೇಸರಗೊಂಡು ಇತ್ತೀಚೆಗೆ ಬಿಜೆಪಿ ತ್ಯಜಿಸಿದ್ದ ವಿಶ್ವನಾಥ ಪಾಟೀಲ ಹೆಬ್ಬಾಳ ಮತ್ತು ಅರವಿಂದ ಚವ್ಹಾಣ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಿವಾಸದಲ್ಲಿ ಶನಿವಾರ ಬೆಳಿಗ್ಗೆ ಕಾಂಗ್ರೆಸ್ ಸೇರ್ಪಡೆಯಾದರು.

ಕೆಪಿಸಿಸಿ ಕಚೇರಿಯಲ್ಲಿ ಬೆಳಿಗ್ಗೆ ನಡೆದ ಕಾರ್ಯಕ್ರಮದಲ್ಲಿ ಎಐಸಿಸಿ ವಕ್ತಾರ ಗೌರವ್ ವಲ್ಲಭ್ ಹಾಗೂ ರಾಜ್ಯಸಭಾ ಸದಸ್ಯ ಎಲ್. ಹನುಮಂತಯ್ಯ ಅವರ ಸಮ್ಮುಖದಲ್ಲಿ ಚಿಂತಾಮಣಿಯ ಡಾ.ವಿ. ಅಮರನಾಥ್, ಮಹದೇವಪುರ ಕ್ಷೇತ್ರದ ಹೂಡಿ ರಾಮಚಂದ್ರ, ಡಾ.ಎಸ್. ಭಾಗ್ಯ, ಅಂಜನಪ್ಪ ಯಾದವ್, ಕೆ.ಎಂ ಮುನಿರಾಜು, ಪರಮೇಶ್ವರ್ ಅವರು ‘ಕೈ’ ಹಿಡಿದರು.

ಬಳಿಕ ನಡೆದ ಮತ್ತೊಂದು ಕಾರ್ಯಕ್ರಮದಲ್ಲಿ ಎಐಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ಜೈರಾಮ್ ರಮೇಶ್ ಸಮ್ಮುಖದಲ್ಲಿ, ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯೆ ರಾಣಿ ಸಂಯುಕ್ತಾ ಅವರು ಕಾಂಗ್ರೆಸ್ ಸೇರಿದರು. ವಿಜಯನಗರ ವಿಧಾನಸಭಾ ಕ್ಷೇತ್ರದಿಂದ ರಾಣಿ ಸಂಯುಕ್ತಾ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಆನಂದ್ ಸಿಂಗ್ ಮಗ ಸಿದ್ಧಾರ್ಥ ಸಿಂಗ್ ಅವರಿಗೆ ಟಿಕೆಟ್ ಕೊಟ್ಟಿದ್ದರಿಂದ ಮುನಿಸಿಕೊಂಡಿದ್ದ ಅವರು, ಪಕ್ಷದ ವರಿಷ್ಠರ ವಿರುದ್ಧ ಇತ್ತೀಚೆಗೆ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕಿದ್ದರು. ಅವರ ಜೊತೆ ಬಿಜೆಪಿ ಜಿಲ್ಲಾ ವಕ್ತಾರ ಅನಂತ ಪದ್ಮನಾಭ, ಆರೆಸ್ಸೆಸ್‌ನಲ್ಲಿ ಸಕ್ರಿಯರಾಗಿದ್ದ ಅನಿಲ್ ಜೋಶಿ, ಮುಖಂಡ ವ್ಯಾಸನಕೆರೆ ಶ್ರೀನಿವಾಸ್ ಮತ್ತಿತರರು ಕೂಡಾ ಕಾಂಗ್ರೆಸ್ ಸೇರಿದರು.

ಇನ್ನೂ ಅನೇಕರು ಬಿಜೆಪಿ ತ್ಯಜಿಸಲಿದ್ದಾರೆ: ರಾಣಿ ಸಂಯುಕ್ತಾ

‘ಬಿಜೆಪಿಯಲ್ಲಿ ಸಾಕಷ್ಟು ನೋವಾಗಿದೆ. ಹೀಗಾಗಿ, ನಾವು ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರುತ್ತಿದ್ದೇವೆ’ ಎಂದು ರಾಣಿ ಸಂಯುಕ್ತಾ ಹೇಳಿದರು.

‘ನಾವು ಅನೇಕ ದಿನಗಳಿಂದ ಕಾಂಗ್ರೆಸ್ ಪಕ್ಷವನ್ನು ಗಮನಿಸುತ್ತಿದ್ದೆವು. ಅವರು ಯಾರನ್ನೂ ಕೈಬಿಟ್ಟಿಲ್ಲ. ಆದರೆ, ಬಿಜೆಪಿಯಲ್ಲಿ ಆಗಿಲ್ಲ. ಕೇವಲ ಟಿಕೆಟ್ ಹಂಚಿಕೆಯಲ್ಲಿ ಮಾತ್ರವಲ್ಲ, ಬಿಜೆಪಿಯಲ್ಲಿ ಎಲ್ಲರಿಗೂ ನೋವುಂಟು ಮಾಡಲಾಗಿದೆ. ನನಗಿಂತ ಮುಂಚಿತವಾಗಿ ಮಾಜಿ ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರು ಕಾಂಗ್ರೆಸ್ ಪಕ್ಷ ಸೇರಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನೂ ಅನೇಕರು ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಲಿದ್ದಾರೆ’

‘ಕಾಂಗ್ರೆಸ್ ಪಕ್ಷ ಯಾವ ಸಿದ್ಧಾಂತದ ಮೇಲೆ ಸಾಗುತ್ತಿದೆಯೋ ಅದೇ ಸಿದ್ಧಾಂತದ ಮೇಲೆ ನಾವು ನಡೆಯುತ್ತೇವೆ. ನಮ್ಮ ಜಿಲ್ಲೆಯಲ್ಲಿ (ಹೊಸಪೇಟೆ) ನಾವು ಕಾಂಗ್ರೆಸ್ ಪಕ್ಷಕ್ಕೆ ಶಕ್ತಿ ತುಂಬುತ್ತೇವೆ’ ಎಂದರು.

ತೆರೆದ ವಾಹನದಲ್ಲಿ ರೋಡ್ ಶೋ • ಬಿಜೆಪಿ ಸರ್ಕಾರ, ವಿ.ಸೋಮಣ್ಣ ವಿರುದ್ಧ ವಾಗ್ದಾಳಿ

ವರುಣದಲ್ಲಿ ಕಾಂಗ್ರೆಸ್ ಅಬ್ಬರದ ಪ್ರಚಾರ

ಪ್ರಜಾವಾಣಿ ವಾರ್ತೆ

ಮೈಸೂರು: ವಿಧಾನಸಭೆಯ ವಿರೋಧ ಪಕ್ಷದ ನಾಯಕರೂ ಆಗಿರುವ ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ವಿವಿಧ ಗ್ರಾಮಗಳಲ್ಲಿ ಶನಿವಾರ ಅಬ್ಬರದ ಪ್ರಚಾರ ನಡೆಸಿದರು.

ತೆರೆದ ವಾಹನದಲ್ಲಿ ರೋಡ್ ಶೋ ನಡೆಸುತ್ತಾ ಮತ ಯಾಚಿಸಿದ ಅವರಿಗೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಪಕ್ಷದ ಮುಖಂಡರು ಹಾಗೂ ಚಲನಚಿತ್ರ ನಟ ಸಾಧುಕೋಕಿಲ ಸಾಥ್ ನೀಡಿದರು.

ಕಾರ್ಯ ಗ್ರಾಮದ ಸಿದ್ದೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಪ್ರಚಾರ ಆರಂಭಿಸಿದರು. ಕಾರೇಪುರ, ಹಾಡ್ಯ, ಚಿನ್ನಂಬಳ್ಳಿ, ತಗಡೂರು, ವರಹಳ್ಳಿ, ಚುಂಚನಹಳ್ಳಿ, ಹನುಮಪುರ, ದಾಸನೂರು, ಕಾರೆಮೋಳೆ, ತೊರವಳ್ಳಿ, ತಗಡೂರು ಮೊದಲಾದ ಕಡೆಗಳಲ್ಲಿ ರಾತ್ರಿವರೆಗೂ ಮತ ಯಾಚಿಸಿದರು. ಜನರ ಅಭಿಮಾನದ ಹೂಮಳೆಯಲ್ಲಿ ಮಿಂದೆದ್ದರು. ಎಲ್ಲ ಕಡೆಗಳಲ್ಲೂ ಕಾರ್ಯಕರ್ತರು ಹಾಗೂ ಬೆಂಬಲಿಗರಿಂದ ಅದ್ದೂರಿ ಸ್ವಾಗತ ದೊರೆಯಿತು. ‘ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ’ ಎಂಬ ಘೋಷಣೆಗಳು ಮೊಳಗಿದವು.

ಬಿಜೆಪಿ, ಜೆಡಿಎಸ್‌ನವರು ಕ್ಷೇತ್ರದವರಲ್ಲ: ಕಾರ್ಯದಲ್ಲಿ ಮಾತನಾಡಿದ ಸಿದ್ದರಾಮಯ್ಯ, ‘ಇಲ್ಲಿ 2 ಬಾರಿ ಗೆದಿದ್ದೇನೆ. ಒಮ್ಮೆ ವಿಧಾನಸಭೆಯ ವಿರೋಧ ಪಕ್ಷದ ನಾಯಕನಾಗಿದ್ದೆ. ಇನೊಮ್ಮೆ ಮುಖ್ಯಮಂತ್ರಿಯಾಗಿದ್ದೆ. ಈ ಬಾರಿಯೂ ಆಶೀರ್ವಾದ ಮಾಡಿದರೆ ಮತ್ತೊಮ್ಮೆ ಅಧಿಕಾರ ಸಿಗುತ್ತದೆ. ಇದಕ್ಕಾಗಿ ಬೆಂಬಲಿಸಬೇಕು’ ಎಂದು ಕೋರಿದರು.

‘ಹಿಂದಿನಿಂದಲೂ ನಿಮ್ಮ ಕಷ್ಟ–ಸುಖಗಳಿಗೆ ಸ್ಪಂದಿಸುತ್ತಿದ್ದೇನೆ. ಬಿಜೆಪಿ ಅಥವಾ ಜೆಡಿಎಸ್ ಅಭ್ಯರ್ಥಿ ಈ ಕ್ಷೇತ್ರಕ್ಕೆ ಏನನ್ನೂ ಮಾಡಿಲ್ಲ. ಕ್ಷೇತ್ರಕ್ಕೆ ಸಂಬಂಧಿಸಿದವರೂ ಅಲ್ಲ. ಅವರು ದಲಿತರು, ಹಿಂದುಳಿದವರು ಹಾಗೂ ರೈತರ ಪರವಾಗಿ ಇಲ್ಲವೇ ಇಲ್ಲ’ ಎಂದು ಆರೋಪಿಸಿದರು.

‘ಈ ಸರ್ಕಾರದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಎಲ್ಲ ಇಲಾಖೆಗಳಲ್ಲೂ ಶೇ 40ರಷ್ಟು ಕಮಿಷನ್ ಕೊಡಬೇಕು. ಬಿ.ಆರ್.ಅಂಬೇಡ್ಕರ್ ಕೊಟ್ಟಿರುವ ಸಂವಿಧಾನಕ್ಕೆ ಧಕ್ಕೆ ತರುವಂತಹ ಕೆಲಸವನ್ನು ಮಾಡಿದ್ದಾರೆ. ಇದಕ್ಕಾಗಿ ಈ ಸರ್ಕಾರವನ್ನು ಕಿತ್ತು ಹಾಕಬೇಕು’ ಎಂದು ಕೋರಿದರು.



ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಕಾರ್ಯ ಗ್ರಾಮದಲ್ಲಿ ಶನಿವಾರ ಮತ ಯಾಚಿಸಿದರು

‘ಆ ಭಯ ಇರಬೇಕು ಸಿದ್ದರಾಮಯ್ಯನವರೆ!’

ಮೈಸೂರು: ಸಿದ್ದರಾಮಯ್ಯ ಅವರನ್ನು ಸಂಸದ ಪ್ರತಾಪ ಸಿಂಹ ಛೇಡಿಸಿದ್ದಾರೆ.

‘ವರುಣದಲ್ಲೇ ಚುನಾವಣೆ ನಿಲ್ಲುವುದಾಗಿ ಹಾಗೂ ನಾಮಪತ್ರ ಸಲ್ಲಿಸಲಷ್ಟೇ ಬರುತ್ತೇನೆ ಎಂದು ಹೇಳಿಹೋಗಿದ್ದ ಸಿದ್ದರಾಮಯ್ಯನವರು ಸೋಮಣ್ಣನವರ ಹೆಸರು ಘೋಷಣೆಯಾಗುತ್ತಿದ್ದಂತೆಯೇ ನಾಮಪತ್ರ ಸಲ್ಲಿಸಲು 2 ದಿನ ಮೊದಲೇ ಓಡಿಬಂದರು. ಇವತ್ತು (ಶನಿವಾರ) ಮತ್ತೆ ಬಂದಿದ್ದಾರೆ. ಮುಂದಿನ ವಾರ ಇಲ್ಲೇ ಇರುತ್ತಾರಂತೆ! ಭಯ! ಆ ಭಯ ಇರಬೇಕು ಸಿದ್ದರಾಮಯ್ಯನವರೆ!’ ಎಂದು ಶನಿವಾರ ಟ್ವೀಟ್ ಮಾಡಿ ಕಾಲೆಳೆದಿದ್ದಾರೆ.

‘ನನಗ್ಯಾಕೆ ಸೋಲಿನ ಭಯ?’

‘ಯಾವನ್ರೀ ಪ್ರತಾಪ ಸಿಂಹ? ಇಲ್ಲಿಗೇಕೆ ಬಂದು ಪ್ರಚಾರ ಮಾಡುತ್ತಿದ್ದಾನೆ? ಇದು ಚಾಮರಾಜನಗರ ಲೋಕಸಭಾ ಕ್ಷೇತ್ರ. ಆತ ಪ್ರತಿನಿಧಿಸುವ ಕ್ಷೇತ್ರದ ವ್ಯಾಪ್ತಿಯಲ್ಲಿ ಅವರಿಗೆ ಸೋಲಿನ ಭಯ ಶುರುವಾಗಿದೆ. ಹೀಗಾಗಿ ಇಲ್ಲಿಗೆ ಬಂದು ಓಡಾಡುತ್ತಿದ್ದಾನೆ. ನನಗ್ಯಾಕೆ ಸೋಲಿನ ಭಯ?’ ಎಂದು ಸಿದ್ದರಾಮಯ್ಯ ಕೇಳಿದರು.

‘ಒಳ ಒಪ್ಪಂದ ಮಾಡಿಕೊಂಡಿರುವವರು ಬಿಜೆಪಿ–ಜೆಡಿಎಸ್‌ನವರು. ನಾವು ಯಾರೊಂದಿಗೂ ಮೈತ್ರಿ ಮಾಡಿಕೊಂಡಿಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಕ್ಷೇತ್ರ ನೋಡಿಕೊಳ್ಳಲಿ’ ಎಂದು ತಿರುಗೇಟು ನೀಡಿದರು.

‘ಜನರು ನನ್ನ ಮೇಲೆ ವಿಶ್ವಾಸ ಇಟ್ಟಿದ್ದಾರೆ. ಗೆಲ್ಲಿಸುವುದು ಅವರು. ಒಂದು ಲಕ್ಷ ಮತಗಳ ಅಂತರದಿಂದ ಗೆಲ್ಲುತ್ತೇನೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸೋಮಣ್ಣ ಪರ ಪುತ್ರ, ಪ್ರತಾಪ ಪ್ರಚಾರ

ಬಿಜೆಪಿ ಅಭ್ಯರ್ಥಿ ಪರವಾಗಿ ಅವರ ಪುತ್ರ ಅರುಣ್ ಹಾಗೂ ಸಂಸದ ಪ್ರತಾಪ ಸಿಂಹ ವರುಣ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಪ್ರಚಾರ ನಡೆಸಿದರು.

ಸಂಕ್ಷಿಪ್ತ ಸುದ್ದಿ

ಬಿಜೆಪಿ ಅಭ್ಯರ್ಥಿ ವಿರುದ್ಧ ಪ್ರಕರಣ

ಬೇಲೂರು (ಹಾಸನ ಜಿಲ್ಲೆ): ಇಲ್ಲಿನ ಬಿಜೆಪಿ ಅಭ್ಯರ್ಥಿ ಎಚ್.ಕೆ. ಸುರೇಶ್ ಹಂಚಿರುವ ಕುಕ್ಕರ್ ಸ್ಫೋಟಗೊಂಡ ಬೆನ್ನಲ್ಲೇ ಅವರ ವಿರುದ್ಧ ಮಾದರಿ ನೀತಿಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಾಗಿದೆ.

ಚುನಾವಣಾ ತಂಡ ಪರಿಶೀಲನೆ ನಡೆಸಿ 21 ಕುಕ್ಕರ್‌ಗಳನ್ನು ವಶಕ್ಕೆ ಪಡೆದಿದೆ. ಸಮೀಪದ ಸನ್ಯಾಸಿಹಳ್ಳಿ ಶೇಷಮ್ಮ ಅವರ ಮನೆಯಲ್ಲಿ ಬುಧವಾರ ಕುಕ್ಕರ್ ಸ್ಫೋಟವಾಗಿತ್ತು. ಸ್ಥಳಕ್ಕೆ ಭೇಟಿ ನೀಡಿದ್ದ ಅಧಿಕಾರಿಗಳ ತಂಡಕ್ಕೆ, ಅಕ್ಕಪಕ್ಕದ ಮನೆಯ ಮಹಿಳೆಯರು ಸ್ವಯಂಪ್ರೇರಿತರಾಗಿ ಕುಕ್ಕರ್‌ಗಳನ್ನು ಕೊಟ್ಟಿದ್ದಾರೆ.

ಕುಕ್ಕರ್ ಬಾಕ್ಸ್‌ಗಳ ಮೇಲೆ ‘ಮಹಾಶಿವರಾತ್ರಿ ಹಾಗೂ ಯುಗಾದಿ ಹಬ್ಬದ ಶುಭಾಶಯ ಕೋರುವ ಎಚ್.ಕೆ.ಸುರೇಶ್, ಹಾಸನ ಬಿಜೆಪಿ ಜಿಲ್ಲಾಧ್ಯಕ್ಷರು’ ಎಂದೂ ಬರೆಯಲಾಗಿದೆ. ಮತದಾರರ ಮೇಲೆ ಪ್ರಭಾವ ಬೀರಲು ಹಂಚಲಾಗಿದೆ ಎಂಬ ಕಾರಣದಿಂದ ಶುಕ್ರವಾರ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಈಗ ಇರುವುದು ಲಿಂಗಾಯತ ಸಿ.ಎಂ ಅವರೇ ರಾಜ್ಯ ಹಾಳು ಮಾಡಿರುವುದು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಈಗ ಲಿಂಗಾಯತ ಮುಖ್ಯಮಂತ್ರಿಯೇ (ಬಸವರಾಜ ಬೊಮ್ಮಾಯಿ) ಇದ್ದಾರಲ್ಲಾ. ಅವರೇ ಎಲ್ಲ ಭ್ರಷ್ಟಾಚಾರ ಮಾಡಿ ರಾಜ್ಯವನ್ನು ಹಾಳು ಮಾಡಿರುವುದು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ವರುಣದಲ್ಲಿ ಪ್ರಚಾರದ ವೇಳೆ, ‘ಬಿಜೆಪಿಯು ಲಿಂಗಾಯತರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿ ಎಂದು ಆಗ್ರಹಿಸುತ್ತಿದೆಯಲ್ಲಾ’ ಎಂಬ ಮಾಧ್ಯಮದವರ ಪ್ರಶ್ನೆಗೆ ಅವರು ಮೇಲಿನಂತೆ ಉತ್ತರಿಸಿದ್ದಾರೆ. ಇದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

‘ಈ ಹಿಂದೆ ವೀರಶೈವ ಲಿಂಗಾಯತ ಸಮಾಜವನ್ನು ಒಡೆಯಲು ಯತ್ನಿಸಿದ ಸಿದ್ದರಾಮಯ್ಯ ಅವರು, ಈಗ ಆ ಸಮುದಾಯದವರೆಲ್ಲ ಭ್ರಷ್ಟರು, ರಾಜ್ಯವನ್ನು ಹಾಳು ಮಾಡಿದವರು ಎಂಬ ಸಂವೇದನಾರಹಿತ ಹಾಗೂ ದ್ವೇಷಪೂರಿತ ಹೇಳಿಕೆ ನೀಡಿರುವುದು ಅಕ್ಷಮ್ಯ’ ಎಂಬ ಆಕ್ರೋಶ ಸಾಮಾಜಿಕ ಜಾಲತಾಣಗಳಲ್ಲಿ ವ್ಯಕ್ತವಾಗಿದೆ.

ತಿರುಚಲಾಗಿದೆ: ಈ ಬಗ್ಗೆ ಬಳಿಕ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ನನ್ನ ಹೇಳಿಕೆ ಬಸವರಾಜ ಬೊಮ್ಮಾಯಿಗೆ ಮಾತ್ರವೇ ಸೀಮಿತವಾದುದು. ಅವರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ ಎಂದಷ್ಟೇ ಹೇಳಿದ್ದೇನೆ. ಲಿಂಗಾಯತರೆಲ್ಲರೂ ಭ್ರಷ್ಟಾಚಾರ ಮಾಡಿದ್ದಾರೆ ಎಂದಿಲ್ಲ. ಲಿಂಗಾಯತರಲ್ಲಿ ಮುಖ್ಯಮಂತ್ರಿಗಳಾಗಿದ್ದವರು ಬಹಳ ಪ್ರಾಮಾಣಿಕರಾಗಿದ್ದರು. ಆದರೆ, ಬೊಮ್ಮಾಯಿ ಹಾಗಿಲ್ಲ. ಚುನಾವಣೆ ಸಂದರ್ಭದಲ್ಲಿ ನನ್ನ ಹೇಳಿಕೆಯನ್ನು ತಿರುಚಿ ಲಾಭ ಪಡೆಯಲು ಬಿಜೆಪಿ ಯತ್ನಿಸುತ್ತಿದೆ’ ಎಂದು ಸ್ಪಷ್ಟನೆ ನೀಡಿದರು.

‘ನಾವು ಜಾತಿ ಮೇಲೆ ಮುಖ್ಯಮಂತ್ರಿ ಮಾಡುವುದಿಲ್ಲ. ಯಾರಾಗಬೇಕು ಎನ್ನುವುದನ್ನು ಹೈಕಮಾಂಡ್ ನಿರ್ಧರಿಸುತ್ತದೆ’ ಎಂದರು.

ದೀಪಗಳ ವಶ: ನಿರಾಣಿ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಮುಧೋಳದ ನಿರಾಣಿ ಸಕ್ಕರೆ ಕಾರ್ಖಾನೆಯ ವಸತಿ ಗೃಹಗಳಲ್ಲಿ ಸಂಗ್ರಹಿಟ್ಟಿದ್ದ 27.6 ಕೆ.ಜಿ ತೂಕದ ₹21.45 ಲಕ್ಷ ಮೌಲ್ಯದ ಬೆಳ್ಳಿಯಂತೆ ಕಾಣುವ ದೀಪಗಳನ್ನು ಶುಕ್ರವಾರ ರಾತ್ರಿ ಫ್ಲೈಯಿಂಗ್ ಸ್ಕ್ವಾಡ್ ತಂಡ ವಶಪಡಿಸಿಕೊಂಡಿದೆ.

ಸಿ ವಿಜಿಲ್ ಆ್ಯಪ್‌ನಲ್ಲಿ ಮದ್ಯ ಹಂಚಲಾಗುತ್ತಿದೆ ಎಂಬ ದೂರು ಬಂದಿತ್ತು. ಫ್ಲೈಯಿಂಗ್ ಸ್ಕ್ವಾಡ್ ಅಧಿಕಾರಿ ಪ್ರಸನ್ನ ಮಾನೆ ಹಾಗೂ ಅಧಿಕಾರಿಗಳು ದಾಳಿ ನಡೆಸಿದಾಗ ಹತ್ತು ಬಾಕ್ಸ್‌ಗಳಲ್ಲಿ ಸಂಗ್ರಹಿಸಿಟ್ಟಿದ್ದ ದೀಪಗಳು ಸಿಕ್ಕಿವೆ.

ಬಾಕ್ಸ್‌ಗಳ ಮೇಲೆ ಬಸವಣ್ಣ, ಕನಕದಾಸರ ಭಾವಚಿತ್ರಗಳು, ದೀಪದ ಮೇಲೆ ಮುರುಗೇಶ ನಿರಾಣಿ ಅವರ ಭಾವಚಿತ್ರವಿದೆ. ಬೀಳಗಿ ಕ್ಷೇತ್ರದಲ್ಲಿ ಮತದಾರರಿಗೆ ಹಂಚುವ ಉದ್ದೇಶದಿಂದ ಸಂಗ್ರಹಿಸಿಡಲಾಗಿದೆ ಎಂದು ಶಂಕಿಸಲಾಗಿದ್ದು, ತನಿಖೆ ಮುಂದುವರೆದಿದೆ. ಮುಧೋಳ ಪೊಲೀಸ್ ಠಾಣೆಯಲ್ಲಿ ಮುರುಗೇಶ ನಿರಾಣಿ ವಿರುದ್ಧ ಪ್ರಕರಣ ದಾಖಲಾಗಿದೆ.



ಮರುಗೇಶ ನಿರಾಣಿ ಭಾವಚಿತ್ರವಿರುವ ದೀಪಗಳು

ಹೊಲದಲ್ಲಿದ್ದ 1,600ಕ್ಕೂ ಹೆಚ್ಚು ಕುಕ್ಕರ್ ವಶ

ಪ್ರಜಾವಾಣಿ ವಾರ್ತೆ

ಸವದತ್ತಿ (ಬೆಳಗಾವಿ ಜಿಲ್ಲೆ): ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟ ತೆಗ್ಗಿಹಾಳ ಗ್ರಾಮದ ಹೊಲದ ಗೋದಾಮಿನಲ್ಲಿ ಇಟ್ಟಿದ್ದ 1,600ಕ್ಕೂ ಹೆಚ್ಚು ಕುಕ್ಕರ್‌ಗಳನ್ನು ಪೊಲೀಸರು ಶನಿವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

ತೆಗ್ಗಿಹಾಳ ಗ್ರಾಮದ ಹೊಲದಲ್ಲಿ ನಿರ್ಮಿಸಿದ ತಗಡಿನ ಶೆಡ್‌ನಲ್ಲಿ ಕುಕ್ಕರ್‌ಗಳನ್ನು ಸಂಗ್ರಹಿಸಿ ಇಡಲಾಗಿದೆ ಎಂಬ ಮಾಹಿತಿ ಆಧರಿಸಿ ದಾಳಿ ಮಾಡಿದ ಪೊಲೀಸರಿಗೆ ಹೊಸ ಕುಕ್ಕರ್‌ಗಳ ಮೂಟೆಯೇ ಸಿಕ್ಕಿತು. ಅಧಿಕಾರಿಗಳು ದಾಳಿ ಮಾಡಿದಾಗ ಸ್ಥಳದಲ್ಲಿ ಯಾರೂ ಇರಲಿಲ್ಲ. ಬಾಗಿಲು ಒಡೆದು ಒಳನುಗ್ಗಬೇಕಾಯಿತು.

ಕುಕ್ಕರ್‌ಗಳ ಜತೆಗೆ ಯಾವ ಅಭ್ಯರ್ಥಿಯ ಚಿತ್ರ ಅಥವಾ ಪ್ರಚಾರ ಪತ್ರಗಳು ಪತ್ತೆಯಾಗಿಲ್ಲ. ಹೀಗಾಗಿ, ಇವುಗಳನ್ನು ಸಂಗ್ರಹಿಸಿದ್ದು ಯಾರು ಎಂದು ಇನ್ನೂ ಗೊತ್ತಾಗಿಲ್ಲ. ಎಲ್ಲವನ್ನೂ ಸವದತ್ತಿ ವಲಯ ಅಧಿಕಾರಿಗಳ ಸುಪರ್ದಿಗೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.



ಸವದತ್ತಿ ಯಲ್ಲಮ್ಮ ವಿಧಾನಸಭಾ ಕ್ಷೇತ್ರಕ್ಕೆ ಒಳಪಟ್ಟ ತೆಗ್ಗಿಹಾಳ ಗ್ರಾಮದ ಹೊಲವೊಂದರಲ್ಲಿ ಸಂಗ್ರಹಿಸಿ ಇಟ್ಟಿದ್ದ ಕುಕ್ಕರ್‌ಗಳು

ಜೆಡಿಎಸ್ ಅಭ್ಯರ್ಥಿ ನಾಮಪತ್ರ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್. ಮಂಜುನಾಥ ಅವರ ನಾಮಪತ್ರ ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದ ಕಾರಣಕ್ಕೆ ತಿರಸ್ಕೃತಗೊಂಡಿದೆ.

220 ಕ್ಷೇತ್ರಗಳ ನಾಮಪತ್ರ ಪರಿಶೀಲನೆ ಶುಕ್ರವಾರ ಪೂರ್ಣಗೊಂಡಿತ್ತು. ತಕರಾರುಗಳಿದ್ದ ಕಾರಣ ಶಿವಾಜಿನಗರ, ಔರಾದ್, ಸವದತ್ತಿ– ಯಲ್ಲಮ್ಮ ಹಾಗೂ ಹಾವೇರಿ ಕ್ಷೇತ್ರಗಳ ನಾಮಪತ್ರಗಳ ಪರಿಶೀಲನೆ ಬಾಕಿ ಉಳಿದಿತ್ತು. ತಕರಾರುಗಳ ಕುರಿತು ವಿಚಾರಣೆ ನಡೆಸಿ, ತೀರ್ಮಾನ ಪ್ರಕಟಿಸಿದ ಚುನಾವಣಾಧಿಕಾರಿಗಳು ಈ ಎಲ್ಲ ಕ್ಷೇತ್ರಗಳ ನಾಮಪತ್ರಗಳ ಪರಿಶೀಲನೆಯನ್ನು ಶನಿವಾರ ಪೂರ್ಣಗೊಳಿಸಿದರು.

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದ ಮಂಜುನಾಥ ಅವರ ಹೆಸರು ಮತದಾರರ ಪಟ್ಟಿಯಲ್ಲೇ ಇಲ್ಲ. ಈ ಕಾರಣದಿಂದ ಅವರ ನಾಮಪತ್ರ ತಿರಸ್ಕರಿಸಲಾಗಿದೆ. ಮಂಜುನಾಥ ಮತದಾರರ ಪಟ್ಟಿಗೆ ಹೆಸರು ಸೇರಿಸುವಂತೆ ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ, ಪಟ್ಟಿಯಲ್ಲಿ ಹೆಸರು ಸೇರಿರುವುದನ್ನು ಖಚಿತಪಡಿಸಿಕೊಂಡಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ರತ್ನಾ ಮಾಮನಿ ನಾಮಪತ್ರ ಅಂಗೀಕಾರ: ಸವದತ್ತಿ-ಯಲ್ಲಮ್ಮ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ರತ್ನಾ ಮಾಮನಿ ಅವರ ನಾಮಪತ್ರದ ಕುರಿತು ತಕರಾರು ಸಲ್ಲಿಕೆಯಾಗಿತ್ತು. ವಿಚಾರಣೆ ನಡೆಸಿದ ಚುನಾವಣಾಧಿಕಾರಿ ನಾಮಪತ್ರ ಸ್ವೀಕರಿಸಿದರು. ಅದೇ ಕ್ಷೇತ್ರದಲ್ಲಿ ಪಕ್ಷೇತರರೊಬ್ಬರ ನಾಮಪತ್ರ ಹಾಗೂ ಹಾವೇರಿ ಕ್ಷೇತ್ರದಲ್ಲಿ ಒಂಬತ್ತು ನಾಮಪತ್ರಗಳು ತಿರಸ್ಕೃತಗೊಂಡಿವೆ.

ಸ್ವೀಕೃತಗೊಂಡಿರುವ ನಾಮಪತ್ರಗಳ ಸಂಖ್ಯೆ

ಪುರುಷರು	ಮಹಿಳೆಯರು	ಲೈಂಗಿಕ ಅಲ್ಪಸಂಖ್ಯಾತರು	ಒಟ್ಟು
2,890	231	01	3,130

ಪಕ್ಷವಾರು ವಿವರ

ಬಿಜೆಪಿ	224
ಕಾಂಗ್ರೆಸ್	223
ಜೆಡಿಎಸ್	211
ಆಮ್ ಆದ್ಮಿ ಪಕ್ಷ	212
ಬಿಎಸ್‌ಪಿ	137
ಸಿಪಿಎಂ	04
ಎನ್‌ಪಿಪಿ	04
ನೋಂದಾಯಿತ ಮಾನ್ಯತೆ ಪಡೆಯದ ಪಕ್ಷಗಳು	736
ಪಕ್ಷೇತರರು	1,379

29ಕ್ಕೆ ಹುಮನಾಬಾದ್, 30ಕ್ಕೆ ಚನ್ನಪಟ್ಟಣಕ್ಕೆ ಪ್ರಧಾನಿ ಮೋದಿ

ಬೀದರ್: ‘ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 29ರಂದು ಬೆಳಿಗ್ಗೆ 10ಕ್ಕೆ ಹುಮನಾಬಾದ್ ತಾಲ್ಲೂಕಿನ ಚಂದನಕೇರಾ ಕ್ರಾಸ್ ಬಳಿ ಆಯೋಜಿಸಿರುವ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಳ್ಳುವರು’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಮಂಠಾಳಕರ್ ತಿಳಿಸಿದರು.

‘ಜಿಲ್ಲೆಯ 6 ವಿಧಾನಸಭಾ ಕ್ಷೇತ್ರಗಳ ಪ್ರಚಾರಕ್ಕೆ ಏಪ್ರಿಲ್ 26ರಂದು ಕೇಂದ್ರದ ಕೃಷಿ ಸಚಿವ ಗಿರಿರಾಜ್ ಕಿಶೋರ ಜಿಲ್ಲೆಗೆ ಭೇಟಿ ನೀಡುವರು. ಮಠ, ಮಂದಿರಗಳಿಗೂ ಭೇಟಿ ನೀಡುವರು’ ಎಂದರು.

ರಾಮನಗರ ವರದಿ : ಏ.30ರಂದು ಪ್ರಧಾನಿ ಮೋದಿ ಅವರು ಚನ್ನಪಟ್ಟಣದಲ್ಲಿ ಪ್ರಚಾರ ಕೈಗೊಳ್ಳುವರು. ರಾಮನಗರ ಹಾಗೂ ಮಂಡ್ಯ ಜಿಲ್ಲೆಗಳ ಹತ್ತಕ್ಕೂ ಹೆಚ್ಚು ವಿಧಾನ ಸಭಾ ಕ್ಷೇತ್ರಗಳಿಂದ 2 ಲಕ್ಷ ಜನ ಈ ಸಮಾವೇಶದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ಚನ್ನಪಟ್ಟಣ ಬಿಜೆಪಿ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.ಅಂದು ಬೆಳಿಗ್ಗೆ ಪ್ರಧಾನಿ ಕೋಲಾರಕ್ಕೆ ಬರಲಿದ್ದು, ಮಧ್ಯಾಹ್ನ 2ಕ್ಕೆ ಚನ್ನಪಟ್ಟಣಕ್ಕೆ ಬರಲಿದ್ದಾರೆ ಎಂದು ಹೇಳಿದರು.

ಕಳೆದ ಬಾರಿ 6 ಕ್ಷೇತ್ರಕ್ಕೆ ಸೀಮಿತ, ಈ ಬಾರಿ 10ಕ್ಕೆ ಏರಿಕೆ

ಲಂಬಾಣಿಗಳ ಕೋಪ ಶಮನಕ್ಕೆ ಬಿಜೆಪಿ ಯತ್ನ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಯಾದ ಬಳಿಕ ಬಿಜೆಪಿ ವಿರುದ್ಧ ಮುನಿಸಿಕೊಂಡಿರುವ ಲಂಬಾಣಿ ಸಮುದಾಯದ ಕೋಪವನ್ನು ಕಡಿಮೆ ಮಾಡುವ ಪ್ರಯತ್ನಕ್ಕೆ ಆ ಪಕ್ಷ ಕೈ ಹಾಕಿದೆ. 10 ಕ್ಷೇತ್ರಗಳಲ್ಲಿ ಲಂಬಾಣಿ ಸಮುದಾಯದ ಹುರಿಯಾಳುಗಳಿಗೆ ಪಕ್ಷ ಟಿಕೆಟ್ ನೀಡಿದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಮೀಸಲು ಕ್ಷೇತ್ರಗಳು 36 ಇವೆ. 2018ರ ಚುನಾವಣೆಯಲ್ಲಿ ಕಮಲ ಪಾಳಯವು ಆರು ಕ್ಷೇತ್ರಗಳಲ್ಲಿ ಈ ಸಮುದಾಯದ ಅಭ್ಯರ್ಥಿಗಳಿಗೆ ಟಿಕೆಟ್ ನೀಡಿತ್ತು. ನಾಲ್ವರು ಅಭ್ಯರ್ಥಿಗಳು ಗೆದ್ದು ಬಂದಿದ್ದರು. ಈ ಸಲ 10 ಕ್ಷೇತ್ರಗಳಲ್ಲಿ ಮಣೆ ಹಾಕಿದೆ.


ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ನೀಡಬೇಕು ಎಂದು ಮೂರು ದಶಕಗಳಿಂದ ಹೋರಾಟ ನಡೆಯುತ್ತಲೇ ಇದೆ. ಎನ್. ಧರ್ಮಸಿಂಗ್ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ, 2005ರಲ್ಲಿ ಈ ಕುರಿತು ಅಧ್ಯಯನ ನಡೆಸಿ ಶಿಫಾರಸು ಮಾಡಲು ನ್ಯಾಯಮೂರ್ತಿ ಎ.ಜಿ. ಸದಾಶಿವ ನೇತೃತ್ವದಲ್ಲಿ ಆಯೋಗ ರಚಿಸಿತ್ತು. ಎಡಗೈಗೆ ಶೇ 6, ಬಲಗೈಗೆ ಶೇ 5.5, ಸ್ಪೃಶ್ಯ ಉಪ ಜಾತಿಗಳಿಗೆ ಶೇ 3 ಹಾಗೂ ಈ ಮೂರೂ ಗುಂಪುಗಳಿಗೆ ಸೇರದ ಜಾತಿಗಳವರಿಗೆ ಶೇ 1ರಷ್ಟು ಮೀಸಲಾತಿ ನೀಡಬಹುದು ಎಂದು ಸದಾಶಿವ ಆಯೋಗವು 2012ರಲ್ಲಿ ಶಿಫಾರಸು ಮಾಡಿತ್ತು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವು ಈ ವಿಷಯದ ಬಗ್ಗೆ ಅನೇಕ ಸಲ ಚರ್ಚೆ ನಡೆಸಿತ್ತು. ಸಂಪುಟ ಸಭೆಯಲ್ಲೇ ಭಿನ್ನಮತ ಉಂಟಾಗಿದ್ದರಿಂದಾಗಿ, ಅನುಮೋದನೆ ನೀಡಿರಲಿಲ್ಲ. 2018ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಹಿನ್ನಡೆ ಅನುಭವಿಸಲು ಇದು ಒಂದು ಕಾರಣವಾಗಿತ್ತು.

ಒಳ ಮೀಸಲಾತಿ ಜಾರಿ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಸಚಿವ ಸಂಪುಟ ಉಪಸಮಿತಿ ರಚಿಸಿತ್ತು. ಚುನಾವಣೆ ವೇಳಾಪಟ್ಟಿ ಪ್ರಕಟಕ್ಕೆ ಮುನ್ನ ಈ ಸಮಿತಿ ವರದಿ ನೀಡಿತ್ತು. ಬಿಜೆಪಿ ಸರ್ಕಾರವು ಕೊನೆಯ ಸಚಿವ ಸಂಪುಟ ಸಭೆಯಲ್ಲಿ ಒಳಮೀಸಲಾತಿ ಜಾರಿ ಮಾಡುವುದಾಗಿ ಪ್ರಕಟಿಸಿತು. ಪರಿಶಿಷ್ಟ ಜಾತಿಯ ಎಡಗೈ ಗುಂಪಿಗೆ ಶೇ 6, ಬಲಗೈ ಗುಂಪಿಗೆ ಶೇ 5.5, ಲಂಬಾಣಿ, ಕೊರಮ, ಕೊರಚ, ಭೋವಿಗಳಿಗೆ ಶೇ 4.5, ಈ ಮೇಲಿನ ಗುಂಪಿಗೆ ಸೇರದ ಜಾತಿಗಳಿಗೆ ಶೇ 1 ಒಟ್ಟು ಶೇ 17ರಷ್ಟು ಮೀಸಲಾತಿ ನೀಡಲಾಗಿದೆ.

ಒಳಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಲಂಬಾಣಿ ಸಮುದಾಯದವರು ಆಕ್ರೋಶ ವ್ಯಕ್ತಪಡಿಸಿದರು. ಶಿಕಾರಿಪುರದಲ್ಲಿ ಲಂಬಾಣಿ ಸಮುದಾಯದ ಜನರು ಪ್ರತಿಭಟನೆ ನಡೆಸಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನೆಗೆ ದಾಳಿ ನಡೆಸಿದ್ದರು. ರಾಜ್ಯದ ಹಲವು ಕಡೆಗಳಲ್ಲಿ ಪ್ರತಿಭಟನೆ ನಡೆಸಿದ್ದರು. ಅನೇಕ ಕ್ಷೇತ್ರಗಳಲ್ಲಿ ಲಂಬಾಣಿ ಸಮುದಾಯದವರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ‘ಒಳ ಮೀಸಲಾತಿ ನೀಡಿರುವುದು ಕ್ರಾಂತಿಕಾರಕ ತೀರ್ಮಾನ’ ಎಂದು ಬಿಜೆಪಿ ಚುನಾವಣಾ ಕಣದಲ್ಲಿ ಬಿಂಬಿಸಲು ಹೊರಟಿದೆ. ಜತೆಗೆ, ಟಿಕೆಟ್ ಹಂಚಿಕೆಯಲ್ಲಿ ಲಂಬಾಣಿ ಸಮುದಾಯಕ್ಕೆ ಹೆಚ್ಚಿನ ಪ್ರಾತಿನಿಧ್ಯ ನೀಡುವ ಮೂಲಕ ಸಮುದಾಯವನ್ನು ಸೆಳೆಯುವ ಪ್ರಯತ್ನಕ್ಕೆ ಕೈ ಹಾಕಿದೆ. ಪಕ್ಷವು ಕಳೆದ ಚುನಾವಣೆಯಲ್ಲಿ ಭೋವಿ ಸಮುದಾಯದವರನ್ನು 9 ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಸಿತ್ತು. ಈ ಸಲ ಆರು ಕ್ಷೇತ್ರಗಳಲ್ಲಿ ಟಿಕೆಟ್ ನೀಡಿದೆ.

ಕೇಳಿದ್ದು 15, ಕೊಟ್ಟಿದ್ದು 10: ಈ ಬಾರಿಯ ಚುನಾವಣೆಯಲ್ಲಿ ಎಡಗೈ ಒಳಪಂಗಡದ ಅಭ್ಯರ್ಥಿಗಳಿಗೆ 15 ಕ್ಷೇತ್ರಗಳಲ್ಲಿ ಟಿಕೆಟ್ ನೀಡಬೇಕು ಎಂದು ಕಾಂಗ್ರೆಸ್‌ನ ಎಡಗೈ ಸಮುದಾಯದ ನಾಯಕರು ಹೈಕಮಾಂಡ್ ಬಳಿ ಲಾಬಿ ನಡೆಸಿದ್ದರು. 10 ಕ್ಷೇತ್ರಗಳಲ್ಲಿ ಈ ಸಮುದಾಯದ ಅಭ್ಯರ್ಥಿಗಳನ್ನು ಪಕ್ಷವು ಕಣಕ್ಕೆ ಇಳಿಸಿದೆ.



ಶುಭ ಕೋರಲು ದೇಶಪಾಂಡೆಗೆ ನಿರಾಕರಣೆ

ಪ್ರಜಾವಾಣಿ ವಾರ್ತೆ

ಹಳಿಯಾಳ (ಉತ್ತರ ಕನ್ನಡ): ಪಟ್ಟಣದ ಮರಡಿಗುಡ್ಡದಲ್ಲಿ ಈದ್ ಉಲ್ ಫಿತ್ರ್ ಹಬ್ಬದ ಅಂಗವಾಗಿ ನಡೆಯುತ್ತಿದ್ದ ಸಾಮೂಹಿಕ ಪ್ರಾರ್ಥನೆ ವೇಳೆ ಶುಭಾಶಯ ಕೋರಲು ತೆರಳಿದ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆರ್.ವಿ.ದೇಶಪಾಂಡೆಗೆ ಅಂಜುಮನ್ ಆಡಳಿತ ಅಧಿಕಾರಿ ಆದಂ ಸಾಬ್ ದೇಸಾಯಿ ಮೈಕ್ ನೀಡಲು ನಿರಾಕರಿಸಿದ್ದು ಸ್ಥಳದಲ್ಲಿ ಕೆಲ ಹೊತ್ತು ಗೊಂದಲದ ವಾತಾವರಣ ಸೃಷ್ಟಿಸಿತು.

ಈ ವೇಳೆ ಕೆಲ ಮುಸ್ಲಿಂ ಮುಖಂಡರು ಹಾಗೂ ಆಡಳಿತ ಅಧಿಕಾರಿ ನಡುವೆ ಮಾತಿನ ಚಕಮಕಿ ನಡೆಯಿತು. ಪರಿಸ್ಥಿತಿ ತೀವ್ರಗೊಳ್ಳುತ್ತಿದ್ದಂತೆ ಹಿರಿಯ ಮುಸ್ಲಿಂ ಮುಖಂಡರು ಪ್ರಾರ್ಥನೆಯನ್ನು ಮೊಟಕುಗೊಳಿಸಿ ತೆರಳಿದರು.

ಆಕ್ಷೇಪ – ವಾಗ್ವಾದ (ಚಿಕ್ಕಮಗಳೂರು ವರದಿ): ಈದ್ ಉಲ್ ಫಿತ್ರ್ ಅಂಗವಾಗಿ ಶನಿವಾರ ಇಲ್ಲಿಯ ಬಡಾ ಈದ್ಗಾ ಮೈದಾನದಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಡಿ. ತಮ್ಮಯ್ಯ ಭಾಗಿಯಾಗಿದ್ದಕ್ಕೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಮುಸ್ಲಿಂ ಮುಖಂಡರ ನಡುವೆ ಪರಸ್ಪರ ವಾಗ್ವಾದ ನಡೆಯಿತು.

ತಮ್ಮಯ್ಯ ಅವರಿಗೆ ಮಾತನಾಡಲು ಅವಕಾಶ ನೀಡದಂತೆ ಕೆಲವರು ತಾಕೀತು ಮಾಡಿದರು. ಈ ಸಂದರ್ಭದಲ್ಲಿ ಮುಖಂಡರ ನಡುವೆ ತಳ್ಳಾಟ ನೂಕಾಟ ನಡೆಯಿತು. ಕೆಲವರು ಪರಸ್ಪರ ಕೈಕೈ ಮಿಲಾಯಿಸಲು ಮುಂದಾದರು. ಮೈದಾನದಲ್ಲಿದ್ದ ಬಹುತೇಕರು ವಾಗ್ವಾದ ಶುರುವಾಗುತ್ತಲೇ ಹೊರಕ್ಕೆ ತೆರಳಿದರು. ಪೊಲೀಸರು ಮತ್ತು ಸಮುದಾಯದ ಕೆಲವು ಮುಖಂಡರು ಪರಿಸ್ಥಿತಿ ತಿಳಿಗೊಳಿಸಿದರು.

ಲಿಂಗಾಯತರಿಗೆ ಮುಖ್ಯಮಂತ್ರಿ ಹುದ್ದೆ ನೀಡುವ ಘೋಷಣೆ: ಸಲಹೆ ತಿರಸ್ಕರಿಸಿದ ಅಮಿತ್ ಶಾ

ಎಲ್ಲ ಸಮುದಾಯ ಕೇಂದ್ರೀಕರಿಸಲು ಸೂಚನೆ

ಪ್ರಜಾವಾಣಿ ವಾರ್ತೆ



ಅಮಿತ್ ಶಾ

ಬೆಂಗಳೂರು: 'ಯಾವುದೇ ಒಂದು ಸಮುದಾಯವನ್ನು ಕೇಂದ್ರೀಕರಿಸಿ ಚುನಾವಣಾ ಪ್ರಚಾರ ನಡೆಸಬಾರದು. ಬಿಜೆಪಿ ಎಲ್ಲ ಸಮುದಾಯಗಳನ್ನೂ ಸಮಾನವಾಗಿ ಕಾಣುವ ಪಕ್ಷ ಎಂಬ ಸಂದೇಶವನ್ನು ಚುನಾವಣಾ ಪ್ರಚಾರದಲ್ಲೇ ರವಾನಿಸಬೇಕು' ಎಂಬ ಸೂಚನೆಯನ್ನು ಪಕ್ಷದ ವಿಸ್ತಾರಕರು ಮತ್ತು ಮುಖಂಡರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದಾರೆ.

ರಾಜ್ಯದಲ್ಲಿ ಚುನಾವಣಾ ಪ್ರಚಾರದ ಸಿದ್ಧತೆ ಮತ್ತು ಕಾರ್ಯತಂತ್ರಗಳ ಕುರಿತು ನಗರದಲ್ಲಿ ಶುಕ್ರವಾರ ರಾತ್ರಿ ಅವರು ಸುದೀರ್ಘ ಅವಧಿಯ ಸಭೆ ನಡೆಸಿದರು. ವಿಸ್ತಾರಕರಾಗಿ ನೇಮಿಸಿರುವ ಹೊರ ರಾಜ್ಯಗಳ ಸಂಸದರು ಮತ್ತು ಶಾಸಕರು ಸಭೆಯಲ್ಲಿದ್ದರು. ಶನಿವಾರ ಬೆಳಗಿನ ಜಾವ 3 ಗಂಟೆಯವರೆಗೆ ನಡೆದ ಸಭೆಯಲ್ಲಿ ಇಡೀ ರಾಜ್ಯದ ರಾಜಕೀಯ ಸ್ಥಿತಿಗತಿ ಕುರಿತು ಮಾಹಿತಿ ಸಂಗ್ರಹಿಸಿದ ಅವರು, ಚುನಾವಣಾ ಕಾರ್ಯತಂತ್ರದಲ್ಲಿ ಕೆಲವು ಬದಲಾವಣೆಗಳನ್ನು ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹೊರ ರಾಜ್ಯಗಳಿಂದ ನಿಯೋಜಿಸಿರುವ ವಿಸ್ತಾರಕರ ಜತೆ ಪ್ರತ್ಯೇಕವಾಗಿ ಸಭೆ ನಡೆಸಿದ ಅಮಿತ್ ಶಾ, ಕ್ಷೇತ್ರವಾರು ಸ್ಥಿತಿ ಕುರಿತು ಮಾಹಿತಿ ಪಡೆದರು. 'ಬಿಜೆಪಿ ಲಿಂಗಾಯತರ ವಿರೋಧಿ ಎಂಬುದನ್ನು ಬಿಂಬಿಸಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ. ಅದನ್ನು ಹಿಮ್ಮೆಟ್ಟಿಸಲು ಪಕ್ಷ ಅಧಿಕಾರಕ್ಕೆ ಬಂದಲ್ಲಿ ಲಿಂಗಾಯತರನ್ನೇ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಲಾಗುವುದು ಎಂಬ ಘೋಷಣೆ ಮಾಡಬೇಕು' ಎಂದು ಕೆಲವು ವಿಸ್ತಾರಕರು ಸಲಹೆ ನೀಡಿದರು. ಆದರೆ, ಅದನ್ನು ಶಾ ನಿರಾಕರಿಸಿದರು ಎಂದು ಮೂಲಗಳು ಹೇಳಿವೆ.

'ಯಾವುದೇ ಕಾರಣಕ್ಕೂ ಒಂದು ಸಮುದಾಯವನ್ನು ಕೇಂದ್ರೀಕರಿಸಿ ಚುನಾವಣಾ ಪ್ರಚಾರ ನಡೆಸಬಾರದು. ಲಿಂಗಾಯತರನ್ನು ಮುಖ್ಯಮಂತ್ರಿ ಮಾಡುವುದಾಗಿ ಘೋಷಿಸಿದರೆ ಉಳಿದ ಸಮುದಾಯಗಳು ಪ್ರಶ್ನೆ ಎತ್ತಿದರೆ ಏನು ಉತ್ತರ ಕೊಡುವುದು? ಭಾವನಾತ್ಮಕ ವಿಚಾರಗಳನ್ನು ಆಧರಿಸಿ ಪ್ರಚಾರ ಮಾಡುವುದು ಬೇಡ. ಈ ವಿಚಾರದಲ್ಲಿ ವಿವೇಕವನ್ನು ಬಳಸಿ ಕಾಂಗ್ರೆಸ್‌ಗೆ ತಿರುಗೇಟು ನೀಡಬೇಕು. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಲಿಂಗಾಯತರಿಗೆ ಸೂಕ್ತ ಅವಕಾಶ ನೀಡಿರಲಿಲ್ಲ ಎಂಬುದನ್ನು ಜನರ ಮುಂದಿಡುತ್ತಾ ಹೋಗಬೇಕು' ಎಂಬ ಸೂಚನೆಯನ್ನು ಅವರು ನೀಡಿದರು ಎಂದು ಗೊತ್ತಾಗಿದೆ.

ಉತ್ತರ ಪ್ರದೇಶ, ಉತ್ತರಾಖಂಡ ಸೇರಿದಂತೆ ಹಲವು ರಾಜ್ಯಗಳಲ್ಲಿ ಎಲ್ಲ ಸಮುದಾಯಗಳನ್ನು ಕೇಂದ್ರೀಕರಿಸಿ ಪ್ರಚಾರ ಮಾಡಿದ್ದರಿಂದ ಬಿಜೆಪಿ ಹೆಚ್ಚಿನ ಜನಬೆಂಬಲ ಗಳಿಸಲು ಸಾಧ್ಯವಾಯಿತು. ಇಲ್ಲಿಯೂ ಅದೇ ಮಾದರಿ ಅನುಸರಿಸಬೇಕು ಎಂಬ ಸೂಚನೆ ನೀಡಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರತ್ಯೇಕ ಕಾರ್ಯತಂತ್ರ: ಇಡೀ ರಾಜ್ಯಕ್ಕೆ ಒಂದೇ ಕಾರ್ಯತಂತ್ರ ಅನ್ವಯಿಸಬಾರದು. ಪ್ರಾದೇಶಿಕ ವಿಚಾರಗಳು, ಸ್ಥಳೀಯವಾಗಿ ಪ್ರಭಾವಿಸಬಹುದಾದ ವಿಷಯಗಳನ್ನು ಕೈಗೆತ್ತಿಕೊಂಡು ಪ್ರತ್ಯೇಕ ಕಾರ್ಯತಂತ್ರ ರೂಪಿಸಬೇಕು. ಅದರ ಆಧಾರದಲ್ಲೇ ಚುನಾವಣಾ ಪ್ರಚಾರ ನಡೆಸಬೇಕು ಎಂಬ ನಿರ್ದೇಶನವನ್ನೂ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

ವಲಸಿಗರ ಮತ ಸೆಳೆಯಲು ತಾಕೀತು: ಹೊರ ರಾಜ್ಯಗಳಿಂದ ವಲಸೆ ಬಂದು ಕರ್ನಾಟಕದಲ್ಲಿ ನೆಲೆಸಿರುವವರ ಮತಗಳನ್ನು ಸೆಳೆಯಲು ತಕ್ಷಣದಿಂದಲೇ ಕಾರ್ಯಪ್ರವೃತ್ತರಾಗಬೇಕು. ಅವರು ಕಡ್ಡಾಯವಾಗಿ ಮತ ಚಲಾಯಿಸುವಂತೆ ಹಾಗೂ ಬಿಜೆಪಿಗೇ ಮತ ನೀಡುವಂತೆ ಮನವೊಲಿಸಬೇಕು. ಇದಕ್ಕಾಗಿ ಪ್ರತ್ಯೇಕ ತಂಡಗಳನ್ನು ಕಾರ್ಯಾಚರಣೆಗೆ ನಿಯೋಜಿಸಬೇಕು ಎಂದು ಅಮಿತ್ ಶಾ ಬಿಜೆಪಿ ಮುಖಂಡರಿಗೆ ತಾಕೀತು ಮಾಡಿದ್ದಾರೆ ಎಂದು ಗೊತ್ತಾಗಿದೆ.

ಬಂಡೆದ್ದವರ ಮೇಲೆ ತೀವ್ರ ನಿಗಾಕ್ಕೆ ನಿರ್ದೇಶನ

'ಟಿಕೆಟ್ ಕೈತಪ್ಪಿದ ಬಳಿಕ ಬಿಜೆಪಿ ವಿರುದ್ಧ ಬಂಡಾಯ ಎದ್ದಿರುವ ಪಕ್ಷದ ಮುಖಂಡರ ಮೇಲೆ ತೀವ್ರ ನಿಗಾ ಇರಿಸಬೇಕು. ಅವರ ಚಟುವಟಿಕೆಗಳ ಕುರಿತು ಕ್ಷಣಕ್ಷಣದ ಮಾಹಿತಿಯನ್ನು ತಮ್ಮ ತಂಡದೊಂದಿಗೆ ಹಂಚಿಕೊಳ್ಳಬೇಕು' ಎಂಬ ಸೂಚನೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ವಿಸ್ತಾರಕರಿಗೆ ಸೂಚನೆ ನೀಡಿದ್ದಾರೆ ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

'ಪಕ್ಷದ ವಿರುದ್ಧ ಬಂಡಾಯ ಎದ್ದಿರುವವರ ಪ್ರತೀ ಚಟುವಟಿಕೆ ಮೇಲೆ ನಿಗಾ ಇರಿಸಬೇಕು. ಅವರು ಯಾರನ್ನು ಭೇಟಿ ಮಾಡುತ್ತಾರೆ? ಪಕ್ಷದ ಮತಗಳ ವಿಭಜನೆಗೆ ಪ್ರಯತ್ನಿಸುತ್ತಿದ್ದಾರೆಯೆ? ಅವರ ಚಟುವಟಿಕೆಗಳಿಂದ ಪಕ್ಷಕ್ಕೆ ಆಗುವ ಹಾನಿಯ ಪ್ರಮಾಣ ಎಷ್ಟು? ಎಂಬುದರ ಕುರಿತು ನೇರವಾಗಿ ಮಾಹಿತಿ ರವಾನಿಸಬೇಕು. ಬಂಡಾಯ ಶಮನಕ್ಕೆ ಇರುವ ಅವಕಾಶಗಳ ಬಗ್ಗೆಯೂ ಸಲಹೆ ನೀಡಬೇಕು' ಎಂಬುದಾಗಿ ಅಮಿತ್ ಶಾ ತಾಕೀತು ಮಾಡಿದ್ದಾರೆ ಎಂದು ಅವರು ಹೇಳಿದರು.

ಪ್ರಜಾ ಮತ ಜನತಂತ್ರದ ಹಬ್ಬ

ಕರ್ನಾಟಕ ವಿಧಾನಸಭಾ ಚುನಾವಣೆ - 2023



ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಬೆಂಬಲಿಗರು ತಲಾ 4 ಮೇಕೆಗಳನ್ನು ಪಣಕ್ಕಿಟ್ಟಿದ್ದಾರೆ

ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳ ಬೆಂಬಲಿಗರಿಂದ ಮೇಕೆಗಳ ಪಣ!

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಅಭ್ಯರ್ಥಿಗಳ ಬೆಂಬಲಿಗರು ತಮ್ಮ ನಾಯಕರು ವಿಧಾನಸಭೆ ಚುನಾವಣೆಯಲ್ಲಿ ಗೆಲ್ಲುತ್ತಾರೆಂದು ಅವರ ಪರವಾಗಿ ಮೇಕೆಗಳನ್ನು ಪಣಕ್ಕಿಟ್ಟಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ರಮೇಶ ಬಂಡಿಸಿದ್ದೇಗೌಡ ಗೆಲ್ಲುತ್ತಾರೆಂದು ಗೌಡಗೆರೆ ಬೀದಿಯ ಬೆಂಬಲಿಗರಾದ ವಿಶ್ವಾಸ್, ಬಾಲು, ಉಮೇಶ್ ಮತ್ತು ಸುನಿಲ್ ಹಾಗೂ ಜೆಡಿಎಸ್ ಅಭ್ಯರ್ಥಿ ರವೀಂದ್ರ ಶ್ರೀಕಂಠಯ್ಯ ಗೆಲ್ಲುತ್ತಾರೆಂದು ಬೆಂಬಲಿಗರಾದ ಅಭಿ, ಮಂಜು, ರೀತು ಇತರರು ಸೇರಿ ತಲಾ 4 ಮೇಕೆಗಳನ್ನು ಪಣಕ್ಕೆ ಇಟ್ಟಿದ್ದಾರೆ. ಅವುಗಳ ಮೌಲ್ಯ ತಲಾ ₹ 60 ಸಾವಿರ ಆಗುತ್ತದೆ ಎಂದು ಹೇಳಿಕೊಂಡಿದ್ದಾರೆ.

'ರಮೇಶ ಬಂಡಿಸಿದ್ದೇಗೌಡ ಅವರು ಗೆದ್ದರೆ ನಮಗೆ ನಾಲ್ಕು ಮೇಕೆಗಳು ಸಿಗುತ್ತವೆ. ಅವರು ಗೆಲ್ಲುತ್ತಾರೆ ಎಂಬ ವಿಶ್ವಾಸದಿಂದಲೇ ನಾವೂ ಮೇಕೆಗಳನ್ನು ಪಣಕ್ಕೆ ಇಟ್ಟಿದ್ದೇವೆ' ಎಂದು ಕಾಂಗ್ರೆಸ್ ಕಾರ್ಯಕರ್ತ ವಿಶ್ವಾಸ್ ತಿಳಿಸಿದರು.

'ರವೀಂದ್ರ ಗೆಲ್ಲುವ ನಂಬಿಕೆ ಇದೆ. ಹೀಗಾಗಿ, ಕಾಂಗ್ರೆಸ್ ಕಾರ್ಯಕರ್ತರು ಒಡ್ಡಿದ ಸವಾಲು ಸ್ವೀಕರಿಸಿದ್ದೇವೆ' ಎಂದು ಜೆಡಿಎಸ್ ಕಾರ್ಯಕರ್ತ ಮಂಜು ಹೇಳಿದರು.

'ಕೊಚ್ಚಿ ವಾಟರ್ ಮೆಟ್ರೊ': ಪ್ರಧಾನಿಯಿಂದ 25ರಂದು ಚಾಲನೆ

ತಿರುವನಂತಪುರ (ಪಿಟಿಐ): ಕೊಚ್ಚಿಯಲ್ಲಿ ₹1,136 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿರುವ 'ಕೊಚ್ಚಿ ವಾಟರ್ ಮೆಟ್ರೊ' ಸೇವೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇದೇ 25ರಂದು ಚಾಲನೆ ನೀಡಲಿದ್ದಾರೆ.

ಕೊಚ್ಚಿ ಹಾಗೂ ಸುತ್ತಮುತ್ತ ಇರುವ 10 ದ್ವೀಪಗಳಿಗೆ 78 ಎಲೆಕ್ಟ್ರಿಕಲ್ ದೋಣಿಗಳ ಮೂಲಕ ಸಂಪರ್ಕ ಕಲ್ಪಿಸಲಾಗುತ್ತದೆ. ದೋಣಿಗಳನ್ನು ಒಳಗೊಂಡ ಈ ಸಂಚಾರ ವ್ಯವಸ್ಥೆಗೆ 'ಕೊಚ್ಚಿ ವಾಟರ್ ಮೆಟ್ರೊ' ಎಂದು ಹೆಸರಿಡಲಾಗಿದ್ದು, ಇದರ ಮಾರ್ಗದಲ್ಲಿ ಒಟ್ಟು 38 ಟರ್ಮಿನಲ್‌ಗಳನ್ನು ನಿರ್ಮಿಸಲಾಗಿದೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಈ ಮಹತ್ವಾಕಾಂಕ್ಷಿ ಯೋಜನೆ ಹಾಗೂ ಅದರ ಉದ್ಘಾಟನೆ ಕುರಿತು ತಮ್ಮ ಫೇಸ್‌ಬುಕ್ ಹಾಗೂ ಟ್ವಿಟರ್ ಖಾತೆಗಳಲ್ಲಿ ಶನಿವಾರ ಮಾಡಿರುವ ಪೋಸ್ಟ್‌ನಲ್ಲಿ ವಿವರಿಸಿದ್ದಾರೆ.

'ಬಂದರು ನಗರ ಕೊಚ್ಚಿಯಲ್ಲಿ 'ವಾಟರ್ ಮೆಟ್ರೊ'ಗೆ ಚಾಲನೆ ನೀಡುವ ಮೂಲಕ ಎಲ್‌ಡಿಎಫ್ ಸರ್ಕಾರವು ರಾಜ್ಯದ ಜನತೆಗೆ ತಾನು ನೀಡಿದ್ದ ಮತ್ತೊಂದು ಭರವಸೆಯನ್ನು ಈಡೇರಿಸುತ್ತಿದೆ' ಎಂದು ಹೇಳಿದ್ದಾರೆ.

'ವಿಶ್ವದರ್ಜೆ ಗುಣಮಟ್ಟದ ಕೊಚ್ಚಿ ವಾಟರ್ ಮೆಟ್ರೊ ಯೋಜನೆಯನ್ನು ಕೇರಳ ಸರ್ಕಾರ ಹಾಗೂ ಜರ್ಮನಿ ಮೂಲದ ಕೆಎಫ್‌ಡಬ್ಲ್ಯು ಸಂಸ್ಥೆ ಜಂಟಿಯಾಗಿ ನಿರ್ಮಿಸಿವೆ. ಈ ಯೋಜನೆ ಕೊಚ್ಚಿ ನಗರದ ಅಭಿವೃದ್ಧಿಗೆ ವೇಗ ನೀಡಲಿದೆ' ಎಂದು ವಿಜಯನ್ ಟ್ವೀಟ್ ಮಾಡಿದ್ದಾರೆ.

'ಮೊದಲ ಹಂತದಲ್ಲಿ, ಹೈಕೋರ್ಟ್–ವೈಪಿನ್ ಹಾಗೂ ವೈಟಿಲ–ಕಾಕನಾಡ್ ಟರ್ಮಿನಲ್‌ಗಳ ನಡುವೆ ಸೇವೆ ಆರಂಭವಾಗಲಿದೆ. ಪ್ರಯಾಣ ದರವು ಕೈಗೆಟುಕುವಂತಿರುತ್ತದೆ ಹಾಗೂ ದೋಣಿಗಳು ಹವಾನಿಯಂತ್ರಿತ. ಜನರು 'ಕೊಚ್ಚಿ–1' ಕಾರ್ಡ್ ಬಳಸಿ ಮೆಟ್ರೊ ರೈಲು ಮತ್ತು ವಾಟರ್ ಮೆಟ್ರೊದಲ್ಲಿ ಪ್ರಯಾಣ ಮಾಡಬಹುದು' ಎಂದೂ ಅವರು ಟ್ವೀಟ್ ಮಾಡಿದ್ದಾರೆ.

ಕಾಲಿಯಾಗಂಜ್ ಉದ್ವಿಗ್ನ: ಆರೋಪಿ ಬಂಧನ

ರಾಯ್‌ಗಂಜ್/ಕಾಲಿಯಾಗಂಜ್ (ಪಶ್ಚಿಮ ಬಂಗಾಳ): ಪಶ್ಚಿಮ ಬಂಗಾಳದ ಉತ್ತರ ದಿನಾಜ್‌ಪುರ ಜಿಲ್ಲೆಯ ಕಾಲಿಯಾಗಂಜ್‌ನಲ್ಲಿ ಬಾಲಕಿಯ ಅತ್ಯಾಚಾರ ಹಾಗೂ ಕೊಲೆ ಆರೋಪದ ಹಿನ್ನೆಲೆಯಲ್ಲಿ ಪ್ರತಿಭಟನೆ ಭುಗಿಲೆದ್ದಿದ್ದು, ಹಿಂಸಾಚಾರ ನಡೆದಿದೆ.

ಈ ನಡುವೆ, ಪ್ರಕರಣದ ಪ್ರಮುಖ ಆರೋಪಿಯನ್ನು 20 ವರ್ಷದ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಶನಿವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಕಾಲಿಯಾಗಂಜ್ ಠಾಣೆ ವ್ಯಾಪ್ತಿಯ ಕಾಲುವೆಯೊಂದರಲ್ಲಿ 17 ವರ್ಷದ ಬಾಲಕಿಯ ಶವ ಶುಕ್ರವಾರ ಪತ್ತೆಯಾಗಿತ್ತು. ಬಾಲಕಿಗೆ ಬಂಧಿತ ಆರೋಪಿಯ ಪರಿಚಯವಿತ್ತು' ಎಂದು ಎಸ್‌ಪಿ ಮೊಹ್ಮದ್ ಸನಾ ಅಖ್ತರ್ ಹೇಳಿದ್ದಾರೆ.

ಗಡಿಯಲ್ಲಿ ಕಟ್ಟೆಚ್ಚರ: ಮುಂದುವರಿದ ಕಾರ್ಯಾಚರಣೆ

ಪೂಂಛ್ ಉಗ್ರ ದಾಳಿ: ಸೇನಾ ಉತ್ತರ ಕಮಾಂಡರ್ ಭೇಟಿ

ಜಮ್ಮು (ಪಿಟಿಐ) : ಪೂಂಛ್‌ನಲ್ಲಿ ಉಗ್ರರು ದಾಳಿ ನಡೆಸಿ ಐವರು ಯೋಧರನ್ನು ಹತ್ಯೆ ಮಾಡಿರುವ ಸ್ಥಳಕ್ಕೆ ಸೇನಾ ಉತ್ತರ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಅವರು ಶನಿವಾರ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಉಗ್ರರ ಪತ್ತೆಗಾಗಿ ನಡೆಯುತ್ತಿರುವ ಶೋಧ ಕಾರ್ಯಾಚರಣೆ ಹಾಗೂ ಗಡಿ ಪ್ರದೇಶದಲ್ಲಿನ ಭದ್ರತೆಯನ್ನೂ ಅವರು ಪರಿಶೀಲಿಸಿದರು. ಬಿಎಸ್‌ಎಫ್ ಮಹಾನಿರ್ದೇಶಕ ಎಸ್.ಎಲ್.ಥಾಸೆನ್, ಎಡಿಜಿಪಿ ಮುಕೇಶ್ ಸಿಂಗ್ ಮತ್ತಿತರರು ಜೊತೆಗಿದ್ದರು.

'ಯೋಧರ ಮೇಲೆ ದಾಳಿ ನಡೆದಿರುವ ಪ್ರದೇಶಕ್ಕೆ ಲೆಫ್ಟಿನೆಂಟ್ ಜನರಲ್ ಉಪೇಂದ್ರ ದ್ವಿವೇದಿ ಅವರು ಭೇಟಿ ನೀಡಿ ಕಾರ್ಯಾಚರಣೆಯ ಕುರಿತು ಮಾಹಿತಿ ಪಡೆದಿದ್ದಾರೆ' ಎಂದು ಸೇನೆಯ ಉತ್ತರ ಕಮಾಂಡ್ ಟ್ವೀಟ್ ಮಾಡಿದೆ.

ರಜೌರಿ ವಲಯದ ಬಿಂಬೇರ್ ಗಾಲಿ–ಪೂಂಛ್ ಮಾರ್ಗದಲ್ಲಿ ಗುರುವಾರ ಭಯೋತ್ಪಾದಕರು ಹೊಂಚು ಹಾಕಿ ನಡೆಸಿದ ದಾಳಿಯಲ್ಲಿ ಸೇನಾ ವಾಹನಕ್ಕೆ ಬೆಂಕಿ ಹೊತ್ತಿಕೊಂಡಿದ್ದರಿಂದ ಐವರು ಸೈನಿಕರು ಹುತಾತ್ಮರಾಗಿ ಒಬ್ಬರು ಗಾಯಗೊಂಡಿದ್ದರು.

ಈ ಯೋಧರು ಇಫ್ತಾರ್ ಕೂಟಕ್ಕಾಗಿ ಸಾಂಗಿಯೋಟ್ ಗ್ರಾಮಕ್ಕೆ ಹಣ್ಣು ಹಾಗೂ ಇತರ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದರು ಎಂದು ಸೇನೆಯ ಮೂಲಗಳು ಹೇಳಿವೆ.

ಬೆಂಕಿಗಾಹುತಿ ಆಗಿರುವ ವಾಹನಕ್ಕೆ ಗುಂಡುಗಳು ತಗುಲಿರುವ ಗುರುತುಗಳನ್ನು ತನಿಖಾ ತಂಡ ಪತ್ತೆ ಹಚ್ಚಿದೆ. ಉಗ್ರರ ವಿರುದ್ಧದ ಕಾರ್ಯಾಚರಣೆಗಾಗಿ ರಾಷ್ಟ್ರೀಯ ರೈಫಲ್ಸ್‌ನ ಯೋಧರನ್ನು ನಿಯೋಜಿಸಲಾಗಿದೆ ಎಂದೂ ವಿವರಿಸಿದೆ.

ಗಡಿ ಜಿಲ್ಲೆಗಳಾದ ರಜೌರಿ ಮತ್ತು ಪೂಂಛ್‌ನಲ್ಲಿ ಕಟ್ಟೆಚ್ಚರ ವಹಿಸಿದ್ದು, ಯೋಧರು ದಟ್ಟ ಅರಣ್ಯ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಡ್ರೋನ್, ಸ್ನೈಫರ್ ಶ್ವಾನಗಳನ್ನು ಹಾಗೂ ಹೆಲಿಕಾಪ್ಟರ್‌ಗಳನ್ನೂ ಬಳಸಲಾಗುತ್ತಿದೆ ಎಂದೂ ಹೇಳಿವೆ.

ದಾಳಿಯ ಸಂಬಂಧ 14 ಮಂದಿಯನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದು, ಇವರಲ್ಲಿ ಕೆಲವರನ್ನು ಬಿಡುಗಡೆಗೊಳಿಸಲಾಗಿದೆ ಎಂದಿವೆ.

ಯೋಧರ ಅಂತ್ಯಕ್ರಿಯೆ

ಉಗ್ರರ ದಾಳಿಯಲ್ಲಿ ಹುತಾತ್ಮರಾಗಿರುವ ಒಡಿಶಾದ ಯೋಧ ದೇಬಶಿಶ್ ಬಿಸ್ವಾಲ್, ಪಂಜಾಬ್‌ನ ಹವಾಲ್ದಾರ್ ಮಂದೀಪ್ ಸಿಂಗ್, ಲ್ಯಾನ್ಸ್ ನಾಯಕ್ ಕುಲ್ವಂತ್ ಸಿಂಗ್, ಸಿಪಾಯಿ ಹರ್‌ಕೃಷನ್ ಸಿಂಗ್ ಮತ್ತು ಸಿಪಾಯಿ ಸೇವಕ್ ಸಿಂಗ್ ಅವರ ಅಂತ್ಯಕ್ರಿಯೆಯು ಸೇನಾ ಗೌರವಗಳೊಂದಿಗೆ ಅವರ ಹುಟ್ಟೂರುಗಳಲ್ಲಿ ಶನಿವಾರ ಜರುಗಿತು. ಅಂತ್ಯಕ್ರಿಯೆಯಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ದೇಬಶಿಶ್ ಅವರ ಕುಟುಂಬಕ್ಕೆ ಬಿಹಾರ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ₹25 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಪಂಜಾಬ್‌ನ ನಾಲ್ವರು ಯೋಧರಿಗೆ ಅಲ್ಲಿನ ಸರ್ಕಾರವು ತಲಾ ₹1 ಕೋಟಿ ಪರಿಹಾರ ಹಾಗೂ ಕುಟುಂಬದ ಒಬ್ಬರಿಗೆ ನೌಕರಿ ನೀಡುವುದಾಗಿ ಘೋಷಿಸಿದೆ.

ರಾಜ್ಯದಲ್ಲಿ 10 ದಿನ ರಾಹುಲ್–ಪ್ರಿಯಾಂಕಾ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 10 ದಿನ ವಾಸ್ತವ್ಯ ಹೂಡಿ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪರ ಪ್ರಚಾರ ಮಾಡಲು ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರು ಮುಂದಾಗಿದ್ದಾರೆ.

ಜನ ಸಂಪರ್ಕ ಯಾತ್ರೆ ಮೂಲಕ ಪಕ್ಷದ ಶಾಸಕರ ಪರ ಮತ ಬೇಟೆ ನಡೆಸಲಿರುವ ಅಣ್ಣ–ತಂಗಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸಾಥ್ ನೀಡಲಿದ್ದಾರೆ.

ಉತ್ತರ ಕರ್ನಾಟಕದ ಭಾಗದಲ್ಲಿ ರಾಹುಲ್ ಗಾಂಧಿ, ದಕ್ಷಿಣ ಕರ್ನಾಟಕದಲ್ಲಿ ಪ್ರಿಯಾಂಕಾ ಪ್ರಚಾರ ಮಾಡಲ್ಲಿದ್ದಾರೆ. ಇಬ್ಬರೂ ಪ್ರತಿ ದಿನ ಮೂರು ವಿಧಾನ ಸಭಾ ಕ್ಷೇತ್ರಗಳಲ್ಲಿ ಪ್ರತ್ಯೇಕವಾಗಿ ಪ್ರಚಾರ ನಡೆಸಲಿದ್ದಾರೆ. ಈ ನಡುವೆ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಕೂಡ ಚುನಾವಣಾ ಅಖಾಡಕ್ಕೆ ಬರಲಿದ್ದಾರೆ. ಬೆಂಗಳೂರು ಮತ್ತು ಉತ್ತರ ಕರ್ನಾಟಕದ ಭಾಗದಲ್ಲಿ ಬೃಹತ್ ಸಮಾವೇಶದಲ್ಲಿ ಸೋನಿಯಾ ಪ್ರಚಾರ ಭಾಷಣ ಮಾಡಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಅಲ್ಲದೆ, ರಾಜ್ಯದಾದ್ಯಂತ ನಿರಂತರ 15 ದಿನ ಡಿ.ಕೆ. ಶಿವಕುಮಾರ್ ಮತ್ತು ಸಿದ್ಧರಾಮಯ್ಯ ಕೂಡ ಪ್ರತ್ಯೇಕವಾಗಿ ಪ್ರಚಾರ ನಡೆಸಲಿದ್ದಾರೆ.

ಸೋಮಣ್ಣ ಜೊತೆ ವೈಮನಸ್ಸು ಇಲ್ಲ: ಬಿ.ವೈ. ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಮೈಸೂರು: 'ವರುಣ ಕ್ಷೇತ್ರದ ಅಭ್ಯರ್ಥಿ ವಿ. ಸೋಮಣ್ಣ ಅವರೊಂದಿಗೆ ಯಾವುದೇ ವೈಮನಸ್ಸಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಇಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವರುಣದಲ್ಲಿ ಕಣಕ್ಕಿಳಿಯದಿರಲು ಬಿ.ಎಸ್. ಯಡಿಯೂರಪ್ಪ–ಸಿದ್ದರಾಮಯ್ಯ ನಡುವಿನ ಆಂತರಿಕ ಒಪ್ಪಂದ ಕಾರಣ ಎಂಬುದು ಸಲ್ಲದು. ಯಡಿಯೂರಪ್ಪ ಎಂದಿಗೂ ಹೊಂದಾಣಿಕೆ ರಾಜಕಾರಣ ಮಾಡಿದವರಲ್ಲ. ಶಿಕಾರಿಪುರದಲ್ಲೂ ಯಾವುದೇ ಹೊಂದಾಣಿಕೆ ಮಾಡಿಕೊಂಡಿಲ್ಲ. ಸೋಮಣ್ಣ ಪರವಾಗಿ ಪ್ರಚಾರ ನಡೆಸಿದ್ದೇನೆ. ಅವರ ಗೆಲುವಿಗಾಗಿ ದೇವರು ಮೆಚ್ಚುವಂತೆ ಕೆಲಸ ಮಾಡುತ್ತೇನೆ' ಎಂದರು.

ನೋವು ತಂದಿದೆ: 'ವೀರೇಂದ್ರ ಪಾಟೀಲರಿಗೆ ದ್ರೋಹ ಬಗೆದ, ವೀರಶೈವ– ಲಿಂಗಾಯತ ಸಮುದಾಯವನ್ನು ಧರ್ಮದ ಹೆಸರಿನಲ್ಲಿ ಒಡೆಯಲು ಮುಂದಾದ ಕಾಂಗ್ರೆಸ್‌ಗೆ ಹಿರಿಯರಾದ ಜಗದೀಶ ಶೆಟ್ಟರ್ ಅವರು ಸೇರ್ಪಡೆಯಾಗಿರುವುದು ನೋವು ತಂದಿದೆ. ಅವರು ಪಕ್ಷೇತರರಾಗಿ ಕಣಕ್ಕಿಳಿದಿದ್ದರೂ ಗೆಲ್ಲುತ್ತಿದ್ದರು. ಎಲ್ಲ ಸಮುದಾಯಗಳ ನಡುವೆ ಬೆಂಕಿ ಹಚ್ಚುವ ಪಕ್ಷಕ್ಕೆ ಹೋಗಿರುವುದು ದುರಂತ' ಎಂದರು.

ಮೇ 13ಕ್ಕೆ ತಿಳಿಯುತ್ತೆ: ಮಂಡ್ಯ ಜಿಲ್ಲೆಯ ಪಾಂಡವಪುರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ವಿಜಯೇಂದ್ರ ಅವರು 'ಯಾರ ಡ್ಯಾಂ ಒಡೆದು ಹೋಗಲಿದೆ ಎಂಬುದು ಮೇ 13ರಂದು ಅವರಿಗೆ ತಿಳಿಯಲಿದೆ, ವೀರಶೈವರ ಬಗ್ಗೆ ಅನುಕಂಪದ ಮಾತುಗಳನ್ನಾಡುವ ಅಗತ್ಯವಿಲ್ಲ' ಎಂದು ಹೇಳಿದರು.



ರಾಯಚೂರು ತಾಲ್ಲೂಕು ವಡ್ಲೂರು ಕೈಗಾರಿಕಾ ವಲಯದಲ್ಲಿರುವ ರಾಯಚೂರು ಲ್ಯಾಬ್ ಕಂಪನಿಯ ಕಾರ್ಖಾನೆಯಲ್ಲಿ ಶನಿವಾರ ಬೆಂಕಿ ಅವಘಡ ಸಂಭವಿಸಿದ್ದರಿಂದ ಉದ್ಯೋಗಿಗಳು ಹೊರಗಡೆ ಓಡಿ ಬಂದರು

ರಾಸಾಯನಿಕ ಕಾರ್ಖಾನೆಗೆ ಬೆಂಕಿ

ಪ್ರಜಾವಾಣಿ ಚಿತ್ರ

ರಾಯಚೂರು: ತಾಲ್ಲೂಕಿನ ವಡ್ಲೂರು ಕೈಗಾರಿಕಾ ವಲಯದಲ್ಲಿರುವ ರಾಯಚೂರು ಲ್ಯಾಬ್ ಕಂಪನಿಯ ಕಾರ್ಖಾನೆಯಲ್ಲಿ ಶನಿವಾರ ಬೆಂಕಿ ಅವಘಡ ಸಂಭವಿಸಿ, ಇಡೀ ಘಟಕವು ಸುಟ್ಟು ಭಸ್ಮವಾಗಿದೆ. ಅಗ್ನಿಶಾಮಕ ಠಾಣೆಯ ಸಿಬ್ಬಂದಿ ದಿನಪೂರ್ತಿ ಅಲ್ಲದೇ ರಾತ್ರಿಯವರೆಗೆ ಕಾರ್ಯಾಚರಣೆ ನಡೆಸಿದರೂ ಪರಿಸ್ಥಿತಿ ನಿಯಂತ್ರಣಕ್ಕೆ ಬರಲಿಲ್ಲ.

ಏಳು ಅಗ್ನಿಶಾಮಕ ವಾಹನಗಳಿಂದ ನೀರು ನಿರಂತರವಾಗಿ ಹಾಕಿದರೂ ಬೆಂಕಿ ನಿಯಂತ್ರಿಸಲು ಆಗಲಿಲ್ಲ. ಕಾರ್ಖಾನೆಯಲ್ಲಿದ್ದ ಬಾಯ್ಲರ್‌ಗಳು ಸರಣಿಯಾಗಿ ಸ್ಫೋಟಗೊಂಡವು. ಎಲ್ಲಾ ಕಡೆ ದಟ್ಟ ಹೊಗೆ ಆವರಿಸಿದ್ದರಿಂದ ಚಿಕ್ಕಸುಗೂರು, ವಡ್ಲೂರು, ಹೆಗಸನಹಳ್ಳಿ ಮತ್ತು ಏಗನೂರು ಗ್ರಾಮಗಳಲ್ಲಿ ಜನರು ಆತಂಕಕ್ಕೆ ಒಳಗಾದರು.

‘ಇಡೀ ಕಟ್ಟಡ ಸುಟ್ಟು ₹8 ಕೋಟಿಗೂ ಅಧಿಕ ಮೌಲ್ಯದ ಆಸ್ತಿ ಹಾನಿಯಾಗಿದ್ದು, ಯಾವುದೇ ಜೀವಹಾನಿಯಾಗಿಲ್ಲ. ಬೆಂಕಿ ಕಂಡ ಕೂಡಲೇ ಉದ್ಯೋಗಿಗಳು ಹೊರಗಡೆ ಓಡಿದರು. ಬೆಂಕಿಗೆ ಕಾರಣ ಗೊತ್ತಾಗಿಲ್ಲ. 2013ಲ್ಲಿ ಸ್ಥಾಪಿತ ರಾಯಚೂರು ಲ್ಯಾಬ್ ಕಂಪನಿಯು ಜೀವರಕ್ಷಕ ಔಷಧಿಗಳಿಗೆ ಬೇಕಾದ 20ಕ್ಕೂ ಹೆಚ್ಚು ರಾಸಾಯನಿಕಗಳನ್ನು ಪೂರೈಸುತ್ತದೆ’ ಎಂದು ಶಕ್ತಿನಗರ ಠಾಣೆ ಪೊಲೀಸರು ತಿಳಿಸಿದರು.

‘ಕಾರ್ಖಾನೆಯಲ್ಲಿ ಉರಿಯುವ ಮತ್ತು ಸ್ಫೋಟಕ ಉಪಕರಣಗಳು ಸಾಕಷ್ಟು ಪ್ರಮಾಣದಲ್ಲಿ ಇದ್ದವು. ಕಟ್ಟಡದೊಳಗೆ ಬೆಂಕಿ ಇಲ್ಲದ ಕಡೆ ಸಿಬ್ಬಂದಿ ಹೋದಾಗ ಇದ್ದಕ್ಕಿದ್ದಂತೆ ಸ್ಫೋಟಗಳು ಸಂಭವಿಸಿವೆ’ ಎಂದು ಅಗ್ನಿಶಾಮಕ ಠಾಣೆ ಜಿಲ್ಲಾಧಿಕಾರಿ ರವೀಂದ್ರ ಘಾಟಗೆ ‘ಪ್ರಜಾವಾಣಿ’ಗೆ ತಿಳಿಸಿದರು.

ಬೆಂಗಳೂರಿನ ಬಿಜೆಪಿ ಕಚೇರಿ ಬಳಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣ

ಸ್ಫೋಟಕ ಪೂರೈಸಿದ್ದವರಿಗೆ ಏಳು ವರ್ಷ ಕಾರಾಗೃಹ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ಮಲ್ಲೇಶ್ವರ ಕಚೇರಿ ಬಳಿ ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಇಬ್ಬರು ಆರೋಪಿಗಳಿಗೆ ಏಳು ವರ್ಷ ಕಾರಾಗೃಹ ಶಿಕ್ಷೆ ವಿಧಿಸಿ ನಗರದ ಎನ್‌ಐಎ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ತಮಿಳುನಾಡು ತಿರುನೆಲ್ವೇಲಿಯ ಡ್ಯಾನಿಯಲ್ ಪ್ರಕಾಶ್ (37) ಹಾಗೂ ಸೈಯದ್ ಅಲಿ (36) ಶಿಕ್ಷೆಗೆ ಗುರಿಯಾದವರು. ಇವರಿಬ್ಬರು ಬಾಂಬ್ ಸ್ಫೋಟಕ್ಕೆ ಅಗತ್ಯವಿದ್ದ ಸ್ಫೋಟಕಗಳನ್ನು ಪೂರೈಸಿದ್ದರು. ಈ ಬಗ್ಗೆ ನ್ಯಾಯಾಲಯಕ್ಕೆ ಇತ್ತೀಚೆಗೆ ತಪ್ಪೊಪ್ಪಿಗೆ ಪತ್ರ ನೀಡಿದ್ದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯ, ಇಬ್ಬರಿಗೂ 7 ವರ್ಷ ಕಾರಾಗೃಹ ಶಿಕ್ಷೆ ಹಾಗೂ ತಲಾ ₹ 50 ಸಾವಿರ ದಂಡ ವಿಧಿಸಿ ಏಪ್ರಿಲ್ 20ರಂದು ಆದೇಶ ಹೊರಡಿಸಿದೆ.

‘2013ರ ಏಪ್ರಿಲ್ 17ರಂದು ಬೆಳಿಗ್ಗೆ 10.20ರ ಸುಮಾರಿಗೆ ಬಿಜೆಪಿ ಕಚೇರಿ ಬಳಿ ಬಾಂಬ್ ಸ್ಫೋಟಗೊಂಡಿತ್ತು. ಟಿಎನ್ 22 ಆರ್ 3739 ನೋಂದಣಿ ಸಂಖ್ಯೆಯ ಬೈಕ್‌ನಲ್ಲಿ ಬಾಂಬ್ ಇರಿಸಲಾಗಿತ್ತು. ಸ್ಫೋಟದಲ್ಲಿ 6 ನಾಗರಿಕರು ಹಾಗೂ ಕೆಎಸ್‌ಆರ್‌ಪಿಯ 12 ಸಿಬ್ಬಂದಿ ಗಾಯಗೊಂಡಿದ್ದರು. ಈ ಸಂಬಂಧ ವೈಯಾಲಿಕಾವಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ಹೊಣೆಯನ್ನು ಸಿಸಿಬಿಗೆ ವಹಿಸಲಾಗಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಮುಖ ಆರೋಪಿ ನಜೀರ್ ಶೇಖ್ ಅಲಿಯಾಸ್ ಪಟ್ಲಾ ಅನಾಸ್ ಸೇರಿದಂತೆ 23 ಆರೋಪಿಗಳನ್ನು ಬಂಧಿಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು’ ಎಂದು ತಿಳಿಸಿವೆ.

ಶಿಕ್ಷೆ ಪ್ರಮಾಣಕ್ಕಿಂತ ಹೆಚ್ಚು ಜೈಲು ವಾಸ: ಡ್ಯಾನಿಯಲ್ ಪ್ರಕಾಶ್ ಹಾಗೂ ಸೈಯದ್ ಅಲಿ, ಏಳು ವರ್ಷಕ್ಕಿಂತ ಹೆಚ್ಚು ದಿನ ಜೈಲುವಾಸ ಅನುಭವಿಸಿದ್ದಾರೆ. ಇದೀಗ ಅವರಿಗೆ ಶಿಕ್ಷೆ ಆಗಿದ್ದು, ಸದ್ಯದಲ್ಲೇ ಬಿಡುಗಡೆ ಆಗುವ ಸಾಧ್ಯತೆ ಇದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಕಾರಾಗೃಹ ಇಲಾಖೆಯ ಅಧಿಕಾರಿಯೊಬ್ಬರು, ‘ನ್ಯಾಯಾಲಯದ ಆದೇಶ ಪ್ರತಿ ಬರಬೇಕಿದೆ. ಆ ನಂತರವೇ ₹ 50 ಸಾವಿರ ದಂಡ ಪಾವತಿ ಪ್ರಕ್ರಿಯೆ ಆರಂಭವಾಗಲಿದೆ. ಈಗಾಗಲೇ ಜೈಲು ವಾಸ ಪೂರ್ಣಗೊಳಿಸಿದ್ದರೆ, ದಂಡ ಪಾವತಿ ನಂತರ ಅವರಿಬ್ಬರು ಬಿಡುಗಡೆಗೆ ಅರ್ಹತೆ ಪಡೆಯಲಿದ್ದಾರೆ’ ಎಂದರು.

₹ 3 ಸಾವಿರಕ್ಕೆ ಸ್ಫೋಟಕ ಮಾರಾಟ

‘ಬಿಜೆಪಿ ಕಚೇರಿ ಎದುರು ಬಾಂಬ್ ಸ್ಫೋಟಿಸಲು ಸಂಚು ರೂಪಿಸಿದ್ದ ಆರೋಪಿಗಳು, ಸ್ಫೋಟಕ ಪೂರೈಸಲು ಸೈಯದ್ ಅಲಿಯನ್ನು ಕೋರಿದ್ದರು. ಕ್ವಾರಿಯಲ್ಲಿ ಕೆಲಸ ಮಾಡುತ್ತಿದ್ದ ಸೈಯದ್ ಅಲಿ, ₹3 ಸಾವಿರ ಪಡೆದುಕೊಂಡು ಜಿಲೆಟಿನ್ ಕಡ್ಡಿ ಹಾಗೂ ಡಿಟೋನೇಟರ್ ಮಾರಿದ್ದ. ಈ ಎಲ್ಲ ಸಂಗತಿಗಳು ಆರೋಪ ಪಟ್ಟಿಯಲ್ಲಿದ್ದವು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಹ ಕೈದಿಗಳಿಂದ ಹಲ್ಲೆ: ಸ್ಫೋಟಕ ಪೂರೈಸಿದ್ದ ಬಗ್ಗೆ ನ್ಯಾಯಾಲಯಕ್ಕೆ ತಪ್ಪೊಪ್ಪಿಗೆ ಪತ್ರ ನೀಡಿದ್ದ ಸೈಯದ್ ಅಲಿ ಮೇಲೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಸಹ ಕೈದಿಗಳು ಇತ್ತೀಚೆಗೆ ಹಲ್ಲೆ ಮಾಡಿದ್ದರು. ಈ ಸಂಬಂಧ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ.

ಸುದ್ದಿ 2 ನಿಮಿಷ

‘ಅಕ್ರಮ ಮುಚ್ಚಿಕೊಳ್ಳಲು ಸುಳ್ಳು ಆರೋಪ’

ಬೆಂಗಳೂರು: ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ ನಡೆದಿರುವ ಅಕ್ರಮಗಳನ್ನು ಮುಚ್ಚಿಕೊಳ್ಳಲು ಸಂಸ್ಥೆಯ ಅಧ್ಯಕ್ಷ ಡಿ.ಎಸ್. ವೀರಯ್ಯ ಅವರು ಲಾರಿ ಮಾಲೀಕರ ಸಂಘಟನೆಗಳ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ ಎಂದು ಲಾರಿ ಮಾಲೀಕರ ಸಂಘಗಳ ಪ್ರಮುಖರು ದೂರಿದ್ದಾರೆ.

‘ಟ್ರಕ್ ಟರ್ಮಿನಲ್ ಒಡೆತನದ ನಿವೇಶನಗಳನ್ನು ಲಾರಿ ಮಾಲೀಕರ ಸಂಘಟನೆಗಳಿಗೆ ಕಡಿಮೆ ದರಕ್ಕೆ ನೀಡಿರುವುದನ್ನು ಪ್ರಶ್ನಿಸಿರುವುದಕ್ಕಾಗಿ ನನ್ನ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಲಾಗಿದೆ’ ಎಂಬ ವೀರಯ್ಯ ಅವರ ಹೇಳಿಕೆ ಸಂಪೂರ್ಣವಾಗಿ ಆಧಾರರಹಿತವಾದದ್ದು ಎಂದು ಪ್ರತಿಕ್ರಿಯಿಸಿದ್ದಾರೆ.

ಈ ಸಂಬಂಧ ಜಂಟಿ ಪತ್ರಿಕಾ ಹೇಳಿಕೆ ನೀಡಿರುವ ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ ಗೌರವಾಧ್ಯಕ್ಷ ಬಿ. ಚನ್ನಾರೆಡ್ಡಿ, ಬೆಂಗಳೂರು ನಗರ ಲಾರಿ ಮಾಲೀಕರ ಸಂಘದ ರಾಮಚಂದ್ರ, ಚಾಂದ್ ಪಾಷ ಮತ್ತು ಕರ್ನಾಟಕ ಗೂಡ್ಸ್ ಟ್ರಕ್ ಮಾಲೀಕರ ಅಸೋಸಿಯೇಷನ್‌ನ ಸೋಮಸುಂದರ್, ‘ವೀರಯ್ಯ ಅವರು ಟರ್ಮಿನಲ್‌ನ ಇಡೀ ಕಚೇರಿಯನ್ನು ತನ್ನ ವಶಕ್ಕೆ ಪಡೆದಿದ್ದರು. ತನ್ನ ಮಾತು ಕೇಳಲಿಲ್ಲ ಎಂಬ ಕಾರಣಕ್ಕಾಗಿ ಐವರು ವ್ಯವಸ್ಥಾಪಕ ನಿರ್ದೇಶಕರನ್ನು ವರ್ಗಾವಣೆ ಮಾಡಿಸಿದ್ದರು’ ಎಂದು ಆರೋಪಿಸಿದ್ದಾರೆ.

ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ ಮತ್ತು ಕರ್ನಾಟಕ ಗೂಡ್ಸ್ ಟ್ರಕ್ ಮಾಲೀಕರ ಅಸೋಸಿಯೇಷನ್‌ಗಳಿಗೆ ಹಂಚಿಕೆ ಮಾಡಿದ್ದ ನಿವೇಶನಗಳ ಪಕ್ಕದಲ್ಲಿ ಉಳಿಕೆಯಾಗಿದ್ದ ಜಮೀನುಗಳನ್ನು ಎರಡೂ ಸಂಘಗಳಿಗೆ ನೀಡಲಾಗಿದೆ. ಅಲ್ಲಿ ಚಿಕಿತ್ಸಾಲಯ ಮತ್ತು ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಈ ಬಗ್ಗೆಯೂ ತನಿಖೆ ನಡೆಯಲಿ. ಸಂಸ್ಥೆಯಲ್ಲಿ ನಡೆದಿರುವ ಎಲ್ಲ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಿದರೆ ವೀರಯ್ಯ ಅವರ ಬಣ್ಣ ಬಯಲಾಗುತ್ತದೆ ಎಂದಿದ್ದಾರೆ.

ದಶಪಥದಲ್ಲಿ ಖಾಸಗಿ ಬಸ್ ಭಸ್ಮ



ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ಬೆಂಗಳೂರು– ಮೈಸೂರು ದಶಪಥ ಹೆದ್ದಾರಿಯಲ್ಲಿ ಶನಿವಾರ ಚಲಿಸುತ್ತಿದ್ದ ಖಾಸಗಿ ಬಸ್‌ಗೆ ಗಣಂಗೂರು ಬಳಿ ಬೆಂಕಿ ಹೊತ್ತಿಕೊಂಡು ಸಂಪೂರ್ಣವಾಗಿ ಸುಟ್ಟು ಹೋಗಿದೆ.

ಗ್ರಾಮದ ಸಮೀಪದ ಟೋಲ್ ಬಳಿ ಟೈರ್‌ನಲ್ಲಿ ಬೆಂಕಿ ಕಾಣಿಸಿಕೊಂಡು ಇಡೀ ಬಸ್‌ಗೆ ಆವರಿಸಿತು. ಪ್ರಯಾಣಿಕರೆಲ್ಲರೂ ತಕ್ಷಣ ಬಸ್‌ನಿಂದ ಇಳಿದು ಪ್ರಾಣ ಉಳಿಸಿಕೊಂಡರು. ಕೆಲವೇ ನಿಮಿಷಗಳಲ್ಲಿ ಬಸ್ ಸಂಪೂರ್ಣವಾಗಿ ಭಸ್ಮವಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಮಂಡ್ಯದ ಅಗ್ನಿಶಾಮಕ ಠಾಣೆ ಸಿಬ್ಬಂದಿ ಬೆಂಕಿ ನಂದಿಸಲು ಶ್ರಮಿಸಿದರು. ಅಷ್ಟೊತ್ತಿಗಾಗಲೇ ಬಸ್ ಸುಟ್ಟು ಹೋಗಿತ್ತು.

ಈ ಬಸ್ ಬೆಂಗಳೂರಿನಿಂದ ಮೈಸೂರಿಗೆ ತೆರಳುತ್ತಿತ್ತು. ಮೈಸೂರಿನಲ್ಲಿ ನಡೆಯುತ್ತಿದ್ದ ಮದುವೆಗೆ ಜನರನ್ನು ಕರೆತರಲಾಗುತ್ತಿತ್ತು. ಮದುವೆಗಾಗಿ ಬಸ್‌ನಲ್ಲಿ ಇಟ್ಟಿದ್ದ ಬೆಲೆ ಬಾಳುವ ಸೀರೆ ಹಾಗೂ ಇತರ ವಸ್ತುಗಳು ಸುಟ್ಟು ಹೋಗಿವೆ ಎಂದು ಪ್ರಯಾಣಿಕರು ತಿಳಿಸಿದ್ದಾರೆ.

ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಟೀಲು: ಮೈನವಿರೇಳಿಸಿದ ‘ತೂಟೆದಾರ ಸೇವೆ’

ಪ್ರಜಾವಾಣಿ ವಾರ್ತೆ

ಮೂಲ್ಕಿ (ದಕ್ಷಿಣ ಕನ್ನಡ): ಕಟೀಲು ಶ್ರೀದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ವಾರ್ಷಿಕ ಜಾತ್ರಾ ಮಹೋತ್ಸವದ ಕೊನೆಯ ದಿನವಾದ ಶನಿವಾರ ನಸುಕಿನಲ್ಲಿ ‘ತೂಟೆದಾರ ಸೇವೆ’ ನಡೆಯಿತು.

ಕಟೀಲು ಸಮೀಪದ ಅತ್ತೂರು ಮತ್ತು ಕೊಡತ್ತೂರು ಗ್ರಾಮಗಳ ನೂರಾರು ಸೇವಾಕರ್ತರು ಪರಸ್ಪರ ತೂಟೆಗಳನ್ನು (ತಾಳೆ, ತೆಂಗಿನ ಗರಿಯಿಂದ ತಯಾರಿಸಿದ ಪಂಜು) ಎಸೆದು ನಡೆಸಿದ ಈ ಸೇವೆಯ ಮೈನವಿರೇಳಿಸುವ ದೃಶ್ಯಗಳನ್ನು ಭಕ್ತರು ಕಣ್ತುಂಬಿಕೊಂಡರು.

ಶುಕ್ರವಾರ ಸಂಜೆ ದೇವರ ಬಲಿ ಉತ್ಸವ ಆರಂಭಗೊಂಡು, ವಸಂತ ಮಂಟಪದಲ್ಲಿ ದುರ್ಗಾ ಪರಮೇಶ್ವರಿಗೆ ಪೂಜೆ ನಡೆಯಿತು. ಬಳಿಕ ಪಲ್ಲಕಿಯಲ್ಲಿ ಎಕ್ಕಾರಿನವರೆಗೆ ತಡರಾತ್ರಿ ದೇವಿಯ ಸವಾರಿ ಸಾಗಿತು. ಮಧ್ಯರಾತ್ರಿ ದೇವಿಯ ಸವಾರಿ ಕಟೀಲಿಗೆ ಮರಳುವ ಸಂದರ್ಭದಲ್ಲಿ ಸುಮಾರು 18 ಕಟ್ಟೆಗಳಲ್ಲಿ ಕಟ್ಟೆ ಪೂಜೆಗಳು ನಡೆದವು. ಶನಿವಾರ ನಸುಕಿನಲ್ಲಿ ದೇವಿ ಕಟೀಲಿಗೆ ಆಗಮಿಸಿದಳು. ಈ ಸಂದರ್ಭದಲ್ಲಿ ಶಿಬರೂರು ಕೊಡಮಣಿತ್ತಾಯ ದೈವ– ದೇವಿಯ ಮುಖಾಮುಖಿ ಭೇಟಿ ಜರುಗಿತು.

ಕಟೀಲಿನಲ್ಲಿ ರಥಾರೂಢ ದೇವಿಯ ಬ್ರಹ್ಮ ರಥೋತ್ಸವ ನಡೆಯಿತು. ನಂತರ ದೇವರ ಜಳಕ ನಡೆಯಿತು. ತೂಟೆದಾರ ಸೇವೆ (ಬೆಂಕಿ ಕಾಳಗ) ನೋಡಲು ಸಾವಿರಾರು ಭಕ್ತರು ಸೇರಿದ್ದರು. ತೂಟೆದಾರ ಸೇವೆಯಲ್ಲಿ ಇದುವರೆಗೂ ಗಾಯಗಳಾದ ಘಟನೆಗಳು ನಡೆದಿಲ್ಲ. ಇದು ಇಲ್ಲಿನ ವಿಶೇಷ ಎನ್ನುತ್ತಾರೆ ಭಕ್ತರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ



ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ಶ್ರೀದುರ್ಗಾ ಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಶನಿವಾರ ನಸುಕಿನಲ್ಲಿ ತೂಟೆದಾರ ಸೇವೆ ನಡೆಯಿತು —ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್.

ಅಲ್ಪಸಂಖ್ಯಾತರ ವಸತಿಶಾಲೆ: ಶೇ 95 ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ನಡೆಯುತ್ತಿರುವ ರಾಜ್ಯದ 126 ವಸತಿ ಶಾಲೆಗಳು ಹಾಗೂ 200 ಮೌಲಾನ ಆಜಾದ್ ಮಾದರಿ ಶಾಲೆಗಳಿಗೆ ಪಿಯು ಪರೀಕ್ಷೆಯಲ್ಲಿ ಶೇ 95ರಷ್ಟು ಫಲಿತಾಂಶ ದೊರೆತಿದೆ.

ಪರೀಕ್ಷೆ ಬರೆದಿದ್ದ ವಿಜ್ಞಾನ, ವಾಣಿಜ್ಯ ವಿಭಾಗದ 1,553 ವಿದ್ಯಾರ್ಥಿಗಳಲ್ಲಿ 1,470 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

‘1,329 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ರಾಜ್ಯದ ಒಟ್ಟಾರೆ ಫಲಿತಾಂಶಕ್ಕಿಂತ ವಸತಿ ಶಾಲೆಗೆ ಶೇ 20ರಷ್ಟು ಹೆಚ್ಚು ಫಲಿತಾಂಶ ಬಂದಿದೆ. 2021-22ನೇ ಸಾಲಿಗಿಂತ ಶೇ 11ರಷ್ಟು ಅಧಿಕ ಫಲಿತಾಂಶ ದೊರೆತಿದೆ. ಈಗಾಗಲೇ ವಿದ್ಯಾರ್ಥಿಗಳಿಗೆ ನೀಟ್, ಜೆಇಇ ಹಾಗೂ ಸಿಇಟಿ ಪರೀಕ್ಷೆಗಳಿಗೆ ತರಬೇತಿ ನೀಡಲಾಗಿದೆ’ ಎಂದು ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕ ಟಿ.ರಾಘವೇಂದ್ರ ಹೇಳಿದ್ದಾರೆ.

ಸಕಾಲಕ್ಕೆ ಬಾರದ ಆಂಬುಲೆನ್ಸ್: ಸರಕು ಸಾಗಣೆ ವಾಹನದಲ್ಲಿ ಶವ ಸಾಗಣೆ

ಅಪಘಾತ: ಒಂದೇ ಕುಟುಂಬದ ಐವರ ಸಾವು

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ ಜಿಲ್ಲೆ): ಕಣ್ವ ಬಳಿಯ ಲಂಬಾಣಿ ತಾಂಡಾ ಸಮೀಪ ಬೆಂಗಳೂರು–ಮೈಸೂರು ಹೆದ್ದಾರಿಯ ಬೈಪಾಸ್‌ನಲ್ಲಿ ಶನಿವಾರ ಎರಡು ಕಾರುಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಒಂದೇ ಕುಟುಂಬದ ಐವರು ಮೃತಪಟ್ಟಿದ್ದಾರೆ.

ಬೆಂಗಳೂರಿನ ಕೆಂಗೇರಿ ನಿವಾಸಿಗಳಾದ ರವಿ ಪೂಜಾರಿ (45), ಪತ್ನಿ ಲಕ್ಷ್ಮಿ (40), ಮಕ್ಕಳಾದ ಶಕುಂತಲಾ (14), ಇಂಚರ (10), ಶಾರ್ವರಿ (3) ಮೃತಪಟ್ಟಿದ್ದಾರೆ. ಅವರೆಲ್ಲ ತಮ್ಮ ಕಾರಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಸಂಬಂಧಿಕರ ಮನೆಗೆ ತೆರಳುವಾಗ ಈ ದುರ್ಘಟನೆ ನಡೆದಿದೆ.

ಅತಿವೇಗದಲ್ಲಿದ್ದ ಕಾರು ಚಾಲಕನ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಕ್ಕದ ರಸ್ತೆಗೆ ಬಿದ್ದಿದೆ. ಆಗ ಮೈಸೂರು ಕಡೆಯಿಂದ ಬರುತ್ತಿದ್ದ ಮತ್ತೊಂದು ಕಾರು ಡಿಕ್ಕಿ ಹೊಡೆದಿದೆ.

ರವಿ ಪೂಜಾರಿ, ಮಕ್ಕಳಾದ ಶಕುಂತಲಾ, ಶಾರ್ವರಿ ಸ್ಥಳದಲ್ಲೇ ಮೃತಪಟ್ಟರು. ಪತ್ನಿ ಲಕ್ಷ್ಮಿ ಹಾಗೂ ಮಗಳು ಇಂಚರ ಅವರನ್ನು ಬೆಂಗಳೂರಿನ ನಿಮ್ಹಾನ್ಸ್‌ಗೆ ಸಾಗಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟರು ಎಂದು ಪೊಲೀಸರು ತಿಳಿಸಿದ್ದಾರೆ. ಶವಗಳನ್ನು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ಇಡಲಾಗಿದೆ. ಚನ್ನಪಟ್ಟಣ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಕಾಲಕ್ಕೆ ಬಾರದ ಆಂಬುಲೆನ್ಸ್: ಬೈಪಾಸ್‌ನಲ್ಲಿ ಸಕಾಲಕ್ಕೆ ಆಂಬುಲೆನ್ಸ್ ಬಾರದ ಕಾರಣ ಸರಕು ಸಾಗಣೆ ವಾಹನದಲ್ಲಿ ಶವ ಮತ್ತು ಗಾಯಾಳುಗಳನ್ನು ಕೆಲ ದೂರ ಸಾಗಿಸಲಾಯಿತು. ಸಕಾಲಕ್ಕೆ ಆಂಬುಲೆನ್ಸ್ ಬಂದಿದ್ದರೆ ಗಾಯಾಳುಗಳ ಪ್ರಾಣ ಉಳಿಯುತ್ತಿತ್ತು ಎಂದು ಸ್ಥಳೀಯರು ದೂರಿದರು. ಹೆದ್ದಾರಿಯಲ್ಲಿ ಅಲ್ಲಲ್ಲಿ ಆಂಬುಲೆನ್ಸ್‌ಗಳನ್ನು ನಿಯೋಜಿಸಿರುವುದಾಗಿ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹೇಳಿದ್ದರು. ಆದರೆ, ಶನಿವಾರ ಅಪಘಾತ ನಡೆದ ಸಂದರ್ಭ ಸಕಾಲಕ್ಕೆ ಗಾಯಾಳುಗಳಿಗೆ ಆಂಬುಲೆನ್ಸ್ ಮತ್ತು ಪ್ರಾಥಮಿಕ ಚಿಕಿತ್ಸೆ ಸಿಗಲಿಲ್ಲ. ಟೋಲ್ ರಸ್ತೆ ಆದರೂ ಕನಿಷ್ಠ ಆರೋಗ್ಯ ಸೇವೆ ಲಭ್ಯ ಇರದ ಬಗ್ಗೆ ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದರು.

ಕುರಿಗಳ ಮೈ ತೊಳೆಯಲು ಹೋದ ಮೂವರು ನೀರುಪಾಲು

ಕುದೂರು(ಮಾಗಡಿ ತಾಲ್ಲೂಕು): ಕುದೂರು ಹೋಬಳಿಯ ಮುತ್ತಸಾಗರ ಕೆರೆಯಲ್ಲಿ ಶನಿವಾರ ಕುರಿಗಳ ಮೈ ತೊಳೆಯಲು ಹೋದ ಒಂದೇ ಕುಟುಂಬದ ಮೂವರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ಗೊಲ್ಲರಹಟ್ಟಿ ಗ್ರಾಮದ ಜ್ಯೋತಿ (35), ಅವರ ತಮ್ಮ ನಾಗರಾಜು (31) ಹಾಗೂ ಅಕ್ಕನ ಮಗಳು ಲಕ್ಷ್ಮೀದೇವಿ (22) ಮೃತರು.

ಕೆರೆಯ ಅಲ್ಲಲ್ಲಿ ಮಣ್ಣಿಗಾಗಿ ಗುಂಡಿ ತೋಡಲಾಗಿದ್ದು, ಹತ್ತಾರು ಅಡಿ ನೀರು ತುಂಬಿಕೊಂಡಿದೆ. ಕುರಿಗಳನ್ನು ತೊಳೆಯಲೆಂದು ಮೊದಲು ನೀರಿಗೆ ಇಳಿದಿದ್ದ ನಾಗರಾಜು ಗುಂಡಿಯ ಕೆಸರಿನಲ್ಲಿ ಸಿಲುಕಿದ್ದಾರೆ. ರಕ್ಷಣೆಗೆ ಧಾವಿಸಿದ ಉಳಿದಿಬ್ಬರೂ ಸೇರಿ ಮೂವರೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.



ಪ್ರಾರ್ಥನೆ ಹುಬ್ಬಳ್ಳಿಯ ಚನ್ನಮ್ಮ ವೃತ್ತದ ಬಳಿ ಇರುವ ಈದ್ಗಾ ಮೈದಾನ ಮತ್ತು ಅದರ ಪಕ್ಕದ ರಸ್ತೆಯಲ್ಲಿ ಈದ್-ಉಲ್-ಫಿತ್ರ್ ಅಂಗವಾಗಿ ಮುಸ್ಲಿಮರು ಶನಿವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

‘ಮಲಿಕ್‌ಗೆ ಸಮನ್ಸ್: ಪ್ರತೀಕಾರದ ಕ್ರಮ’

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ ಅವರಿಗೆ ಸಿಬಿಐ ಸಮನ್ಸ್ ನೀಡಿರುವುದು ಕೇಂದ್ರ ಸರ್ಕಾರದ ಪ್ರತೀಕಾರದ ಕ್ರಮವನ್ನು ತೋರುತ್ತದೆ ಎಂದು ಕಾಂಗ್ರೆಸ್ ಪಕ್ಷ ಶನಿವಾರ ವಾಗ್ದಾಳಿ ನಡೆಸಿದೆ.

‘ಸತ್ಯ ಮಾಡುವವರು ಸುಮ್ಮನಿರಬೇಕು ಎಂಬ ಸಂದೇಶವನ್ನು ರವಾನಿಸುವುದೇ ಸರ್ಕಾರದ ಉದ್ದೇಶ. ಈ ಕಾರಣಕ್ಕಾಗಿಯೇ, ಸಿಬಿಐ ಮೂಲಕ ಸಮನ್ಸ್ ನೀಡುವ ಮೂಲಕ ಮಲಿಕ್ ಹಾಗೂ ಸತ್ಯ ನುಡಿಯುವರಿಗೆ ಸಂದೇಶ ರವಾನಿಸಲಾಗಿದೆ’ ಎಂದು ಪಕ್ಷದ ವಕ್ತಾರ ಪವನ್ ಖೇರಾ ಟೀಕಿಸಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿ ನಡೆದಿದೆ ಎನ್ನಲಾದ ವಿಮಾ ಹಗರಣಕ್ಕೆ ಸಂಬಂಧಿಸಿ ಕೆಲ ಸ್ಪಷ್ಟನೆಗಳನ್ನು ಬಯಸಿದ್ದ ಸಿಬಿಐ, ತನ್ನ ಮುಂದೆ ಹಾಜರಾಗುವಂತೆ ಸತ್ಯಪಾಲ್ ಮಲಿಕ್ ಅವರಿಗೆ ಸಮನ್ಸ್ ಜಾರಿ ಮಾಡಿದೆ.

ಲಂಚ ಪಡೆದ ಆರೋಪ: ಎಸ್‌ಐ ವಶಕ್ಕೆ

ಒಂದನೇ ಪುಟದಿಂದ...

ದಾವಣಗೆರೆ ತಾಲ್ಲೂಕಿನ ಮಹಿಳೆಯು ನಾಪತ್ತೆಯಾಗಿರುವ ಬಗ್ಗೆ ಗ್ರಾಮಾಂತರ ಠಾಣೆಗೆ ಆಕೆಯ ಪತಿ ದೂರು ನೀಡಿದ್ದರು. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತಾಳಿಕಟ್ಟೆಯ ಕೆ. ರಂಗಸ್ವಾಮಿ ಜತೆಗೆ ಆಕೆ ಇರುವುದನ್ನು ಪೊಲೀಸರು ಪತ್ತೆ ಮಾಡಿದ್ದರು.

ಆದರೆ, ಈ ವಿಷಯ ತಿಳಿದ ಬಳಿಕ ಪತ್ನಿಯನ್ನು ಮನೆಗೆ ಕರೆದುಕೊಂಡು ಹೋಗಲು ಆಕೆಯ ಪತಿ ನಿರಾಕರಿಸಿದ್ದರು.

ಹೀಗಾಗಿ ಪ್ರಕರಣವನ್ನು ಮುಚ್ಚಿಹಾಕಿ ಮಹಿಳೆಯನ್ನು ಜೊತೆಗೆ ಕಳುಹಿಸಿಕೊಡಲು ಪ್ರಿಯಕರ ರಂಗಸ್ವಾಮಿ ಮುಂದೆ ಪೊಲೀಸರು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಆತ ದೂರು ನೀಡಿದ್ದರು.

ಆರೋಪಿಗಳು ಫೋನ್ ಪೇ ಮೂಲಕ ಲಂಚದ ಹಣ ನೀಡುವಂತೆ ಸೂಚಿಸಿದ್ದರು. ತಮ್ಮ ಬಳಿ ‘ಫೋನ್ ಪೇ’ ಇಲ್ಲ; ಸಾಹುಕಾರರ ಮೂಲಕ ಹಣ ವರ್ಗಾವಣೆ ಮಾಡಿಸುವುದಾಗಿ ಹೇಳಿದ್ದ ರಂಗಸ್ವಾಮಿ, ಶನಿವಾರ ಬೆಳಿಗ್ಗೆ ಹಣವನ್ನು ವರ್ಗಾವಣೆ ಮಾಡಿಸಿದ್ದರು.

‘ಲಂಚ ಪಡೆದಿರುವುದನ್ನು ತನಿಖೆಯಿಂದ ದೃಢಪಡಿಸಿಕೊಂಡು ಶಿವನಗೌಡ ಮತ್ತು ಲಿಂಗರಾಜ ನಾಯ್ಕ ಅವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಕೌಲಾಪೂರೆ ತಿಳಿಸಿದ್ದಾರೆ.

ಬಂಡೀಪುರ: ಹೊರರಾಜ್ಯದ ವಾಹನಗಳಿಗೆ ಪ್ರವೇಶ ಶುಲ್ಕ

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಂದ ಅರಣ್ಯ ಇಲಾಖೆ ಪ್ರವೇಶ ಶುಲ್ಕ ಪಡೆಯಲು ಆರಂಭಿಸಿದೆ.

ಸದ್ಯ ಹೊರರಾಜ್ಯದ ವಾಹನಗಳಿಗೆ ಮಾತ್ರ ಶುಲ್ಕ ವಿಧಿಸಲಾಗುತ್ತಿದ್ದು, ರಾಜ್ಯದಲ್ಲಿ ನೋಂದಣಿಯಾಗಿರುವ ವಾಹನಗಳಿಗೆ ವಿನಾಯಿತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ವಾಹನಗಳೂ ಶುಲ್ಕ ವಿಧಿಸುವ ಉದ್ದೇಶವಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ. ಕಾರು, ಜೀಪಿನಂತಹ ಲಘು ವಾಹನಗಳಿಗೆ ₹20 ಹಾಗೂ ಲಾರಿ, ಇನ್ನಿತರ ಸರಕು ವಾಹನಗಳಿಗೆ ₹50 ನಿಗದಿಪಡಿಸಲಾಗಿದೆ. ದ್ವಿಚಕ್ರವಾಹನಗಳಿಗೆ ವಿನಾಯಿತಿ ನೀಡಲಾಗಿದೆ.

ಬಂಗಲೆ ಖಾಲಿ ಮಾಡಿದ ರಾಹುಲ್

ಒಂದನೇ ಪುಟದಿಂದ...

ಪ್ರಿಯಾಂಕಾ ಮಾತನಾಡಿ, ‘ನನ್ನ ತಮ್ಮ ಹೇಳುತ್ತಿರುವುದೆಲ್ಲಾ ಸತ್ಯ’ ಎಂದರು.

‘ಈ ಸರ್ಕಾರದ ಕುರಿತು ಸತ್ಯವನ್ನು ಹೇಳಿದ್ದಕ್ಕಾಗಿ ಆತ ತೊಂದರೆ ಅನುಭವಿಸುತ್ತಿದ್ದಾನೆ. ಆದರೆ, ಆತ ಹೆದರಿಲ್ಲ. ಪ್ರಶ್ನೆ ಕೇಳುವುದನ್ನು ಮುಂದುವರಿಸುತ್ತಾನೆ’ ಎಂದೂ ಹೇಳಿದರು.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮಾತನಾಡಿ, ‘ಸರ್ಕಾರ ಈ ಬಂಗಲೆಯನ್ನು ಯಾರಿಗಾದರೂ ಹಂಚಿಕೆ ಮಾಡಬಹುದು. ರಾಹುಲ್ ಅವರಿಗೆ ಬಂಗಲೆಯನ್ನು ಖಾಲಿ ಮಾಡುವುದು ಸಮಸ್ಯೆಯೇ ಅಲ್ಲ. ಆದರೆ, ಈ ವಿಷಯವನ್ನು ನಿರ್ವಹಿಸಿದ ರೀತಿ ಸರಿಯಿಲ್ಲ’ ಎಂದರು.

‘ಜನರಿಗೆ ಸತ್ಯವನ್ನು ಹೇಳಿದ್ದಕ್ಕಾಗಿ ರಾಹುಲ್ ಅವರನ್ನು ಗುರಿ ಮಾಡಲಾಗುತ್ತಿದೆ. ರಾಹುಲ್ ವಿರುದ್ಧ ಕೈಗೊಂಡ ಕ್ರಮ ರಾಜಕೀಯ ಪ್ರೇರಿತವಾಗಿದೆ ಎಂಬುದು ಇಡೀ ದೇಶಕ್ಕೆ ಗೊತ್ತು’ ಎಂದರು.

ಬಾಡಿಗೆಯನ್ನು ಪಾವತಿಸುವ ಮೂಲಕ ಅವರು ಇದೇ ಬಂಗಲೆಯಲ್ಲಿ ವಾಸ ಮುಂದುವರಿಸಲು ಅವಕಾಶ ಇತ್ತು. ಆದರೆ ಅವರು ಅದಕ್ಕಾಗಿ ಅರ್ಜಿ ಸಲ್ಲಿಸಿಲ್ಲ.

‘ಜನರೊಂದಿಗಿನ ಸಂಬಂಧ ನಾಶಪಡಿಸಲಾಗದು’

ರಾಹುಲ್ ಗಾಂಧಿ ಅವರು ಸರ್ಕಾರಿ ಬಂಗಲೆಯನ್ನು ಖಾಲಿ ಮಾಡಿದ ಬೆನ್ನಲ್ಲೇ ಟ್ವೀಟ್ ಮಾಡಿರುವ ಕಾಂಗ್ರೆಸ್ ಪಕ್ಷ, ‘ಜನರೊಂದಿಗೆ ರಾಹುಲ್ ಹೊಂದಿರುವ ಬಾಂಧವ್ಯವನ್ನು ಯಾರೂ ನಾಶಪಡಿಸಲು ಸಾಧ್ಯವಿಲ್ಲ’ ಎಂದು ಹೇಳಿದೆ.

‘ಸರ್ಕಾರ ಅವರನ್ನು ಬಂಗಲೆಯೊಂದರಿಂದ ಹೊರ ಹಾಕಿರಬಹುದು. ಆದರೆ, ರಾಹುಲ್ ಅವರು ಕೋಟ್ಯಂತರ ಭಾರತೀಯರ ಹೃದಯಗಳಲ್ಲಿ, ಮನೆಗಳಲ್ಲಿ ಸ್ಥಾನ ಪಡೆದಿದ್ದಾರೆ’ ಎಂದಿದೆ.

‘ಕೆಲವರು ತಮ್ಮ ಮಗನಲ್ಲಿ, ಕೆಲವರು ಸಹೋದರನಲ್ಲಿ ಇನ್ನೂ ಕೆಲವರು ತಮ್ಮ ನಾಯಕರಲ್ಲಿ ರಾಹುಲ್ ಅವರನ್ನು ಕಾಣುತ್ತಿದ್ದಾರೆ. ಅವರು ಪ್ರತಿಯೊಬ್ಬರಿಗೂ ಸಂಬಂಧಪಟ್ಟವರಾಗಿ ಹಾಗೂ ಪ್ರತಿಯೊಬ್ಬರೂ ಅವರಿಗೆ ಸೇರಿದವರಾಗಿದ್ದಾರೆ. ಇದೇ ಕಾರಣಕ್ಕೆ, ‘ರಾಹುಲ್‌ಜಿ ನನ್ನ ಮನೆಯೇ– ನಿಮ್ಮ ಮನೆ’ ಎಂಬುದಾಗಿ ಇಡೀ ದೇಶವೇ ಹೇಳುತ್ತಿದೆ’ ಎಂದು ಟ್ವೀಟ್ ಮಾಡಿದೆ.

ತರೂರ್ ಟ್ವೀಟ್: ‘ರಾಹುಲ್ ಗಾಂಧಿ ಅವರು ತುಘಲಕ್ ರಸ್ತೆಯಲ್ಲಿರುವ ಬಂಗಲೆಯನ್ನು ಖಾಲಿ ಮಾಡಿದ್ದಾರೆ. ಮೇಲ್ಮನವಿ ಸಲ್ಲಿಸಲು ಅವರಿಗೆ ಕೋರ್ಟ್ 30 ದಿನ ಕಾಲಾವಕಾಶ ನೀಡಿದೆ. ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಅವರ ಸಂಸದ ಸ್ಥಾನವನ್ನು ಮರುಸ್ಥಾಪನೆ ಮಾಡಬಹುದು. ಆದರೆ, ಸರ್ಕಾರಿ ಬಂಗಲೆ ಖಾಲಿ ಮಾಡಿರುವ ಅವರ ಮಾದರಿ ನಡೆ, ಕಾನೂನಿಗೆ ಅವರು ನೀಡುವ ಗೌರವವನ್ನು ತೋರಿಸುತ್ತದೆ’ ಎಂದು ಕಾಂಗ್ರೆಸ್ ಹಿರಿಯ ನಾಯಕ ಶಶಿ ತರೂರ್ ಟ್ವೀಟ್ ಮಾಡಿದ್ದಾರೆ.

> **ಭಾರತದ ಪ್ರಜೆಗಳು ಈ ಬಂಗಲೆಯನ್ನು 19 ವರ್ಷಗಳ ಕಾಲ ನನಗೆ ನೀಡಿದ್ದರು. ಈಗ ಇದನ್ನು ಕಸಿದುಕೊಳ್ಳಲಾಗಿದೆ. ಅವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ**
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

25ರಿಂದ ಮಳೆ ಪ್ರಮಾಣ ಹೆಚ್ಚಳ • ಹವಾಮಾನ ಇಲಾಖೆ ಮುನ್ಸೂಚನೆ

ರಾಜ್ಯದ ವಿವಿಧೆಡೆ 5 ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರದಿಂದ ಐದು ದಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯಲ್ಲಿ ಒಣಹವೆ ಇರಲಿದ್ದು, ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನಲ್ಲಿ ಮಳೆಯಾಗಲಿದೆ. 25ರಿಂದ ಮಳೆಯ ಪ್ರಮಾಣ ಹೆಚ್ಚಲಿದ್ದು, ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಭಾನುವಾರ ಉತ್ತರ ಒಳನಾಡಿನ ಬೀದರ್, ಕೊಪ್ಪಳ, ರಾಯಚೂರು, ಕಲಬುರಗಿ, ಬೆಳಗಾವಿ, ಗದಗ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು ಮತ್ತು ವಿಜಯನಗರದ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಬಹುದು. ಉತ್ತರ ಒಳನಾಡಿನ ಉಳಿದ ಜಿಲ್ಲೆಗಳು, ಕರಾವಳಿ ಮತ್ತು ದಕ್ಷಿಣ ಒಳನಾಡಿನ ಚಿತ್ರದುರ್ಗ ಹಾಗೂ ದಾವಣಗೆರೆಯಲ್ಲಿ ಒಣಹವೆ ಇರುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರುತ್ತದೆ. ಸಂಜೆ ಅಥವಾ ರಾತ್ರಿ ವೇಳೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಧಾರವಾಡದ ಕುಂದಗೋಳ ಹಾಗೂ ದೊಡ್ಡಬಳ್ಳಾಪುರದಲ್ಲಿ ತಲಾ 3 ಸೆಂ.ಮೀ. ಮಳೆ ಸುರಿದಿದೆ. ಬೆಳಗಾವಿಯ ಕನಬರ್ಗಿ, ಕಲಬುರಗಿ ಜಿಲ್ಲೆಯ ಚಿಂಚೋಳಿ, ತುಮಕೂರು ಜಿಲ್ಲೆಯ ಪಾವಗಡ, ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು, ಚಿಕ್ಕಮಗಳೂರು ಜಿಲ್ಲೆಯ ಯಗಟಿ, ಭಾಗಮಂಡಲದಲ್ಲಿ ತಲಾ 2 ಸೆಂ.ಮೀ. ಮಳೆಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (39.8 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.




ಸಿದ್ದಾಪುರ ಪಟ್ಟಣದಲ್ಲಿ ಶನಿವಾರ ಉತ್ತಮ ಸುರಿಯಿತು

ಸಿದ್ದಾಪುರ ಭಾಗದಲ್ಲಿ ಉತ್ತಮ ಮಳೆ

ಸಿದ್ದಾಪುರ (ಕೊಡಗು ಜಿಲ್ಲೆ): ಕೊಡಗು ಜಿಲ್ಲೆಯ ಕೆಲವೆಡೆ ಶನಿವಾರ ಮಳೆಯಾಗಿದೆ. ಸಿದ್ದಾಪುರ, ಪಾಲಿಬೆಟ್ಟ, ಚೆನ್ನಯ್ಯನಕೋಟೆ ನೆಲ್ಯಹುದಿಕೇರಿ, ಗುಹ್ಯ ಸೇರಿದಂತೆ ಸುತ್ತಮುತ್ತಲಿನ ಭಾಗದಲ್ಲಿ ಉತ್ತಮ ಮಳೆ ಸುರಿದಿದೆ.

ಸಿದ್ದಾಪುರ ಭಾಗದಲ್ಲಿ ಮಳೆ ಇಲ್ಲದೆ ಕಾಫಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದರು. ಶನಿವಾರ ಸಂಜೆ ಉತ್ತಮ ಮಳೆಯಾಗಿದೆ. ಬಿಸಿಲಿನ ಬೇಗೆಯಿಂದ ಕಂಗೆಟ್ಟಿದ್ದ ಜನರಿಗೆ ತಂಪೆರೆದಿದೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ವಿವಿಧೆಡೆ ಸಾಧಾರಣ ಮಳೆಯಾಗಿದೆ.



ಜನಸಂಪತ್ತಿಗೆ ಜೈಕಾರ!

ಮುಂದೆಯೂ ಏಳದಿರಲಿ ಹಾಹಾಕಾರ

ಭಾರತವು ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಿದೆ. ನಮ್ಮ ದೇಶದಲ್ಲಿ ದುಡಿಮೆಯ ತಾಕತ್ತುಳ್ಳ 'ಉತ್ಪಾದಕ ಜನಸಂಖ್ಯೆ' 97 ಕೋಟಿಗೇರಿದೆ. ಚೀನಾದಲ್ಲಿ ಇಳಿವಯಸ್ಸಿನವರ ಸಂಖ್ಯೆ ಶೀಘ್ರ ಜಾಸ್ತಿಯಾಗುತ್ತಿದೆ. ಇಂದು ಭಾರತವೇ ಜಗತ್ತಿನ ಅತ್ಯಂತ ಯುವ ದೇಶ. ಇತರೆಲ್ಲ ದೇಶಗಳಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿದ್ದರೆ, ನಮ್ಮಲ್ಲಿ ಇನ್ನಿಪ್ಪತ್ತು ವರ್ಷ ಆ ಆತಂಕವಿಲ್ಲ. 'ಜನಸಂಖ್ಯಾ ವೀರ' ಎನಿಸಿಕೊಂಡಿರುವ ಭಾರತದ ಸ್ಥಿತಿ–ಗತಿ–ಭವಿತವ್ಯದ ಸಾಧ್ಯತೆಯ ಮೇಲೆ ಬೆಳಕು ಚೆಲ್ಲುವ ಲೇಖನ ಇದು.

ನಾಗೇಶ ಹೆಗಡೆ

ಕಳೆದ ನೂರು ವರ್ಷಗಳ ಜಾಗತಿಕ ಇತಿಹಾಸವೆಂದರೆ ಜನಸಂಖ್ಯೆಯ ಏರಿಳಿತದ ಪುಟಿಚೆಂಡಿನ ಇತಿಹಾಸ. ಅದು ಇಳಿಯಿತೆಂಬ ಆತಂಕ, ಏರಿತೆಂಬ ಆತಂಕಗಳ ಇತಿಹಾಸವೂ ಹೌದು. ಕೊಳಾಯಿ ನೀರಿನ ವ್ಯವಸ್ಥೆ ಜಾರಿಗೆ ಬಂದಮೇಲೆ ಕಾಲರಾ, ವಿಷಮಜ್ವರ ಹಾವಳಿ ತಗ್ಗಿತು. ಜನಸಂಖ್ಯೆ ಏರಿತು. ಸಿಡಿಮದ್ದು, ಬಾಂಬರ್ ದಾಳಿಗಳಿಂದಾಗಿ ಒಂದಿಷ್ಟು ತಗ್ಗಿತು. ಆಂಟಿಬಯಾಟಿಕ್ ಔಷಧಗಳ ಬಳಕೆ ಹೆಚ್ಚಿದಂತೆಲ್ಲ ಅದು ಮತ್ತೆ ಏರಿ, ಪ್ಲೇಗು, ಸಿಡುಬಿನ ಹಾವಳಿಯಿಂದಾಗಿ ಪುನಃ ತಗ್ಗಿತು. ಅಣುಬಾಂಬ್ ದಾಳಿಯ ನಂತರ ಯುದ್ಧಭೀತಿ ಅಡಗಿತು. ಯುದ್ಧ ಸಾಮಗ್ರಿಗಳನ್ನೇ ಬಳಸಿ ಕೃಷಿಭೂಮಿಯನ್ನು ವಿಸ್ತರಣೆ ಮಾಡಲಾಯಿತು. ಗಾಳಿಯಲ್ಲಿನ ಸಾರಜನಕವನ್ನೇ ರಸಗೊಬ್ಬರವನ್ನಾಗಿಸಿ ಗೋಧಿಯ ಇಳುವರಿ ಹೆಚ್ಚಿಸಿದ್ದೇ ತಡ ಜನಸಂಖ್ಯೆ ಮತ್ತೆ ಏರತೊಡಗಿತು. ಆಹಾರದ ಅಭಾವ ಎಲ್ಲೇ ಇಣುಕಿದರೂ ಹಡಗು, ರೈಲುಗಳಲ್ಲಿ ಧಾನ್ಯದ ಮೂಟೆಗಳು ಧಾವಿಸಿ ಬಂದವು.


1950ರ ದಶಕದಲ್ಲಿ ವಿಶ್ವಶಾಂತಿಯ ನಿಟ್ಟುಸಿರಿಟ್ಟಿದ್ದೇ ತಡ, ಧುತ್ತೆಂದು ತಲೆಯೆತ್ತಿತು 'ಜನಸಂಖ್ಯಾ ಬಾಂಬ್' ಎಂಬ ಹೊಸ ಆತಂಕ. 'ಮನುಕುಲದ ಕತೆ ಇನ್ನೇನು ಮುಗಿಯಿತು' ಎಂದು 1968ರಲ್ಲಿ ಪಾಲ್ ಎರ್ಲಿಕ್ ಎಂಬ ವಿಜ್ಞಾನಿ 'ಪಾಪ್ಯುಲೇಶನ್ ಬಾಂಬ್' ಎಂಬ ಶಿರೋನಾಮೆಯ ಪುಸ್ತಕವನ್ನು ಪ್ರಕಟಿಸಿದ; ಆಹಾರದ ಅಭಾವದಿಂದಾಗಿ ಕೋಟಿಗಟ್ಟಲೆ ಜನರು ಸಾಯುತ್ತಾರೆಂದು ಆತ ಲೆಕ್ಕಸಂಖ್ಯೆ ತೋರಿಸಿ ಹೇಳಿದ್ದೇ ತಡ, ಚಿಂತಕರ ವಲಯದಲ್ಲಿ ಬಿರುಗಾಬರಿಯೇ ಚಿಮ್ಮಿತು. ಅಷ್ಟು ಹೊತ್ತಿಗೆ ನಾರ್ಮನ್ ಬೋರ್ಲಾಗ್ ಎಂಬ ತಳಿವಿಜ್ಞಾನಿಯ ಯತ್ನದಿಂದಾಗಿ ಹೈಬ್ರಿಡ್ ಗೋಧಿ ಬಂತು. ನೀರಾವರಿ, ರಸಗೊಬ್ಬರ, ಕೃಷಿ ವಿಷಗಳ ಮಳೆ ಸುರಿಸಿ ಬಡದೇಶಗಳಲ್ಲೂ ಹಸಿರು ಕ್ರಾಂತಿ ಸಂಭವಿಸಿತು. ಜನಸಂಖ್ಯಾ ಬಾಂಬ್ ಸ್ಫೋಟಿಸುವ ಬದಲು ಶಾಂತಿಯ ಕಾರಂಜಿ ಚಿಮ್ಮಿತು.

ಆತಂಕ ಮುಗಿಯಿತೆ, ಇಲ್ಲ! ಮಕ್ಕಳು ಹೆಚ್ಚಿದ್ದಲ್ಲಿ ಸಂಪತ್ತು ಕಮ್ಮಿ ಎಂಬ ಅನೂಚಾನದ ಮಾತು ಈಗ ಉಲ್ಟಾ ಹೊಡೆಯತೊಡಗಿತು. ಸಂಪತ್ತು ಹೆಚ್ಚಿದ್ದಲ್ಲಿ ಮಕ್ಕಳ ಸಂಖ್ಯೆ ಕಮ್ಮಿಯಾಗತೊಡಗಿತು. ಸಂಪತ್ತಿನ ಜೊತೆ ಸಮಾನತೆ ಇದ್ದರೆ ಮಾತ್ರ ಜನಸಂಖ್ಯೆಯ ಸಮತೋಲ ಸಾಧ್ಯ ಎಂಬ ಹೊಸ ಸತ್ಯ ಗೋಚರಿಸಿತು. ಜನಸಂಖ್ಯೆ ಸ್ಥಿರ ಇರಬೇಕೆಂದರೆ 'ನಾವಿಬ್ಬರು, ನಮಗಿಬ್ಬರು' ಎಂಬಂತೆ ಪ್ರತಿ ದಂಪತಿಗೆ ಇಬ್ಬರು ಮಕ್ಕಳಾಗಬೇಕು ತಾನೆ? ಆದರೆ ಜಪಾನಿನಲ್ಲಿ ಪ್ರತಿ ದಂಪತಿಗೆ ಸರಾಸರಿ 1.2 ಮಕ್ಕಳು. ಇಥಿಯೋಪಿಯಾದಲ್ಲಿ 6.17 ಎಂಬಂತಾಯಿತು. ಸಂಪತ್ತಿಗೆ ಸವಾಲೆಂಬಂತೆ ಭಾರತದಲ್ಲೂ ಪಾರ್ಸಿಗಳ ಸಂಖ್ಯೆ ತೀರ ಕಮ್ಮಿಯಾಗುತ್ತ, ಬಡ ಬಿಹಾರಿಗಳ ಸಂಖ್ಯೆ ಏರುತ್ತ ಹೋಯಿತು.

ಜಗತ್ತಿನಲ್ಲೇ ಅತಿ ಹೆಚ್ಚು ಜನರಿರುವ ಚೀನಾ ಕಾನೂನಿನ ಬಲದಿಂದ ಜನಸಂಖ್ಯೆಯನ್ನು ತಗ್ಗಿಸಲು ಹೊರಟಿತು. ಕೃಷಿ ಸಮಾಜವನ್ನು ಔದ್ಯಮಿಕ ಸಮಾಜವಾಗಿ ಪರಿವರ್ತಿಸಲೆಂದು ಹಿಂದೆ 1960ರ ದಶಕದಲ್ಲಿ ಮಾವೋ ನಡೆಸಿದ 'ಮಹಾ ಮುಂಜಿಗಿತ' ಎಂಬ ಪ್ರಯೋಗದಿಂದಾಗಿ ಅಂದಾಜು ನಾಲ್ಕಾರು ಕೋಟಿ ಜನರು ಅಸುನೀಗಿದರು (ಕನಿಷ್ಠ ಮೂರು ಕೋಟಿ, ಗರಿಷ್ಠ 11 ಕೋಟಿ). ಜನಸಂಖ್ಯೆಯನ್ನು ಮತ್ತೆ ನಿಯಂತ್ರಿಸಲೆಂದು 'ಒಂದೇ ಮಗು ಸಾಕು' ಎಂಬ ಕಾನೂನನ್ನು 1990ರ ದಶಕದಲ್ಲಿ ಹೇರಿತು. ಶಿಕ್ಷೆ, ದಂಡ, ಬಲವಂತ ಗರ್ಭಪಾತ ಏನೆಲ್ಲ ರುದ್ರ ಪ್ರಯೋಗ ಅಲ್ಲಿ ನಡೆಯಿತು. ಕದ್ದು ಮುಚ್ಚಿ ಜನ್ಮ ತಾಳಿದ ಮಕ್ಕಳು ಎಲ್ಲೆಲ್ಲೋ ಅನಾಮಿಕರಾಗಿ ಬೆಳೆದಿದ್ದೇನು, ಒಂದೇ ಮಗುವಿನ ಮೇಲಿನ ಅತಿಕಾಳಜಿಯಿಂದಾಗಿ ದಢೂತಿ ಮಕ್ಕಳು ಬೆಳೆದಿದ್ದೇನು; ಜನಸಂಖ್ಯೆಯೇನೊ ಸ್ತಿಮಿತಕ್ಕೆ ಬಂತು. ಕಡಿಮೆಯೂ ಆಗತೊಡಗಿ, ಹೊಸ ಆತಂಕ ತಲೆದೋರಿತು. ಯುವಜನರ ಸಂಖ್ಯೆ ಇಳಿಮುಖವಾಯಿತು. ಈಗ ಪ್ರತಿ ದಂಪತಿ ಮೂರು ಮಕ್ಕಳನ್ನು ಹೆರುವಂತೆ ಚೀನಾ ಏನೆಲ್ಲ ಆಮಿಷ ಒಡ್ಡತೊಡಗಿದೆ. ಮೂರನೆಯ ಮಗುವಿಗಾಗಿ ಒತ್ತಡ ಹೇರತೊಡಗಿದೆ.

ಭಾರತ ಅಂಥ ಯಾವ ಅತಿರೇಕಕ್ಕೂ ಹೋಗಲಿಲ್ಲ. ತುರ್ತುಪರಿಸ್ಥಿತಿಯಲ್ಲಿ ಅಲ್ಲಲ್ಲಿ ಬಲಾತ್ಕಾರದ ಯತ್ನ ಹಾಗೂ ಕ್ವಿನಾಕ್ರೈನ್‌ನಂಥ ಗರ್ಭನಾಶಕ ಮಾತ್ರೆಗಳ ಪ್ರಯೋಗ, ವೈದ್ಯರ ಅತಿ ಉತ್ಸಾಹದ ಶಸ್ತ್ರಕ್ರಿಯೆಯಂಥ ಭಾನಗಡಿಗಳು ನಡೆದಿದ್ದು ಹೌದು. ಛತ್ತೀಸ್‌ಗಢದಲ್ಲಿ ಡಾ. ಆರ್.ಕೆ. ಗುಪ್ತಾ ಎಂಬಾತ ದಾಖಲೆಗೆಂದು ಐದೇ ಗಂಟೆಗಳಲ್ಲಿ 83 ಟ್ಯೂಬೆಕ್ಟಮಿ ನಡೆಸಿದ್ದರ ಪರಿಣಾಮವಾಗಿ 60 ಮಹಿಳೆಯರು ತೀವ್ರ ಅಸ್ವಸ್ಥಗೊಂಡು 12 ಸಾವು ಸಂಭವಿಸಿತು. ಅಂಥ ಎಲ್ಲ ಸಂದರ್ಭಗಳಲ್ಲೂ ಜಾಗೃತ ಮಾಧ್ಯಮ ಮತ್ತು ಚುರುಕಿನ ಸಾಮಾಜಿಕ ಸಂಘಟನೆಗಳು ಕೈಜೋಡಿಸಿ ಸರಕಾರಕ್ಕೆ ಪಾಠ ಕಲಿಸಿದವು.

ಜನಸಂಖ್ಯೆ ಹೆಚ್ಚುತ್ತ ಹೋಯಿತು ನಿಜ. ಆದರೆ ಏರಿಕೆಯನ್ನು ನಿಯಂತ್ರಿಸಲು ಬಲಾತ್ಕಾರದ ಬದಲು, ಮೆಲ್ಲುಲಿಯ ಕ್ರಮಗಳು ಜಾರಿಗೆ ಬಂದವು. 'ಅಭಿವೃದ್ಧಿಯೇ ಅತ್ಯುತ್ತಮ ಜನನ- ನಿಯಂತ್ರಕ' ಎಂಬ ಡಾ. ಕರಣ್ ಸಿಂಗ್ ಮಾತು ಮೂಲಮಂತ್ರವೆನಿಸಿತು. ಜನರ ಆದಾಯ ಕ್ರಮೇಣ ಹೆಚ್ಚುತ್ತ ಬಂದಂತೆ ಮಹಿಳೆಯರಲ್ಲಿ ಸಾಕ್ಷರತೆ ಹೆಚ್ಚುವಂತೆ, ಜನನ ನಿಯಂತ್ರಣ ಸಾಧನಗಳು ಸುಲಭವಾಗಿ ಸಿಗುವಂತೆ ಮಾಡಿದ್ದೂ ಅಲ್ಲದೆ ಜನಸಂಖ್ಯೆಯ ಏರುಗತಿಯನ್ನೇ ದೇಶದ ಅನುಕೂಲಕ್ಕಾಗಿ ತಿರುಗಿಸಿಕೊಳ್ಳುವತ್ತ ಸರ್ಕಾರ ಸರಿಯಾದ ಹೆಜ್ಜೆ ಇಡುತ್ತ ಹೋಯಿತು. ನಮ್ಮಲ್ಲಿಂದು 24 ರಾಜ್ಯಗಳಲ್ಲಿ ಜನಸಂಖ್ಯೆ ಇಳಿಮುಖವಾಗುತ್ತಿದೆ. 'ಇಳಿಗತಿ ಸಾಧಿಸುವಲ್ಲಿ ಇತರ ಧರ್ಮೀಯರಿಗಿಂತ ಮುಸ್ಲಿಮರೇ ಮುಂದಿದ್ದಾರೆ' ಎಂದು ಭಾರತೀಯ ಜನಸಂಖ್ಯಾ ಅಧ್ಯಯನ ಸಂಸ್ಥಾನದ ನಿರ್ದೇಶಕಿ ಪೂನಂ ಮುತ್ರೇಜಾ ಅಂಕಿಸಂಖ್ಯೆಗಳ ಆಧಾರದಲ್ಲಿ ವಾದಿಸುತ್ತಾರೆ.




ನಮ್ಮಲ್ಲೀಗ ಆಹಾರದ ಅಭಾವವಿಲ್ಲ. ಎಂಥದೇ ವಿಪತ್ತು ತಲೆದೋರಿದರೂ ಚುರುಕಾಗಿ ಸ್ಪಂದಿಸಬಲ್ಲ ಮೂಲಸೌಕರ್ಯಗಳಿವೆ. ಎಲ್ಲಕ್ಕಿಂತ ಮಹತ್ವದ ಸಂಗತಿ ಏನೆಂದರೆ ನಮ್ಮಲ್ಲಿ ಪ್ರಜಾಪ್ರಭುತ್ವ ಇದೆ. ಸರ್ಕಾರದ ತಪ್ಪು ಹೆಜ್ಜೆಗಳನ್ನು ಪ್ರಶ್ನಿಸಬಹುದಾಗಿದೆ. 'ಪ್ರಜಾಪ್ರಭುತ್ವ ಮತ್ತು ಮಾಧ್ಯಮ ಸ್ವಾತಂತ್ರ್ಯ ಇರುವ ದೇಶಗಳಲ್ಲಿ ಕ್ಷಾಮಢಾಮರದಂಥ ವಿಪತ್ತು ಬರಲಾರದು' ಎಂದು ನೊಬೆಲ್ ಅರ್ಥತಜ್ಞ ಅಮರ್ತ್ಯಸೆನ್ ಹಿಂದೆಯೇ ಹೇಳಿದ್ದರು. ಅದು ಇದುವರೆಗಂತೂ ಸತ್ಯವಾಗಿದೆ.

ಇದರ ಫಲ ಏನೆಂದರೆ, ನಮ್ಮ ದೇಶದಲ್ಲಿ ದುಡಿಮೆಯ ತಾಕತ್ತುಳ್ಳ 'ಉತ್ಪಾದಕ ಜನಸಂಖ್ಯೆ' 97 ಕೋಟಿಗೇರಿದೆ. ಈ ದೃಷ್ಟಿಯಲ್ಲಿ ಸದ್ಯಕ್ಕೆ ಚೀನಾ ನಮಗಿಂತ ತುಸುವೇ ಮುಂದಿದೆಯಾದರೂ ಅಲ್ಲಿ ಇಳಿವಯಸ್ಸಿನವರ ಸಂಖ್ಯೆ ಶೀಘ್ರ ಜಾಸ್ತಿಯಾಗುತ್ತಿದೆ. ಇಂದು ಭಾರತವೇ ಜಗತ್ತಿನ ಅತ್ಯಂತ ಯುವ ದೇಶ. ಇತರೆಲ್ಲ ದೇಶಗಳಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿದ್ದರೆ ನಮ್ಮಲ್ಲಿ ಇನ್ನಿಪ್ಪತ್ತು ವರ್ಷ ಆ ಆತಂಕವಿಲ್ಲ- ಏಕೆಂದರೆ ಸರಾಸರಿ 23-24ರ ವಯೋಮಾನದವರೇ ಅತಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಚೀನಾವನ್ನು ಬಿಟ್ಟರೆ, ತಾಂತ್ರಿಕ ಕೌಶಲಗಳಲ್ಲಿ ಪರಿಣತಿ ಪಡೆದ ಅತಿ ಹೆಚ್ಚಿನ ಯುವಜನತೆ ನಮ್ಮಲ್ಲಿದೆ. ಚೀನಾಕ್ಕಿಂತ ನಮ್ಮ ಪರಿಸ್ಥಿತಿ ಉತ್ತಮ ಇದೆ ಏಕೆಂದರೆ, ನಮ್ಮವರಿಗೆ ಇಂಗ್ಲಿಷ್ ಗೊತ್ತಿದೆ. ಐಐಟಿ, ಐಐಎಮ್‌ಗಳಲ್ಲಿ ಹೊಕ್ಕು ಹೊರಟವರು ಜಗತ್ತಿನ ಯಾವ ದೇಶಕ್ಕಾದರೂ ಹೋಗಿ ಜೈಸಿಕೊಳ್ಳುವಂತಿದ್ದಾರೆ. ಧಾರ್ಮಿಕ ಜಿಗುಟುತನ ಇಲ್ಲದ, ಎಲ್ಲಿ ಹೋದರೂ ಹೊಂದಿಕೊಂಡು ಹೋಗುವ ಗುಣ ನಮ್ಮವರದಾಗಿದೆ. ನಮ್ಮ ಜನಸಂಪತ್ತು ವಿದೇಶಗಳಿಗೆ ಸಲೀಸಾಗಿ ರಫ್ತಾಗಲು ಅನುಕೂಲವಾಗುವಂತೆ ಅನೇಕ ದ್ವಾರಗಳನ್ನು ಏಕಕಾಲಕ್ಕೆ ತೆರೆಯಲಾಗಿದೆ. ನಮ್ಮಲ್ಲಿಂದು ಚುರುಕಾಗಿ ಕೆಲಸ ಮಾಡುವ 93 ಪಾಸ್‌ಪೋರ್ಟ್ ಕಚೇರಿಗಳಿವೆ. ಸಾಲದೆಂಬಂತೆ 424 ಅಂಚೆ ಕಚೇರಿಗಳಲ್ಲಿ ಪಾಸ್‌ಪೋರ್ಟ್ ಅರ್ಜಿ ಸಲ್ಲಿಸುವ ಸವಲತ್ತುಗಳಿವೆ. ಭಾರತದ ತಾಂತ್ರಿಕ ಯುವಸೈನ್ಯವನ್ನು ಆಮದು ಮಾಡಿಕೊಳ್ಳುವಂತೆ ಜಪಾನಿನಂಥ ತೀರ ಸ್ವಪ್ರತಿಷ್ಠೆಯ ದೇಶವನ್ನೂ ಒಲಿಸಿಕೊಳ್ಳುವಲ್ಲಿ ನಮ್ಮ ವಿದೇಶಾಂಗ ನೀತಿ ಸಫಲವಾಗಿದೆ.

11ನೇ ಪುಟಕ್ಕೆ..

ಬೆಳಕಿನ ಆಚೀಚೆಯ ಮಿಂಚುಹುಳುಗಳು





ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯಾವಳಿಯಲ್ಲಿ ಕಂಡು ಬಂದ ಅಭಿಮಾನಿಗಳ ಸಂಭ್ರಮ

ಗಿರೀಶ ದೊಡ್ಡಮನಿ

'ಐಪಿಎಲ್ ಎಂದರೆ ಬರೀ ಬೌಂಡರಿ, ಸಿಕ್ಸರ್‌ಗಳಲ್ಲ. ವಿಕೆಟ್ ಮತ್ತು ರನ್ ಗಳಿಕೆಯೂ ಅಲ್ಲ. ಅದರೊಳಗೆ ಮತ್ತು ಹೊರಗೆ ಒಂದು ಪ್ರಪಂಚ ಇದೆ. ಅಲ್ಲಿ ನನ್ನಂತಹವರಿಗೂ ಸ್ಟಾರ್ ವ್ಯಾಲ್ಯೂ ಇದೆ...'

ಚಂದನವನದ ಹಿನ್ನೆಲೆ ಸಂಗೀತದ ಕಲಾವಿದ ಡ್ರಮ್ ದೇವಾ ಅವರ ಭಾವುಕ ನುಡಿಗಳಿವು. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಇತ್ತೀಚೆಗೆ ನಡೆದ ಇಂಡಿಯನ್ ಪ್ರೀಮಿಯರ್ ಕ್ರಿಕೆಟ್ ಲೀಗ್ ಪಂದ್ಯವೊಂದರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ತಾರೆ ವಿರಾಟ್ ಕೊಹ್ಲಿಯೇ ಬೌಂಡರಿ ಲೈನ್‌ಗೆ ಬಂದು ಡ್ರಮ್ ದೇವಾ ಅವರ ಬೀಟ್ಸ್‌ಗೆ ಹೆಜ್ಜೆ ಹಾಕಿದ್ದರು. ಇದನ್ನು ನೋಡಿ ಗ್ಯಾಲರಿಯೊಳಗಿನ ಜನ ಹುಚ್ಚೆದ್ದು ಕುಣಿದಿದ್ದರು.

'ಟ್ವಿಂಕಲ್.. ಟ್ವಿಂಕಲ್ ಲಿಟ್ಲ್ ಸ್ಟಾರ್.. ದೇವಾ ಈಸ್ ಎ ಸೂಪರ್ ಸ್ಟಾರ್..' ಎಂಬ ಕೂಗುಗಳು ಮುಗಿಲುಮುಟ್ಟಿದ್ದವು. 2008ರಿಂದಲೇ ದೇವಾ ಐಪಿಎಲ್‌ನಲ್ಲಿ ಡ್ರಮ್ ನುಡಿಸುತ್ತಿದ್ದಾರೆ. ಅವರ ಹುಲಿಕುಣಿತ, ಟಪ್ಪಾಂಗುಚ್ಚಿ ಮತ್ತು ಇಂಗ್ಲಿಷ್ ಬೀಟ್ಸ್‌ಗಳಿಗೆ ಜನ ಮೈಮರೆತು ನರ್ತಿಸುತ್ತಾರೆ.

ನಾಲ್ಕು ವರ್ಷಗಳ ನಂತರ ಬೆಂಗಳೂರಿಗೆ ಮರಳಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್, ದೇವಾ ಸೇರಿದಂತೆ ಹಲವಾರು ಜನರಿಗೆ ತಾರಾಪಟ್ಟ, ಇನ್ನಷ್ಟು ಜನರಿಗೆ ಆದಾಯ ಸಿಗುವಂತೆ ಮಾಡಿದೆ. ಅವರೆಲ್ಲರೂ ಸೇರಿ ಐಪಿಎಲ್ ವೈಭವವನ್ನು ನೂರ್ಮಡಿಗೊಳಿಸುತ್ತಿದ್ದಾರೆ.

10ನೇ ಪುಟಕ್ಕೆ...

ಎಲ್ಲರ ಒಳಗೊಳ್ಳುವ ಬಳಗ ಪ್ರಜ್ಞೆಯ ಬಸವಣ್ಣ

ಇಂದು (ಏಪ್ರಿಲ್ 23) ಬಸವ ಜಯಂತಿ. ಶೈವ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದ ಬಸವಣ್ಣನವರು ತಮ್ಮ ಹುಟ್ಟನ್ನೇ ಕರ್ಮಸಿದ್ಧಾಂತದ ಪಾಪ ಮೂಲದಿಂದ ಬಿಡಿಸಿ ಕಾಯಕತತ್ವದ ಅಸ್ಪೃಶ್ಯರ ಮೂಲದಲ್ಲಿ ಅಪವರ್ಣೀಕರಣಿಸಿಕೊಂಡು ಹೊಸ ಮನುಷ್ಯರಾದ ಬಗೆ ಆಸಕ್ತಿಕರ.

ಪ್ರೊ.ಎಸ್.ಜಿ.ಸಿದ್ಧರಾಮಯ್ಯ



ಭಾರತೀಯ ಸಮಾಜವೆಂದರೆ ಅದು ಅಸಮಾನತೆಗಳ ಹಳವಂಡ. ವರ್ಣ-ವರ್ಗ, ಸ್ಪೃಶ್ಯ-ಅಸ್ಪೃಶ್ಯ, ಶ್ರೇಷ್ಠ-ಕನಿಷ್ಠ ಇತ್ಯಾದಿ ಅಸಮಾನತೆಗಳಲ್ಲಿ ಮನುಷ್ಯ ಸಮಾಜವನ್ನು ಒಡೆದು, ಊರು, ಕೇರಿ, ಹಟ್ಟಿ ಹಾಡಿಗಳಲ್ಲಿ ಅವರನ್ನು ಪ್ರತ್ಯೇಕವಾಗಿ ಬದುಕುವಂತೆ ಮಾಡಿದ್ದ ಚಾತುರ್ವರ್ಣ ವ್ಯವಸ್ಥೆ ಇದು. ಇಂಥ ಅಸಮಾನ ಅಮಾನವೀಯ ವ್ಯವಸ್ಥೆಯ ವಿರುದ್ಧ ಹೋರಾಡಿದಂತೆ ಆಜೀವಕರು, ಚಾರ್ವಾಕರು, ನಾಥರು, ಸಿದ್ಧರು ಬೇರೆ ಬೇರೆಯ ಜೀವನ ಮಾರ್ಗಗಳನ್ನೇ ರೂಪಿಸಿದರು. ಮಹಾವೀರ, ಬುದ್ಧ, ಗುರುನಾನಕರು ಪ್ರತ್ಯೇಕ ಧರ್ಮಗಳನ್ನೇ ಸ್ಥಾಪಿಸಿದರು. ಇಷ್ಟಾಗಿಯೂ ಇವೆಲ್ಲವೂ ಪ್ರತ್ಯೇಕ ಪದ್ಧತಿ-ಪಂಥ, ಧರ್ಮಗಳಾದುವೇ ಹೊರತು ಮೂಲ ಅಸಮಾನತೆಯ ಹಳವಂಡ ಮಾತ್ರ ಹಾಗೇ ಉಳಿದು ಬೆಳೆದದ್ದು ವರ್ತಮಾನದ ಉರಿಯುವ ವ್ಯಂಗ್ಯ. ಈ ಬಗೆಯ ಸಮಾಜ ಸುಧಾರಕರ ಸಾಲಿನಲ್ಲಿ ಬಸವಣ್ಣನವರು ಅನನ್ಯತೆಯ ವ್ಯಕ್ತಿತ್ವ ಸಂಪನ್ನರಾಗಿ ಕರ್ನಾಟಕದ ನೆಲದಲ್ಲಿ ಸಂಘಟನೆಯನ್ನು ಕಟ್ಟಿ ಹೋರಾಟ ಮಾಡಿರುವುದು ಚಾರಿತ್ರಿಕ ಸತ್ಯ.

ಬಸವಣ್ಣನವರು ಕಟ್ಟಿ ಬೆಳೆಸಿದ ಸಂಘಟನೆಯೇ ಶರಣ ಚಳವಳಿ. ಸಮಾಜದಲ್ಲಿ ನೀಚಾತಿ ನೀಚರೆಂದು ಕರೆಸಿಕೊಂಡಿದ್ದ ಹಟ್ಟಿ ಮೂಲದ ಅಸ್ಪೃಶ್ಯರನ್ನು ಮೊದಲುಗೊಂಡು ಭೂಸುರರೆಂದು ಕರೆದುಕೊಂಡಿದ್ದ ಅಗ್ರಹಾರ ಮೂಲದ ವೈದಿಕರನ್ನೂ ಒಳಗು ಮಾಡಿಕೊಂಡಂತೆ ಎಲ್ಲ ರೀತಿಯ ಕಾಯಕ ಜೀವಿಗಳನ್ನೂ ತಬ್ಬಿಕೊಂಡು ಬೆಳೆದ ಸಂಘಟನೆ ಅದಾಗಿತ್ತು. ಈ ಎಲ್ಲ ಬಹುತ್ವ ಮೂಲಗಳನ್ನೂ ಒಳಗೊಳ್ಳುವ ಸಂದರ್ಭದಲ್ಲಿ ಎಲ್ಲರ ಹುಟ್ಟಿನ ಮೂಲದ ಅಸಮಾನತೆಯ ಅರಿಮೆಗಳನ್ನು ನೀಗಿಕೊಳ್ಳಲು ಬಸವಣ್ಣನವರು ತಮ್ಮನ್ನು ತಾವು ಮೊದಲು ಅಪವರ್ಣೀಕರಣಕ್ಕೆ ಒಳಗು ಮಾಡಿಕೊಂಡರು.

ಬಸವಣ್ಣನವರು ಅಗ್ರಹಾರ ಮೂಲದ ಶೈವ ಬ್ರಾಹ್ಮಣ ಪಂಗಡಕ್ಕೆ ಸೇರಿದ್ದವರು. ಈ ದೇಶದ ಸಾಮಾಜಿಕ ಸಾಂಸ್ಕೃತಿಕ ಧಾರ್ಮಿಕ ಚರಿತ್ರೆಯನ್ನು ಬಲ್ಲವರು. ಮಾನವೀಯ ವಿವೇಕದ ಅರಿವಿನಲ್ಲಿ ಈ ತಮ್ಮ ಹುಟ್ಟಿನ ಮೂಲದ ಶ್ರೇಷ್ಠತೆಯ ವ್ಯಸನವನ್ನು ಕಂಡು ಕ್ರುದ್ಧರಾದವರು. ಉನ್ನತ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯಿಂದ ತಾವು ಮೊದಲು ಬಿಡುಗಡೆಯಾಗದೆ ಬದಲಾವಣೆ ಸಾಧ್ಯವಿಲ್ಲವೆಂದು ಭಾವಿಸಿದವರು. ಅದಕ್ಕಾಗಿ ತಮ್ಮ ಹುಟ್ಟನ್ನೇ ಕರ್ಮಸಿದ್ಧಾಂತದ ಪಾಪ ಮೂಲದಿಂದ ಬಿಡಿಸಿ ಕಾಯಕತತ್ವದ ಅಸ್ಪೃಶ್ಯರ ಮೂಲದಲ್ಲಿ ಅಪವರ್ಣೀಕರಣಿಸಿಕೊಂಡು ಹೊಸ ಮನುಷ್ಯರಾದರು. ಚೆನ್ನಯ್ಯನ ಮನೆಯ ದಾಸನ ಮಗ ಕಕ್ಕಯ್ಯನ ಮನೆಯ ದಾಸಿಯ ಮಗಳು ಬೆರಣಿಯ ನಾಯುವ ಕಾಯಕಕ್ಕೆ ಹೊಲಕ್ಕೆ ಹೋಗಿದ್ದಾಗ ಪ್ರೀತಿಸಿ ಸಂಗವ ಮಾಡಿದರು. ಅವರ ಸಂಗಕ್ಕೆ ಹುಟ್ಟಿದ ಶಿಶು ನಾನು ಎಂದು ಹೊಸ ಹುಟ್ಟಿನಲ್ಲಿ ಪವಿತ್ರೀಕರಿಸಿಕೊಂಡ ಮನುಷ್ಯರಾದರು. ಹರನು ಮೂಲಿಗನಾಗಿ ಪುರಾತನರೊಳಗಾಗಿ ಬಳಿ ಬಳಿಯಲು ಬಂದ ಮಾದಾರನ ಮಗ ನಾನಯ್ಯ. ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ಡೋಹಾರ ಕಕ್ಕಯ್ಯ, ಚಿಕ್ಕಯ್ಯ ನೆಮ್ಮಯ್ಯ, ಅಣ್ಣ ನಮ್ಮ ಕಿನ್ನರ ಬೊಮ್ಮಯ್ಯ- ಎಂದು ನೀಚಾತಿ ನೀಚರೆಂದು ಗಣ ಸಿದ್ದ ಕುಲ ಮೂಲಗಳಲ್ಲಿ ತನ್ನ ಬಳಗ ಬಂಧುತ್ವವನ್ನು ಮೆರೆದರು.

ಹೀಗೆ ಸರ್ವರನ್ನೂ ಒಳಗೊಳ್ಳುವ ಅವರ ಅಪವರ್ಣೀಕರಣ ಪ್ರಜ್ಞೆ ಅಷ್ಟಕ್ಕೇ ನಿಲ್ಲಲಿಲ್ಲ. ಅವರ ಮನೆಯನ್ನು ಈ ಎಲ್ಲ ಶರಣರನ್ನು ಒಳಗೊಳ್ಳುವ ಮಹಾಮನೆಯಾಗಿಸಿದರು. ಎಲ್ಲರನ್ನೂ ಅನುಭವ ಮಂಟಪವೆನ್ನುವ ವೇದಿಕೆಗೆ ತಂದು ಅಭಿವ್ಯಕ್ತಿ ಸ್ವಾತಂತ್ರ್ಯದ ಚರ್ಚಾವೇದಿಕೆಯಾಗಿ ಅದನ್ನು ಬೆಳೆಸಿದರು. ಈ ನಡೆಯೇ ಅವರನ್ನು ಇಡೀ ಶರಣ ಚಳವಳಿಯ ಮಹಾ ನೇತಾರನನ್ನಾಗಿ ಒಪ್ಪಿಕೊಳ್ಳಲು ಕಾರಣವಾಯಿತು. ಇಡೀ ಶರಣ ಚಳವಳಿಯ ಮಹಾ ಆಶಯವನ್ನು ಪ್ರತಿನಿಧೀಕರಿಸಿದಂತೆ ಅಲ್ಲಮ ಪ್ರಭುದೇವರು-ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆರೆದು ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿ ಮುಟ್ಟಿಸಲು ತೊಳಗಿ ಬೆಳಗುತ್ತಿದ್ದುದಯ್ಯ ಶಿವನ ಪ್ರಕಾಶ - ಎಂದು ಮನದುಂಬಿ ಹಾಡಿದ್ದಾರೆ. ಇದು ಬಸವಣ್ಣನೆಂಬ ವ್ಯಕ್ತಿತ್ವದ ಮತ್ತು ಶರಣ ಚಳವಳಿಯ ಮಹಾನಡೆಯ ಸಂಗಮತ್ವವನ್ನು ಕುರಿತು ಆಡಿದ ನುಡಿದೀವಿಗೆಯಾಗಿದೆ.

ಬಸವಣ್ಣನವರು ತಮ್ಮನ್ನು ಅಪವರ್ಣೀಕರಣಗೊಳಿಸಿಕೊಂಡದ್ದು ರಾಜಕೀಯ ಬೂಟಾಟಿಕೆಯಲ್ಲ. ಅವರ ವಚನರಾಶಿಯನ್ನು ಓದಿದ ಯಾರಿಗೂ ಅವರೊಬ್ಬ ಮಹಾಮಾನವತಾವಾದಿ ಮನುಷ್ಯನೆಂಬುದು ಅರಿವಿಗೆ ಬರುತ್ತದೆ. ಅವರ ವಚನಗಳ ಮೂಲದ್ರವ್ಯವೆಂದರೆ ಅದು ಆತ್ಮನಿರೀಕ್ಷೆ; ಆತ್ಮವಿಮರ್ಶೆ.

ಬಸವಣ್ಣನವರು ಕಟ್ಟಿ ಬೆಳೆಸಿದ ಚಳವಳಿ ಕನ್ನಡ ನೆಲದಲ್ಲಿ ಹುಟ್ಟಿ ಬೆಳೆದ ಶರಣ ಚಳವಳಿ. ಅದು ವಚನ ಚಳವಳಿ. ಈ ಚಳವಳಿಯ ಉಪಉತ್ಪನ್ನವಾಗಿ ಹುಟ್ಟಿದ್ದೇ ವಚನ ಸಾಹಿತ್ಯ. ಇಡೀ ವಚನ ಸಾಹಿತ್ಯದ ಮೂಲ ಆಶಯಕ್ಕೆ ಕನ್ನಡಿ ಹಿಡಿದಂತೆ ಬಸವಣ್ಣನವರ ಒಂದು ವಚನ ಹೀಗಿದೆ.

ತಾಳಮಾನ ಸರಿಸವನರಿಯೆ, ಓಜೆ
ಬಜಾವಣೆ ಲೆಕ್ಕವ ನರಿಯೆ
ಅಮೃತಗಣ ದೇವಗಣವನರಿಯೆ, ಕೂಡಲ ಸಂಗಮದೇವಾ
ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ.

ಇಲ್ಲಿ ಕೂಡಲಸಂಗಮವೆಂದರೆ ಅದು ಯಾವುದೋ ಸ್ಥಾವರ ಲಿಂಗವಲ್ಲ; ಜಂಗಮಸ್ವರೂಪಿ ಸಮಾಜ. ಸಮಾಜಕ್ಕೆ ಕೇಡು ಬಗೆಯದ ನಡೆಯ ನುಡಿಸಾಹಿತ್ಯವಿದು. ಇಲ್ಲಿ ಯಾವುದೇ ಛಂದೋಬದ್ಧ ಶಾಸ್ತ್ರಜಡ ಕಲಾ ಮೀಮಾಂಸೆಯ ಅಗತ್ಯವಿಲ್ಲ. ಸಾಮಾಜಿಕ ಹೊಣೆಗಾರಿಕೆಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದ ವಚನಸಾಹಿತ್ಯ ನಮ್ಮ ಸಂವಿಧಾನದ ಆಶಯಕ್ಕೆ ಪೂರಕವಾಗಿರುವುದು ಅದರ ಹಿರಿಮೆಯನ್ನು ಸಾರುತ್ತದೆ.

ವಚನ ಚಳವಳಿ ಹುಟ್ಟಿದ್ದು ವರ್ಣವ್ಯವಸ್ಥೆಯ ವಿರುದ್ಧವಾಗಿ. ಅದು ಕಟ್ಟ ಬಯಸಿದ್ದು ಕಲ್ಯಾಣ ರಾಜ್ಯವನ್ನು. ಅದಕ್ಕಾಗಿ ಅವರು ಅನುಸರಿಸಿದ ಮಾರ್ಗ ಎಲ್ಲರನ್ನೂ ಒಳಗೊಳ್ಳುವ ಸಮಾನತೆಯ ಮಾರ್ಗ. ಅಸಮಾನತೆಗೆ ಕಾರಣವಾಗಿದ್ದ ಚಾತುರ್ವರ್ಣ ವ್ಯವಸ್ಥೆಯ ಪಠ್ಯಗಳನ್ನು ಇಡೀ ಶರಣ ಚಳವಳಿ ತಿರಸ್ಕರಿಸುತ್ತದೆ. ಅವುಗಳ ಜಾಗದಲ್ಲಿ ಶರಣರ ಅರ್ಥಾತ್ ಪುರಾತನದ ವಚನಗಳನ್ನು ಪ್ರತಿಪಾದಿಸುತ್ತದೆ. ಈ ವಿಚಾರದಲ್ಲಿ ಬಸವಣ್ಣನವರೇ ಮುಂಚೂಣಿಯಲ್ಲಿ ನಿಂತ ನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪುರಾಣ ಆಗಮ ವೇದಶಾಸ್ತ್ರ ಸ್ಮೃತಿ ತರ್ಕಗಳು ಕರ್ಮಸಿದ್ಧಾಂತವನ್ನು ಪ್ರತಿಪಾದಿಸುವ ಪಠ್ಯಗಳು. ಈ ಪಠ್ಯಗಳನ್ನು ಸಾರಾಸಗಟು ತಿರಸ್ಕರಿಸಿದಂತೆ ನಲವತ್ತೊಂದು ಜನ ವಚನಕಾರರ ಮುನ್ನೂರ ಮೂವತ್ತಾರು ವಚನಗಳಿವೆ. ಅವುಗಳಲ್ಲಿ ಬಸವಣ್ಣನವರೇ 64 ವಚನಗಳಿವೆ.

ಶಾಸ್ತ್ರ ಘನವೆಂಬೆನೆ | ಕರ್ಮವ ಭಜಿಸುತ್ತಿದೆ
ವೇದ ಘನವೆಂಬೆನೆ | ಪ್ರಾಣ ವಧೆಯ ಹೇಳುತ್ತಿದೆ
ಸ್ಮೃತಿ ಘನವೆಂಬೆನೆ | ಮುಂದಿಟ್ಟು ಅರಸುತ್ತಿದೆ.


ಎಂದು ಅವುಗಳನ್ನು ತಿರಸ್ಕರಿಸಿದ್ದಾರೆ. ವೇದ ವೇದಾಂತಗಳಿಗೆ ಅಸಾಧ್ಯವಾದ ಅನುಪಮ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ'- ಎಂದು ಸ್ಥಾವರ ದೇವಾಲಯಗಳನ್ನು ತಿರಸ್ಕರಿಸುತ್ತಾ, ಜಂಗಮ ಸ್ವರೂಪಿ ಇಷ್ಟಲಿಂಗವನ್ನು ಪುರಸ್ಕರಿಸಿ ಮಾತನಾಡಿದ್ದಾರೆ.

ಕಲ್ಯಾಣ ರಾಜ್ಯದ ಕನಸಿಗಾಗಿ ಬಸವಣ್ಣನವರು ಅನುಸರಿಸಿದ ದಾರಿಯೆಂದರೆ ಅದು ಕಾಯಕ, ದಾಸೋಹದ ದಾರಿ. ಕಾಯಕವೆಂದರೆ ಸತ್ಯಶುದ್ಧ ಕಾಯಕ. ದಾಸೋಹವೆಂದರೆ ಕುಂತು ಉಣ್ಣುವುದಲ್ಲ. ಗಳಿಕೆಯ ಸಂಪತ್ತಿನ ವಿತರಣಾ ನೀತಿ. ಇದು ಅರ್ಥಶಾಸ್ತ್ರದ ಮಾರ್ಗನೀತಿ. ಬಸವಣ್ಣನವರು ಬಿಜ್ಜಳನ ಆಸ್ಥಾನದಲ್ಲಿ ವಿತ್ತಮಂತ್ರಿಯಾಗಿದ್ದವರು. ರಾಜ ಬಿಜ್ಜಳನ ನಂಬಿಕೆಗೆ ಪಾತ್ರರಾಗಿ ಕಪ್ಪಡಿ ಸಂಗಮದಿಂದ ಬಿಜ್ಜಳನ ಆಸ್ಥಾನಕ್ಕೆ ಕರಣೀಕರಾಗಿ ಬಂದವರು. ತಮ್ಮ ವ್ಯಕ್ತಿತ್ವದ ಸಂಪನ್ನತೆಯ ಫಲವಾಗಿ ಕರಣೀಕ ವೃತ್ತಿಯಿಂದ ಅರ್ಥ ಸಚಿವ ಸ್ಥಾನಕ್ಕೆ ಏರಿದವರು.

ಬಸವಣ್ಣನವರ ವ್ಯಕ್ತಿತ್ವದ ಅನನ್ಯತೆಯನ್ನು ಕಳಚೂರಿ ಬಿಜ್ಜಳ ಅರ್ಥಾತ್ ಕಪ್ಪಚೂರಿ ಬಿಜ್ಜಳ ಅರಿತವನಾಗಿದ್ದನೆಂಬುದೇ ಈ ಏರುಗತಿಗೆ ಕಾರಣ. ಅಲ್ಲದೆ ಅವಮಾನಿತ ಜಾತಿ ಮೂಲದಿಂದ ಬಂದವನಾಗಿದ್ದ ಬಿಜ್ಜಳನ ಪರೋಕ್ಷ ಬೆಂಬಲ ಬಸವಣ್ಣನವರ ವಚನ ಚಳವಳಿಗೆ ಇತ್ತು ಎಂಬುದು ಇತಿಹಾಸವನ್ನು ಅರಿಯಬಲ್ಲ ಯಾವ ಸಾಮಾನ್ಯ ಮನಸ್ಸಿಗೂ ವೇದ್ಯವಾಗುವ ಸತ್ಯ. ಇಂಥ ಅಪರೂಪದ ನಡೆಯ ಬಸವಣ್ಣನವರ ವ್ಯಕ್ತಿತ್ವದ ಅನನ್ಯತೆಯ ಫಲವೇ ವಚನ ಚಳವಳಿ, ಶರಣ ಚಳವಳಿ. ಇದು ಕನ್ನಡ ನೆಲದಲ್ಲಿ ಹುಟ್ಟಿ ಬೆಳೆದ ಕನ್ನಡದ ವಚನಧರ್ಮ. ಲಿಂಗಾಯತ ಧರ್ಮ. ❖

ತಥಾಗತ ಬುದ್ಧ ತೋರಿದ ಧಮ್ಮಪದ

ಡಾ.ಕಬ್ಬಿನಾಲೆ ವಸಂತ ಭಾರದ್ವಾಜ



ಧಮ್ಮಪದ
ಲೇ: ಪ್ರೊ.ಎಸ್.ಶಿವಾಜಿ ಜೋಯಿಸ್
ಪ್ರ: ರೂಪ ಪ್ರಕಾಶನ, ಮೈಸೂರು
ಪು: 736 ₹800

ವಿಮರ್ಶೆ

ಕ್ರಿ.ಪೂ. ನಾಲ್ಕು ಅಥವಾ ಮೂರನೆಯ ಶತಮಾನದ 'ಧಮ್ಮಪದ' ಭಗವಾನ್ ಬುದ್ಧನ ಉಪದೇಶಗಳ ಸುಂದರ ಸಂಪುಟ.26 ಸರ್ಗಗಳಲ್ಲಿ 423 ಗಾಥೆಗಳು ಮತ್ತು 305 ಅರ್ಥಕಥೆಗಳಿರುವ ಈ ಸಂಕಲನವನ್ನು ಜಗತ್ತಿನ ನೂರಾರು ವಿದ್ವಾಂಸರು ವಿವಿಧ ಭಾಷೆಗಳಿಗೆ ಅನುವಾದ ಮಾಡಿದ್ದಾರೆ. ಪಾಲಿಭಾಷೆಯಲ್ಲಿರುವ ಅದರ ಮೂಲಪಠ್ಯವು ಲ್ಯಾಟಿನ್ (ವಿನ್ಸೆಂಟ್ ಫಾಸ್‌ಬೋಲ್-1855), ಜರ್ಮನ್ (ಎ.ವೆಬರ್ ಪಾಲಿ-1860), ಫ್ರೆಂಚ್ (ಫೆರ್ನಾಂಡ್ ಹೂ-1878), ಇಂಗ್ಲಿಷ್ (ಮ್ಯಾಕ್ಸ್ ಮುಲ್ಲರ್-1870), ಬಂಗಾಳಿ (ಚಾರುಚಂದ್ರ ಬಸು-1904), ಸಂಸ್ಕೃತ (ಸ್ವಾಮಿ ಹರಿಹರಾನಂದ ಅರಣ್ಯ-1905) ಮುಂತಾದ ಭಾಷೆಗಳಲ್ಲಿ ಈಗಾಗಲೇ ಜಗದಗಲ ಪಸರಿಸಿದೆ. ಕನ್ನಡದಲ್ಲಿ ಈ ಕುರಿತ ಮೊದಲ ಲೇಖನಮಾಲೆಯನ್ನು ಬರೆದವರು ರಾವ್ ಬಹದ್ದೂರ್ ಎಂ.ಶಾಮರಾವ್ (1888). 'ಹಿತಬೋಧಿನಿ' ಪತ್ರಿಕೆಯಲ್ಲಿ ಆ ಲೇಖನಗಳು ಪ್ರಕಟವಾಗಿವೆ ಎಂದು ತಿಳಿದಿದ್ದರೂ ಇದುವರೆಗೆ ಲಭ್ಯವಾಗಿರಲಿಲ್ಲ.1906ರಲ್ಲಿ ಪ್ರಕಟವಾದ ಕನ್ನಡ ಪಠ್ಯಪುಸ್ತಕ (ಸಂ: ಎ.ಮಾರ್ಸ್‌ಡೆನ್ ಮತ್ತು ಎಸ್.ಜಿ.ನರಸಿಂಹಾಚಾರ್ಯ) ದಲ್ಲಿ ದೊರೆತ ಐದು ಪಾಠಗಳನ್ನು ಇತ್ತೀಚೆಗೆ ಸಂಶೋಧಿಸಿ'ಬುದ್ಧನಜೀವನ ಮತ್ತು ಬೋಧನೆ' ಎಂಬ ಕೃತಿಯನ್ನು ಪ್ರೊ. ಎಸ್. ಶಿವಾಜಿ ಜೋಯಿಸ್ ಅವರು ಮರುಪ್ರಕಟಿಸಿದ್ದಾರೆ. ಇದರೊಂದಿಗೆ ತಥಾಗತ ಬುದ್ಧನು ತೋರಿದ 'ಧಮ್ಮಪದ'ದ ಅನುವಾದವೂ ಬೆಳಕು ಕಂಡಿದೆ.

ಕನ್ನಡದಲ್ಲಿ 'ಧಮ್ಮಪದ'ದ ಕುರಿತಾಗಿ ಮೊದಲ ಕೃತಿ ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು ರಚಿಸಿದ'ಬೌದ್ಧಾವತಾರ' (1907).ಅವರೇ ರಚಿಸಿದ 'ಧರ್ಮಪದವೆಂಬ ಬುದ್ಧಗೀತೆಯು' (1908) ಮತ್ತು 'ಧರ್ಮಸಾಮ್ರಾಜ್ಯಮ್ ಅಥವಾ ಜಪಾನರುನ್ನತಿಗೆ ಮೂಲಾಧಾರ' (1913) ಎಂಬ ಕೃತಿಗಳೂ ಗಮನಾರ್ಹ. ಬಿದರೆ ಅಶ್ವತ್ಥಾನಾರಾಯಣ ಶಾಸ್ತ್ರಿಗಳು ಮೂಲತಃ ತುಮಕೂರಿನ ಗುಬ್ಬಿ ತಾಲ್ಲೂಕಿನ ಬಿದರೆಯವರಾದರೂ ಮೈಸೂರು ಅರಸರ ಆಸ್ಥಾನ ವಿದ್ವಾಂಸರಾಗಿದ್ದವರು. ಅವರ ವೈಯಕ್ತಿಕ ಜೀವನದ ಹೆಚ್ಚಿನ ವಿವರಗಳು ಲಭ್ಯವಿಲ್ಲ. ಅವರು ದಾರುಣ ಸಾವಿಗೆ ತುತ್ತಾದರೆಂದಷ್ಟೆ ಡಿವಿಜಿ ಅವರ 'ಜ್ಞಾಪಕ ಚಿತ್ರಶಾಲೆ'ಯಿಂದ ತಿಳಿದುಬರುತ್ತದೆ.

'ಬೌದ್ಧಾವತಾರ' ಬುದ್ಧನ ಜೀವನ ಚರಿತ್ರೆಯನ್ನು ಹೇಳಿದರೆ, 'ಬುದ್ಧಗೀತೆ' ಧಮ್ಮಪದದ ಗಾಥೆಗಳನ್ನು ಅನುವಾದಿಸಿದ ಪ್ರಯತ್ನ. ಆದರೆ ಅದು ಪಾಲಿಯಿಂದ ಮಾಡಿದ ನೇರ ಅನುವಾದವಾಗಿರದೆ ಮ್ಯಾಕ್ಸ್‌ಮುಲ್ಲರನ ಇಂಗ್ಲಿಷ್ ಅನುವಾದವನ್ನು ಆಧರಿಸಿದೆ. ಆ ಕೃತಿಯ ಉಪೋದ್ಘಾತದಲ್ಲಿ ಶಾಸ್ತ್ರಿಯವರ ತಲಸ್ಪರ್ಶಿಯಾದ ವಿಶ್ಲೇಷಣೆ ತುಂಬಾ ಗಮನಾರ್ಹವಾದುದು. ಧಮ್ಮಪದವು ಭಾರತೀಯ ವೇದಾಂತದ ಪ್ರತಿಫಲನವೆಂಬುದು ಅವರಒಟ್ಟು ಗ್ರಹಿಕೆ. ಕಠ, ಮುಂಡಕ, ಶ್ವೇತಾಶ್ವತರ ಮುಂತಾದ 19 ಉಪನಿಷತ್ತುಗಳಿಂದ 49 ಸದೃಶವಾಕ್ಯಗಳು, ಶಂಕರಾಚಾರ್ಯರ ವಿವೇಕಚೂಡಾಮಣಿಯಿಂದ 24, ಮಹಾಭಾರತದಿಂದ 19, ಭಗವದ್ಗೀತೆಯಿಂದ 7 ಹೀಗೆ ಒಟ್ಟು 24 ಮೂಲಗಳಿಂದ ಒಟ್ಟು 104 ವಾಕ್ಯಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಅದ್ವೈತಕ್ಕೂ ಬೌದ್ಧಸಿದ್ಧಾಂತಕ್ಕೂ ಮುಖ್ಯವಾದ ವ್ಯತ್ಯಾಸವಿಲ್ಲವೆಂಬುದು ಅಶ್ವತ್ಥನಾರಾಯಣ ಶಾಸ್ತ್ರಿಗಳ ಪ್ರತಿಪಾದನೆ. ಆದಕಾರಣ ಶಂಕರಾಚಾರ್ಯರು ಹೊಸಮತವನ್ನು ಎಂದಿಗೂ ಸ್ಥಾಪಿಸಿಲ್ಲ; ಬುದ್ಧ ವೇದಾಂತವೇ ಅದ್ವೈತ ವೇದಾಂತವೆಂಬ ನವೀನ ನಾಮದಿಂದ ಪ್ರಕಾಶಿಸಿತು ಎಂಬ ನಿಲುವು ಅವರದು. ಶಂಕರಾಚಾರ್ಯರಿಗೆ 'ಪ್ರಚ್ಛನ್ನಬುದ್ಧ' ಎಂಬ ಉಪಾಧಿಯಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಶ್ರೀ ವೈ.ಸುಬ್ಬರಾವ್ (ಶ್ರೀ ಸಚ್ಚಿದಾನೇಂದ್ರ ಸ್ವಾಮೀಜಿಯವರ ಪೂರ್ವಾಶ್ರಮ) ಎಂಬುವರು ತಮ್ಮ 'ಧಮ್ಮಪದ-ಪ್ರವೇಶಿಕೆ'ಯಲ್ಲಿ ಇದನ್ನು ನಿರಾಕರಿಸುತ್ತಾ ಅನಾತ್ಮವಾದವನ್ನು ಹೇಳುವ ಬೌದ್ಧಮತಕ್ಕೂ, ಸರ್ವಾತ್ಮವಾದವನ್ನು ಹೇಳುವ ಅದ್ವೈತಕ್ಕೂ ಯಾವುದೊಂದು ಸಾಮ್ಯವೂ ಇರುವುದು ಸಾಧ್ಯವಿಲ್ಲ ಎಂಬ ಮಾತುಗಳನ್ನು ಹೇಳಿದ್ದಾರೆ. (ಪುಟ: 45)

ಪ್ರಸ್ತುತ 'ಧಮ್ಮಪದ' ಪಾಲಿಭಾಷೆಯ ಮೂಲಪಠ್ಯವನ್ನು ಆಧರಿಸಿದ ಅನುವಾದಕೃತಿ. ಅದಕ್ಕೆ ಪ್ರಸ್ತಾವನೆಯಾಗಿ ಅರುವತ್ತು ಪುಟಗಳ ಭೂಮಿಕೆಯಲ್ಲಿ ಧಮ್ಮಪದದ ಕುರಿತು ಇದುವರೆಗೆ ಬಂದ ವಿವಿಧ ವಿದ್ವಾಂಸರ ಕೃತಿಗಳು, ಧಮ್ಮಪದದ ಶಬ್ದಾರ್ಥ ವಿವೇಚನೆ, ಅದು ಬುದ್ಧನ ಸ್ವಂತ ರಚನೆ ಹೌದೇ ಅಲ್ಲವೇ ಎಂಬ ಚರ್ಚೆ, ಅದರ ವಸ್ತುವಿಶೇಷತೆಯ ಸೋದಾಹರಣ ಚಿಂತನೆಗಳಿವೆ. 423 ಗಾಥೆಗಳ ಪಾಲಿಮೂಲ ಮತ್ತು ಕನ್ನಡ ಅನುವಾದ, ಅನ್ವಯಾನುಸಾರ ಪದವಿಂಗಡಣೆ, ವ್ಯಾಖ್ಯಾನ, ಅರ್ಥಕಥೆಯ ಸಂಗ್ರಹ ಮತ್ತು ಮರಳಿ ಮೊದಲ ಅನುವಾದದ ಜೋಡಣೆ ಹೀಗೆ ಗ್ರಂಥದ ರಚನಾ ವಿನ್ಯಾಸವಿದೆ. ಹಾಗಾಗಿ ಇದೊಂದು ನಿಜಾರ್ಥದ ಧಮ್ಮಪದದ ದೀಪಿಕೆ ಎನಿಸಿದೆ.


ಧಮ್ಮಪದದ 26 ವಗ್ಗ (ವರ್ಗ)ಗಳಲ್ಲಿ 21ನೆಯದು ಪ್ರಕೀರ್ಣಕವೆಂಬ ಹೆಸರಿನದು ಅರ್ಥಾತ್ ಅದು ಸಂಕೀರ್ಣವೆಂಬ ಪ್ರಕಾರದ್ದು. ಸಾಮಾನ್ಯವಾಗಿ ಅದೇ ಕೊನೆಯ ವಗ್ಗವಾಗಿರಬೇಕಿತ್ತು. ಆದರೆ ಅದರ ಬಳಿಕ ಐದು ವಗ್ಗಗಳಿರುವುದರಿಂದ ಅವುಗಳು ಪ್ರಕ್ಷೇಪವಿರಬಹುದೇ ಎಂಬ ಸಂದೇಹಕ್ಕೆ ಅವಕಾಶವಿದೆ ಎಂಬ ಸಂಪಾದಕರ ಅಭಿಪ್ರಾಯ ಸಹಜವಾದುದು. ಕೊನೆಯದಾದ ಬ್ರಾಹ್ಮಣ ವಗ್ಗದಲ್ಲಿ ಬರುವ ಮಾತರಂ ಪಿತರಂ ಹಂತ್ವಾ (294) ಎಂಬ ಒಗಟಿನಂತಹ ಪದ್ಯವು ಬುದ್ಧನ ಸಹಜಶೈಲಿಯಲ್ಲವೆಂಬ ನಿಲುವು ಕೂಡ ಸಮರ್ಥನೀಯವಾದುದು. ಧಮ್ಮಪದವು ಕಾವ್ಯಕೃತಿಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ಮೂಲಕ ಪ್ರಾಸ, ಛಂದೋಬಂಧ, ಪುನರಾವರ್ತನ, ಸಾದೃಶ್ಯ, ರೂಪಕ, ಪ್ರತಿಮೆ, ಶಬ್ದಚಮತ್ಕೃತಿಗಳು ಆ ಕಾಲದ ಸಂವಹನಮಾಧ್ಯಮವೆಂದೂ, ಋಷಿಯಲ್ಲದವನು ಕವಿಯಲ್ಲವೆಂದೂ ತರ್ಕಿಸಿರುವುದು ಒಪ್ಪತಕ್ಕ ಮಾತೇ ಸರಿ.

ಧಮ್ಮಪದದಲ್ಲಿ ಬರುವ ಹಲವಾರು ಉಪಮೆಗಳು ಪ್ರಾಚೀನ ಕಾಲದ ಕವಿಮನಸ್ಸಿಗೆ ಕನ್ನಡಿ ಹಿಡಿಯುತ್ತವೆ. 'ಚಕ್ರವು ಬಂಡಿಯನ್ನು ಎಳೆಯುವ ಎತ್ತುಗಳ ಹೆಜ್ಜೆಯನ್ನು ಅನುಸರಿಸಿದಂತೆ', 'ಸೂಪರಸವನ್ನು ಸೌಟು ಅರಿಯದಂತೆ', 'ನೀರಮನೆಯಿಂದ ಹೊರತೆಗೆದ ಮೀನಿನಂತೆ', 'ದರ್ಭೆಯ ಹುಲ್ಲು ಕೈಯನ್ನೇ ಕತ್ತರಿಸಿದಂತೆ' ಇತ್ಯಾದಿ ಸಾಲುಸಾಲು ಹೋಲಿಕೆಗಳು ಆಪ್ಯಾಯಮಾನವಾಗಿವೆ. ಗ್ರಂಥದ ಕೊನೆಯಲ್ಲಿ ಟಾಮಸ್ ಕ್ಲೇರಿ ಹೇಳಿದ ಮಾತುಗಳು ಬುದ್ಧದರ್ಶನಕ್ಕೆ ಮುಕುಟಪ್ರಾಯವಾಗಿವೆ.

ಈ ಕೃತಿಯ ಲೇಖಕರು ಕನ್ನಡ ಓದುಗರಿಗೆ ಧಮ್ಮಪದದ ಸಂಪೂರ್ಣಸೌಂದರ್ಯವನ್ನು ಸಮಂಜಸ ಅನುವಾದದ ಮೂಲಕ ಇಲ್ಲಿ ಸೆರೆಹಿಡಿದಿದ್ದಾರೆ. ಜಗತ್ತಿನ ಅಪೂರ್ವ 'ಬೆಳಕಿನ ಹೊಳೆ'ಯಲ್ಲಿ ಕನ್ನಡ ಮನಸ್ಸುಗಳು ಮಿಂದು ಶುಚಿರ್ಭೂತರಾಗುವುದಕ್ಕೆಈ ಕೃತಿ ನಿಜವಾಗಿಯೂ ಪಥದರ್ಶಕವಾಗಿದೆ. ❖

ಮೊದಲ ಓದು

ಸಮುದಾಯ ದರ್ಶನ ಮಾಡಿಸುವ ರಂಗ ಪಯಣ




ದಡವ ನೆಕ್ಕಿದ ಹೊಳೆ
ಲೇ: ಡಾ. ಶ್ರೀಪಾದ ಭಟ್
ಪ್ರ: ಬಹುರೂಪಿ, ಬೆಂಗಳೂರು
ಸಂ: 7019182729
ಪು: 168 ₹200

ರಂಗಭೂಮಿಯು ಜಗತ್ತನ್ನು ಒಳಗೊಳ್ಳುವ ಪ್ರಕ್ರಿಯೆಯ ಬಗೆಗೆ ಹಲವು ಅನುಭವಕಥನಗಳು ದಾಖಲಾಗಿವೆ. ಶ್ರೀಪಾದ ಭಟ್ಟರ 'ದಡವ ನೆಕ್ಕಿದ ಹೊಳೆ' ಅವುಗಳ ಚೌಕಟ್ಟಿನಿಂದ ಆಚೆಗೆ ಜಿಗಿಯುವ ಲಕ್ಷಣವನ್ನು ಪುಟಪುಟಗಳಲ್ಲೂ ತೋರಿದೆ. 'ರಂಗಣ್ಣನ ಕನಸಿನ ದಿನಗಳು' ಕೃತಿಯಲ್ಲಿ ಎಂ.ಆರ್. ಶ್ರೀನಿವಾಸಮೂರ್ತಿ ಅವರು ಸಮುದಾಯಗಳನ್ನು ಕಟ್ಟಿಕೊಟ್ಟ ಬಗೆಯೊಂದು ಇದೆ. ಅದನ್ನು ನೆನಪಿಸುತ್ತಲೇ ಇನ್ನೂ ಏನೋ ಬೇರೆಯದನ್ನು ಹೇಳುವ ಈ ಕೃತಿ, ಆಗೀಗ ಹಿಂದಿನ ಪುಟದ ಓದಿಗೂ ಮರುಹಚ್ಚುವಂತೆ ಮಾಡುವಷ್ಟು ಶಕ್ತವಾಗಿದೆ.

ರಾಜೇಂದ್ರ ಚೆನ್ನಿ ಅವರು ತಮ್ಮ ಮುನ್ನುಡಿಯಲ್ಲಿ ಕೃತಿಯ ಭಿತ್ತಿಯನ್ನು ಬಹಳ ಸೂಕ್ಷ್ಮವಾಗಿ ಗ್ರಹಿಸಿ, ಆಪ್ತವಾಗಿ ಕಟ್ಟಿಕೊಟ್ಟಿದ್ದಾರೆ. ನಾಟಕವನ್ನು ಆಡಿಸುವಾಗ ನಡೆಯುವ ತಾಲೀಮಿನಲ್ಲಿ ಜೀವಂತವಾಗುವ ಸಂದರ್ಭಗಳನ್ನು, ಆ ಜೀವಂತಿಕೆಗೆ ಕಾರಣವಾಗುವ ಜೀವಗಳನ್ನು, ಭಾಷಾತೀತವಾದ ಸಂವಹನವನ್ನು, ಕಲೆ ಹೇಗೆ ಎಲ್ಲ ಎಲ್ಲೆಗಳನ್ನೂ ಮೀರಬಲ್ಲದು ಎನ್ನುವ ಮಾನವೀಯತೆಯನ್ನು...ಹೀಗೆ ಕೃತಿಯ ದ್ರವ್ಯ ಹಿಡಿದಿಡುವ ಸಂಗತಿಗಳು–ಅಂಶಗಳು ಹಲವು. ಹದಿನಾರು ಅಧ್ಯಾಯಗಳಲ್ಲಿ ಕೃತಿಕಾರರು ರಂಗಭೂಮಿಯ ಒಡನಾಟದ ತಮ್ಮ ಅನುಭವದ ವ್ಯಾಪಕತೆಯನ್ನು ಕಟ್ಟಿಟ್ಟಿದ್ದಾರೆ.

ಕೃತಿಕಾರರು ಆತ್ಮಕಥಾ ಶೈಲಿಯಲ್ಲೇ ಬರೆದುಕೊಂಡು ಹೋಗುತ್ತಾ, ರಂಗಲೋಕದಲ್ಲಿ ಪಯಣ ಮಾಡಿಸುತ್ತಾರೆ. ಸಮಾಜಕ್ಕೆ ಅವರು ಕನ್ನಡಿ ಹಿಡಿಯುತ್ತಾರೆ, ದುರ್ಬೀನು ಹಾಕುತ್ತಾರೆ. ಪ್ರಶ್ನೆಗಳನ್ನು ಮೂಡಿಸುತ್ತಲೇ, ಉತ್ತರ ಹುಡುಕುವಂತೆ ಮನಸ್ಸನ್ನು ಪ್ರೇರೇಪಿಸುತ್ತಾರೆ. ಕೃತಿಯ ಶೀರ್ಷಿಕೆಯಲ್ಲಿನ ಕಾವ್ಯಾತ್ಮಕ ಗುಣ ದ್ರವ್ಯದಲ್ಲೂ ಬೆರೆತಿರುವುದಕ್ಕೆ ದಂಡಿಯಾಗಿ ಉದಾಹರಣೆಗಳೂ ಸಿಗುತ್ತವೆ. ❖

ಸಮಾಜವಾದದ ಸಹ್ಯಾದ್ರಿಗೊಂದು ಚಾರಣ



ಸಮಾಜವಾದದ ಸಹ್ಯಾದ್ರಿ
ಸಂ: ಕಿಗ್ಗಾ ರಾಜಶೇಖರ್ ಎಸ್.ಜಿ.
ಪ್ರ: ಜನ ಪ್ರಕಾಶನ, ಬೆಂಗಳೂರು
ಸಂ: 9632329955
ಪು: 184 ₹180

ಸಮಾಜವಾದಿ ನಾಯಕ, ಉಳುವವನೇ ಹೊಲದೊಡೆಯ ಎಂಬ ಕಾನೂನು ಬರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮುತ್ಸದ್ದಿ ರಾಜಕಾರಣಿ ಶಾಂತವೇರಿ ಗೋಪಾಲಗೌಡರ ಕುರಿತ ಲೇಖನಗಳ ಗುಚ್ಛವೇ ಈ ಕೃತಿ.

ಗೋಪಾಲಗೌಡರ ಜನ್ಮಶತಮಾನೋತ್ಸವದ ಸಂದರ್ಭದಲ್ಲೇ ಈ ಕೃತಿ ಮೂಡಿಬಂದಿದೆ. ಮೂರು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿ, 49ರ ವಯಸ್ಸಿನಲ್ಲೇ ಅನಾರೋಗ್ಯದ ಕಾರಣ ನಿಧನರಾದ ಅವರ ಬದುಕನ್ನು ಅಕ್ಷರ ರೂಪದಲ್ಲಿ ಇಲ್ಲಿ ಕಟ್ಟಿಕೊಡಲಾಗಿದೆ. ರಾಜ್ಯದಲ್ಲಿ ಪ್ರಸ್ತುತ ಇರುವ ಚುನಾವಣೆಯ ಬಿಸಿಯ ನಡುವೆ, ಗೋಪಾಲಗೌಡರ ಹೋರಾಟದ ದಾರಿಗಳನ್ನು ಮೆಲುಕು ಹಾಕುತ್ತಾ ರಾಜಕಾರಣಿ ಎಂದರೆ ಹೀಗಿರಬೇಕು ಎಂಬ ಭಾವನೆ ಮೂಡಿಸುತ್ತಲೇ ಈ ಕೃತಿ ಸಾಗುತ್ತದೆ.

ನ್ಯಾ.ಎಚ್.ಎನ್.ನಾಗಮೋಹನ ದಾಸ್, ಎಚ್.ಎಲ್.ಪುಷ್ಪ, ನಟರಾಜ್ ಹುಳಿಯಾರ್, ಬಂಜಗೆರೆ ಜಯಪ್ರಕಾಶ್, ಜಿ.ವಿ.ಆನಂದಮೂರ್ತಿ, ನಾ.ಡಿಸೋಜ ಹೀಗೆ ಪ್ರಮುಖರು ಇಲ್ಲಿ ಗೋಪಾಲಗೌಡರ ಹೆಜ್ಜೆಗಳನ್ನು ದಾಖಲಿಸಿದ್ದಾರೆ. ಕೃತಿಯ ಆರಂಭದಲ್ಲೇ ಕುವೆಂಪು, ಕಡಿದಾಳ್ ಮಂಜಪ್ಪ, ಎಸ್.ನಿಜಲಿಂಗಪ್ಪ, ಡಿ.ದೇವರಾಜ ಅರಸು, ಎಚ್.ಡಿ.ದೇವೇಗೌಡ ಹೀಗೆ ಪ್ರಮುಖ ರಾಜಕಾರಣಿಗಳು, ಸಾಹಿತಿಗಳು ಗೌಡರ ಜೊತೆಗಿನ ಒಡನಾಟವನ್ನು ಮೆಲುಕು ಹಾಕಿದ್ದಾರೆ. ❖

ಮಿಂಚುಹುಳುಗಳು

9ನೇ ಪುಟದಿಂದ...

ವಿವಿಧ ವೇಷ ಧರಿಸಿ ಬರುವ ಸೂಪರ್ ಫ್ಯಾನ್ ಸುಗುಮಾರ್, ದೇಶ, ವಿದೇಶಗಳಿಂದ ಬರುವ ಚಿಯರ್ ಲೀಡರ್‌ಗಳು, ಅಬ್ಬರದ ಸಂಗೀತದ ಮೂಲಕ ಮನರಂಜಿಸುವ ಡಿಜೆ, ಆರ್‌ಜೆಗಳ ತಂಡಗಳು ಅಥವಾ ಕ್ರೀಡಾಂಗಣದೊಳಗಿನ ಪಂದ್ಯ, ಸಡಗರಗಳನ್ನು ಹೊರಗಿನ ಜಗತ್ತಿಗೆ ಟಿ.ವಿ. ಮೂಲಕ ಪ್ರಚುರ ಪಡಿಸುವ ದೊಡ್ಡ ತಾಂತ್ರಿಕ ತಂಡಗಳು... ಐಪಿಎಲ್ ಯಶಸ್ಸಿನ ಪಾಲುದಾರಿಕೆಯಲ್ಲಿ ಇವರೆಲ್ಲ ಇದ್ದಾರೆ.

ಐಪಿಎಲ್ ಬರೀ ಕ್ರಿಕೆಟ್ ಆಟವಲ್ಲ; ಅದೊಂದು ಮನರಂಜನೆಯ ಕಣಜ ಹಾಗೂ ಉದ್ಯಮ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ಅದರಲ್ಲೂ ಈ ಸಲ ಬೇಸಿಗೆಯ ಬಿಸಿಯನ್ನೂ ಮೀರಿಸಿದ ಕ್ರಿಕೆಟ್ ಕಾವು ಆವರಿಸಿದೆ. ಒಂದೇ ತಿಂಗಳಲ್ಲಿ ಐಪಿಎಲ್ ಟೂರ್ನಿಯ ಆರು ಪಂದ್ಯಗಳನ್ನು ವೀಕ್ಷಿಸುವ ಅವಕಾಶ ಲಭಿಸಿದೆ. ಕೋವಿಡ್ ಕಾಲದಲ್ಲಿ ಒಂದೇ ತಾಣದಲ್ಲಿ ಟೂರ್ನಿ ನಡೆದಿತ್ತು. ಆದರೆ ಈ ಬಾರಿ ತವರು ಹಾಗೂ ತವರಿನಾಚೆ ಮಾದರಿಯಲ್ಲಿ ಟೂರ್ನಿ ನಡೆಯುತ್ತಿದೆ. ಇದರಿಂದಾಗಿ ಐಪಿಎಲ್ ಪಂದ್ಯಗಳ ಸುತ್ತಮುತ್ತ ಚಟುವಟಿಕೆಗಳು ಗಮನ ಸೆಳೆಯುತ್ತಿವೆ.

ಎಲ್‌ಇಡಿ ತಂಡ: ಒಂದು ಐಪಿಎಲ್ ಪಂದ್ಯದ ಯಶಸ್ಸಿನಲ್ಲಿ ಹತ್ತಾರು ವಿಭಾಗಗಳಲ್ಲಿ 500ಕ್ಕೂ ಹೆಚ್ಚು ಜನರ ಶ್ರಮವಿದೆ. ದುಬಾರಿ ಬೆಲೆಯ ಟಿಕೆಟ್ ಖರೀದಿಸಿ (ಆನ್‌ಲೈನ್‌ನಲ್ಲಿ, ಕೌಂಟರ್‌ನ ಗೌಜಿ ಗದ್ದಲದಲ್ಲಿ ಅಥವಾ ಕೆಲವೊಮ್ಮೆ ಕಾಳಸಂತೆಯಲ್ಲಿ) ಬಂದವರಿಗೆ ಮನರಂಜನೆ ಕೊಡಲು ಕ್ರಿಕೆಟ್ ಇದ್ದೇ ಇದೆ. ಆದರೆ ಈ ಜನದಟ್ಟಣೆಯ ಲಾಭ ತಮ್ಮ ಪಡೆಯಲು ಪ್ರಾಯೋಜಕರು ಮುಗಿಬೀಳುತ್ತಾರೆ. ಇದರಿಂದಾಗಿ ಒಂದಿಷ್ಟು ಉದ್ಯೋಗಾವಕಾಶಗಳೂ ಇಲ್ಲಿ ಹುಟ್ಟಿವೆ.

ಬೌಂಡರಿ ಸುತ್ತ ಅಳವಡಿಸಿರುವ ಎಲ್‌ಇಡಿ ಬೋರ್ಡ್‌ಗಳು, ಸ್ಕೋರ್ ಬೋರ್ಡ್‌ಗಳ ಹಿಂದೆ ಕಾರ್ಯನಿರ್ವಹಿಸುವ ನಿಪುಣ ತಂತ್ರಜ್ಞರು ಹಾಗೂ ಅನಿಮೇಷನ್ ಕಲಾವಿದರ ತಂಡವಿದೆ.

'ಇದೊಂದು ಅದ್ಭುತ ಲೋಕ. ನಾವು ಕೆಲಸ ಮಾಡುವುದರ ಜೊತೆಗೆ ಕ್ರಿಕೆಟ್ ಮತ್ತು ಕ್ರಿಕೆಟಿಗರನ್ನು ಹತ್ತಿರದಿಂದ ನೋಡುವ ಅವಕಾಶ ಸಿಗುತ್ತದೆ. ಉತ್ತಮ ಆದಾಯವೂ ಇದೆ. ಅಧಿಕೃತ ಪ್ರಸಾರಕರ ಮೂಲಕ ಟಿವಿ ಹಾಗೂ ಆ್ಯಪ್ ವೀಕ್ಷಕರಿಗೆ ಅಂಕಿ ಸಂಖ್ಯೆ, ಜಾಹೀರಾತು ಮತ್ತು ಅನಿಮೇಷನ್‌ಗಳನ್ನು ತಲುಪಿಸುವುದು ನಮ್ಮ ಕೆಲಸ. ವಿವಿಧ ತಂಡಗಳೊಂದಿಗೆ ಸಂಯೋಜನೆ ಮಾಡಿಕೊಂಡು ಕಾರ್ಯನಿರ್ವಹಿಸುವುದು ಒಳ್ಳೆಯ ಅನುಭವ. ಕ್ರಿಯಾಶೀಲ ಜಗತ್ತು ಇದು' ಎಂದು ತಂತ್ರಜ್ಞ ರಾಜಶೇಖರ್ ಹೇಳುತ್ತಾರೆ.

ಇದೆಲ್ಲಕ್ಕೆ ಕಳಶವಿಟ್ಟಂತೆ ಆಟ ಮತ್ತು ತಂಡಗಳ ಅಭ್ಯಾಸಕ್ಕಾಗಿ ಅಂಗಳವನ್ನು ಒಪ್ಪ ಓರಣಗೊಳಿಸುವ ಕ್ರೀಡಾಂಗಣ ಸಿಬ್ಬಂದಿಯ ಕಾರ್ಯಕ್ಕೆ ಬೆಲೆ ಕಟ್ಟಲಾಗದು.ಬ್ಯಾಟರ್‌ಗಳು ಹರಿಸುವ ರನ್‌ಗಳ ಹೊಳೆಯ ಹಿಂದೆ ಈ ಸಿಬ್ಬಂದಿಯ ಬೆವರಹನಿಗಳು ಇರುತ್ತವೆ. ಪ್ರತಿ ಪಂದ್ಯಕ್ಕೂ 35–40 ಜನ ಸಿಬ್ಬಂದಿ ಕಾರ್ಯನಿರ್ವಹಿಸುತ್ತಾರೆ.



ಚಿನ್ನಸ್ವಾಮಿ ಕ್ರೀಡಾಂಗಣದ ಹೊರಭಾಗದಲ್ಲಿ ಭರದಿಂದ ಸಾಗುತ್ತಿದೆ ಐಪಿಎಲ್ ತಂಡಗಳ ಜೆರ್ಸಿ, ಕ್ಯಾಪ್‌ಗಳ ಮಾರಾಟ –ಎಎಫ್‌ಪಿ ಚಿತ್ರ


ನಿವೃತ್ತ ಕ್ರಿಕೆಟಿಗರಿಗೂ ಐಪಿಎಲ್ ಅಕ್ಷಯಪಾತ್ರೆ. ಕಾಮೆಂಟ್ರಿ, ಅಂಪೈರಿಂಗ್, ಸ್ಕೋರಿಂಗ್, ತಂಡಗಳ ಕೋಚಿಂಗ್ ಸಿಬ್ಬಂದಿ ಕೆಲಸಗಳು ಅವರನ್ನು ಕೈಬೀಸಿ ಕರೆಯುತ್ತಿದೆ. ಜೂನಿಯರ್ ಕ್ರಿಕೆಟಿಗರಿಗೂ ನೆಟ್ ಬೌಲರ್ ಆಗಿ, ಬಾಲ್ ಬಾಯ್ ಆಗಿ ತಂಡಗಳೊಂದಿಗೆ ಮತ್ತು ದೊಡ್ಡ ಕ್ರಿಕೆಟಿಗರೊಂದಿಗೆ ಒಡನಾಡುವ ಅವಕಾಶ ಲಭಿಸುತ್ತಿದೆ.

ಇನ್ನು ಕ್ರೀಡಾಂಗಣದ ಹೊರಗೂ ಒಂದು ಲೋಕವಿದೆ. ಅದು ಅಸಂಘಟಿತ ಜಗತ್ತು. ದೂರದ ರಾಜ್ಯಗಳಿಂದ ಬರುವ ಹಲವರು ವಿರಾಟ್ ಕೊಹ್ಲಿ, ಮಹೇಂದ್ರಸಿಂಗ್ ಧೋನಿ ಮತ್ತಿತರ ತಾರೆಗಳ ಹೆಸರುಗಳನ್ನು ದೊಡ್ಡದಾಗಿ ಮುದ್ರಿಸಿರುವ ಟೀಶರ್ಟ್‌ಗಳು, ಕ್ಯಾಪ್‌ಗಳನ್ನು ಮಾರಾಟ ಮಾಡುತ್ತಾ ಒಂದಿಷ್ಟು ಹಣ ಜೇಬಿಗಿಳಿಸುವ ಪೈಪೋಟಿಗೆ ಬಿದ್ದಿರುತ್ತಾರೆ. ಇನ್ನೂ ಕೆಲವರು ಅಭಿಮಾನಿಗಳ ಮುಖದ ಮೇಲೆ ಅವರ ನೆಚ್ಚಿನ ತಂಡದ ಲೋಗೊ, ಧ್ವಜಗುರುತು ಅಥವಾ ಆಟಗಾರರ ಹೆಸರುಗಳನ್ನು ಪೇಂಟ್ ಮಾಡಿಕೊಡುತ್ತಾರೆ. ಈ ರೀತಿ 'ಸಿಂಗಾರ' ಮಾಡಿದರೆ ಕ್ರೀಡಾಂಗಣದೊಳಗೆ ತಮ್ಮ ಮೇಲೆ ಕ್ಯಾಮೆರಾ ಕಣ್ಣು ಬೀಳುವ ನಿರೀಕ್ಷೆ ಮುದ್ರೆ ಹಾಕಿಸಿಕೊಂಡವರದ್ದು. ಅದಕ್ಕಾಗಿಯೇ ಪಂದ್ಯ ಆರಂಭವಾಗುವ ಸಮಯಕ್ಕಿಂತ ಎರಡು ಗಂಟೆ ಮುಂಚೆಯೇ ಕ್ರೀಡಾಂಗಣದ ಮುಂದೆ ಹಾಜರಾಗಿರುತ್ತಾರೆ.

ಇದರಿಂದಾಗಿ ಉಂಟಾಗುವ ಜನ–ವಾಹನದಟ್ಟಣೆಯು ಸಣ್ಣದಲ್ಲ. ಕೆಲವೊಮ್ಮೆ ರಾತ್ರಿ 12ರವರೆಗೂ ಜನಸಾಮಾನ್ಯರಿಗೆ ಇದರ ಬಿಸಿ ತಟ್ಟುವುದು ಸುಳ್ಳಲ್ಲ. ಆದರೆ ಇದೆಲ್ಲದರಾಚೆ ಐಪಿಎಲ್ ಪಂದ್ಯಗಳನ್ನು ನೋಡುವ ಆನಂದವೇ ಬೇರೆ.

'ಸಿನಿಮಾ ಮತ್ತಿತರ ಮನರಂಜನೆಗಳಿಗಿಂತ ಇದು ವಿಭಿನ್ನ. ಇಲ್ಲಿ ಕೃತ್ರಿಮ ಇಲ್ಲ. ಹೊಡೆದಾಟ, ಲವ್ ಸ್ಟೋರಿಗಳ ಡ್ರಾಮಾ ಇಲ್ಲ. ಆದರೆ ಆಟವಿದೆ. ಜೊತೆಗೆ ಸಂಗೀತ ನೃತ್ಯ ಮನರಂಜನೆಗಳೂ ಇವೆ. ಇಲ್ಲಿಗೆ ಬರುವುದರಿಂದ ಎಷ್ಟೋ ಜನ ಹೊಸ ಸ್ನೇಹಿತರೂ ಸಿಗುತ್ತಾರೆ. ಕ್ರಿಕೆಟ್ ನಮ್ಮೆಲ್ಲರನ್ನೂ ಕೂಡಿಸುತ್ತಿದೆ' ಎನ್ನುವ ವಸಂತಕುಮಾರ್ ಮತ್ತು ಸ್ನೇಹಿತರ ಬಳಗ ಮೊದಲಿನಿಂದಲೂ ಆರ್‌ಸಿಬಿ ಅಭಿಮಾನಿಗಳು.

ಕಳೆದ 15 ವರ್ಷಗಳಿಂದಲೂ ಪ್ರಶಸ್ತಿ ಜಯಿಸಲು ಸಾಧ್ಯವಾಗದಿದ್ದರೂ ಆರ್‌ಸಿಬಿಯ ಜನಪ್ರಿಯತೆ ಕಡಿಮೆಯಾಗಿಲ್ಲ. ಕ್ರೀಡಾಂಗಣಕ್ಕೆ ಬಂದು ತಂಡವನ್ನು ಬೆಂಬಲಿಸುವ ಹುಮ್ಮಸ್ಸು ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗುತ್ತಿದೆ. ಇದು ಉದ್ಯಾನನಗರಿಯ ಕ್ರಿಕೆಟ್ ಅಭಿಮಾನಿಗಳ ಬೇಷರತ್ ಪ್ರೀತಿಯೋ ಅಥವಾ ಟೀಕಾಕಾರರು ಹೇಳುವಂತೆ ಜನ ಮರಳೋ ಜಾತ್ರೆ ಮರುಳೋ ಇರಬಹುದು. ❖



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬೌಂಡರಿ ಲೈನ್ ಸಿದ್ಧತೆಯಲ್ಲಿ ನಿರತ ಸಿಬ್ಬಂದಿ –ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.



ರಾಜು ಅನಂತಸ್ವಾಮಿ ರಾಗ ಸ್ಮರಣೆ

ರಾಜು ಅನಂತಸ್ವಾಮಿ ಜನ್ಮದಿನವನ್ನು ಐದು ದಿನಗಳ ಗಾನೋತ್ಸವವನ್ನಾಗಿ ಬೆಂಗಳೂರಿನಲ್ಲಿ ಆಚರಿಸಲಾಯಿತು. ಇಂತಹ ಉತ್ಸವದ ಹುಟ್ಟಿಗೆ ಕಾರಣವಾದ ಜ್ಞಾಪಕ ಚಿತ್ರಶಾಲೆಯೊಳಗೊಂದು ಸುತ್ತು...



ಕಾರ್ತಿಕ್ ಪಾಂಡವಪುರ

ಮಧು ಮನೋಹರನ್

ಅದು 2003ನೇ ಇಸವಿ. ಒಂದು ದಿನ 'ಯಾರೋ ಇದು ಹುಡುಗಿ, ನಿನ್ ಥರ ಅಲ್ಲದೇ ಮುದ್ಮುದ್ದಾಗಿ ಇದಾಳೆ' ಅಂತ ನನ್ನ ಅಣ್ಣ ಕಾರ್ತಿಕ್‌ನ ಚುಡಾಯಿಸಿಕೊಂಡು, ಸ್ವತಃ ತಮ್ಮ ಕೈಯಿಂದ ಮಾಡಿದ ಕಾಫಿಯನ್ನು ಪ್ರೀತಿಯಿಂದ ನಮ್ಮಿಬ್ಬರಿಗೆ ವ್ಯಕ್ತಿಯೊಬ್ಬರು ಕೊಟ್ಟಿದ್ದ ದೃಶ್ಯ ಇನ್ನೂ ಕಣ್ಣ ಮುಂದೆ ಕಟ್ಟಿದ ಹಾಗಿದೆ. ಅದು ನಾನು ಜೀವನದಲ್ಲಿ ಸೇವಿಸಿದ ಮೊದಲನೇ ಕಾಫಿ. ಆ ವ್ಯಕ್ತಿಯೇ ಮೈಸೂರಿನ ಜಗತ್ಪ್ರಸಿದ್ಧ ಅರಮನೆಯಲ್ಲಿ ಆಸ್ಥಾನ ಸಂಗೀತಗಾರರಾಗಿದ್ದ ಚಿಕ್ಕರಾಮ ರಾಯರ ಮರಿ ಮೊಮ್ಮಗ, ಶಾಸ್ತ್ರೀಯ ಸಂಗೀತಗಾರ್ತಿ ಕಮಲಮ್ಮನವರ ಮೊಮ್ಮಗ, ಸುಗಮ ಸಂಗೀತ ಕ್ಷೇತ್ರದ ದೊರೆ ಮೈಸೂರು ಅನಂತಸ್ವಾಮಿಯವರ ಮಗ, ರಾಜು ಅನಂತಸ್ವಾಮಿ. ಇಂತಹ ವಂಶಾವಳಿಯ ಜ್ಞಾನ ಮತ್ತು ಪ್ರತಿಭೆಯನ್ನು ಹೊಂದಿರುವುದರ ಜೊತೆ, ಅವರು ಸ್ವಯಂ ಶ್ರೇಷ್ಠ ಗಾಯಕ, ಸಂಯೋಜಕ, ರಂಗಕರ್ಮಿ ಹಾಗೂ ನಟರಾಗಿದ್ದವರು.

ಆ ಸಮಯದಲ್ಲಿ ಈ ಯಾವ ವಿಚಾರಗಳ ಅರಿವೂ ಇಲ್ಲದಿದ್ದ ನನಗೆ, ಅವರು ಒಬ್ಬ ಸಾಮಾನ್ಯ ಸಂಗೀತಗಾರನಾಗಿ ಕಂಡರು. ಅಲ್ಲಿಂದ ಬೆಳೆದ ನನ್ನ, ಅಣ್ಣನ ಹಾಗೂ ರಾಜು ಅನಂತಸ್ವಾಮಿ... ಅವರ ಬಾಂಧವ್ಯ ಸಂಗೀತದ ವಿಚಾರಗಳ ಚರ್ಚೆ, ಇನ್ನಿತರ ಸ್ನೇಹಿತರೊಂದಿಗೆ ಹರಟೆ, ನಗು ಮುಂತಾದವುಗಳೊಂದಿಗೆ ಅವಿರತವಾಗಿ ಬೆಳೆಯಿತು. ನನ್ನ ಅಣ್ಣ ನಮ್ಮ ಸುಗಮ ಸಂಗೀತದ ಗುರುದ್ವಯರಲ್ಲಿ ಒಬ್ಬರಾದ ಬಾಲಿ ಸರ್ ಅವರ ಆಶೀರ್ವಾದದೊಂದಿಗೆ ಆಗಷ್ಟೇ ಒಬ್ಬ ಲಯವಾದ್ಯ ಕಲಾವಿದನಾಗಿ ವೃತ್ತಿಯಲ್ಲಿ ತೊಡಗಿದ್ದ. ಹಾಗಾಗಿ ರಾಜು ಸರ್ ಕೂಡ ಅವನನ್ನು ಪ್ರೋತ್ಸಾಹಿಸಿ ತಮ್ಮ ಕಾರ್ಯಕ್ರಮಗಳಲ್ಲಿ ಅವಕಾಶ ನೀಡುತ್ತಾ ಬಂದರು.

ಹೀಗೆ ಒಂದು ದಿನ, ರಾಜು ಸರ್ ತಮಾಷೆಯಾಗಿ ನನಗೆ ಒಂದು 'ಸರ್ಪ್ರೈಸ್ ಟೆಸ್ಟ್' ಕೊಡ್ತೀನಿ ಎಂದು ಹೇಳಿ ಸಾಲು ಸಾಲಾಗಿ ಅವರ ಮತ್ತು ಅವರ ತಂದೆ ಮೈಸೂರು ಅನಂತಸ್ವಾಮಿಯವರ ಹಾಡುಗಳನ್ನು ಕೇಳಿಸಿ, ಯಾವ ಹಾಡು ಯಾರ ದನಿಯಲ್ಲಿ ರೆಕಾರ್ಡ್ ಆಗಿದೆ ಎಂದು ಕಂಡುಹಿಡಿಯಲು ಸೂಚಿಸಿದರು. ಅವತ್ತು ನಾನು ಬಲಗಡೆಯಿಂದ ಎದ್ದಿದ್ದೆ ಎಂದೆನಿಸುತ್ತದೆ, ಎಲ್ಲಾ ಹಾಡುಗಳ ದನಿಯನ್ನು ಸರಿಯಾಗಿ ಗುರುತಿಸಿದೆ. ಪರೀಕ್ಷೆಯಲ್ಲಿ ನಾನು ಪಾಸ್! 'ಯಾವಾಗಿಂದ ಬರ್ತೀಯ ಪಾಠಕ್ಕೆ?' ಎಂದು ಕೇಳಿದರು. ಇದು ರಾಜು ಅನಂತಸ್ವಾಮಿಯವರ ವಿಶೇಷ ಗುಣ. ತಮ್ಮ ಶಿಷ್ಯರನ್ನು ತಾವೇ ಆಯ್ಕೆ ಮಾಡಿಕೊಂಡು ಯಾವುದೇ ಅಪೇಕ್ಷೆಯಿಲ್ಲದೆ ವಿದ್ಯೆಯನ್ನು ಧಾರೆ ಎರೆಯುವುದು. ಸುಗಮ ಸಂಗೀತದ ವಾಸನೆಯೇ ಇಲ್ಲದೆ, ಶಾಸ್ತ್ರೀಯ ಸಂಗೀತ ಅಭ್ಯಾಸ ಬಿಟ್ಟರೆ ಕೇವಲ ಸಿನಿಮಾ ಗೀತೆಗಳನ್ನು ಕೇಳುತ್ತಿದ್ದ ನನಗೆ ಜೀವನದಲ್ಲಿ ಒಂದು ಹೊಸ ಹಾಗೂ ಮಹತ್ವದ ತಿರುವು ಕಾದಿತ್ತು.

ಮೂರು ವರ್ಷಗಳು ಕಳೆದದ್ದೇ ತಿಳಿಯಲಿಲ್ಲ, 2006 ರಲ್ಲಿ ಅವರು ಆಯೋಜಿಸುತ್ತಿದ್ದ 'ಅನಂತ ಚಿತ್ರ' ಎಂಬ ಮೈಸೂರು ಅನಂತಸ್ವಾಮಿ ಸ್ಮರಣೆಯ ಕಾರ್ಯಕ್ರಮ ಸರಣಿಯಲ್ಲಿ ಒಂದು ಕಾರ್ಯಕ್ರಮವನ್ನು ನನಗೆ ಮೀಸಲಿಟ್ಟರು. ಅಲ್ಲಿಯವರೆಗೆ ಅವರ ಮುಂದಾಳತ್ವದಲ್ಲಿ ಸಹ ಗಾಯಕಿಯಾಗಿ ಹಾಡುತ್ತಿದ್ದ ನನ್ನಲ್ಲಿ ಭಾವಗೀತೆಗಳ ಕಿಡಿಯನ್ನು ಹೊತ್ತಿಸಿದರು. ಅಂದು ಮುಖ್ಯ ಗಾಯಕಿಯಾಗಿ ನನ್ನನ್ನು ಹಾಡಿಸಿ, ನನಗೆ ಅವರೇ ಹಾರ್ಮೋನಿಯಂ ಸಾಥಿ ನೀಡಿ ಸುಗಮ ಸಂಗೀತ ಲೋಕದಲ್ಲಿ ನನ್ನ ರಂಗಪ್ರವೇಶ ಮಾಡಿಸಿದರು. ಈ ಕ್ಷೇತ್ರವನ್ನು ನಾನು ನೋಡುತ್ತಿದ್ದ ರೀತಿಯೇ ಅಷ್ಟು ಹೊತ್ತಿಗೆ ಬದಲಾಗಿತ್ತು. ಭಾವಗೀತೆ ಹಾಗೂ ಸುಗಮ ಸಂಗೀತದ ಎಲ್ಲಾ ಪ್ರಕಾರಗಳ ಮೇಲೂ ಅಪಾರ ಒಲವು ಮೂಡಿತ್ತು. ಆ ಸಮಯದಲ್ಲಿ ಅಣ್ಣ ಮತ್ತು ನಾನು ಸುಗಮ ಸಂಗೀತ ಕಾರ್ಯಕ್ರಮಗಳನ್ನು ನೀಡಬೇಕು, ಗುರುಗಳು ಹೆಮ್ಮೆ ಪಡುವಂತಾಗಬೇಕು ಎಂದು ನಿರ್ಧರಿಸಿ ಕಟ್ಟಿಕೊಂಡ ಸಂಸ್ಥೆಯೇ 'ನಾಕುತಂತಿ ಸಂಗೀತ ಗುಚ್ಛ'. ನಮ್ಮ ಸಂಸ್ಥೆ ನಿರ್ವಹಿಸಿದ ಒಂದೆರಡು ಕಾರ್ಯಕ್ರಮಗಳಲ್ಲಿ ರಾಜು ಸರ್ ಕೂಡ ಹಾಡಿರುವುದು ಹೆಮ್ಮೆಯ ವಿಚಾರ.

ಸಾಯಿ ಆರತಿ ರವಿಕುಮಾರ್, ಅನಸೂಯಾ, ಪಂ. ವಿ.ಎಂ. ನಾಗರಾಜ್, ರಾಜು ಅನಂತಸ್ವಾಮಿ, ಕರ್ನಾಟಕ ಕಲಾಶ್ರೀ ಎಸ್. ಬಾಲಿ ಮತ್ತು ಧ್ವನಿ ತಜ್ಞ ಅನಂತ್ ವೈದ್ಯನಾಥನ್ ಅವರಲ್ಲಿ ತರಬೇತಿ ಪಡೆದ ಗಾಯಕಿಯಾಗಿ ನನಗೆ ಹಾಗೂ 32ಕ್ಕೂ ಹೆಚ್ಚು ವಾದ್ಯಗಳನ್ನು ನುಡಿಸುವ ಪ್ರಾವೀಣ್ಯ ಹೊಂದಿರುವ ಹಾಗೂ ದಿಗ್ಗಜರಾದ ರಾಜು ಅನಂತಸ್ವಾಮಿ, ಹಂಸಲೇಖ, ಸಿ. ಅಶ್ವಥ್, ಗುರುಕಿರಣ್, ವಿ. ಮನೋಹರ್, ಎಸ್.ಪಿ.ಬಿ., ಎಸ್. ಜಾನಕಿ, ಅನುರಾಧ ಶ್ರೀರಾಮ್, ವಿಜಯ್ ಪ್ರಕಾಶ್ ಮುಂತಾದವರಿಗೆ ವಾದ್ಯ ಸಹಕಾರ ನೀಡಿರುವ ನನ್ನ ಅಣ್ಣ ಕಾರ್ತಿಕ್ ಪಾಂಡವಪುರ, ನಮ್ಮಿಬ್ಬರಿಗೂ, ಮೈಸೂರು ದಸರಾ, ಹಂಪಿ ಉತ್ಸವದ ವೇದಿಕೆಗಳು ಸೇರಿದಂತೆ ಸುಮಾರು 1000ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಹಾಡುವ, ನುಡಿಸುವ ಅವಕಾಶಗಳು ಸಿಕ್ಕಿವೆ. ಇದಕ್ಕೆ ಬಹುಮುಖ್ಯ ಕಾರಣ ನಮ್ಮ ರಾಜು ಸರ್.

ರಾಜು ಸರ್ ನಮಗೆ ವಿದ್ಯೆ ಕೊಟ್ಟ ಆಚಾರ್ಯರಾಗಿ ಮಾತ್ರ ಇರಲಿಲ್ಲ, ನಮ್ಮ ಬಾಂಧವ್ಯ ಅಷ್ಟಕ್ಕೆ ಸೀಮಿತವಾಗಲಿಲ್ಲ. ಸರಿ-ತಪ್ಪು ಹೇಳುವುದರಲ್ಲಿ ತಂದೆಯಾಗಿ, ಪ್ರೀತಿ ತೋರುವುದರಲ್ಲಿ ತಾಯಾಗಿ, ಕೆಟ್ಟದರಿಂದ ರಕ್ಷಿಸುವ ದೈವ ಕೈಯಾಗಿ, ಅಕ್ಕರೆ ತೋರುವುದರಲ್ಲಿ ಮಿತ್ರನಾಗಿ, ಎಲ್ಲಾ ಪಾತ್ರಗಳನ್ನು ವಹಿಸಿದ್ದರು. 2009ರಲ್ಲಿ ಅವರು ಅಗಲಿದಾಗ ಸಂಗೀತವೇ ನಮಗೆ ಬೇಡ ಎನ್ನುವಷ್ಟು ಆ ದುರಂತ ಕಾಡಿತು. ಆದರೆ, ಕಲಾವಿದ ಚಿರಾಯು. ಎಲ್ಲಿಯವರೆಗೆ ಒಬ್ಬ ಕಲಾವಿದನ ಕಲೆ ಜನರ ಮನವನ್ನು ಮುಟ್ಟುತ್ತದೆಯೋ, ಅಲ್ಲಿಯವರೆಗೆ ಆ ಕಲಾವಿದ ಬದುಕಿಯೇ ಇರುತ್ತಾನೆ. ಈ ವಿಚಾರ ನಮಗೆ ಬಲವಾಗಿ ಕಾಡಲಾರಂಭಿಸಿತು. ಅಂದು ಹುಟ್ಟಿಕೊಂಡಿದ್ದೇ 'ರಾಜು ಗಾನೋತ್ಸವ'.

ಐವತ್ತರ ಸಂಭ್ರಮ

ನಮ್ಮ ಗುರುಗಳನ್ನು, ಅವರ ಹಾಡುಗಳನ್ನು ಎಂದಿಗೂ ಜನ ಮರೆಯಬಾರದು ಎಂಬ ಉದ್ದೇಶದೊಂದಿಗೆ ಅಂದಿನಿಂದ ಪ್ರತಿವರ್ಷ ಅವರ ಜನನ ದಿನವನ್ನು ಸಂಭ್ರಮಿಸುತ್ತ, ಅವರ ಜನ್ಮದಿನದ ನೆನಪಿನಲ್ಲಿ ಈ ಕಾರ್ಯಕ್ರಮನ್ನು ಆಯೋಜಿಸುತ್ತಾ ಬರುತ್ತಿದ್ದೇವೆ. 14ನೇ ವರ್ಷವಾದ ಈ ಬಾರಿ ರಾಜು ಅನಂತಸ್ವಾಮಿಯವರ 50ನೇ ಹುಟ್ಟುಹಬ್ಬದ ವಿಶೇಷವಾಗಿ ರಾಜು ಗಾನೋತ್ಸವವನ್ನು 50ಕ್ಕೂ ಹೆಚ್ಚು ಕಲಾವಿದರೊಂದಿಗೆ ಐದು ದಿನಗಳ ಸಂಗೀತ ಹಬ್ಬವಾಗಿ ಆಚರಿಸಿದೆವು. ಬೆಂಗಳೂರಿನ ಜೆಎಸ್‌ಎಸ್ ಸಭಾಂಗಣದಲ್ಲಿ ಏಪ್ರಿಲ್ 14ರಿಂದ 18ರವರೆಗೆ ನಡೆದ ಈ 'ಗುರು ನಮನ' ವಿಶೇಷವಾದದ್ದು. ಒಬ್ಬ ಗುರುವಿಗೆ ಈ ರೀತಿಯ ಐದು ದಿನಗಳ ಸಂಗೀತ ಹಬ್ಬವನ್ನು ಏರ್ಪಡಿಸಿರುವುದು ಸುಗಮ ಸಂಗೀತ ಕ್ಷೇತ್ರದಲ್ಲಿ ಅಪರೂಪವೇ ಹೌದು. ಒಂದಷ್ಟು ಗಣ್ಯರು, ಇನ್ನಷ್ಟು ಗಾಯಕರು, ಮತ್ತಷ್ಟು ವಾದ್ಯ ಕಲಾವಿದರು ಎಲ್ಲರೂ ಸೇರಿ ಈ ಬಾರಿಯ 'ರಾಜು ಗಾನೋತ್ಸವ'ವನ್ನು ಫಳ ಫಳ ಹೊಳೆಯಿಸಿದರು.

'ರತ್ನನ್ ವಿಲಾಸ ಮಧು ಪ್ರವಾಸ' ಶೀರ್ಷಿಕೆಯ ವಿಭಿನ್ನ ರತ್ನನ್ ಪದಗಳ ಪ್ರದರ್ಶನ, ರಂಗಗೀತೆಗಳನ್ನು ಹಾಡಿ ವಿವಿಧ ರಂಗತಂಡಗಳು ಸಲ್ಲಿಸಿದ 'ರಂಗಗೌರವ', 'ಭಾವ ಪರಂಪರಾ' ಮೂಲಕ ನಮ್ಮ ಸಂಸ್ಥೆಯ ಹಾಗೂ ಬೆಂಗಳೂರಿನ ಕೆಲವು ಪ್ರಮುಖ ಸುಗಮ ಸಂಗೀತ ಶಾಲೆಗಳ ವಿದ್ಯಾರ್ಥಿಗಳಿಂದ ಸಂಗೀತ ಸೇವೆ, ರಾಜು ಸರ್ ಒಳಗಿನ ಅವರ ತಂದೆ ಮೈಸೂರು ಅನಂತಸ್ವಾಮಿಯವರಿಗೆ ವಿಶೇಷ ಸಮರ್ಪಣೆಯಾದ 'ನನ್ನೊಳು ನಾ' ಹಾಗೂ ಇವೆಲ್ಲದರ ಸಮಾರೋಪವಾಗಿ ರಾಜು ಅನಂತಸ್ವಾಮಿಯವರ ಅತ್ಯದ್ಭುತ ಸಂಯೋಜನೆಗಳನ್ನು 'ರಾಜು ಕಟ್ಟೆ'ಯಲ್ಲಿ ಹಾಡಿ, ರಂಜಿಸಿ ಈ ಬಾರಿ ನಮ್ಮ ಪ್ರೀತಿಯ ರಾಜು ಸರ್‌ಗೆ 'ಹ್ಯಾಪ್ಪಿ ಬರ್ತಡೆ' ಹಾಡಿದೆವು.

ಮುಂದಿನ ವರ್ಷ ಹೊಸದಾಗಿ ಇನ್ನೇನು ಮಾಡುವುದು ಎಂಬ ಯೋಚನೆ ಈಗಿಂದಲೇ ನಮಗೆ ಶುರುವಾಗಿದೆ, ಎಷ್ಟೇ ಕಷ್ಟವಾದರೂ ಈ ಸಮಾರಂಭವನ್ನು ಖಂಡಿತ ಮಾಡೇ ಮಾಡ್ತೀವಿ. ಈ ಮೂಲಕ ನಮ್ಮೊಳಗಿನ ಗುರು ರಾಜು ಅನಂತಸ್ವಾಮಿ ಅವರಿಗೆ ಅನಂತಾನಂತ ನಮನ ಸಲ್ಲಿಸುವ ತುಡಿತ ನಮ್ಮಲ್ಲಿದೆ.



ಮಧು ಮನೋಹರನ್

ಜನಸಂಪತ್ತಿಗೆ ಜೈಕಾರ...

9ನೇ ಪುಟದಿಂದ...

ಹಾಗಿದ್ದರೆ ಎಲ್ಲಕ್ಕೂ ಜೈಹೋ ಎನ್ನೋಣವೆ? ನಿಲ್ಲಿ. ಜನಸಂಖ್ಯೆ ಹೆಚ್ಚುತ್ತಿರುವ ಹಾಗೇ ಭೋಗಲಾಲಸೆಗಳ ಆಮಿಷವೂ ಹೆಚ್ಚುತ್ತಿದೆ. ಹಾಗಾಗಿ ಹೆಚ್ಚಿನ ಸವಾಲುಗಳು ಎದುರಾಗುತ್ತಿವೆ. ಮೊದಲ ಸವಾಲು ಏನೆಂದರೆ, ಸುಖಜೀವನದ ಕನಸು ಕಾಣುವ ಯುವಜನಕೋಟಿಗೆ ಅಷ್ಟೇ ತ್ವರಿತವಾಗಿ ಉದ್ಯೋಗ ಸಿಗಬೇಕು. ಅವರು ಕೈಕಟ್ಟಿ ಕೂರಲೇಬಾರದು. ಅಂದರೆ, ದೇಶದ ಅಭಿವೃದ್ಧಿಯ ಏರುಗತಿ ಶೇ. 8-9ರ ಮಟ್ಟದಲ್ಲೇ ಇರಬೇಕು. ಕಡಿಮೆಯಾದರೆ ಅಪಾಯ. ಶಿಕ್ಷಣ ಮತ್ತು ವೈದ್ಯಕೀಯ ವ್ಯವಸ್ಥೆಗೆ ನಾವು ಈಗಲೂ ತೀರ ಕಡಿಮೆ ಪ್ರಮಾಣದ ಹೂಡಿಕೆ (ಕ್ರಮವಾಗಿ ಜಿಡಿಪಿಯ ಶೇ. 2.9 ಮತ್ತು 1.3 ಮಾತ್ರ) ಮಾಡುತ್ತಿದ್ದೇವೆ. ಅದನ್ನು ಇಮ್ಮಡಿ ಮಾಡಬೇಕೆಂದು ಒತ್ತಡವಿದ್ದರೂ ಜಾರಿಗೆ ಬರುತ್ತಿಲ್ಲ. ಚೀನಾದಿಂದ ಕಾಲ್ತೆಗೆಯುತ್ತಿರುವ ಕಂಪನಿಗಳು ವಿಯೆಟ್ನಾಂ, ಕಾಂಬೋಡಿಯಾ ಕಡೆ ಹೋಗುವ ಬದಲು ನಮ್ಮತ್ತ ಬರಬೇಕೆಂದರೆ ಈಗ ಶಾಲೆಗೆ ಹೋಗುತ್ತಿರುವ ಮಕ್ಕಳಿಗೆ ಉತ್ಕೃಷ್ಟ ಶಿಕ್ಷಣ ಸಿಗಬೇಕು. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿ ಸೂಕ್ತ ಉದ್ಯೋಗಾವಕಾಶ ಕಲ್ಪಿಸಬೇಕು. ಸ್ವಯಂಚಾಲಿತ ಯಂತ್ರಗಳ ಬಳಕೆ ಹೆಚ್ಚುತ್ತ ಹೋಗುತ್ತಿರುವಾಗ ಶ್ರಮದ ದುಡಿಮೆಗೂ ಹೊಸ ಹೊಸ ಮಾರ್ಗಗಳನ್ನು ಶೋಧಿಸಬೇಕು.

ಆಗಲೂ ಸವಾಲು ಕಠಿಣವಾಗುತ್ತ ಹೋಗಲಿದೆ. ತಾಪಮಾನದ ವೈಪರೀತ್ಯ ಹೆಚ್ಚುತ್ತ ಹೋದಂತೆಲ್ಲ ಕೃಷಿ ದುಡಿಮೆಯಲ್ಲಿ ಹೈರಾಣಾಗಿ ನಗರಕ್ಕೆ ವಲಸೆ ಬರುವವರ ಸಂಖ್ಯೆಯೂ ಹೆಚ್ಚುತ್ತದೆ. ಅಥವಾ ಇದ್ದುದರಲ್ಲಿ ಸುಲಭವೆಂದು ವಾಣಿಜ್ಯ ಬೆಳೆಗಳಿಗೆ ಶರಣು ಹೋಗುತ್ತಾರೆ. ಅಥವಾ ಬಿಸಿಲು ಮಳೆಯನ್ನೇ ಮಾರಾಟಕ್ಕಿಡುತ್ತಾರೆ. ಅಂಥ ಎಂಥ ಕಾಲ ಬಂದರೂ ಆಹಾರೋತ್ಪಾದನೆ ಕುಂಠಿತವಾಗದಂತೆ, ನೆಲಜಲ ಬರಡಾಗದಂತೆ ನೋಡಿಕೊಳ್ಳಬೇಕಿದೆ.

ಬಂಡವಾಳಶಾಹಿ ಆರ್ಥಿಕತೆಯ ಮೂಲ ಸಮಸ್ಯೆ ಏನು ಗೊತ್ತೆ? ಜನಸಂಖ್ಯೆಯ ಏರಿಕೆಗಿಂತ ಭೋಗದಾಹದ ಏರಿಕೆ ಹೆಚ್ಚುತ್ತ ಹೋಗುತ್ತದೆ. ಅದನ್ನು ಪೂರೈಸುವ ಮೇಲಾಟದಲ್ಲಿ ಪೃಥ್ವಿಯ ಸಂಪತ್ತು ಬರಿದಾಗುತ್ತ, ಅಸಮಾನತೆ ಹೆಚ್ಚುತ್ತ ಹೋಗುತ್ತದೆ. ಅದನ್ನು ಪ್ರಶ್ನಿಸುವವರನ್ನು ಹತ್ತಿಕ್ಕಲೆಂದು ಪ್ರಜಾಪ್ರಭುತ್ವಕ್ಕೂ ಮಾಧ್ಯಮಗಳಿಗೂ ಲಗಾಮು ಹಾಕಲು ಹೊರಟರೆ, ಆಗಎರ್ಲಿಕ್ ಕಂಡ ದುಃಸ್ವಪ್ನ ('ಅಲ್ಲಿಗೆ ಮುಗಿಯಿತು ಕತೆ') ನಿಜವಾದೀತು.

ಈಗ ನಮಗೆ ಗಾಂಧೀಜಿ ನೆನಪಾಗಬೇಕಿದೆ. 'ಎಲ್ಲರ ಆಸೆಗಳನ್ನು ಪೂರೈಸುವಷ್ಟು ಕ್ಷಮತೆ ಈ ಭೂಮಿಗಿದೆ; ಆದರೆ ಎಲ್ಲರ ದುರಾಸೆಗಳನ್ನಲ್ಲ' ಎಂದು ಆ ತಾತ ಅಂದೇ ಹೇಳಿದ ಮಾತು ಇಂದಿನ ಮೊಮ್ಮಕ್ಕಳ ಮನಕ್ಕಿಳಿಯುವಂತೆ ಮಾಡಬೇಕಿದೆ.

ತಿದ್ದುಪಡಿ

ಏಪ್ರಿಲ್ 16ರ 'ಭಾನುವಾರದ ಪುರವಣಿ'ಯಲ್ಲಿ ಶೇಕ್ಸ್‌ಪಿಯರ್ ಕುರಿತ ಲೇಖನದಲ್ಲಿ 1916ರಂದು ಅವರು ಕಾಲವಾದರೆಂದು ಪ್ರಕಟವಾಗಿತ್ತು. ಇದು 1616 ಎಂದು ಇರಬೇಕಿತ್ತು.

–ಸಂ

ರಾಜ್ ಭಾವಗಳ ಕೊಲಾಜ್


ಏಪ್ರಿಲ್ 24 ರಾಜ್‌ಕುಮಾರ್ ಹುಟ್ಟಿದ ದಿನ. ಅವರು ಅಗಲಿದ ಮೇಲೆ ರಾಜ್ಯದ ಪ್ರಮುಖ ಕಲಾವಿದರು ರಚಿಸಿದ ಕಲಾಕೃತಿಗಳು ಇಂದಿಗೂ ಕಾಡುತ್ತವೆ. ಅವುಗಳ ಝಲಕ್ ಇದು...



ರವಿಕುಮಾರ್ ಕಾಶಿ ವಿರಚಿತ ರಾಜ್ ಕಲಾಕೃತಿ



ಎಂ. ಶಾಂತಾಮಣಿ ಕಲ್ಪನೆಯ ರಾಜ್ ವರ್ಣಚಿತ್ರ



ವಿ.ಟಿ. ಕಾಳೆ ಅವರು ಮೂಡಿಸಿದ ರಾಜ್ ಕಲಾಕೃತಿ

ಜಗನ್ನಾಥ ಪ್ರಕಾಶ್ ಎನ್.

ನೈಜ ಅಭಿನಯದಿಂದ ನೋಡುಗರ ಮನದಾಳದಲ್ಲಿ ಅಚ್ಚೊತ್ತಿದ ಅಪ್ರತಿಮ ಕಲಾವಿದ ರಾಜ್‌ಕುಮಾರ್.

ರಂಗಭೂಮಿಯಿಂದ ಶುರುವಿಟ್ಟು ಸಿನಿಮಾ ಪರದೆವರೆಗೂ ನಡೆದುಬಂದ ರಾಜ್ ಪಯಣ ಅಚ್ಚರಿಗಳ ಆಗರ. ಬಹುಮುಖ ಪ್ರತಿಭೆಯ ಅವರು ತಾವು ಅಭಿನಯಿಸಿದ ವಿವಿಧ ಪಾತ್ರಗಳ ಪರಕಾಯ ಪ್ರವೇಶ ಮಾಡಿ ಪ್ರೇಕ್ಷಕರನ್ನು ಮುದಗೊಳಿಸಿದವರು.

ಚಿತ್ರರಂಗವಲ್ಲದೆ ಕನ್ನಡ ನಾಡಿನ ಸಾಂಸ್ಕೃತಿಕ ರಾಯಭಾರಿಯಂತಿದ್ದ ರಾಜ್ ತಮ್ಮ ಸರಳ ಜೀವನ, ಸುಸಂಸ್ಕೃತ ನಡವಳಿಕೆಯಿಂದಲೂ ಜನರ ಮೇಲೆ ಪ್ರಭಾವ ಬೀರಿದ್ದ ಅಪರೂಪದ ಕಲಾವಿದ. ಐದು ದಶಕಗಳಿಗೂ ಹೆಚ್ಚಿನ ಕಾಲ 200ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದ ರಾಜ್ ನಮ್ಮಿಂದ ಕಣ್ಮರೆಯಾಗಿ ವರ್ಷಗಳೇ ಉರುಳಿದರೂ ಅವರ ನೆನಪು ಈಗಲೂ ಹಸಿರು.

ರಾಜ್‌ಕುಮಾರ್ ಅಗಲಿದ ಬೆನ್ನಲ್ಲೇ ಅವರ ನೆನಪುಗಳನ್ನು ಕುಂಚದಲ್ಲಿ ಹಿಡಿದಿಡುವ ಯತ್ನಕ್ಕೆ ತಮ್ಮ 'ಅನಿಕೇತನ' ಸಾಂಸ್ಕೃತಿಕ ವೇದಿಕೆಯಿಂದ ಐ.ಎಂ. ವಿಠ್ಠಲಮೂರ್ತಿ ಮುಂದಾಗಿ, ಇಪ್ಪತ್ತಕ್ಕೂ ಹೆಚ್ಚು ಕಲಾವಿದರು ರಾಜ್ ಅವರ ಭಾವಭಂಗಿಗಳನ್ನು ಕ್ಯಾನ್‌ವಾಸ್‌ನಲ್ಲಿ ಅರಳಿಸುವಲ್ಲಿ ಯಶಕಂಡರು. ಹಿಂದೆಯೇ ಆ ಚಿತ್ರ ಕೃತಿಗಳ ಪ್ರದರ್ಶನವೂ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಟ್ಟಿತ್ತು.

ಜೆ.ಎಂ.ಎಸ್. ಮಣಿ, ಎಚ್.ಎ. ಅನಿಲ್‌ಕುಮಾರ್, ವಿ.ಜಿ. ಅಂದಾನಿ, ಶಾಂತಾಮಣಿ, ಎಂ.ಸಿ. ಚೆಟ್ಟಿ, ವಿ.ಟಿ. ಕಾಳೆ, ರವಿಕುಮಾರ್ ಕಾಶಿ, ಜೆ.ಎಸ್. ಖಂಡೇರಾವ್, ಎನ್. ಮರಿಶಾಮಾಚಾರ್ ಹೀಗೆ ಹಲವು ಖ್ಯಾತನಾಮ ಕಲಾವಿದರು ಚಿತ್ರಿಸಿರುವ ರಾಜ್ ಬದುಕಿನ ಪಯಣ ಕುರಿತ ಚಿತ್ರ ಕಲಾಕೃತಿಗಳು ಅನಿಕೇತನದ ಸುಪರ್ದಿಯಲ್ಲಿವೆ.

ಪೌರಾಣಿಕ, ಸಾಮಾಜಿಕ, ಧಾರ್ಮಿಕ, ಬಾಂಡ್ ಶೈಲಿ ಹೀಗೆ ಹಲವು ಬಗೆಯ ಚಿತ್ರಗಳಲ್ಲಿ ರಾಜ್ ವಹಿಸಿದ ಪಾತ್ರಗಳನ್ನು ಬಸವರಾಜ ಮುಸಾವಳಗಿ ತಮ್ಮ ಕೃತಿಯಲ್ಲಿ ಹಿಡಿದಿಟ್ಟರೆ, ಎಂ.ಜಿ. ದೊಡ್ಡಮನಿ ಅವರು ರಾಜ್‌ರ ಸರಳತೆಯನ್ನು ದಾಖಲಿಸಿದ್ದಾರೆ.

ಬೇಡರ ಕಣ್ಣಪ್ಪ ಚಿತ್ರದಿಂದ ಈವರೆಗೆ ಗಮನಾರ್ಹವೆನ್ನಿಸಿದ ರಾಝ್ ಚಿತ್ರಗಳ ಸಂಕಲನವನ್ನು ವಿ.ಟಿ. ಕಾಳೆ ತಮ್ಮ ಕೃತಿಯಲ್ಲಿ ಚಿತ್ರಿಸಿದ್ದಾರೆ.

ಎಮ್ಮೆ ಹಾಡು, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಮುಂತಾದ ಜನಪ್ರಿಯ ಹಾಡುಗಳೂ, ಅವರ ಹಲವು ಚಿತ್ರಗಳ ಸನ್ನಿವೇಶಗಳೂ ಚಿತ್ರಕಲಾ ಕೃತಿಗಳಲ್ಲಿ ಮೂಡಿಬಂದಿವೆ.

ಕಲಾವಿದರು ವಿವಿಧ ಮಾಧ್ಯಮಗಳಲ್ಲಿ ಚಿತ್ರಕೃತಿಗಳನ್ನು ಚಿತ್ರಿಸಿದ್ದಾರೆ. ಜಲವರ್ಣ, ತೈಲವರ್ಣದ ಜತೆಗೆ ಡಿಜಿಟಲ್ ಸ್ಪರ್ಶವೂ ಇಲ್ಲಿದೆ. ಕೆಲವು ಮಿಶ್ರಕಲೆಗಳೂ ಗಮನ ಸೆಳೆಯುವಂತಿವೆ.

ಜನರಿಂದಲೇ ಮೇಲೆ ಬಂದ ರಾಜ್ ಅವರ ಕೃತಿಗಳನ್ನು ಇನ್ನೊಮ್ಮೆ ಪ್ರದರ್ಶನ ಏರ್ಪಡಿಸಿ, ಜನರತ್ತ ಕೊಂಡೊಯ್ಯಲು ಅವನ್ನು ಡಾ.ರಾಜ್‌ಕುಮಾರ್ ನೆನಪಿನ ಟ್ರಸ್ಟ್‌ಗೆ ನೀಡುವ ಇರಾದೆ 'ಅನಿಕೇತನ'ದ ಐ.ಎಂ. ವಿಠ್ಠಲಮೂರ್ತಿ ಅವರದು.

ಮುನ್ನೋಟ 23-04-2023 ರಿಂದ 29-04-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗ ದೊರೆಯುವ ಸಂದರ್ಭವಿದೆ. ಹೊಸ ಯೋಜನೆಯನ್ನು ಆರಂಭಿಸುವುದಕ್ಕೆ ಮುನ್ನ ಹಳೆ ಯೋಜನೆಗಳನ್ನು ಪೂರ್ಣಗೊಳಿಸಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಖರ್ಚಿನಲ್ಲಿ ಮಿತಿ ಇಟ್ಟುಕೊಳ್ಳುವುದು ಬಹಳ ಮುಖ್ಯ. ಅತಿಯಾದ ಆತ್ಮಾಭಿಮಾನ ಒಳ್ಳೆಯದಲ್ಲ. ಕಬ್ಬಿಣದ ವ್ಯಾಪಾರಿಗಳಿಗೆ ವ್ಯಾಪಾರ ಉತ್ತಮವಾಗಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆಸ್ತಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಮನೆಯವರೊಡನೆ ಚರ್ಚಿಸಿ ತೆಗೆದುಕೊಳ್ಳಿರಿ. ಕೆಲವರಿಗೆ ಜೀವನೋಪಾಯಕ್ಕೆ ಬದಲಿ ಆಶ್ರಯಗಳು ದೊರೆಯಬಹುದು. ವಿದ್ಯಾರ್ಥಿಗಳು ಹೆಚ್ಚು ಶ್ರಮ ಹಾಕಿ ಓದಲೇಬೇಕಾದ ಪರಿಸ್ಥಿತಿ ಇರುತ್ತದೆ. ನಿಮ್ಮಲ್ಲಿರುವ ಜ್ಞಾನಶಕ್ತಿಯು ಹೊರಬರುವ ಕಾಲ ಸಮೀಪದಲ್ಲಿದೆ. ನಿಮ್ಮ ಹಿರಿಯರ ಮಾತನ್ನು ಅನುಸರಿಸುವುದರಿಂದ ನಿಮಗೆ ಒಳಿತಾಗುವುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ದಾಖಲಾತಿಗಳನ್ನು ನಿರ್ವಹಣೆ ಮಾಡುತ್ತಿರುವವರು ಹೆಚ್ಚು ಎಚ್ಚರವಹಿಸಿರಿ. ಅಮೂಲ್ಯ ದಾಖಲೆಗಳು ಕಳ್ಳತನ ಆಗಬಹುದು. ಕಚೇರಿಯಲ್ಲಿ ಬಹಳ ಚುರುಕಾಗಿ ಕೆಲಸ ಮಾಡುವಿರಿ. ಅನುಕೂಲಕ್ಕೆ ತಕ್ಕಂತೆ ಹೊಸ ಕೆಲಸಗಳು ದೊರೆಯುತ್ತವೆ. ಕುಟುಂಬದಲ್ಲಿನ ಹಿರಿಯರು ನಿಮ್ಮ ಸಹಾಯಕ್ಕೆ ನಿಲ್ಲುತ್ತಾರೆ. ಸಮಾಜ ಸೇವೆಯನ್ನು ಮಾಡಲು ಸಾಕಷ್ಟು ಉತ್ಸುಕರಾಗಿರುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ರಾಜಕೀಯ ನಾಯಕರು ತಮ್ಮ ಆಶ್ವಾಸನೆಗಳಿಂದ ಜನರನ್ನು ಮರುಳು ಮಾಡಬಹುದು. ಅನಗತ್ಯವಾಗಿ ಜಗಳದ ನಡುವೆ ಮಧ್ಯಸ್ಥಿಕೆ ವಹಿಸಲು ಹೋಗಬೇಡಿರಿ. ಬರಹಗಾರರಿಗೆ ಸ್ವಲ್ಪ ಆದಾಯ ಹೆಚ್ಚುತ್ತದೆ. ಸಹ ಕಲಾವಿದರುಗಳಿಗೆ ಹೆಚ್ಚು ಅವಕಾಶಗಳು ದೊರೆತು ಆದಾಯ ಹೆಚ್ಚುತ್ತದೆ. ಕೆಲಸದ ಒತ್ತಡವನ್ನು ಸಮರ್ಥವಾಗಿ ನಿರ್ವಹಿಸಿರಿ. ಹಣದ ಒಳಹರಿವು ಮಧ್ಯಮ ಗತಿಯಲ್ಲಿರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ತಂದೆಯಿಂದ ಆಸ್ತಿ ಬರಬಹುದು. ಅವರ ವ್ಯವಹಾರ, ವ್ಯಾಪಾರಗಳಲ್ಲಿ ನಿಮಗೆ ಪಾಲು ದೊರೆಯುತ್ತದೆ. ಸಂಸಾರ ನಿರ್ವಹಣೆಗಾಗಿ ಹೆಚ್ಚು ಹಣ ವ್ಯಯ ಮಾಡುವಿರಿ. ಗೃಹ ಕೈಗಾರಿಕೆ ನಡೆಸುವವರಿಗೆ ಮನೆಯವರ ಸಹಕಾರ ಸಂಪೂರ್ಣ ದೊರೆಯುತ್ತದೆ. ಪ್ರೇಮಿಗಳು ತಮ್ಮ ಪ್ರೇಮದ ವಿಷಯವನ್ನು ಹಿರಿಯರಿಗೆ ತಿಳಿಸುವುದು ಬಹಳ ಒಳ್ಳೆಯದು. ಭೂ ವ್ಯವಹಾರವನ್ನು ಮಾಡುವವರಿಗೆ ಸಾಕಷ್ಟು ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಸಿವಿಲ್ ಕಂಟ್ರಾಕ್ಟರ್‌ಗಳಿಗೆ ಬಾಕಿ ಇದ್ದ ಹಣ ಈಗ ಸಿಗುತ್ತದೆ. ಚಿತ್ರ ಕಲಾವಿದರು ಕಲೆಯಿಂದ ಹಣ ಸಂಪಾದನೆ ಕೂಡ ಮಾಡಬಹುದು. ಧನ ಆದಾಯವು ಮಂದಗತಿಯಲ್ಲಿರುತ್ತದೆ. ವೃತ್ತಿಯಲ್ಲಿ ಹೊಸ ಶತ್ರುಗಳು ಬರಬಹುದು. ಹೊಸ ಸಾಲಗಳು ದೊರೆಯುತ್ತವೆ ಮತ್ತು ಹಳೆಯ ಸಾಲಗಳನ್ನು ತೀರಿಸಲು ಕಾಲಾವಕಾಶ ದೊರೆಯುತ್ತದೆ. ಉಸಿರಾಟದ ತೊಂದರೆ ಇರುವವರು ಸಾಕಷ್ಟು ಎಚ್ಚರವಹಿಸಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಕೃಷಿ ಸಂಬಂಧಿತ ಕಾರ್ಯಗಳು ವೇಗವನ್ನು ಪಡೆದುಕೊಳ್ಳುತ್ತವೆ. ಔದ್ಯೋಗಿಕ ಕ್ಷೇತ್ರದಲ್ಲಿ ಸ್ವಲ್ಪ ಅಡಚಣೆಯನ್ನು ಎದುರಿಸಬೇಕಾದೀತು. ಗುರು ಹಿರಿಯರ ಮಾತುಗಳನ್ನು ಅಲ್ಲಗಳೆಯುವುದು ಸರಿಯಲ್ಲ. ಧನ ಆದಾಯವು ನಿರೀಕ್ಷೆಯ ಹತ್ತಿರಕ್ಕೆ ಬರುತ್ತದೆ. ಹೈನುಗಾರಿಕೆ ಮಾಡುವವರಿಗೆ ಸಾಕಷ್ಟು ಅಭಿವೃದ್ಧಿ ಇದೆ. ಕುಕ್ಕುಟ ಸಾಕಾಣಿಕೆ ಮಾಡುವವರಿಗೆ ಲಾಭವಿರುತ್ತದೆ. ಕೃಷಿಕರಿಗೆ ಹೆಚ್ಚಿನ ಅಭಿವೃದ್ಧಿ ಇದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಬಂದ ಅವಕಾಶಗಳನ್ನು ಸದುಪಯೋಗ ಮಾಡಿಕೊಳ್ಳಿರಿ. ಕೆಲವು ಸ್ನೇಹಿತರು ನಿಮ್ಮನ್ನು ದಾರಿ ತಪ್ಪಿಸಲು ಪ್ರಯತ್ನಪಡುವರು; ಅಂಥವರ ಬಗ್ಗೆ ಎಚ್ಚರದಿಂದಿರಿ. ಆದಾಯಕ್ಕಿಂತ ಖರ್ಚು ಹೆಚ್ಚಾಗುವ ಸಾಧ್ಯತೆ ಇದೆ. ಹಣ ನಿರ್ವಹಣೆ ಸರಿಯಾಗಿ ಮಾಡಿರಿ. ಮೀನುಗಾರರು ನೀರಿನಲ್ಲಿ ಜಾಗೃತರಾಗಿ ಇರಬೇಕಾದ ಅಗತ್ಯವಿದೆ. ಸಾರ್ವಜನಿಕ ಸ್ಥಳಗಳಲ್ಲಿ ಗೌರವವನ್ನು ಕಾಪಾಡಿಕೊಳ್ಳಿರಿ. ಕೃಷಿ ಭೂಮಿ ದೊರೆಯುವ ಸಂದರ್ಭವಿದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆಗುಹೋಗುಗಳನ್ನು ಅರಿತು ಹೊಸ ವ್ಯವಹಾರಗಳಿಗೆ ಕೈಹಾಕಿರಿ. ನಿಮ್ಮ ಸ್ನೇಹಿತರು ನಿಮಗೆ ಸೂಕ್ತ ಹಾಗು ಉತ್ತಮ ಸಲಹೆಯನ್ನು ಕೊಡುವರು. ಧನ ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳನ್ನು ಪರಾಕ್ರಮದಿಂದ ಎದುರಿಸಿ ಅವರನ್ನು ಮೂಲೆಗುಂಪು ಮಾಡುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚು ಯಶಸ್ಸು ಇರುತ್ತದೆ. ಭಾಷೆಗಳನ್ನು ಕಲಿಯುತ್ತಿರುವವರಿಗೆ ಹೆಚ್ಚು ಅವಕಾಶಗಳು ಒದುಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹಿಡಿದ ಕೆಲಸಗಳನ್ನು ಸಾಧಿಸುವಲ್ಲಿ ಯಶಸ್ವಿ ಆಗುವಿರಿ. ಸಂಘ ಸಂಸ್ಥೆಗಳಿಂದ ಗೌರವ ಸನ್ಮಾನ ದೊರೆಯಬಹುದು. ಚಿಲ್ಲರೆ ದಿನಸಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ಹೂವಿನ ಬೆಳೆಗಾರರಿಗೆ ಹೆಚ್ಚಿನ ಲಾಭವಿರುತ್ತದೆ. ದೇಹದಲ್ಲಿ ಉಷ್ಣಾಂಶ ಏರಿಕೆಯಿಂದ ಆರೋಗ್ಯ ತಪ್ಪಬಹುದು. ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುಂಚೆ ಕಾದು ನೋಡುವ ತಂತ್ರವನ್ನು ಅನುಸರಿಸಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿರಿಯರಿಗೆ ಸಂಘ ಸಂಸ್ಥೆಗಳಲ್ಲಿ ಅಧಿಕಾರಗಳು ದೊರೆಯುತ್ತವೆ. ವೃತ್ತಿಯಲ್ಲಿರುವವರಿಗೆ ತೃಪ್ತಿಕರವಾದ ಆದಾಯ ಇರುತ್ತದೆ. ಕಾನೂನು ವಿದ್ಯಾರ್ಥಿಗಳಿಗೆ ಹೆಚ್ಚು ಪರಿಶ್ರಮದಿಂದ ಯಶಸ್ಸು ದೊರೆಯುತ್ತದೆ. ಉನ್ನತ ಅಧಿಕಾರಿಗಳ ದಿಢೀರ್ ಭೇಟಿಯಿಂದ ಕೆಲಸ ಕಾರ್ಯಗಳಲ್ಲಿ ಏರುಪೇರಾಗಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಹೆಚ್ಚಿನ ಓದು ಅಥವಾ ಉದ್ಯೋಗ ಸೇರುವ ಬಗ್ಗೆ ಸ್ನೇಹಿತರೊಡನೆ ವಿಚಾರ ವಿನಿಮಯ ಮಾಡಿರಿ. ಸರ್ಕಾರಿ ಗುತ್ತಿಗೆ ಮಾಡುವವರಿಗೆ ಹೊಸ ಗುತ್ತಿಗೆ ಕೆಲಸ ದೊರೆಯುತ್ತದೆ. ಹಾಗಾಗಿ ಆದಾಯದಲ್ಲಿ ಹೆಚ್ಚಳವಿರುತ್ತದೆ. ನೃತ್ಯ ಅಭ್ಯಾಸವನ್ನು ಮಾಡುವವರಿಗೆ ಮತ್ತು ಹೇಳಿಕೊಡುವವರಿಗೆ ಹೆಚ್ಚಿನ ಸಂಪಾದನೆ ಇರುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯ ಮಟ್ಟಕ್ಕಿರುತ್ತದೆ. ಕಬ್ಬಿಣದ ವ್ಯಾಪಾರಿಗಳಿಗೆ ಲಾಭವಿರುತ್ತದೆ.

ಪದಬಂಧ 2786



ಮೇಲಿನಿಂದ ಕೆಳಕ್ಕೆ

1. ದೇಶಕ್ಕೆ ತೋರುವ ಶ್ರದ್ಧೆ ಪ್ರೇಮ 4
2. ಸಾವಿನ ದೇವತೆಗೆ ಸರಿತೂಗುವ ಮಾಪಕ 5
3. ಮೂರು ಪಟ್ಟಣಗಳಿಗೆ ಯಮನಂತಿರುವ ಶಿವ 5
4. ಮತ್ತೆ ಮತ್ತೆ ಘೋರವೆನಿಸುವ ನರಕದ ಅನುಭವ 4
6. ಸದಾ ಅರಳುತ್ತಿರುವ ಪ್ರವೃತ್ತಿ 3
10. ಉಪ್ಪು ನೀರಿನ ಸಾಗರ 3
12. ಬೃಂದಾವನದ ರಾಧಾ ಪ್ರಿಯಕರ ತಲೆಕೆಳಗು 3
13. ಸಂಪಿಗೆ ಹೂವಿನಂತಹ ಪುಣ್ಯ ಕ್ಷೇತ್ರ 5
14. ಆಡಳಿತ ಸೂತ್ರ ಹಿಡಿಯಲು ಸರ್ಕಸ್ ಮಾಡುವವ 5
15. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಪ್ರಜೆಗಳ ಆಳಾಗಿ ದುಡಿಯುವವ 5
16. ನೂಲು ಸೀರೆಯ ನಂಟಿನಂತೆ ಮಾತಾ ಪುತ್ರಿ 5
18. ಪಾರ್ವತಿಯಿಂದ ಜನ್ಮ ತಳೆದವ ತಲೆಕೆಳಗು 3

ಎಡದಿಂದ ಬಲಕ್ಕೆ

1. ಕವಿಗಳಿಗೆ, ಸಾಹಿತಿಗಳಿಗೆ ಅರಸನ ಕಾಲದಲ್ಲಿ ಸಿಗುತ್ತಿದ್ದ ಆಸರೆ 4
3. ಪ್ರತಿ ದಿನ ಹಗಲಿನಲ್ಲಿ ಅಭಯ ಹಸ್ತ ತೋರುವವ 4
5. ಮನಸ್ಸಿನಲ್ಲಿ ನಡೆಯುವ ಪ್ರಕ್ರಿಯೆಯ ವಿಶ್ಲೇಷಣೆ ಮತ್ತದರ ವಿಶೇಷ ಅರಿವು 5
7. ದ್ರವದಂತೆ ಹರಿವ ಶ್ರದ್ಧೆ, ಪ್ರೇಮ, ಗೌರವ 4
8. ಟಿಕೇಟು ಸಿಗದಿದ್ದಕ್ಕೆ ಧಿಡೀರನೆ ಪಕ್ಷ ಬದಲಿಕೆ 4
9. ಬ್ರಹ್ಮ ಕಲ್ಪನೆಯಿಂದ ಹುಟ್ಟಿದ ಮಗಳು ಸರಸ್ವತಿ 5
10. ಹಾಡುವ ಕೋಗಿಲೆ ಬಯಸದ ಬಿರುದು ಮರ್ಯಾದೆ 3
11. ಇವನು ಒಳ್ಳೆಯವನಲ್ಲ, ದಾರಿ ತಪ್ಪಿದವ 3
13. ಬೆಳದಿಂಗಳು ಹರಡುವವನ ಜೊತೆ ನಕ್ಷತ್ರ ರಾಶಿ 4
15. ಉತ್ತರದ 'ಶೇರಾವಾಲಿ'ಗೆ ಜಯಕಾರ 4
17. ರಾಷ್ಟ್ರದ ಗಡಿ ರಕ್ಷಣೆಯ ಪಣ ತೊಟ್ಟವನಿಗೆ ಗೆಲುವು 5
19. ಧೀರ್ಘ ಪಡೆದ ಚಿಕ್ಕ ಕತೆ 4
20. ಅನ್ಯರಿಗಾಗಿ ಕೆಲಸ ಮಾಡುವ ಮಂದಿಯ ಬಿಡದಿ 4
21. ಅಮೂಲ್ಯ ಹರಳನ್ನು ನೀಡಿ ಸತ್ಕಾರ 5
22. ಜೇನಿನಂತೆ ಮಧುರ ಅಂತಃಪುರದ ಅರಸಿ 4
23. ಮಸುಕಿರುವ ಮಬ್ಬಿನಲಿ ಕೃಪೆ ತೋರೆಂದು ಬೆಳಕಿಗೆ ಕವಿಯ ಆಹ್ವಾನ 4

ಪದಬಂಧ ಉತ್ತರ -2785

ಮೇಲಿಂದ ಕೆಳಕ್ಕೆ

1.ಜನಮೇಜಯ 2.ರಘುರಾಮಾ 3.ಹರಿದ್ರ 4.ಗರುಡಧ್ವಜ 6.ವಿರಾಜಪೇಟೆ 8.ಕನಕ 10.ಕಲಿವಾಹನ 12.ರುಜುಸಂಗ್ರಹ 14.ಗಣಕ 15.ಸಂಜೆಕಾಲೇಜು 17. ಮಹೋತ್ತಮ 19.ಲಾವಣಿ

ಎಡದಿಂದ ಬಲಕ್ಕೆ

1.ಜಗದ್ದೋದ್ಧಾರ 3. ಹಸಿರು 4.ಗರಿ 5. ಮೇಧಾವಿ 7.ರುದ್ರನಾಟಕ 9. ರಾಜಮಾರ್ತಾಂಡ 10.ಕಟುಕ 11.ಪೇಪರು 13.ಜಗಲಿ 14.ಗಲಾಟೆ 16.ಸಂಗ್ರಾಮಸಿಂಹ 18.ಕರಮೂಲಾಗ್ರ 20.ನರಕಾ 21.ವಹ 22.ಕರುಣೆ 23.ಮಡ್ಕೇರಿಮಂಜು

ಬೇಸಿಗೆ ಶಿಬಿರಗಳು ಮಕ್ಕಳಲ್ಲಿ ಹಲವು ಕ್ಷೇತ್ರಗಳ ಆಸಕ್ತಿಯ ರೆಕ್ಕೆ–ಪುಕ್ಕ ಮೂಡಿಸುತ್ತವೆ. ನಮ್ಮ ನಾಡಿನಲ್ಲಿ ನಡೆಯುವ ಅಂತಹ ಕೆಲವು ಪ್ರಮುಖ ಶಿಬಿರಗಳ ರೂಪುರೇಷೆ ಆಸಕ್ತಿಕರವಾಗಿದೆ.





ಕುಪ್ಪಳಿಯಲ್ಲಿ ನಡೆಯುತ್ತಿರುವ 'ಮಳೆಬಿಲ್ಲು' ಮಕ್ಕಳ ರಜಾ ಶಿಬಿರದಲ್ಲಿ ಡೊಳ್ಳು ಕುಣಿತದ ತರಬೇತಿ.



ಮೈಸೂರಿನ ನಟನ ಸಂಸ್ಥೆಯಿಂದ ನಡೆಯುತ್ತಿರುವ 'ರಜಾ ಮಜಾ' ಬೇಸಿಗೆ ಶಿಬಿರದ ಒಂದು ನೋಟ

ಬೇಸಿಗೆ ಶಿಬಿರ; ಅನೇಕತೆಯ ಆಗರ

ಸ್ಮಿತಾ ಶಿರೂರ

ಕಲರವ

ಶಾಲೆ, ಹೋಮ್‌ವರ್ಕ್, ಟ್ಯೂಷನ್‌ಗಳಿಗೆ ಒಂದು ಅಲ್ಪವಿರಾಮ ಬಿದ್ದ ಸಮಯವಿದು. ವಾರ್ಷಿಕ ಪರೀಕ್ಷೆ ಬರೆದು ಫಲಿತಾಂಶ ಬಂದ ತಕ್ಷಣ ಪೋಷಕರ ಚಿಂತೆ...ಮಕ್ಕಳನ್ನು ರಜೆಯಲ್ಲಿ ಏನು ಮಾಡುವುದು? ಅಜ್ಜ–ಅಜ್ಜಿ, ಸಂಬಂಧಿಕರ ಮನೆಗಳಿಗೆ ಹೋಗಲು ಇಚ್ಛೆ ಇಲ್ಲದಿರುವವರು, ಅವಕಾಶ ಇಲ್ಲದಿರುವವರಿಗೆ ಅಲ್ಲಲ್ಲಿ ನಡೆಯುವ 'ಬೇಸಿಗೆ ರಜಾ ಶಿಬಿರ'ಗಳೇ ಮಕ್ಕಳ ಮನರಂಜಿಸುವ ತಾಣವಾಗಿ ಕಾಣುತ್ತವೆ.

ಎಂಥ ರಜಾ ಶಿಬಿರ ಮಕ್ಕಳಿಗೆ ಉತ್ತಮ ಎಂಬ ಪ್ರಶ್ನೆಯಂತೂ ಎಲ್ಲ ಪೋಷಕರಿಗೂ ಇದ್ದೇ ಇರುತ್ತದೆ. ಕಲೆ–ನೃತ್ಯ–ನಾಟಕ–ಚಿತ್ರಕಲೆ ಸೇರಿ ವಿವಿಧ ವಿಷಯಗಳನ್ನು ಸೇರಿಸಿ ನಡೆಸುವ ಶಿಬಿರ ಹೆಚ್ಚಿನ ಎಲ್ಲ ಕಡೆ ಕಂಡುಬರುತ್ತಿದೆ. ಒಂದೇ ವಿಷಯದ ಮೇಲೆ ಮಾಡುವ ಶಿಬಿರಗಳೂ ಈಚೆಗೆ ಟ್ರೆಂಡ್ ಆಗಿವೆ. ಮೈಸೂರಿನ ನಟನ ಸಂಸ್ಥೆಯ 'ರಜಾ ಮಜಾ' ಶಿಬಿರ, ಕುಪ್ಪಳಿಯಲ್ಲಿ ನಡೆಯುವ 'ಮಳೆಬಿಲ್ಲು' ಬೇಸಿಗೆ ಶಿಬಿರ, ತುಮಕೂರು ವಿಜ್ಞಾನ ಕೇಂದ್ರ ನಡೆಸುವ ಬೇಸಿಗೆ ವಿಜ್ಞಾನ ಶಿಬಿರ, ಮೈಸೂರು ಮೃಗಾಲಯದಿಂದ ನಡೆಯುವ 'ಬೇಸಿಗೆ ಶಿಬಿರ', ಹಾವಂಜೆಯಲ್ಲಿ ನಡೆಯುವ 'ಬಾಲ–ಲೀಲಾ' ಶಿಬಿರಗಳು ಮಕ್ಕಳಿಗೆ ಮರೆಯದ ಅನುಭವ ಬುತ್ತಿಯನ್ನು ಕಟ್ಟಿಕೊಡುತ್ತವೆ. ರಂಗಾಯಣ ನಡೆಸುವ ಬೇಸಿಗೆ ಶಿಬಿರಕ್ಕೆ ಮಕ್ಕಳು ಧಾವಿಸಿ ಬರುವಂತಾಗುತ್ತದೆ. ರಾಜ್ಯದಾದ್ಯಂತ ಇಂಥದ್ದೇ ಹಲವು ಶಿಬಿರಗಳು ತಮ್ಮ ವಿಷಯ–ವಸ್ತುಗಳಿಂದಾಗಿ ಮನೆಮಾತಾಗಿವೆ.


ಕುವೆಂಪು ಅವರ ಜನ್ಮಸ್ಥಳ ಕುಪ್ಪಳಿಯ ಸುಂದರ ಪರಿಸರದಲ್ಲಿ ಮಕ್ಕಳಿಗಾಗಿ ನಡೆಯುವ 'ಮಳೆಬಿಲ್ಲು' ಬೇಸಿಗೆ ಶಿಬಿರ ಪೂರ್ಣವಾಗಿ ರಂಗ ಚಟುವಟಿಕೆಯನ್ನೇ ಕೇಂದ್ರವಾಗಿರಿಸಿಕೊಂಡಿರುವ ಅಪರೂಪದ ಕಾರ್ಯಕ್ರಮ. ಸಾಗರದ ಎಂ.ವಿ. ಪ್ರತಿಭಾ ಅವರು 11 ವರ್ಷಗಳಿಂದ ನಡೆಸಿಕೊಂಡು ಬಂದಿರುವ ಈ ಶಿಬಿರಕ್ಕೆ ರಾಜ್ಯದಾದ್ಯಂತ ಮನ್ನಣೆಯಿದೆ.



ಎಂ.ವಿ. ಪ್ರತಿಭಾ

'ಕುವೆಂಪು ಸಾಹಿತ್ಯ ಆಧಾರಿತ ನಾಟಕಗಳನ್ನು ಹೇಳಿಕೊಡುತ್ತೇವೆ. ಈ ಬಾರಿ 'ನನ್ನ ಗೋಪಾಲ' ಹಾಗೂ 'ಕಿಂದರ ಜೋಗಿ' ನಾಟಕಗಳಿವೆ. ಡೊಳ್ಳುಕುಣಿತದ ತರಬೇತಿಯೂ ಇದೆ. ಮಕ್ಕಳು ಸ್ವತಂತ್ರ ಮನೋಭಾವ ರೂಢಿಸಿಕೊಳ್ಳಲಿ, ಮೊಬೈಲ್, ಟಿ.ವಿಗಳ ಆಕರ್ಷಣೆಯಿಂದ ಹೊರಬರಲಿ, ಬದುಕಿನಲ್ಲಿ ಶಿಸ್ತು ಕಲಿಯಬೇಕೆನ್ನುವವರು, ಕನ್ನಡದ ಬಗ್ಗೆ ಆಸ್ಥೆ ಇರುವವರು, ಆಂಗ್ಲ ಮಾಧ್ಯಮದ ಮಧ್ಯೆ ಕನ್ನಡ ಕಳೆದು ಹೋಗದಿರಲಿ ಎಂಬ ಕಳಕಳಿ ಇರುವಂಥ ಹಲವರು ಶಿಬಿರಕ್ಕೆ ಮಕ್ಕಳನ್ನು ಕರೆತರುತ್ತಾರೆ. ನಾಟಕ ಕಲೆಯಲ್ಲಿ ಶಿಸ್ತು, ರಿಹರ್ಸಲ್, ಸಮಯ ಪಾಲನೆ, ಅಬ್ಸರ್ವೇಶನ್ ಪ್ರಮುಖ ಅಂಶಗಳು. ಇದನ್ನು ಕಲಿಯುವ ಮಕ್ಕಳು ಇದನ್ನು ತಮ್ಮ ಶೈಕ್ಷಣಿಕ ಬದುಕಿನಲ್ಲೂ ಅಳವಡಿಸಿಕೊಳ್ಳುತ್ತಾರೆ. ಮಕ್ಕಳಲ್ಲಿ ಚಿಂತನಾ ಸಾಮರ್ಥ್ಯವೂ ಬೆಳೆಯುತ್ತದೆ' ಎಂದು ಪ್ರತಿಭಾ ವಿವರಿಸಿದರು.

ಶಾಲೆಗಳಲ್ಲಿ ಯಾಂತ್ರಿಕವಾಗಿ ಕಲಿಯುವ ಮಕ್ಕಳನ್ನು ಸೃಜನಾತ್ಮಕವಾಗಿ ಯೋಚಿಸಿ ಕಾರ್ಯತತ್ಪರರಾಗುವಂತೆ ಮಾಡುತ್ತಿದೆ ತುಮಕೂರು ವಿಜ್ಞಾನ ಕೇಂದ್ರ. ಈ ಕೇಂದ್ರದವರು ಪ್ರತಿ ಬೇಸಿಗೆ ರಜೆಯಲ್ಲಿ ನಡೆಸುವ 'ಬೇಸಿಗೆ ವಿಜ್ಞಾನ ಶಿಬಿರ'ವು ವಿಜ್ಞಾನ ಜಗತ್ತಿನ ಕಡೆ ಮಕ್ಕಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗುತ್ತಿದೆ. 36ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶಿಬಿರದಲ್ಲಿ ಮಕ್ಕಳನ್ನು ಮೂಲವಿಜ್ಞಾನದ ಕಡೆ ಆಕರ್ಷಿಸುವುದು, ಸಂಶೋಧನಾ ಚಟುವಟಿಕೆಯಲ್ಲಿ ತೊಡಗಿಸುವುದು, ಪ್ರಶ್ನೆ ಮಾಡುವಂತೆ ಮಾಡುವುದಕ್ಕೆ ಆದ್ಯತೆ ನೀಡಲಾಗುತ್ತದೆ.



ಮಧುಸೂದನ್ ರಾವ್

'ಈ ಬಾರಿ ನಾವು 'ವ್ಯೋಮಯಾನ' ಎಂಬ ವಿಷಯವನ್ನು ಪ್ರಧಾನವಾಗಿರಿಸಿ ಶಿಬಿರ ಆಯೋಜಿಸಿದ್ದೇವೆ. ದೂರದರ್ಶಕದ ಮೂಲಕ ಆಕಾಶಕಾಯಗಳ ವೀಕ್ಷಣೆ ನಡೆಯಲಿದೆ. ಸಾವಯವ ತೋಟಕ್ಕೆ ಮಕ್ಕಳನ್ನು ಕರೆದೊಯ್ದು ಸಾವಯವ ಕೃಷಿಯ ಮಹತ್ವದ ಪ್ರಾತ್ಯಕ್ಷಿಕೆ ನೀಡಲಾಗುತ್ತದೆ. ಮಕ್ಕಳಿಂದಲೂ ಕೆಲವು ಕೃಷಿ ಕೆಲಸಗಳನ್ನು ಮಾಡಿಸಲಾಗುತ್ತದೆ. ಹಕ್ಕಿಗಳ ಬಗ್ಗೆ ಅಧ್ಯಯನ ನಡೆಸಲಾಗುತ್ತದೆ. ಮಕ್ಕಳಿಂದಲೇ ಆಟಿಕೆ, ವಿಜ್ಞಾನದ ಮಾದರಿಗಳನ್ನು ಮಾಡಿಸಲಾಗುತ್ತದೆ' ಎಂದು ವಿಜ್ಞಾನ ಕೇಂದ್ರದ ಮಧುಸೂದನ್ ರಾವ್ ಕೆ.ಎನ್. ತಿಳಿಸಿದರು.

ವನ್ಯಜೀವಿಗಳು, ಅರಣ್ಯ, ಪರಿಸರ, ಹಕ್ಕಿ, ಕೀಟಗಳು ಇವುಗಳ ಬಗ್ಗೆ ಸವಿವರವಾಗಿ ನೋಡುತ್ತ ಆಹ್ಲಾದಕರ ಅನುಭವ ಒದಗಿಸುವ ಬೇಸಿಗೆ ಶಿಬಿರವನ್ನು ಮೈಸೂರಿನ ಚಾಮರಾಜೇಂದ್ರ ಮೃಗಾಲಯ ಕಳೆದ 30 ವರ್ಷಗಳಿಂದ ಆಯೋಜಿಸುತ್ತಿದೆ. 'ಮೃಗಾಲಯದಲ್ಲಿ ಪ್ರಾಣಿಗಳನ್ನು ಯಾವ ರೀತಿ ಸಾಕಲಾಗುತ್ತದೆ, ಪ್ರಾಣಿಗಳ ವರ್ತನೆ, ವನ್ಯಪ್ರಾಣಿಗಳ ರಕ್ಷಣೆ' ಹೀಗೆ ಆಸಕ್ತಿಕರ ವಿಷಯಗಳ ಲೋಕ ಇಲ್ಲಿ ತೆರೆದುಕೊಳ್ಳುತ್ತದೆ. ಮೃಗಾಲಯದ ಆವರಣ, ಕಾರಂಜಿಕೆರೆ, ಮ್ಯೂಸಿಯಂಗಳಿಗೆ ಮಕ್ಕಳನ್ನು ಕರೆದೊಯ್ಯಲಾಗುತ್ತದೆ' ಎಂದು ಮೃಗಾಲಯದ ಸಿಇಒ ಅಜಿತ್ ಕುಲಕರ್ಣಿ ವಿವರಿಸಿದರು.

ಅಪರೂಪಕ್ಕೆಂಬಂತೆ ಕೆಲವೇ ಹಳ್ಳಿಗಳಲ್ಲಿ ಬೇಸಿಗೆ ಶಿಬಿರಗಳು ನಡೆಯುತ್ತಿವೆ. ಉಡುಪಿ ನಗರದಿಂದ 20 ಕಿ.ಮೀ. ದೂರದಲ್ಲಿರುವ ಹಾವಂಜೆ ಗ್ರಾಮದಲ್ಲಿ ಭಾವನಾ ಫೌಂಡೇಶನ್ ಪ್ರತಿ ವರ್ಷ ನಡೆಸುವ ಬೇಸಿಗೆ ಶಿಬಿರ 'ಬಾಲ ಲೀಲಾ' ವಿಷಯ ವೈಶಿಷ್ಟ್ಯದಿಂದ ಗಮನ ಸೆಳೆಯುತ್ತದೆ.

'ನಶಿಸಿ ಹೋಗುತ್ತಿರುವ ಕಲೆಗಳ ಬಗ್ಗೆ ನಾವು ವಿಶೇಷ ಮಹತ್ವ ನೀಡುತ್ತೇವೆ. ನಮ್ಮ ಬಳಿ 1,500ರಷ್ಟು ದೇಸಿ ಆಟಗಳ ಖಜಾನೆಯಿದೆ. ನೆನಪಿನ ಶಕ್ತಿ ಹೆಚ್ಚಿಸುವ ಇಂಥ ಆಟಗಳ ಬಗ್ಗೆ ಇಂದಿನ ಮಕ್ಕಳಿಗೆ, ಪೋಷಕರಿಗೆ ಗೊತ್ತೇ ಇಲ್ಲ. ಇಂಥ ಕೆಲವು ದೇಸಿ ಆಟಗಳ ಕಲಿಕೆ ಇಲ್ಲಿ ಸಾಧ್ಯ. ಕಳೆದ ವರ್ಷ ಬಿದಿರಿನ ಬುಟ್ಟಿಗಳನ್ನು ಮಾಡುವುದನ್ನು ಕಲಿಸಲಾಗಿತ್ತು. ಮಕ್ಕಳಿಗೆ ಹಾವುಗಳ ಬಗ್ಗೆ ಭಯ ಹೋಗಲಾಡಿಸಲು ಹಾಗೂ ಅವುಗಳನ್ನು ಹತ್ತಿರದಿಂದ ತೋರಿಸುವುದಕ್ಕಾಗಿ ಉರಗತಜ್ಞರನ್ನು ಕರೆಸಿ ಪ್ರಾತ್ಯಕ್ಷಿಕೆ ಕೊಡಿಸಲಾಗುತ್ತದೆ' ಎಂದು ವಿವರಿಸುತ್ತಾರೆ ಶಿಬಿರ ನಡೆಸುವ ವಿಶು ರಾವ್. ಸಹೋದರ ಜನಾರ್ದನ್ ಹಾವಂಜೆ ಹಾಗೂ ಉದಯ ಕೊಟ್ಯಾನ್ ಅವರೊಂದಿಗೆ ಇವರು ನಡೆಸುವ ಈ ಶಿಬಿರದ ಮತ್ತೊಂದು ವೈಶಿಷ್ಟ್ಯವೆಂದರೆ ಬಟ್ಟೆಗಳ ಮೇಲೆ ಪ್ರಿಂಟ್ ಹಾಕುವ ಕಲೆ, ಸೀರೆಗಳ ಮೇಲೆ ವರ್ಲಿ ಆರ್ಟ್ ಮೂಡಿಸುವ ಕಲೆಯನ್ನು ಪ್ರಖ್ಯಾತ ಕಲಾವಿದರಿಂದಲೇ ಕೊಡಿಸುವುದು. ಮುಖಕ್ಕೆ ಬಣ್ಣ ಮಾಡುವುದೂ ಮತ್ತೊಂದು ಆಕರ್ಷಣೆ.

'ನಾವು ಚಿಕ್ಕವರಿರುವಾಗ ಬೇಸಿಗೆ ರಜೆ ಎಂದರೆ ಅಜ್ಜ–ಅಜ್ಜಿ ಮನೆಯ ವಾಸ, ಊರು ಸುತ್ತುವುದು, ಮರ ಹತ್ತುವುದು ಹೀಗೆ ವಿವಿಧ ಚಟುವಟಿಕೆ ಇರುತ್ತಿತ್ತು. ಈಗ ವಿಭಕ್ತ ಕುಟುಂಬ, ಮೊಬೈಲ್, ಟಿ.ವಿ...ಪೋಷಕರಿಬ್ಬರೂ ಉದ್ಯೋಗಸ್ಥರಾದ ಕಾರಣ ಮಕ್ಕಳು ರಜಾ ಅವಧಿಯಲ್ಲಿ ಒಂಟಿಯಾಗುತ್ತಾರೆ. ಹೀಗಾಗಿ ಬೇಸಿಗೆ ರಜಾ ಶಿಬಿರಗಳು ಮಕ್ಕಳಿಗೆ ಅಗತ್ಯ ಎನಿಸಿವೆ. ಇಂಥ ಶಿಬಿರಗಳು ಮಕ್ಕಳಿಗೆ ಜೀವನ ಮೌಲ್ಯ ಕಲಿಸಿದರೆ, ಸಂಬಂಧಗಳ ಮಹತ್ವವನ್ನು ಅರಿವು ಮಾಡಿಕೊಟ್ಟು ಅರ್ಥಪೂರ್ಣವಾದರೆ ಖಂಡಿತವಾಗಿಯೂ ಮಕ್ಕಳ ಜೀವನದಲ್ಲಿ ಮಹತ್ವಪೂರ್ಣ ಪಾತ್ರ ವಹಿಸುತ್ತವೆ' ಎನ್ನುತ್ತಾರೆ ಅವರು.

ನಾಟಕ, ಚಿತ್ರಕಲೆ, ನೃತ್ಯ, ಸ್ವಿಮಿಂಗ್, ವಿವಿಧ ಕ್ರೀಡೆಗಳ ಬಗ್ಗೆ ರಜಾ ಶಿಬಿರಗಳು ಎಲ್ಲೆಡೆ ನಡೆಯುವುದು ಸಾಮಾನ್ಯವಾಗಿವೆ. ಈಚೆಗೆ ರೊಬೊಟಿಕ್ಸ್, ಧಾರ್ಮಿಕ ಪಠಣಗಳು, ಶ್ಲೋಕ ಕಂಠಪಾಠ ಸೇರಿದಂತೆ ಹಲವು ವಿಷಯಗಳ ಮೇಲೆ ಸಮರ್ ಕ್ಯಾಂಪ್‌ಗಳು ಮಕ್ಕಳನ್ನು, ಪೋಷಕರನ್ನು ಆಕರ್ಷಿಸುತ್ತಿವೆ.

ರಂಗಶಿಬಿರಗಳ ಔಚಿತ್ಯ

ಮನೋವೈದ್ಯೆಯಾದ ನನಗಂತೂ ನಾಟಕವೆಂದರೆ ಮಕ್ಕಳ ಮಟ್ಟಿಗೆ ಅದೊಂದು 'Empathy Gum'- 'ಆತ್ಮಾನುಭೂತಿಯ ವ್ಯಾಯಾಮ ಶಾಲೆ'. ಇಮೋಜಿಗಳ, ಚ್ಯಾಟ್ ಜಿಪಿಟಿಗಳ ಯುಗದಲ್ಲಿ ಬದುಕುವ ನಮ್ಮ ಮಕ್ಕಳಿಗೆ ದೈಹಿಕ ವ್ಯಾಯಾಮದಷ್ಟೇ ಬೇಕಾಗಿರುವುದು ಭಾವನೆಗಳ ವ್ಯಾಯಾಮ. ಮಕ್ಕಳ ರಂಗಭೂಮಿಯ ಬಗೆಗಿರುವ ಜಾಗತಿಕ ವೈಜ್ಞಾನಿಕ ಅಧ್ಯಯನಗಳು ನೂರಾರು. ಅವೆಲ್ಲವೂ ರಂಗಕಲೆ, ಜೀವನಕಲೆಯನ್ನು ಸುಲಭವಾಗಿ, ಸುಲಲಿತವಾಗಿ, ಸುಭದ್ರವಾಗಿ ಕಲಿಸುತ್ತವೆ ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಿವೆ. ಆದರೂ ಚುನಾವಣೆಗಳಿಗೆ ಕೋಟಿಗಟ್ಟಲೆ ಹಣ ವ್ಯಯಿಸುವ ನಮ್ಮ ಪ್ರಜಾಪ್ರಭುತ್ವ ಮಕ್ಕಳಲ್ಲಿ ರಂಗಶಿಕ್ಷಣವನ್ನು ಸುಲಭಸಾಧ್ಯ ಮಾಡುವುದಿಲ್ಲ. ಅಪ್ಪ-ಅಮ್ಮ ಅಂಕಗಳ ಹಿಂದೆ ಓಡುವುದನ್ನು ಕ್ಷಣ ಕಾಲ ನಿಲ್ಲಿಸಿ 'ನಾಟಕ ನೋಡೋಣ' ಎಂದು ಮಕ್ಕಳನ್ನು ಕರೆದೊಯ್ಯುವುದಿಲ್ಲ. ಬೇಸಿಗೆ ಶಿಬಿರಗಳ ಮೂಲಕ ಇಂಥೆಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕಲು ಮಕ್ಕಳೊಂದಿಗೆ ಹಿರಿಯರೂ ಪ್ರಯತ್ನಿಸಬಹುದಲ್ಲವೆ?

–ಡಾ.ಕೆ.ಎಸ್. ಪವಿತ್ರ

ರಂಗಗೀತೆ, ನಾಟಕ ಕೇಂದ್ರಿತ 'ರಜಾ ಮಜಾ'

ಮೈಸೂರಿನ ನಟನ ಸಂಸ್ಥೆ ನಡೆಸುವ 'ರಜಾ ಮಜಾ' ಶಿಬಿರ ರಂಗಭೂಮಿ ಕೇಂದ್ರಿತವಾಗಿದೆ. 20 ವರ್ಷಗಳಿಂದ ನಡೆಯುತ್ತಿರುವ ಈ ಶಿಬಿರದಲ್ಲಿ ಈ ವರ್ಷ ಬಂದಿರುವ ಮಕ್ಕಳ ಸಂಖ್ಯೆ 300.

'ಕಂಸಾಳೆ, ವೀರಗಾಸೆ, ಪಟದ ಕುಣಿತ, ಡೊಳ್ಳು ಕುಣಿತ, ಮಲ್ಲಕಂಬ ಸೇರಿದಂತೆ ಎಲ್ಲ ಪ್ರಕಾರಗಳ ಜಾನಪದ ನೃತ್ಯಗಳ ತರಬೇತಿಗೆ ಆದ್ಯತೆ ನೀಡಲಾಗಿದೆ. ಇದನ್ನು ಕಲಿಯುವುದರಿಂದ ಮಕ್ಕಳ ಶಕ್ತಿ ವೃದ್ಧಿಯಾಗುತ್ತದೆ. ಕಾರಂತ, ಕಂಬಾರ, ಕಾರ್ನಾಡ ಪರಂಪರೆಯ ನಾಟಕಗಳ ಕಲಿಕೆಯಿಂದ ಮಕ್ಕಳಲ್ಲಿ ಕನ್ನಡ ಪದಗಳ ಬಳಕೆ ವೃದ್ಧಿಯಾಗುತ್ತದೆ' ಎಂದು ನಟನ ಸಂಸ್ಥೆಯ ಮಂಡ್ಯ ರಮೇಶ್ ತಿಳಿಸಿದರು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿಗಮ್ಮತ್ತು

ನಿನ್ನ ಹುಟ್ಟಿದ ದಿನಾಂಕ ನಾ ಹೇಳಲೆ?

ಇಲ್ಲಿ ಕೊಟ್ಟಿರುವ ದಿನಾಂಕಗಳ ಪಟ್ಟಿಯಲ್ಲಿ ನಿನ್ನ ಹುಟ್ಟಿದ ದಿನಾಂಕ ಯಾವ ಯಾವ ಸಾಲಿನಲ್ಲಿದೆ ಎಂದು ಹೇಳಿದರೆ ನಾನು ನಿನ್ನ ಹುಟ್ಟಿದ ದಿನಾಂಕ ಹೇಳುತ್ತೇನೆ. ಅದು ಹೇಗೆ ಎನ್ನುತ್ತೀಯಾ? ಹೀಗೆ ನೋಡು. ನೀನು ಯಾವ ಯಾವ ಸಾಲಿನಲ್ಲಿದೆ ಎಂದು ಹೇಳುತ್ತೀಯೋ ಆ ಸಾಲಿನ ಮೊದಲ ಸಂಖ್ಯೆ ಕೂಡಿಸಿ ಹೇಳಿದರೆ ಅದೇ ನಿನ್ನ ಹುಟ್ಟಿದ ದಿನಾಂಕವಾಗಿರುತ್ತದೆ.

ಪ್ರತಿ ಸಾಲಿನ ಮೊದಲ ಅಂಕಿಗಳು ಇವು

1	2	4	8	16

ಈಗ ನೀನು ಒಂದನೇ ಸಾಲು, ಮೂರನೇ ಸಾಲು ಹಾಗೂ ಐದನೇ ಸಾಲಿನಲ್ಲಿ ಹುಟ್ಟಿದ ದಿನಾಂಕವಿದೆ ಎಂದರೆ ಅವುಗಳ ಗುಪ್ತ ಸಂಖ್ಯೆಗಳು 1,4,16

ಇವುಗಳನ್ನು ಕೂಡಿಸಿದರೆ: $1+4+16=21$

ನಿನ್ನ ಹುಟ್ಟಿದ ದಿನಾಂಕ–21

ದಿನಾಂಕಗಳ ಪಟ್ಟಿ

1	2	4	8	16
29	3	28	28	28
3	6	29	29	29
5	7	5	9	17
7	10	6	10	18
9	11	7	11	19
11	14	12	12	20
13	15	13	13	21
15	18	14	14	22
17	19	15	15	23
19	22	20	24	24
21	23	21	25	25
23	26	22	26	26
25	27	23	27	27
27	30	30	30	30
31	31	31	31	31

ಜಾಣ ಒಗಟುಗಳು

1. ಅಟ್ಟಂ ಭಟ್ಟಂ ಅರಣ್ಯದಾಗ ಶೆಟ್ಟಿ ಅಂಗಡಿ ಇಟ್ಟಾನ
2. ಈಟೀಟ ಪೋರ, ಸರಕಾರಕ್ಕ ಹೋಗಿ ಸಹಿ ಮಾಡಿ ಬರತಾನ
3. ಗುಡ್ಡದ ಹಿಂದ ಗುಣಕಲ್ಲ ಬಿದ್ದೈತಿ
4. ಗುಡಿಯೆಲ್ಲಾ ಕರ್ರಗ ದೇವರಿದ್ದಾನೆ ಬೆಳ್ಳಗ
5. ಗುಡ್ಡದ ಮ್ಯಾಲೆ ಗುಡಾರ ಹಾಸ್ಯಾರ, ಆರವಲ್ಲದು
6. ಗುಡ್ಡದಾಗ ಅಡ್ಡ ಬಿದ್ದೈತಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ವಾಕ್ಯಗಳಲ್ಲಿ ಒಂದೊಂದು ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಲವು ಪ್ರಮುಖ ಸ್ಥಳನಾಮ ಹುಡುಕಿ

1. ಕೊನೆಗೂ ಅಪ್ಪ ಸಂಬಳ ಕೊಟ್ಟನು
2. ಮಹಾನುಭಾವರು ವೇದಿಕೆ ಏರಿ ಕುಳಿತರು
3. ಕೊನೆಗೂ ಬಡವರ ಗುಡಿಸಲು ಉಳಿದವು
4. ಆಹಾರ ಸಮಸ್ಯೆ ನಮ್ಮಲ್ಲಿಲ್ಲ
5. ಬ್ಯಾಸಗಿ ದಿವಸಕ್ಕ ಗಡಗಿ ನೀರ ಚೊಲೊ
6. ಬೇಸಾಯದಿಂದಲೇ ಗಳಿಸಲು ನಿರ್ಧಾರ ಮಾಡಿದ
7. ಈತ ಕೋತಂಬರಿಯನ್ನು ಕೊಡಲಾರ
8. ವಿದ್ಯಾರ್ಥಿಗಳಿಗೆ ಗಣಿತದ ಭಯ ಹೋಗಲಾಡಿಸಬೇಕು

ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1 ತಮ್ಮನಭಾರ = ______

2 ಅಡಿಗಲ್ಲು ಸಮಸ್ಯೆ = ______

3 ಯಜಮಾನ = ______

4 ಗಿಣಿರಾಮ = ______

ಡಶ್ಶಗ ಚಕ್ಕು ಕೀಶ್ರುಷ್ಟು ಕಥೆಯ — ಮಂಗಮಾಯ

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು





ಪುಟಾಣಿ ಪದಬಂಧ

					ಸುಳಿವು
1	_	_	ಗ	ರ	ಗರ ಬಡಿದಿದ್ದರೂ ಮಾಡಿದ ಸಂಭ್ರಮ
2	_	_	ಹಿ	ತ	ಹಿತ ಬಯಸುವ ಈತ ವಿಧಿ ವಿಧಾನಗಳನ್ನು ನೆರವೇರಿಸುವಾತ
3	_	_	ಮಾ	ನ	ಮಾನ ಉಳಿಸಿಕೊಂಡ ಒಡೆಯ
4	_	_	ಗಿ	ರಿ	ಗಿರಿಯಲ್ಲಿ ಸಿಗುವ ಒಂದು ಸೊಪ್ಪಿನ ಪಲ್ಲೆ
5	_	_	ದ	ರ	ದರ ಕೇಳುವ ಈತ ಒಡ ಹುಟ್ಟಿದಾತ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1.ಆರೋಹಣ, 2.ಪೀಕದಾನಿ, 3.ಬಹುಮಾನ, 4.ಪ್ರಯೋಜನ, 5.ಕಾರವಾರ

ಅದಲು ಬದಲು

1.ಜನನ ಮರಣ, 2.ಮಹಾರಾಜರು, 3.ಆಸ್ತಿ ವಿವರ, 4.ಗಡಿಯಾರ

ಜಾಣಪದ ಆಟ

1.ಬಡಿಸಲು, 2.ಮರಿ ಕೋತಿ, 3.ಸರಿ ಮಾಡು, 4.ಸರಕಾರ 5.ಗಣವಂತ, 6.ಪನಿವಾರ

ಹೊಂದಿಸು ಆನಂದಿಸು

1-J, 2-D, 3-H, 4-F, 5-E, 6-C, 7-G, 8-B, 9-A, 10-I

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಅಪೂರ್ವ ದೇ. ತಳವಾರ್, ಬಾಗಲಕೋಟೆ



ನಂದಿತಾ ಎಸ್.ಎಂ., ಬೆಂಗಳೂರು



ಶ್ರೀನಿಧಿ ಶಂಕರಗೌಡ ಪಾಟೀಲ, ಬಾಗಲಕೋಟೆ

ಅಕ್ಷಯ ನೆಮ್ಮದಿಯ ಸೂತ್ರ ಎಲ್ಲರಿಗೂ ಸಿಗಲಿ

• ನವೀನ ಗಂಗೋತ್ರಿ

ವೈಶಾಖಮಾಸದ ಶುಕ್ಲಪಕ್ಷದ ತೃತೀಯಾ ತಿಥಿಯನ್ನು 'ಅಕ್ಷಯ ತೃತೀಯಾ' ಎಂದು ಆಚರಿಸುವುದು ಸನಾತನ ಸಂಪ್ರದಾಯ. ಯುಗಾದಿಯನ್ನು ಹೊಸವರ್ಷವಾಗಿ ಆಚರಿಸುವ ಚಾಂದ್ರಮಾನ ವ್ಯವಸ್ಥೆಯಲ್ಲಿ ವೈಶಾಖವು ಎರಡನೆಯ ಮಾಸ. ಅಕ್ಷಯ ತೃತೀಯಾ ದಿನದಂದು ಕೊಂಡ ಬಂಗಾರ, ಆ ದಿನ ಮಾಡಿದ ಹಣದ ಹೂಡಿಕೆ ಅಕ್ಷಯವಾಗಿ (ಎಂದೆಂದೂ ಕಡಿಮೆಯಾಗದೆ) ವೃದ್ಧಿಯನ್ನು ಹೊಂದುತ್ತಲೇ ಇರುತ್ತದೆ ಎನ್ನುವ ನಂಬುಗೆಯೊಂದಾಗಿ ಈ ದಿನದಂದು ಬಂಗಾರ ಮತ್ತು ಬೆಳ್ಳಿಯನ್ನು ಕೊಳ್ಳುವ ಪರಿಪಾಠ ಈಚಿನ ವರ್ಷಗಳಲ್ಲಿ ವ್ಯಾಪಕವಾಗುತ್ತಿದೆ. ಬಂಗಾರ ಕೊಳ್ಳುವುದಕ್ಕಾಗಿ ಅಕ್ಷಯ ತೃತೀಯಾ ದಿನವನ್ನೇ ಕಾಯುವವರೂ ಇದ್ದಾರೆ. ಇವೆಲ್ಲ ಆರ್ಥಿಕ ಸಂಚಲನವನ್ನು ಸೃಷ್ಟಿಸುವ ಈ ಹಬ್ಬಕ್ಕೆ ಪೌರಾಣಿಕವಾದ ಅಥವಾ ಐತಿಹಾಸಿಕವಾದ ಹಿನ್ನೆಲೆ ಇರಲೇಬೇಕಷ್ಟೆ.

ಭಾರತೀಯ ಜೀವನವನ್ನು ನಾನಾ ವಿಧವಾಗಿ ಪ್ರಭಾವಿಸಿದ ಮಹಾಭಾರತ ಕಥೆಯಲ್ಲಿ ಅಕ್ಷಯ ತೃತೀಯಾ ತಿಥಿ ಮಹತ್ತ್ವ ಪಡೆದುಕೊಳ್ಳುತ್ತದೆ. ವನವಾಸದಲ್ಲಿರುವ ಪಾಂಡವರು ತಮ್ಮ ದೈನಂದಿನ ಆಹಾರಕ್ಕಾಗಿ ಮತ್ತು ಅತಿಥಿಸತ್ಕಾರಕ್ಕೆ ಬೇಕಾಗುವ ಆಹಾರವಸ್ತುವಿಗಾಗಿ ನಿಶ್ಚಿತ ವ್ಯವಸ್ಥೆಯಿಲ್ಲದೆ ಪರಿತಪಿಸುತ್ತಿದ್ದ ಹೊತ್ತಿನಲ್ಲಿ ಶ್ರೀಕೃಷ್ಣನು ಎಂದೆಂದೂ ಬರಿದಾಗದ ಆಹಾರಪಾತ್ರೆಯೊಂದನ್ನು ಯಾಜ್ಞಸೇನಿಗೆ ಕರುಣಿಸುತ್ತಾನೆ. ಮುಂದೆ, ವನವಾಸದಲ್ಲಿದ್ದಷ್ಟೂ ಕಾಲ ಅಕ್ಷಯವಾದ ಆಹಾರವನ್ನು ಕರುಣಿಸಿದ್ದು 'ಇದೇ ಅಕ್ಷಯ ಪಾತ್ರೆ'. ಈ ಪಾತ್ರೆಯನ್ನು ಶ್ರೀಕೃಷ್ಣನು ಅನುಗ್ರಹಿಸಿದ ದಿನವು ವೈಶಾಖಮಾಸದ ಶುಕ್ಲಪಕ್ಷದ ತೃತೀಯಾ ತಿಥಿಯಾಗಿತ್ತು ಎನ್ನುವುದು ಐತಿಹ್ಯ. ಭಾರತದ ಉತ್ತರ ಭಾಗದಲ್ಲಿರುವ ಗಂಗೋತ್ರಿ ಮತ್ತು ಯಮುನೋತ್ರಿಯ ಯಾತ್ರಾ ಸ್ಥಳಗಳು ಈ ದಿನದಂದು ತೆರೆಯಲ್ಪಡುತ್ತವೆ.

'ಇದಲ್ಲದೆ, ಶಾಪದಿಂದಾಗಿ ಭಸ್ಮಗೊಂಡ ತನ್ನ ಪೂರ್ವಿಕರಿಗೆ ಸದ್ಗತಿಯನ್ನು ಕೊಡಿಸುವುದಕ್ಕಾಗಿ ಭಗೀರಥನು ಮಹಾಪ್ರಯತ್ನದಿಂದ ಗಂಗೆಯನ್ನು ಒಲಿಸಿಕೊಳ್ಳಲಾಗಿ



ಆಕೆ ದೇವಲೋಕದಿಂದ ಭೂಲೋಕಕ್ಕೆ ಬಂದ ಕಥೆಯು ಪ್ರಸಿದ್ಧವಾಗಿದೆಯಷ್ಟೆ. ಇಲ್ಲಿ ಗಂಗೆಯು ಭೂಮಿಗೆ ಅವತರಿಸಿದ ದಿನವೂ ಅಕ್ಷಯ ತೃತೀಯಾ ದಿನವೇ. ಶಾಸ್ತ್ರ ಮತ್ತು ಶಸ್ತ್ರ ಇವೆರಡರ ಅಪೂರ್ವಸಂಗಮವಾದ ಪರಶುರಾಮರು ಅವತಾರವೆತ್ತಿದ್ದು ಈ ದಿನದಂದೇ. ಬಸವ ಸಿದ್ಧಾಂತವನ್ನು ಪ್ರತಿಪಾದಿಸಿದ ಬಸವೇಶ್ವರರ ಜಯಂತಿಯೂ ಇದೇ ದಿನದಂದು.


ಕಡುಬಡವನಾದ ಸುದಾಮನು ತನ್ನ ಬದುಕಿನ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕೆ ಮಿತ್ರನಾದ ಶ್ರೀಕೃಷ್ಣನಲ್ಲಿಗೆ ತೆರಳಿ ನಿವೇದಿಸಿಕೊಂಡ ದಿನವೂ ಇದೇ. ಹಾಗಾಗಿಯೇ ಮುಷ್ಟಿ ಅವಲಕ್ಕಿಗೆ ಪ್ರತಿಯಾಗಿ ಆತನಿಗೆ ಸಂಪತ್ತಿನ ಅನುಗ್ರಹ ಅಕ್ಷಯವಾದುದಾಗಿತ್ತು. ಹೀಗೆ ಈ ದಿನವನ್ನು ವಿಶೇಷವೆಂದು ಪರಿಗಣಿಸುವುದಕ್ಕೆ ಕಾರಣವಾದ ಹಲವಾರು ಸಂಗತಿಗಳು 'ಇತಿಹಾಸ-ಪುರಾಣ'ಗಳಲ್ಲಿ ಇವೆ. ಜೈನ ಮತಾವಲಂಬಿಗಳಿಗೂ ಈ ದಿನ ಪವಿತ್ರ ದಿನವೇ. ಅವರಲ್ಲಿ ಆದಿ ತೀರ್ಥಂಕರರಾದ ವೃಷಭದೇವ ತಮ್ಮ ಉಪವಾಸವನ್ನು ಕೊನೆಗೊಳಿಸಿ ಆಹಾರವನ್ನು ಸ್ವೀಕರಿಸಿದ ದಿನ ಅಕ್ಷಯ ತೃತೀಯಾ.

ಬದುಕಿನಲ್ಲಿ ಅಕ್ಷಯವಾಗಬೇಕಾದ ಸಂಗತಿಯೆಂದರೆ ಅದು ನೆಮ್ಮದಿ ಎಂಬ ದ್ರವ್ಯ. ಈ ನೆಮ್ಮದಿಯ ಮೂಲವು 'ಅರ್ಥ' ಎಂಬ ಪುರುಷಾರ್ಥವೇ ಆಗಿದೆ ಎನ್ನುವ ಗ್ರಹಿಕೆಯಲ್ಲಿ ಭೌತಿಕ ವಸ್ತುಗಳಲ್ಲಿ ನೆಮ್ಮದಿಯನ್ನು ಹುಡುಕುವುದು ನಮ್ಮ ಸಮಾಜದಲ್ಲಿ ಆಚರಣೆಗೆ ಬಂದಿದೆ. ಅಕ್ಷಯ ತೃತೀಯಾ ದಿನದಂದು ಬಹುಮೂಲ್ಯದ ವಸ್ತುಗಳಾದ ಬಂಗಾರ ಮತ್ತು ಬೆಳ್ಳಿಯನ್ನು ಕೊಳ್ಳುವುದಕ್ಕೆ ಇದುವೇ ಮೂಲ. ಈ ದಿನ ಕೊಂಡಿದ್ದು ಅಕ್ಷಯವಾಗುತ್ತದೆ ಎಂಬ ನಂಬಿಕೆ. ನಿಜವೆಂದರೆ ಯಾವುದನ್ನು ಕೂಡಿಡುತ್ತೇವೆಯೋ ಅದಲ್ಲ ಅಕ್ಷಯವಾಗುವುದು, ಬದಲಿಗೆ ಯಾವುದನ್ನು ದಾನ ಮಾಡುತ್ತೇವೆಯೋ ಅದು ಅಕ್ಷಯವಾಗುತ್ತದೆ ಎಂಬುದು ಶಾಸ್ತ್ರಗಳ ಮಾತು. ಹಾಗಾಗಿ ಅಕ್ಷಯ ತೃತೀಯಾ ದಿನದಂದು ಸಮಾಜದ ನಾನಾ ವಿಭಾಗಗಳಿಗೆ ದಾನಧರ್ಮಾದಿಗಳ ಮೂಲಕ ಸಹಾಯ ಮಾಡುವವರು ಇದ್ದೇ ಇದ್ದಾರೆ.

ಯಾವುದೇನೇ ಇದ್ದರೂ ವರ್ತಮಾನದಲ್ಲಿ ಅಕ್ಷಯತೃತೀಯಾ ದಿನವು ಭಾರತದ ಬಂಗಾರ ಮಾರುಕಟ್ಟೆಯನ್ನು ತೀವ್ರವಾದ ಸಂಚಲನಕ್ಕೆ ಒಡ್ಡುವ ದಿನವಾಗಿ ಬೆಳೆದಿದ್ದು ದಿಟ. ಭಾರತದ ಸ್ವರ್ಣಪ್ರಿಯತೆಗೆ ಇದೊಂದು ನಿದರ್ಶನವೂ ಹೌದು.

ದಾನ ಮಾಡುವುದಾದರೂ ಸರಿ, ಬಂಗಾರವನ್ನು ಕೊಳ್ಳುವುದಾದರೂ ಸರಿ - ಅಕ್ಷಯ ನೆಮ್ಮದಿಯ ಸೂತ್ರವೊಂದು ಈ ದಿನದ ನೆವದಲ್ಲಿ ಎಲ್ಲರಿಗೂ ದೊರೆಯುವಂತಾದರೆ ಅದು ಪರಮಭಾಗ್ಯ.

60 ಲಕ್ಷ ಡೋಸ್ ಕೋವೊವ್ಯಾಕ್ಸ್ ಸಿದ್ಧ: ಅದಾರ್ ಪೂನಾವಾಲಾ



ಪುಣೆ (ಪಿಟಿಐ): ದೇಶದಲ್ಲಿ ಈಗ ಪ್ರತಿ ದಿನವೂ 12 ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಕೋವೊವ್ಯಾಕ್ಸ್ ಲಸಿಕೆಯ 60 ಲಕ್ಷ ಡೋಸ್‌ಗಳನ್ನು ಪೂರೈಕೆಗೆ ಸಿದ್ಧಪಡಿಸಲಾಗಿದೆ ಎಂದು ಸೀರಂ ಕಂಪನಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅದಾರ್ ಪೂನಾವಾಲಾ ಅವರು ಹೇಳಿದ್ದಾರೆ.

'ಸದ್ಯ ದೇಶದಲ್ಲಿ ಕೋವಿಡ್ ಸಾಂಕ್ರಾಮಿಕವು ಗಂಭೀರ ಸ್ಥಿತಿ ತಲುಪಿಲ್ಲ. ಹಿರಿಯ ನಾಗರಿಕರು ಮುಂಜಾಗರೂಕತೆಗಾಗಿ ಬೂಸ್ಟರ್ ಡೋಸ್ ಪಡೆಯಬಹುದು. ಆದರೆ ಲಸಿಕೆ ಪಡೆಯಬೇಕೇ, ಬೇಡವೇ ಎಂಬುದು ಅವರ ಆಯ್ಕೆಗೆ ಬಿಟ್ಟಿದ್ದು. ಮುಂದಿನ ಎರಡು, ಮೂರು ತಿಂಗಳಲ್ಲಿ ನಾವು ಇಷ್ಟೇ ಪ್ರಮಾಣದಲ್ಲಿ ಕೋವಿಶೀಲ್ಡ್ ಲಸಿಕೆಯನ್ನೂ ತಯಾರಿಸಲಿದ್ದೇವೆ' ಎಂದು ಪೂನಾವಾಲಾ ಅವರು ಶನಿವಾರ ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

'ನಾವು ಕೋವೊವ್ಯಾಕ್ಸ್ ಲಸಿಕೆಯನ್ನು ಅಮೆರಿಕ ಮತ್ತು ಯೂರೋಪ್‌ಗಳಿಗೆ ಪೂರೈಸುತ್ತಿದ್ದೇವೆ. ಅಮೆರಿಕ ಮತ್ತು ಯೂರೋಪ್‌ಗಳಲ್ಲಿ ಮಾನ್ಯತೆ ಪಡೆದ ಭಾರತದ ಏಕೈಕ ಕೋವಿಡ್ ಲಸಿಕೆ ಇದಾಗಿದೆ. ಆದರೆ ಸದ್ಯ ಬೇಡಿಕೆ ಬಹಳ ಕಡಿಮೆ ಇದೆ' ಎಂದು ಅವರು ಹೇಳಿದರು.

ಈ ಮಧ್ಯೆ, ದೇಶದಲ್ಲಿ ಹೊಸದಾಗಿ 12,193 ಹೊಸ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 67,556ಕ್ಕೆ ಏರಿದೆ. 42 ಮಂದಿ ಮೃತಪಟ್ಟಿದ್ದಾರೆ. ಈ ಪೈಕಿ ಕೇರಳದಲ್ಲೇ 10 ಮಂದಿ ಕೊನೆಯುಸಿರೆಳೆದಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

'ಸಂಶೋಧನೆಗೆ ಇಸ್ರೊ ಒತ್ತು'

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಇನ್ನು ಮುಂದೆ ಬಾಹ್ಯಾಕಾಶ ಮತ್ತು ಸಂವಹನ ಕ್ಷೇತ್ರಕ್ಕೆ ಸಂಬಂಧಿಸಿದ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಿದೆ.

ಗುರುವಾರ ಪ್ರಕಟಿಸಲಾಗಿರುವ ನೂತನ 'ಭಾರತೀಯ ಬಾಹ್ಯಾಕಾಶ ನೀತಿ–2023' ರಲ್ಲಿ ಈ ವಿಷಯ ತಿಳಿಸಲಾಗಿದೆ.

ಈ ನೂತನ ನೀತಿಗೆ, ಭದ್ರತೆ ಮೇಲಿನ ಸಂಪುಟ ಸಮಿತಿಯು ಇದೇ 6ರಂದು ಅನುಮೋದನೆ ನೀಡಿತ್ತು.

'ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಅಗತ್ಯವಿರುವ ಸಾಧನಗಳ ತಯಾರಿಕೆ ಬದಲಾಗಿ ಇಸ್ರೊ ಇನ್ನು ಮುಂದೆ ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿ ತೊಡಗಲಿದೆ' ಎಂದು ಈ ನೂತನ ಬಾಹ್ಯಾಕಾಶ ನೀತಿಯಲ್ಲಿ ವಿವರಿಸಲಾಗಿದೆ.

ಹೊಸ ನೀತಿ ಪ್ರಕಾರ, ಸರ್ಕಾರೇತರ ಸಂಸ್ಥೆಗಳು (ಎನ್‌ಜಿಇ) ಇನ್ನು ಮುಂದೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬಾಹ್ಯಾಕಾಶ ಆಧಾರಿತ ಸಂವಹನ ಸೇವೆಗಳನ್ನು ಒದಗಿಸಬಹುದಾಗಿದೆ. ಈ ಸಂಸ್ಥೆಗಳು, ಸ್ವಂತ ಅಥವಾ ಗುತ್ತಿಗೆಗೆ ಪಡೆದ 'ಭೂಸ್ಥಿರ ಕಕ್ಷೆ' (ಜಿಎಸ್‌ಒ) ಮತ್ತು 'ಭೂಸ್ಥಿರವಲ್ಲದ ಕಕ್ಷೆ' (ಎನ್‌ಜಿಎಸ್‌ಒ) ಉಪಗ್ರಹ ವ್ಯವಸ್ಥೆಗಳ ಮೂಲಕ ಈ ಸೇವೆಗಳನ್ನು ಒದಗಿಸಬಹುದು.

ಭೂಮಿಗೆ ಸಮೀಪದ ಅಥವಾ ಕಡಿಮೆ ದೂರದಲ್ಲಿರುವ ಕಕ್ಷೆಗಳನ್ನು 'ಎನ್‌ಜಿಎಸ್‌ಒ' ಎನ್ನಲಾಗುತ್ತಿದೆ. ಈ ಕಕ್ಷೆಗಳಲ್ಲಿ ಸುತ್ತುವ ಉಪಗ್ರಹಗಳ ನೆರವಿನಿಂದ ಬ್ರಾಡ್‌ಬ್ಯಾಂಡ್ ಇಂಟರ್‌ನೆಟ್ ಸೇವೆಗಳನ್ನು ಒದಗಿಸಲಾಗುತ್ತದೆ.

ಟೆಲಿಮೆಟ್ರಿ, ನಿಗಾ ಮತ್ತು ನಿಯಂತ್ರಣದಂತಹ ಬಾಹ್ಯಾಕಾಶ ಸಾಧನಗಳ ಕಾರ್ಯಾಚರಣೆಗಾಗಿ ಭೂಕೇಂದ್ರಗಳನ್ನು ಸ್ಥಾಪಿಸಲು ಎನ್‌ಜಿಇಗಳಿಗೆ ಅವಕಾಶ ಇದೆ.

ಸಂವಹನ, ದೂರ ಸಂವೇದಿ ಮತ್ತು ಪಥದರ್ಶಕ ವ್ಯವಸ್ಥೆ ಸೇರಿದಂತೆ ವಿವಿಧ ಸೇವೆಗಳನ್ನು ಒದಗಿಸಲು ಅಗತ್ಯವಿರುವ ಬಾಹ್ಯಾಕಾಶ ನೌಕೆಗಳ ಅಭಿವೃದ್ಧಿ, ಉಡಾವಣೆ, ನಿರ್ವಹಣೆ ಸೇರಿದಂತೆ ಎಲ್ಲ ಹಂತಗಳ ಕಾರ್ಯಗಳನ್ನು ಕೈಗೊಳ್ಳಲು ಎನ್‌ಜಿಇಗಳಿಗೆ ಅನುಮತಿ ನೀಡಲಾಗುವುದು.

'ಈ ನೀತಿಯು, ಸಂವಹನ ಹಾಗೂ ಇತರ ವಿಚಾರಗಳ ಕುರಿತು ಬಾಹ್ಯಾಕಾಶ ಕ್ಷೇತ್ರದಲ್ಲಿ ಕೈಗೊಳ್ಳುವ ಚಟುವಟಿಕೆಗಳ ಬಗ್ಗೆ ಹೆಚ್ಚು ಸ್ಪಷ್ಟತೆಯನ್ನು ನೀಡುತ್ತದೆ' ಎಂದು ಇಸ್ರೊದ ಪ್ರಧಾನ ನಿರ್ದೇಶಕ ಲೆಫ್ಟಿನೆಂಟ್ ಜನರಲ್ ಎ.ಕೆ.ಭಟ್ ಹೇಳಿದ್ದಾರೆ.

'ಜಾಗತಿಕ ಮಟ್ಟದ ಸ್ಪರ್ಧೆಯನ್ನು ಎದುರಿಸಲು ಅಗತ್ಯವಿರುವ ಪರಿಸರ ನಿರ್ಮಾಣ ಹಾಗೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಸುಸ್ಥಿರ ಅಭಿವೃದ್ಧಿಗೆ ಈ ನೂತನ ನೀತಿಯು ವೇಗವರ್ಧಕವಾಗಿ ಕೆಲಸ ಮಾಡಲಿದೆ' ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಶ್ರೀನಿವಾಸ್ ವಿರುದ್ಧ ಆರೋಪ: ದತ್ತಾ ಉಚ್ಚಾಟನೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಶ್ರೀನಿವಾಸ್ ಬಿ.ವಿ. ಅವರ ಮೇಲೆ ಮಾನಸಿಕ ಕಿರುಕುಳ ನೀಡಿದ ಆರೋಪ ಹೊರಿಸಿದ್ದ ಅಸ್ಸಾಂನ ಯುವ ಕಾಂಗ್ರೆಸ್ ಅಧ್ಯಕ್ಷೆ ಡಾ. ಅಂಗ್‌ಕಿತಾ ದತ್ತಾ ಅವರನ್ನು ಪಕ್ಷ ವಿರೋಧಿ ಚಟುವಟಿಕೆಗಳಿಗಾಗಿ ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳಿಗೆ ಉಚ್ಚಾಟಿಸಲಾಗಿದೆ.

ಅಸ್ಸಾಂ ಯುವ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಕೇಶವ ಕುಮಾರ್ ಅವರು ತಮಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ ಬಳಿಕ ಶ್ರೀನಿವಾಸ್ ಅವರು ಮಾನಸಿಕ ಕಿರುಕುಳ ನೀಡಿದರು ಎಂದು ದತ್ತಾ ಆರೋಪಿಸಿದ್ದರು.

ದತ್ತಾ ಅವರನ್ನು ಪಕ್ಷದಿಂದ ಉಚ್ಚಾಟಿಸಿದ ಕುರಿತು ಪಕ್ಷದ ಶಿಸ್ತು ಕ್ರಿಯಾ ಸಮಿತಿಯ ಸದಸ್ಯ ಕಾರ್ಯದರ್ಶಿ ತಾರಿಖ್ ಅನ್ವರ್ ಆದೇಶ ಹೊರಡಿಸಿದ್ದಾರೆ. ಅಂಗ್‌ಕಿತಾ ಅವರನ್ನು ಉಚ್ಚಾಟಿಸಿದ ಕ್ರಮವನ್ನು ಬಿಜೆಪಿ ಟೀಕಿಸಿದೆ.

ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದ ಪಿಎಸ್‌ಎಲ್‌ವಿ ರಾಕೆಟ್

ಸಿಂಗಪುರದ 2 ಉಪಗ್ರಹ ಉಡಾವಣೆ

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಎಪಿ): ಸಿಂಗಪುರದ ಎರಡು ಉಪಗ್ರಹಗಳನ್ನು ಹೊತ್ತ ಪಿಎಸ್‌ಎಲ್‌ವಿ–ರಾಕೆಟ್, ಅವುಗಳನ್ನು ನಿಗದಿತ ಕಕ್ಷೆಯಲ್ಲಿ ಯಶಸ್ವಿಯಾಗಿ ಸೇರಿಸಿತು ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಶನಿವಾರ ಹೇಳಿದೆ.

ಸಿಂಗಪುರದ ಸಂಸ್ಥೆಗಳು ಅಭಿವೃದ್ಧಿಪಡಿಸಿ, ನಿರ್ಮಿಸಿರುವ 'ಟೆಲಿಯೋಸ್–2' ಹಾಗೂ 'ಲೂಮ್‌ಲೈಟ್–4' ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಾಗಿದೆ.

ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಒಂದನೇ ಉಡ್ಡಯನ ನೆಲೆಯಿಂದ ಮಧ್ಯಾಹ್ನ 2.19ಕ್ಕೆ ಎರಡು ಉಪಗ್ರಹಗಳನ್ನು ಹೊತ್ತ ರಾಕೆಟ್ ಆಕಾಶದತ್ತ ಚಿಮ್ಮಿತು. ಇಸ್ರೊದ ವಾಣಿಜ್ಯ ಅಂಗಸಂಸ್ಥೆ ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್) ಈ ಬಾಹ್ಯಾಕಾಶ ಕಾರ್ಯಕ್ರಮದ ನಿರ್ವಹಣೆ ಜವಾಬ್ದಾರಿಯನ್ನು ಹೊತ್ತಿದೆ.

'ಇದು ಪಿಎಸ್‌ಎಲ್‌ವಿ ಬಳಸಿ ನೆರವೇರಿಸಿದ 57ನೇ ಕಾರ್ಯಕ್ರಮ. ವಾಣಿಜ್ಯ ಉದ್ದೇಶದ ಉಡ್ಡಯನಗಳ ವಿಷಯದಲ್ಲಿ ಪಿಎಸ್‌ಎಲ್‌ವಿ ಅತ್ಯಂತ ವಿಶ್ವಾಸಾರ್ಹ ಎಂಬುದನ್ನು ಈ ಕಾರ್ಯಕ್ರಮ ಮತ್ತೊಮ್ಮೆ ಸಾಬೀತುಪಡಿಸಿದೆ' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಹೇಳಿದರು.

ಉಪಗ್ರಹಗಳ ಉಡಾವಣೆ ನಂತರ ನಿಯಂತ್ರಣ ಕೇಂದ್ರದಲ್ಲಿ ಮಾತನಾಡಿದ ಅವರು, 'ಪಿಎಸ್‌ಎಲ್‌ವಿ ರಾಕೆಟ್ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ. ರಾಕೆಟ್‌ನ ಸಂಯೋಜನೆ ಹಾಗೂ ಬಳಕೆಗೆ ಸಂಬಂಧಿಸಿದ ವೆಚ್ಚವನ್ನು ಕಡಿಮೆ ಮಾಡಲು ಹಲವಾರು ಸುಧಾರಣೆಗಳನ್ನು ಮಾಡಲಾಗಿದೆ' ಎಂದರು.

'ವಾಣಿಜ್ಯ ಉದ್ದೇಶವೇ ಮುಖ್ಯವಾಗಿದ್ದ ಈ ಕಾರ್ಯಕ್ರಮವನ್ನು ಅತ್ಯಂತ ನಿಖರವಾಗಿ ಕಾರ್ಯಗತಗೊಳಿಸಲಾಗಿದೆ' ಎಂದು ಈ ಕಾರ್ಯಕ್ರಮದ ನಿರ್ದೇಶಕ ಎಸ್.ಆರ್.ಬಿಜು ಹೇಳಿದರು.

ವೈಜ್ಞಾನಿಕ ಪ್ರಯೋಗ: ಸಿಂಗಪುರದ ಎರಡು ಉಪಗ್ರಹಗಳನ್ನು ನಿಗದಿತ ಕಕ್ಷೆಗೆ ಸೇರಿಸಿದ ಸಂದರ್ಭದಲ್ಲಿಯೇ, ಇಸ್ರೊ ಮಹತ್ವದ ವೈಜ್ಞಾನಿಕ ಪ್ರಯೋಗವನ್ನು ಸಹ ನಡೆಸಿದೆ.

'ಪಿಒಇಎಮ್–2' (ಪಿಎಸ್‌ಎಲ್‌ವಿ ಆರ್ಬಿಟಲ್ ಎಕ್ಸ್‌ಪರಿಮೆಂಟಲ್ ಮಾಡ್ಯೂಲ್–2) ಎಂಬ ಸಾಧನವನ್ನು ಬಳಸಿ, ಉಪಗ್ರಹಗಳ ಉಡ್ಡಯನ ಕಾರ್ಯಾಚರಣೆಯ ನಾಲ್ಕನೇ ಹಂತದಲ್ಲಿ ಪ್ರಯೋಗ ನಡೆಸಲಾಗಿದೆ. ಈ ಪ್ರಯತ್ನವು ಮತ್ತಷ್ಟು ಪ್ರಯೋಗಗಳಿಗೆ ದಾರಿಯಾಗಲಿದೆ' ಎಂದು ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು ಹೇಳಿದ್ದಾರೆ.



ಸಿಂಗಪುರದ ಎರಡು ಉಪಗ್ರಹಗಳನ್ನು ಹೊತ್ತ ಇಸ್ರೊದ ಪಿಎಸ್‌ಎಲ್‌ವಿ ರಾಕೆಟ್ ಆಂಧ್ರಪ್ರದೇಶದ ಶ್ರೀಹರಿಕೋಟಾದ ಉಡ್ಡಯನ ಕೇಂದ್ರದಿಂದ ಶನಿವಾರ ನಭಕ್ಕೆ ಚಿಮ್ಮಿ ಅವುಗಳನ್ನು ನಿಗದಿತ ಕಕ್ಷೆಗೆ ಸೇರಿಸಿತು —ಪಿಟಿಐ ಚಿತ್ರ

'ಬಿಎಂಡಿ' ಕ್ಷಿಪಣಿ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಯುದ್ಧನೌಕೆಯಲ್ಲಿ ಅಳವಡಿಸಬಹುದಾದ, 'ಬ್ಯಾಲಿಸ್ಟಿಕ್ ಮಿಸೈಲ್ ಡಿಫೆನ್ಸ್' (ಬಿಎಂಡಿ) ಕ್ಷಿಪಣಿ ವ್ಯವಸ್ಥೆಯ ಉಡಾವಣಾ ಪರೀಕ್ಷೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಶನಿವಾರ ಹೇಳಿದೆ.

ಒಡಿಶಾದ ಕರಾವಳಿಯಲ್ಲಿ ಈ ಪರೀಕ್ಷೆ ನಡೆಯಿತು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಹಾಗೂ ನೌಕಾಪಡೆ ಜಂಟಿಯಾಗಿ ಈ ಪರೀಕ್ಷೆಯನ್ನು ಕೈಗೊಂಡಿದ್ದವು. ಭೂಮಿಯ ಮೇಲ್ಮೈಯಿಂದ 100 ಕಿ.ಮೀ. ಗಿಂತಲೂ ಕಡಿಮೆ ಎತ್ತರದ ವ್ಯಾಪ್ತಿಯಲ್ಲಿ ನಡೆಯುವ ಕ್ಷಿಪಣಿ ದಾಳಿಗೆ ಈ ವ್ಯವಸ್ಥೆ ಪ್ರತಿರೋಧ ಒಡ್ಡಲಿದೆ. 'ವಿಶ್ವದ ಕೆಲವೇ ರಾಷ್ಟ್ರಗಳು ಇಂಥ ಸಾಮರ್ಥ್ಯ ಹೊಂದಿವೆ. ಈಗ ಭಾರತೀಯ ನೌಕಾಪಡೆಯು ಈ ದೇಶಗಳ ಸಾಲಿಗೆ ಸೇರಿದಂತಾಗಿದೆ' ಎಂದು ಸಚಿವಾಲಯ ತಿಳಿಸಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,950
ಒಡವೆ ಚಿನ್ನ 1ಗ್ರಾಂ	₹5,700
ಬೆಳ್ಳಿ ಕೆ.ಜಿಗೆ	₹76,500

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹425
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹430

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1665 (1665)
ಸೋಯಾ (ರಿಫೈನ್ಡ್)	₹1010 (1020)
ಸೂರ್ಯಕಾಂತಿ (ರಿಫೈನ್ಡ್)	₹1050(1050)
ಪಾಮೋಲಿನ್	₹947 (949)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4	₹149
ಆರ್‌ಎಸ್‌ಎಸ್‌-5	₹143.50
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

ಅಕ್ಷಯ ತೃತೀಯ: ಉತ್ತಮ ಮಾರಾಟದ ನಿರೀಕ್ಷೆ

• ವಿಶ್ವನಾಥ ಎಸ್.

ಬೆಂಗಳೂರು: ಈ ಬಾರಿಯ ಅಕ್ಷಯ ತೃತೀಯದ ದಿನ, ಚಿನ್ನಾಭರಣ ಮತ್ತು ಚಿನ್ನದ ನಾಣ್ಯ ಮಾರಾಟವು ಕಳೆದ ವರ್ಷಕ್ಕಿಂತಲೂ ಉತ್ತಮವಾಗಿರಲಿದೆ ಎಂದು ಇಂಡಿಯನ್ ಬುಲಿಯನ್ ಆ್ಯಂಡ್ ಜುವೆಲರಿ ಅಸೋಸಿಯೇಷನ್ ಅಧ್ಯಕ್ಷ ಕುಮಾರ್ ಜೈನ್ ಹೇಳಿದರು.

ಚಿನ್ನದ ದರ ಗರಿಷ್ಠ ಮಟ್ಟದಲ್ಲಿ ಇದ್ದ ಮಾತ್ರಕ್ಕೆ ಜನರು ಚಿನ್ನ ಖರೀದಿಸುವುದೇ ಇಲ್ಲ ಎಂದಲ್ಲ. ಚಿನ್ನ ಖರೀದಿಗೆ ಅಕ್ಷಯ ತೃತೀಯ ಶುಭದಿನ ಎನ್ನುವ ಭಾವನೆ ಭಾರತೀಯರಲ್ಲಿ ಅದರಲ್ಲೂ ದಕ್ಷಿಣ ಭಾರತದ ಜನರಲ್ಲಿ ಇದೆ. ಹೀಗಾಗಿ ಜನರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸದೇ ಇದ್ದರೂ, ಒಂದಿಷ್ಟು ಖರೀದಿಯಂತೂ ನಡೆಯಲಿದೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

